ಸಂಸ್ಕಾರ ತರಂಗಿಣೀ

ಪುಷ್ಪ – 4

ದ್ವಿತೀಯ ಮುದ್ರಣ

ವಿವಾಹ ದೀಪಿಕಾ

ಕಪರ್ದಿಕಾರಿಕೆ – ಆಪಸ್ತಂಬ ಗೃಹ್ಯಸೂತ್ರ – ಮಂತ್ರಗಳಿಗೆ ಭಾಷ್ಯಾರ್ಥ
ಪದ ವಿಭಾಗವಾಗಿರುವ ಮಂತ್ರ ಪ್ರಯೋಗಕ್ರಮ
ಪ್ರತಿವಾಕ್ಯಕ್ಕೂ ಕನ್ನಡದಲ್ಲಿ ಅರ್ಥಗಳೊಂದಿಗೆ

ವ್ರತಚತುಷ್ಟಯ – ಸಮಾವರ್ತನ – ಮಧುಪರ್ಕ
ವಿವಾಹ – ಗರ್ಭಾಧಾನ ಸಂಸ್ಕಾರಗಳು

ಸಂಸ್ಕಾರ ತರಂಗಿಣೀ

ಪುಷ್ಪ – 4

ದ್ವಿತೀಯ ಮುದ್ರಣ

ವಿವಾಹ ದೀಪಿಕಾ

ಕಪರ್ದಿಕಾರಿಕೆ – ಆಪಸ್ತಂಬ ಗೃಹ್ಯಸೂತ್ರ – ಮಂತ್ರಗಳಿಗೆ ಭಾಷ್ಯಾರ್ಥ,
ಪದ ವಿಭಾಗವಾಗಿರುವ ಮಂತ್ರ ಪ್ರಯೋಗಕ್ರಮ,
ಪ್ರತಿವಾಕ್ಯಕ್ಕೂ ಕನ್ನಡದಲ್ಲಿ ಅರ್ಥಗಳೊಂದಿಗೆ

ವ್ರತಚತುಷ್ಟಯ – ಸಮಾವರ್ತನ – ಮಧುಪರ್ಕ,
ವಿವಾಹ – ಗರ್ಭಾಧಾನ ಸಂಸ್ಕಾರಗಳು

ಮಾರ್ಗದರ್ಶಕರು

ಅಕ್ಷರ ಜೋಡಣೆ
ಶ್ರೀಮತಿ ಭಾರತೀ ಶರ್ಮಾ

ಅನುವಾದಕ ಲೇಖಕರು
ಮತ್ತು ಪ್ರಕಾಶಕರು
ವೇ॥ಬ್ರ॥ ಶ್ರೀ
ಎ.ಸಿ. ಶಕ್ತಿಧರ ಶರ್ಮಾ



ಸಂಚಾಲಕರು
ವಿದ್ವಾನ್ ವೇ॥ಬ್ರ॥ ಶ್ರೀ
ಚಂದ್ರಶೇಖರ ಶರ್ಮಾ ಅವಧಾನಿಗಳು

ಪ್ರಧಾನ ಮಾರ್ಗದರ್ಶಕರು
ವಿದ್ವಾನ್ ವೇ॥ಬ್ರ॥ ಶ್ರೀ
ಶಿವಕುಮಾರ ಅವಧಾನಿಗಳು

ಪ್ರಧಾನ ಮಾರ್ಗದರ್ಶಕರು
ವಿದ್ವಾನ್ ವೇ॥ಬ್ರ॥ ಶ್ರೀ
ಕಿರಣ ಅವಧಾನಿಗಳು

ಪ್ರಧಾನ ಮಾರ್ಗದರ್ಶಕರು
ವೇದವೇದಾಂಗ ಮಹಾ ಮಹೋಪಾಧ್ಯಾಯರು
ವಿದ್ವಾನ್ ವೇ॥ಬ್ರ॥ ಶ್ರೀ ಅಶ್ವತ್ಥನಾರಾಯಣ ಅವಧಾನಿಗಳು

ಸಲಹೆಗಾರರು
ವಿದ್ವಾನ್ ವೇ॥ಬ್ರ॥ ಶ್ರೀ ವೇಂಕಟೇಶ ಅವಧಾನಿಗಳು

ಪ್ರಧಾನ ಮಾರ್ಗದರ್ಶಕರು
ವಿದ್ವಾನ್ ವೇ॥ಬ್ರ॥ ಶ್ರೀ ಮೀನಾಕ್ಷೀಸುಂದರ ಘನಪಾಠಿಗಳು

ಈ ಗ್ರಂಥರತ್ನದ ಪ್ರಾಯೋಜಕರು



ಶ್ರೀ ಸೋಮಶೇಖರ ಶ್ರೀಮತಿ ಸುಬ್ಬಲಕ್ಷ್ಮೀ ಶ್ರೀ ಎಸ್.ವೆಂಕಟರಾಮಯ್ಯ ಶ್ರೀಮತಿ ರಾಜಲಕ್ಷ್ಮೀ

ಋಷಿಗಳಿಂದ ರಚಿಸಲ್ಪಟ್ಟ, ಭಗವಂತನ ಅಭಿಪ್ರಾಯವೇ ಆದ ಶಾಸ್ತ್ರಗ್ರಂಥಗಳನ್ನು ಹಾಗೂ ಅವುಗಳಲ್ಲಿರುವ ಸತ್ಯಸಂಗತಿಗಳನ್ನು–ತತ್ವಗಳನ್ನು ತಿಳಿದು, ಅದರಂತೆ ಜೀವನವನ್ನು ರೂಪಿಸಿಕೊಂಡಾಗ ಮಾತ್ರವೇ ಯಶಸ್ಸು ನಮ್ಮದಾಗುತ್ತದೆ.

ನಾಲ್ಕು ಆಶ್ರಮಗಳಲ್ಲೇ ಮಹತ್ವಪೂರ್ಣವಾದ ಗೃಹಸ್ಥಾಶ್ರಮವನ್ನು ಪಡೆಯುವಂತಹ, ವಿವಾಹವೆಂಬ ಸಂಸ್ಕಾರದ ಸಂಪೂರ್ಣ ಮಾಹಿತಿಯನ್ನು ತಿಳಿಸುವ ಆಧಾರ ಗ್ರಂಥಗಳಲ್ಲಿ ಒಂದಾದ ಆಪಸ್ತಂಬ ಮಹರ್ಷಿಗಳಿಂದ ರಚಿತವಾಗಿರುವ ಗೃಹ್ಯಸೂತ್ರ ಮತ್ತು ಸಾಯಣಾಚಾರ್ಯರಿಂದ, ಕಪರ್ದಿಸ್ವಾಮಿಗಳಿಂದ ಹಾಗೂ ಹರದತ್ತರಿಂದ ವ್ಯಾಖ್ಯಾನಿಸಲ್ಪಟ್ಟಿರುವ ಹಾಗೂ ವಿಶೇಷವಾಗಿ ಕನ್ನಡ ಸಾಹಿತ್ಯಲೋಕದಲ್ಲೇ ಇದುವರೆಗೂ ಪ್ರಕಟವೇ ಆಗದಿದ್ದ ಈ **"ವಿವಾಹದೀಪಿಕಾ"** ಎಂಬ ಶಾಸ್ತ್ರ ಗ್ರಂಥರತ್ನವನ್ನು, ಕಳೆದ ನಾಲ್ಕುವರ್ಷಗಳ ಹಿಂದೆ ನಾವೇ ಮೊದಲಬಾರಿಗೆ ಪ್ರಕಟಿಸಿದ್ದು, ಈಗ ಅದು ಆಸಕ್ತರ, ಜಿಜ್ಞಾಸುಗಳ ಪ್ರೋತ್ಸಾಹದಿಂದ **ದ್ವಿತೀಯ ಮುದ್ರಣ** ರೂಪದಲ್ಲಿ ಸಮಾಜಕ್ಕೆ ಸಮರ್ಪಣೆಯು ಆಗುತ್ತಿದೆ.

"ಅನ್ನದಾನದಿಂದ ಮನುಷ್ಯನಿಗೆ ಕೆಲಗಂಟೆಗಳ ಕಾಲ ಮಾತ್ರ ತೃಪ್ತಿಯಾದರೆ, ಜ್ಞಾನದಾನದಿಂದ ಅನೇಕ ತಲೆಮಾರುಗಳವರೆಗೆ ಸಮಾಜವೇ ತೃಪ್ತಿಪಡುತ್ತದೆ" ಎಂಬ ಸತ್ಯವನ್ನು ತಿಳಿದುಕೊಂಡಿರುವ, **ಶ್ರೀ ಎಸ್. ವೆಂಕಟರಾಮಯ್ಯ, ಶ್ರೀಮತಿ ರಾಜಲಕ್ಷ್ಮೀ** ದಂಪತಿಗಳು, ತಮ್ಮ

ಸಂಬಂಧಿಗಳಾದ **ಶ್ರೀ ಸೋಮಶೇಖರ, ಶ್ರೀಮತಿ ಸುಬ್ಬಲಕ್ಷ್ಮೀ** ದಂಪತಿಗಳ **ಐವತ್ತು ವರ್ಷಗಳ ಯಶಸ್ವೀ ದಾಂಪತ್ಯಜೀವನದ ಶುಭಸಾರ್ಥಕ** ಸಂದರ್ಭದಲ್ಲಿ ಈ ಗ್ರಂಥರತ್ನವನ್ನು ಸಮಾಜಕ್ಕೆ ಸಮರ್ಪಿಸುತ್ತಿದ್ದಾರೆ.

ಜ್ಞಾನಮಾರ್ಗದ ಈ ಕೈಂಕರ್ಯದಲ್ಲಿ ತಮ್ಮನ್ನು ತೊಡಗಿಸಿಕೊಂಡ **ಶ್ರೀ ವೆಂಕಟರಾಮಯ್ಯ ಶ್ರೀಮತಿ ರಾಜಲಕ್ಷ್ಮೀ** ದಂಪತಿಗಳಿಗೆ ಹಾಗೂ ಇವರ ಸುಪುತ್ರರಾದ **ಶ್ರೀಯುತ ರಾಜೇಶ್ ಶ್ರೀಮತಿ ಸ್ನೇಹಲತಾ** ದಂಪತಿಗಳಿಗೆ ಮತ್ತೂ ಅವರ ಕುಟುಂಬ–ಪರಿವಾರದ ಎಲ್ಲರಿಗೂ ಸಹಾ, ಜ್ಞಾನಮಾರ್ಗದ ಜಿಜ್ಞಾಸುಗಳ ಆಶೀರ್ವಾದವೂ, ಸತ್ಪುರುಷರ ಕೃಪೆಯೂ ಹಾಗೂ ದಕ್ಷಿಣಾಮೂರ್ತಿಯಾದ ಆ ಪರಮೇಶ್ವರನ ಸಂಪೂರ್ಣ ಅನುಗ್ರಹವು ಪ್ರಾಪ್ತಿಯಾಗಲೆಂದು ನಾವು ಈ ಸಂದರ್ಭದಲ್ಲಿ ಅಂತರಂಗದಿಂದ ಆಶಿಸುತ್ತಿದ್ದೇವೆ.

ವೇದಬ್ರಹ್ಮ ಶ್ರೀ ಎ. ಸಿ. ಶಕ್ತಿಧರ ಶರ್ಮರು
ಸಂಪಾದಕರು–ಅನುವಾದಕರು ಮತ್ತು ಪ್ರಕಾಶಕರು
ಶ್ರೀ ಚೈತನ್ಯ ಗುರುನಾಥ ಪ್ರಕಾಶನ.

ವಿಷಯಸೂಚಿ

ಗ್ರಂಥನಾಮ –

ಗ್ರಂಥರಚನಾ ಮಾರ್ಗದರ್ಶಕರು –

ಈ ಗ್ರಂಥದ ಪ್ರಾಯೋಜಕರು –

ವಿಷಯಸೂಚಿ – i

ಗುರುವಂದನೆ – viii

ಕೃತಜ್ಞತೆಗಳು – ix

ಸಂಪಾದಕೀಯ – x

ನಮ್ಮ ಪ್ರಕಟಣೆಗಳು – xi

ಮುಂದಿನ ಪ್ರಕಟಣೆಗಳು – xiii

ಪ್ರತಿಗಳು ದೊರೆಯುವ ಸ್ಥಳಗಳು – xiv

ಹಿರಿಯರ ನುಡಿ – ವೇ॥ಬ್ರ॥ ಶ್ರೀ ಮಾರ್ಕಂಡೇಯಾವಧಾನಿಗಳು – xv

ಪ್ರಾಸ್ತಾವಿಕ ನುಡಿ – ಡಾ॥ವೇ॥ಬ್ರ॥ ಶ್ರೀ ಸುಬ್ರಾಯ ವಿ. ಭಟ್ಟರು – xviii

ಸಂಪಾದಕರ ಮಾತು – ವೇ॥ಬ್ರ॥ ಶ್ರೀ ಎ.ಸಿ. ಶಕ್ತಿಧರ ಶರ್ಮರು – xxii

1. ವ್ರತೋಪಕ್ರಮಃ –

ಕಪರ್ದಿಕಾರಿಕಾ 1

ಆಪಸ್ತಂಬ ಗೃಹ್ಯಸೂತ್ರಂ 6

ಪ್ರಯೋಗಃ 6

2. ವ್ರತೋತ್ಸರ್ಜನಂ –

ಕಪರ್ದಿಕಾರಿಕಾ 30

ಆಪಸ್ತಂಬ ಗೃಹ್ಯಸೂತ್ರಂ 31
ಪ್ರಯೋಗಃ 31
ಸಾಯಣಾಚಾರ್ಯರ ಭಾಷ್ಯಾರ್ಥ(ಮಂತ್ರಾರ್ಥ) 51
3. ಸಮಾವರ್ತನಂ –
ಕಪರ್ದಿಕಾರಿಕಾ 87
ಆಪಸ್ತಂಬ ಗೃಹ್ಯಸೂತ್ರಂ 88
ಪ್ರಯೋಗಃ 92
ಶ್ರೀ ಹರದತ್ತರ ಭಾಷ್ಯಾರ್ಥಃ(ಮಂತ್ರಾರ್ಥಃ) 114
4. ಮಧುಪರ್ಕಃ –
ಕಪರ್ದಿಕಾರಿಕಾ 130
ಆಪಸ್ತಂಬ ಗೃಹ್ಯಸೂತ್ರಂ 132
ಪ್ರಯೋಗಃ 136
ಶ್ರೀ ಹರದತ್ತರ ಭಾಷ್ಯಾರ್ಥಃ(ಮಂತ್ರಾರ್ಥಃ) 143
5. ವಿವಾಹಃ –
ಕಪರ್ದಿಕಾರಿಕಾ 149
ವಿವಾಹ ಕಾಲಗಳು –
ಅವಳಿ ಮತ್ತು ಒಂದೇಹೊಟ್ಟೆಯಲ್ಲಿ ಹುಟ್ಟಿರುವವರ ವಿವಾಹ ವಿಷಯ –
ವಿವಾಹ ಮಂಟಪದ ಲಕ್ಷಣ –
ಎರಡನೇ ಮದುವೆಯ ಕಾಲ –
ಕನ್ಯಾದಾನ, ಉಪವೀತ ಮತ್ತು ವಧೂವರರು ಇರಬೇಕಾದ ದಿಕ್ಕುಗಳ ವಿಚಾರ –
ಕನ್ಯೆಯ ಲಕ್ಷಣ –
ವರನ ಲಕ್ಷಣ –
ದಾನಕರ್ತೃವಿನ ವಿಚಾರ –
ಗೋತ್ರಪ್ರವರ ವಿಚಾರ –
ಸಪ್ತಪದೀ –

ಮಾಂಗಲ್ಯಧಾರಣೆ –
ಯೋಕ್ತ್ರ(ದರ್ಭೆಯಿಂದ ಮಾಡಿದ ದಾರ) ವಿಚಾರ –
ಅಕ್ಷತಾರೋಪಣ –
ಬ್ರಹ್ಮಗ್ರಂಥಿ –
ಲಾಜಾಹೋಮ ವಿಚಾರ –
ಉದ್ದೇಶತ್ಯಾಗ –
ಸ್ಥಾಲೀಪಾಕಕ್ಕೆ ಮೊದಲು ಅಗ್ನಿಯು ನಾಶವಾದರೆ –
ದರ್ಭೇಣ್ವಂ(ದರ್ಭೆಯ ಶಿಂಬಿ) –
ಅನಂತರದ ಕೆಲಸ –
ವಿವಾಹ ನಿಯಮಗಳು –
ಶೇಷಹೋಮ(4 ನೇದಿನದ್ದು) –
ಅನ್ವಾಧಾನದ ನಿಯಮಗಳು –
ಅನ್ವಾಧಾನವು –
ಮಧ್ಯೇ ಗ್ರಹಣ ಪ್ರಾಯಶ್ಚಿತ್ತವು –
ಅನ್ವಾರಂಭದ ಆರಂಭ ನಿಷಿದ್ಧಕಾಲವು –
ಅತೀತ ಪ್ರಾಯಶ್ಚಿತ್ತವು –
ಚತುರ್ಥಮಧ್ಯಾಗ್ನಿನಷ್ಟ ಪ್ರಾಯಶ್ಚಿತ್ತವು –
ಸ್ಥಾಲೀಪಾಕವು –
ಗಂಧರ್ವಸಮಿತ್ತಿನ ನಿರ್ಣಯ –
ಪ್ರವೇಶ ಹೋಮಕಾಲದ ನಿರ್ಣಯ –
ಕನ್ಯಾದಾತೃ ಮತ್ತು ವರನ ಭೋಜನ ನಿಷೇಧವು –
ನೂತನವಧೂ ಪ್ರವೇಶಕಾಲವು –
ಪ್ರತಿಶುಕ್ರ ದೋಷಾಪವಾದವು –
ಮೌಢ್ಯ(ಅಸ್ತ) ದೋಷವು –
ವಿವಾಹ ಮಧ್ಯದಲ್ಲಿ ಮಾತಾಪಿತೃ ಮರಣ ವಿಷಯವು –

ವಿವಾಹ ಮಧ್ಯದಲ್ಲಿ ಆಶೌಚ ವಿಷಯವು –
ದೇವತಾ ಪ್ರಾರ್ಥನೆ –
ನಿಶ್ಚಯ ತಾಂಬೂಲ –
ವಧುವಿನ ತಂದೆಯ ಪ್ರಮಾಣವು –
ವರನ ತಂದೆಯ ಪ್ರಮಾಣವು –
ಔಪಾಸನ ಫಲವು –
ದ್ವಿಭಾರ್ಯಾಗ್ನಿದ್ವಯ ಸಂಸರ್ಗವು –

ಆಪಸ್ತಂಬ ಗೃಹ್ಯಸೂತ್ರಂ 175
ವಿವಾಹವನ್ನು ಯಾವಾಗ ಮಾಡಬೇಕು / ಮಾಡಬಾರದು ? –
ವಿವಾಹದ ಸ್ವರೂಪ ಹೇಗಿರಬೇಕು –
ವಿವಾಹದಲ್ಲಿ ನಕ್ಷತ್ರಗಳ ವಿಶೇಷತೆ –
ವಿವಾಹದಲ್ಲಿ ಹಸುವಿನ ಅಗತ್ಯತೆ –
ಎಂತಹಾ ಕನ್ಯೆಯನ್ನು ವಿವಾಹ ಮಾಡಿಕೊಳ್ಳಬೇಕು ಹಾಗೂ ಮಾಡಿಕೊಳ್ಳಬಾರದು –
ಎಂತಹಾ ವರನನ್ನು ಮದುವೆಯಾಗಬೇಕು –
ಧರ್ಮಸೂಕ್ಷ್ಮದ ವಿಶೇಷತೆ –
ವಧೂನ್ವೇಷಣೆಯ ಕ್ರಮ –
ವಧೂವರರು ಪರಸ್ಪರ ನೋಡುವುದು –
ಮುಂದುವರೆದ ಹಂತಗಳು –
ವಿವಾಹದ ಅಗ್ನಿಪ್ರತಿಷ್ಠೆ –
ಸಪ್ತಪದೀ –
ಪ್ರಧಾನಹೋಮ –
ಲಾಜಾಹೋಮ –
ಅಗ್ನಿಯ ಜೊತೆ ವಧುವನ್ನು, ವರನು ತನ್ನ ಮನೆಗೆ ಕರೆದುಕೊಂಡು ಹೋಗುವಿಕೆ –
ಅಗ್ನಿ ನಷ್ಟವಾದರೆ ಪ್ರಾಯಶ್ಚಿತ್ತವು –
ವಧೂವರರು ಹೋಗುವಂತಹ ವಾಹನದ ಲಕ್ಷಣ –
ದಾರಿಯ ಮಧ್ಯದಲ್ಲಿ ಈ ನಿರ್ದಿಷ್ಟ ಲಕ್ಷಣಗಳು ಕಂಡಾಗ ಅನುಸರಿಸಬೇಕಾದ

ಸಾರ್ವತ್ರಿಕ ಸಾಮಾನ್ಯ ನಿಯಮಗಳು –
ವರನ ಮನೆಗೆ ವಧುವಿನ ಹೋಮ ಮತ್ತು ಪ್ರವೇಶ –
ಧ್ರುವಾದಿ ನಕ್ಷತ್ರಗಳ ದರ್ಶನ –
ಆಗ್ನೇಯ ಸ್ಥಾಲೀಪಾಕಹೋಮ –
ಹೋಮದ್ರವ್ಯವನ್ನು ಹೋಮಕ್ಕಾಗಿ ತೆಗೆದುಕೊಳ್ಳುವ ಕ್ರಮ –
ಔಪಾಸನ ಹೋಮ –
ಬ್ರಹ್ಮಚರ್ಯ ಮತ್ತು ಆಹಾರ ನಿಯಮ –
ಶೇಷಹೋಮ ಮತ್ತು ಪ್ರಸ್ಥ –

ಪ್ರಯೋಗಃ **201**

ಮೊದಲನೇ ದಿನದ ವಿಧಿಗಳು

ಶಾಸ್ತ್ರೀಯ ವಿವಾಹದ ಹಂತಗಳು – ವಿಮರ್ಶೆ
ಬ್ರಾಹ್ಮಣರಲ್ಲಿ ಅನುಜ್ಞೆಯು –
ವಿವಾಹದ ಸಂಕಲ್ಪವು –
ವರನ ಪ್ರಾಯಶ್ಚಿತ್ತವು –
ವಧುವಿನ ಪರವಾಗಿ ಅವಳ ತಂದೆಯು ಮಾಡುವ ಪ್ರಾಯಶ್ಚಿತ್ತವು –
ಪುಣ್ಯಾಹ –
ನಾಂದಿ –
ನವಗ್ರಹಾದಿ ಆರಾಧನೆ –

ವಿವಾಹದ ದಿನ, ವಿವಾಹದ ಹಂತಗಳು

ವಧುವು ಮಾಡುವ ಗೌರೀಪೂಜೆಯು –
ವರನು ಕಾಶೀಯಾತ್ರೆಗೆ ಹೊರಡುವುದು –
ಮಧುಪರ್ಕವು –
ಕನ್ಯಾ ನಿರೀಕ್ಷಣೆ –
ಸಂಬಂಧಮಾಲಿಕೆ –
ಪುಣ್ಯಾಹ –
ಕನ್ಯಾದಾನ –

ವಧುವಿನ ಹುಬ್ಬು ತಿಕ್ಕುವುದು –
ರಕ್ಷಾಬಂಧನ –
ಮಾಂಗಲ್ಯಧಾರಣೆ –
ಅಕ್ಷತಾರೋಪಣ –
ಸರಬಂಧನ –
ಯೋಕ್ತ್ರಬಂಧನ –
ಹೋಮಪ್ರಯೋಗ –
ಪಾಣಿಗ್ರಹಣ –
ಸಪ್ತಪದೀ –
ಪ್ರಧಾನಹೋಮ –
ಲಾಜಾಹೋಮ –
ಹೋಮದ ಉತ್ತರಪ್ರಯೋಗ –
ಯೋಕ್ತ್ರವನ್ನು ಬಿಚ್ಚುವುದು –
ಅಗ್ನಿಪ್ರದಕ್ಷಿಣೆ –
ಕರ್ಮಸಮಾಪನೆ –
ದಂಪತಿಗಳಿಗೆ ಆರತಿ –
ಅಗ್ನಿಯ ರಕ್ಷಣೆ –
ವಾಹನಾದಿಗಳಲ್ಲಿ ವಧೂವರರು ಹೋಗುವಾಗ –
ದೋಣಿಯಲ್ಲಿ ಹೋಗುವಾಗ –
ಸ್ಮಶಾನಾದಿಗಳನ್ನು ದಾಟಿದಾಗ –
ನಿರ್ದಿಷ್ಟಮರಗಳನ್ನು ದಾಟಿದಾಗ –
ವಧುವಿಗೆ ವರನು ತನ್ನ ಮನೆಯನ್ನು ತೋರಿಸುವುದು –
ವಧುವನ್ನು ವರನು ಮನೆಯೊಳಕ್ಕೆ ಕರೆದುಕೊಂಡು ಹೋಗುವುದು –
ಪ್ರವಿಶ್ಯಹೋಮ –

ಹೋಮದ ಉತ್ತರ ಪ್ರಯೋಗ –
ಅಗ್ನಿಪ್ರದಕ್ಷಿಣೆ –
ಕರ್ಮಸಮಾಪನೆ –
ಧ್ರುವ, ಅರುಂಧತೀ ನಕ್ಷತ್ರದರ್ಶನ –
ಆಗ್ನೇಯ ಸ್ಥಾಲೀಪಾಕ –
ಹೋಮದ ಉತ್ತರಪ್ರಯೋಗ –
ಅಗ್ನಿಪ್ರದಕ್ಷಿಣೆ –
ಕರ್ಮ ಸಮಾಪನೆ –
ಔಪಾಸನ ಹೋಮ –
ಮೂರು ರಾತ್ರಿ ಬ್ರಹ್ಮಚರ್ಯಪಾಲನೆ –
ಶೇಷಹೋಮ –
ಬ್ರಹ್ಮಚರ್ಯ ವಿಸರ್ಜನೆ –
ಹೋಮದ ಉತ್ತರ ಪ್ರಯೋಗ –
ಲಲಾಟಹೋಮ –
ಪರಸ್ಪರ ವೀಕ್ಷಣೆ –
ಅಗ್ನಿಪ್ರದಕ್ಷಿಣೆ –
ಕರ್ಮಸಮಾಪನೆ –

6. ಗರ್ಭಾಧಾನಂ –

ಕಪರ್ದಿಕಾರಿಕಾ – 291
ಆಪಸ್ತಂಬ ಗೃಹ್ಯಸೂತ್ರ – 294
ಪ್ರಯೋಗ – 295

7. ವಿವಾಹ ಮಂತ್ರಗಳಿಗೆ ಶ್ರೀಹರದತ್ತರ ಭಾಷ್ಯಾರ್ಥ – 302

♦♦♦♦♦

ಗುರುವಂದನೆ

ಯಜ್ಞದೇಹ ಯಜುಶ್ಶಾಖಾ ಕಲ್ಪಸೂತ್ರ ಪ್ರವರ್ತಕ: ।
ಸಕಲಾಮ್ನಾಯವಿಜ್ಞೇಯಾತ್ ಆಪಸ್ತಂಬೋ ಮಹಾಮುನಿ: ॥
ಬೋಧಾಯನೋ ಯಂ ಭಗವಾನ್ ಮುಖ್ಯಶಿಷ್ಯಮಚೀಕರತ್ ।
ವಿಪಶ್ಚಿದ್ದಾಶತಾನ್ ಮೇಧಾಂ ಆಪಸ್ತಂಬ: ಸ ಮೇ ಮುನಿ: ॥
ಸಂತ: ತತ್ಸೂತ್ರಗಂಭೀರ ವ್ಯಾಖ್ಯಾಪ್ರಖ್ಯಾತ ವೈಭವಾ: ।
ಕಪರ್ದಿ ಧೂರ್ತಸ್ವಾಮ್ಯಾದ್ಯಾ: ಜೇಜೀಯಂತಾಂ ವಿಮತ್ಸರಾ: ॥
ಪ್ರಾಚೀನೇಷು ನಿಬಂಧನೇಷು ಗಹನಾನ್ ಸಂಗೃಹ್ಯಚಾರ್ಥಾನ್ ಬಹೂನ್ ।
ಅಲ್ಪಜ್ಞೇನ ವಿಧಾಸ್ಯತೇ ಪರಮಯಂ ವಿದ್ವಜ್ಜನಾನುಗ್ರಹಾತ್ ॥
ಧೀರಾ ಗ್ರಂಥಮಿಮಂ ವಿಲೋಕ್ಯ ಸುಧಿಯೋ ದೋಷಾನಪಾಸ್ಯಾದರಾತ್ ।
ನೀರಕ್ಷೀರನಯೇನ ಸದ್ಗುಣಗಣಾನ್ ಗೃಹ್ಣಂತ್ವಿತಿ ಪ್ರಾರ್ಥಯೇ ॥
ಜಗದ್ಗುರೂಣಾಂ ಕರುಣಾ ಅವಧೂತಾನುಗ್ರಹಶ್ಚಿರಂ ।
ಧನ್ಯೋಸ್ಮಿ ಶಕ್ತಿಧರೋsಹಂ ಸುಲಬ್ಧೌಯುಗಪದ್ಮಯಾ ॥

॥ ಅವಧೂತ ಶ್ರೀ ಚಂದ್ರಶೇಖರ ಭಾರತೀ ಪರಮಹಂಸ ಜಗದ್ಗುರವೇ ನಮಃ ॥

॥ ಪೂಜ್ಯ ಶ್ರೀ ಭಾರತೀತೀರ್ಥ ಜಗದ್ಗುರು ಸಾರ್ವಭೌಮಾಯ ನಮಃ ॥

॥ ಶ್ರೀ ವಿಧುಶೇಖರ ಭಾರತೀ ಪರಮಹಂಸ ಜಗದ್ಗುರವೇ ನಮಃ॥
ಜಗದ್ಗುರು ಶ್ರೀ ಆದಿಶಂಕರಾಚಾರ್ಯ ಮಹಾಸಂಸ್ಥಾನಮ್,
ಶಾರದಾ ಪೀಠಮ್, ಶೃಂಗೇರಿ

॥ ವಾತ್ಸಲ್ಯನಿಧಿ ಅವಧೂತ ಶ್ರೀವೇಂಕಟಾಚಲ ಸದ್ಗುರವೇ ನಮಃ ॥
(ಎಲ್ಲವೂ ನಿನ್ನದಯ್ಯ ನನ್ನದೇನು ಇಲ್ಲವಯ್ಯಾ ಗುರುನಾಥ)

॥ ಮೈ ಫಕೀರ್ ಹೂಂ ತೂ ಹೆ ಮಾಲಿಕ್, ಜೋಲೀ ಮೇರಿ ಭರ್‌ದಿ ॥

ಕೃತಜ್ಞತೆಗಳು

ಪವಿತ್ರವಾದ ಈ ಜ್ಞಾನಮಾರ್ಗದ ಕೈಂಕರ್ಯದಲ್ಲಿ ಸದಾ ನಮ್ಮೊಂದಿಗಿದ್ದು ಪ್ರೋತ್ಸಾಹಿಸುತ್ತಾ ಧಾರ್ಮಿಕ ಶ್ರದ್ಧೆಯೊಂದಿಗೆ, ಸಾಮಾಜಿಕ ಕಳಕಳಿಯ ಬದ್ಧತೆಯನ್ನು ತೋರುತ್ತಿರುವ ಈ ಮಹನೀಯರನ್ನು ಸ್ಮರಿಸುವುದು ನಮ್ಮ ಕರ್ತವ್ಯವಾಗಿದೆ. ಇವರೆಲ್ಲರಿಗೂ ಶ್ರೀ ಗುರುನಾಥರ ಸಾನ್ನಿಧ್ಯದ ಅನುಭೂತಿಯು ಸದಾಕಾಲ ಸಿಗುತ್ತಿರಲೆಂದು ನಾವು ಪ್ರಾರ್ಥಿಸುತ್ತೇವೆ.

1) **ಶ್ರೀಯುತ ಪದ್ಮಶ್ರೀ ವಿ.ಆರ್. ಗೌರೀಶಂಕರ್,** ಆಡಳಿತಾಧಿಕಾರಿಗಳು, ಜಗದ್ಗುರು ಶಾರದಾಪೀಠ ಮಹಾಸಂಸ್ಥಾನಮ್, ಶೃಂಗೇರಿ
2) **ಪೂಜ್ಯ ಶ್ರೀ ಅದ್ವೈಯಾನಂದೇಂದ್ರ ಸ್ವಾಮಿಗಳು,** ಅದ್ವೈತಾಶ್ರಮ ಬೆಂಗಳೂರು
3) **ಶ್ರೀಯುತ ವಿದ್ವಾನ್, ಮಾರ್ಕಂಡೇಯ ಅವಧಾನಿಗಳು,** ಬೃಹಸ್ಪತ್ಯಾಚಾರ್ಯರು, ಮತ್ತೂರು
4) **ಶ್ರೀಯುತ ವಿದ್ವಾನ್ ಡಾ॥ ಸುಬ್ರಾಯ ವಿ. ಭಟ್,** ಮೀಮಾಂಸಾ ಶಾಸ್ತ್ರ ಪ್ರಾಧ್ಯಾಪಕರು, ರಾಜೀವ್‌ಗಾಂಧಿ ಕೇಂದ್ರೀಯ ಸಂಸ್ಕೃತ ವಿದ್ಯಾಪೀಠ, ಶೃಂಗೇರಿ
5) **ವೇದಬ್ರಹ್ಮ ಶ್ರೀಯುತ ಭಾನುಪ್ರಕಾಶ ಶರ್ಮರು,** ಶ್ರೀರಂಗಪಟ್ಟಣ.
6) **ಶ್ರೀಯುತ ರಾಜೇಶ್ ಶ್ರೀಮತಿ ಸ್ನೇಹಲತಾ,** ಸಿಂಗಾಪುರ್.
7) **ಶ್ರೀಯುತ ಶರಚ್ಚಂದ್ರ,** ಐ.ಜಿ.ಪಿ., ಕರ್ನಾಟಕ ಪೊಲೀಸ್., ಬೆಂಗಳೂರು
8) **ಶ್ರೀಯುತ ಸುಬ್ರಹ್ಮಣ್ಯ ಪ್ರಸಾದ್‌ರವರು,** ಎಸ್.ಎಲ್.ಎನ್. ರೇಡಿಯೋಸ್, ಶಿವಮೊಗ್ಗ
9) **ಶ್ರೀಯುತ ಗಣೇಶ್‌ರವರು,** ಉದ್ಯಮಿಗಳು, ಬೆಂಗಳೂರು
10) **ಶ್ರೀಯುತ ಕೆ. ಅನಂತರಾಮುರವರು,** ಸಾಹಿತಿಗಳು, ಬೆಂಗಳೂರು
11) **ಶ್ರೀಮತಿ ಶಾಂತಲಕ್ಷ್ಮಿ ಶರ್ಮಾ,** ಅಗ್ರಹಾರ
12) **ಶ್ರೀಯುತ ಮಂಜುನಾಥ್‌ರವರು,** S/o ಶ್ರೀಮತಿ ಭಾಗೀರಥಿಯವರು, ಬೆಂಗಳೂರು

ಈ ಗ್ರಂಥವು ಹೊರಬರಲು ಕಾರಣರಾದ ಎಲ್ಲಾ ಮಹನೀಯರಿಗೂ ಕೃತಜ್ಞತೆಗಳು

ಸಂಪಾದಕೀಯ

ಸಂಪಾದಕರು, ಅನುವಾದಕ ಲೇಖಕರು ಮತ್ತು ಪ್ರಕಾಶಕರು
ವೇದಬ್ರಹ್ಮ ಶ್ರೀ ಎ.ಸಿ. ಶಕ್ತಿಧರ ಶರ್ಮಾ, ದೂ : 9686497982

ಸಂಚಾಲಕರು :

ವೇ॥ಬ್ರ॥ ಶ್ರೀ ವಿದ್ವಾನ್ ಚಂದ್ರಶೇಖರ ಶರ್ಮಾ ಅವಧಾನಿಗಳು, ಅಗ್ರಹಾರ.

ಪ್ರಧಾನ ಮಾರ್ಗದರ್ಶಕರು :

ವೇ॥ ಬ್ರ॥ ಶ್ರೀ ವಿದ್ವಾನ್ ಕಿರಣ ಅವಧಾನಿಗಳು, ಮತ್ತೂರು.

ವೇದವೇದಾಂಗ ವಿದ್ವಾನ್ ವೇ॥ ಬ್ರ॥ ಶ್ರೀ ಅಶ್ವತ್ಥನಾರಾಯಣ ಅವಧಾನಿಗಳು, ಮತ್ತೂರು.

ವೇ॥ ಬ್ರ॥ ಶ್ರೀ ವಿದ್ವಾನ್ ಮೀನಾಕ್ಷೀಸುಂದರ ಘನಪಾಠಿಗಳು, ಶ್ರೀಮಠ, ಶೃಂಗೇರಿ

ವೇ॥ ಬ್ರ॥ ಶ್ರೀ ವಿದ್ವಾನ್ ಶಿವಕುಮಾರ ಅವಧಾನಿಗಳು, ಮತ್ತೂರು.

ವೇ॥ ಬ್ರ॥ ಶ್ರೀ ವಿದ್ವಾನ್ ವೇಂಕಟೇಶ ಅವಧಾನಿಗಳು, ರಾಮನಾಥಪುರ.

ಅಕ್ಷರಜೋಡಣೆ	: ವೇ॥ ಬ್ರ॥ ಶ್ರೀ ಸಿ. ಶ್ರೀನಿವಾಸ ಶಾಸ್ತ್ರೀ, ಶೃಂಗೇರಿ. ಮತ್ತು ಶ್ರೀಮತಿ ಭಾರತೀ ಶರ್ಮಾ. ವೇ॥ ಬ್ರ॥ ಶ್ರೀ ಶಕ್ತಿಧರ ಶರ್ಮಾ
ವರ್ಷ	: ಫೆಬ್ರವರಿ 2018 (ಹೇಮಲಂಬ ಸಂವತ್ಸರ, ಮಾಘಮಾಸ)
ಪ್ರತಿಗಳು	: 1000
ಪುಟಗಳು	: 369 + 30 = 399
ಪುಸ್ತಕದ ಅಳತೆ	: ಡೆಮ್ಮಿ 1/8
ಪೇಪರ್	: 80 ಜಿ.ಎಸ್.ಎಂ. ಮ್ಯಾಪ್ಲಿತೊ
ಹಕ್ಕುಗಳು	: ಸಂಪೂರ್ಣ ಲೇಖಕರದ್ದು ©
ವಸ್ತೌಲ್ಯ	: **ಅಮೂಲ್ಯ**
ಪ್ರೋತ್ಸಾಹಯುತ ಕಾಣಿಕೆ	: ರೂ. 300/–
ಮುದ್ರಕರು	: **ಆದಿತ್ಯ ಆಫ್‌ಸೆಟ್** ಪ್ರಿಂಟರ್ಸ್, ಬೆಂಗಳೂರು

ಶ್ರೀ ಚೈತನ್ಯ ಗುರುನಾಥ ಪ್ರಕಾಶನದವರ ಪ್ರಕಟಣೆಗಳು

1 ಅನುಷ್ಠಾನ ತರಂಗಿಣೀ
(ನಿತ್ಯ ಪೂಜಾವಿಧಿ, ಯತಿ ಆರಾಧನಾ ಪ್ರಯೋಗ ಮತ್ತು ಅವಧೂತಗೀತೆ ಶ್ಲೋಕ ಮತ್ತು ಅರ್ಥಸಹಿತ)

2. ಸಂಸ್ಕಾರ ತರಂಗಿಣೀ ಪುಷ್ಪ–1
(ಪುಂಸವನ ಮತ್ತು ಸೀಮಂತೋನ್ನಯನ)

3. ಸಂಸ್ಕಾರ ತರಂಗಿಣೀ ಪುಷ್ಪ–2
(ಜಾತಕರ್ಮ, ನಾಮಕರಣ, ಉಪನಿಷ್ಕ್ರಮಣ ಮತ್ತು ಅನ್ನಪ್ರಾಶನ)

4. ಸಂಸ್ಕಾರ ತರಂಗಿಣೀ ಪುಷ್ಪ–3
(ಚೂಡಾಕರ್ಮ, ಅಕ್ಷರಾರಂಭ ಮತ್ತು ಉಪನಯನ)

5. ಸಂಸ್ಕಾರ ತರಂಗಿಣೀ ಪುಷ್ಪ–4
(ಸಖರಾಯಪಟ್ಟಣದ ಪೂಜ್ಯ ಅವಧೂತ ಶ್ರೀ ವೇಂಕಟಾಚಲ ಸದ್ಗುರುನಾಥ ಮಹಾತ್ಮರ ಅಮೃತವಾಣಿ, ಭಗವದ್ಗೀತೆಯಲ್ಲಿ ಕರ್ಮ ಭಾಗದ ವಿಚಾರ, ವ್ರತಚತುಷ್ಟಯ, ಸಮಾವರ್ತನ, ವಿವಾಹ, ಗರ್ಭಾಧಾನ)

6. ಸಂಸ್ಕಾರ ತರಂಗಿಣೀ ಸರಣಿಯ ಪುಷ್ಪ–5
ಅನುಷ್ಠಾನ ತರಂಗಿಣೀ–ದ್ವಿತೀಯ ಮುದ್ರಣ
(ಸಖರಾಯಪಟ್ಟಣದ ಪೂಜ್ಯ ಅವಧೂತ ಶ್ರೀ ವೇಂಕಟಾಚಲ ಸದ್ಗುರುನಾಥ ಮಹಾತ್ಮರ ಅಮೃತವಾಣಿ, ನಿತ್ಯ ಪೂಜಾವಿಧಿ, ಗುರುಗೀತಾ ಪಾರಾಯಣ ಕ್ರಮ ಅರ್ಥಸಹಿತ, ಯತಿ ಆರಾಧನಾ ಪ್ರಯೋಗ ಮತ್ತು ಅವಧೂತ ಗೀತೆ ಶ್ಲೋಕ ಮತ್ತು ಅರ್ಥಸಹಿತ)

7. ವೇದನಾದ ಸಂಗಮ DVD–1 (ಪ್ರಪ್ರಥಮ ಬಾರಿಗೆ ಧ್ವನಿಸುರುಳಿಯಲ್ಲಿ ಕೃಷ್ಣಯಜುರ್ವೇದ ತೈತ್ತಿರೀಯ ಶಾಖೆಯ ಬ್ರಾಹ್ಮಣ, ಆರಣ್ಯಕ, ಸಂಹಿತೆ, ಕ್ರಮ, ಘನ, ಉದಕಶಾಂತಿ ಮಂತ್ರಗಳು ಹಾಗೂ ದೇವರನಾಮ, ಕೀರ್ತನೆಗಳು.)

8. ಸಂಸ್ಕಾರ ತರಂಗಿಣೀ ಪುಷ್ಪ–6
(ಅನುಜ್ಞೆ, ಸಂಕಲ್ಪ, ಪುಣ್ಯಾಹ, ನಾಂದೀ, ಅಂಕುರಾರೋಪಣ, ರಕ್ಷಾಬಂಧನ, ಅಗ್ನಿಮುಖ {ಹೋಮ})

9. ಸಂಸ್ಕಾರ ತರಂಗಿಣೀ ಪುಷ್ಪ–7
(ಸ್ನಾನ, ಸರಳ ಶಾಸ್ತ್ರೀಯ ಸಂಧ್ಯಾವಂದನೆ, ಅಗ್ನಿಪುನಸ್ಸಂಧಾನ, ಔಪಾಸನ, ಬ್ರಹ್ಮಯಜ್ಞ, ವೈಶ್ವದೇವ, ವಿಧುರಾಗ್ನಿ ಸಂಧಾನ, ತರ್ಪಣಕ್ರಮ, ಯಜ್ಞೋಪವೀತ ಧಾರಣ ಕ್ರಮ, ಭೋಜನ ಪರಿಷೇಚನ ಕ್ರಮ)
10. ಸಂಸ್ಕಾರ ತರಂಗಿಣೀ ಪುಷ್ಪ–1, 2 **ದ್ವಿತೀಯ ಮುದ್ರಣ**
(ಪುಂಸವನ, ಸೀಮಂತೋನ್ನಯನ, ಜಾತಕರ್ಮ, ನಾಮಕರಣ, ಉಪನಿಷ್ಕ್ರಮಣ ಮತ್ತು ಅನ್ನಪ್ರಾಶನ)
11. ಸಂಸ್ಕಾರ ತರಂಗಿಣೀ ಪುಷ್ಪ–3 **ದ್ವಿತೀಯ ಮುದ್ರಣ**
(ಚೂಡಾಕರ್ಮ, ಅಕ್ಷರಾರಂಭ ಮತ್ತು ಉಪನಯನ)
12. ಸಂಸ್ಕಾರ ತರಂಗಿಣೀ ಪುಷ್ಪ – 8 (ಉಪಾಕರ್ಮ, ಪ್ರಾಯಶ್ಚಿತ್ತ ಪ್ರಕರಣ, ಆಪಸ್ತಂಬ ಗೃಹ್ಯಸೂತ್ರದಲ್ಲಿ ಬರುವ ಪತಿಪತ್ನಿಯರ ಅನ್ಯೋನ್ಯವಿಚಾರ, ಶೀಘ್ರ ಮತ್ತು ಸುಲಭ ಪ್ರಸವವಿಚಾರ, ಕುಷ್ಠ, ಕ್ಷಯಾದಿರೋಗ ನಿವಾರಣಾ ವಿಚಾರ ಹಾಗೂ ಇನ್ನಿತರ ವಿಶೇಷ ವಿಚಾರಗಳು)
13. ವೇದನಾದ ಸಂಗಮ DVD 2
(ಭಜನೆ, ದೇವರನಾಮಗಳು, ಕಲಿಕಾ ವಿಧಾನದಲ್ಲಿ ಯಜುರ್ವೇದ ಸಂಧ್ಯಾವಂದನೆ ಮತ್ತು ನೈಜಧಾರ್ಮಿಕತೆ ಎಂಬ ವಿಷಯದ ಉಪನ್ಯಾಸ)
14. ಸಂಸ್ಕಾರ ತರಂಗಿಣೀ ಪುಷ್ಪ – 9 (ಆಪಸ್ತಂಬೋಕ್ತ ಗೃಹನಿರ್ಮಾಣ – ಗೃಹಪ್ರವೇಶ ಮತ್ತು ಸ್ನಾನ, ಸಂಧ್ಯಾವಂದನೆ, ವೈಶ್ವದೇವ, ಬಲಿಹರಣ, ಪಂಚಮಹಾಯಜ್ಞಗಳಲ್ಲಿ ಬರುವ ಮಂತ್ರಗಳು ಮತ್ತು ಅವುಗಳಿಗೆ ಭಾಷ್ಯಾರ್ಥ)
15. ಸಂಸ್ಕಾರ ತರಂಗಿಣೀ ಪುಷ್ಪ – 10 (ಧರ್ಮಸಂದೇಶ – ಸಂಸ್ಕೃತಿ, ಆಚಾರ, ಧರ್ಮಶಾಸ್ತ್ರಗಳ ವಿಶೇಷ ಸ್ವಾರಸ್ಯ ವಿಚಾರಗಳು)
16. ಸಂಸ್ಕಾರ ತರಂಗಿಣೀ ಪುಷ್ಪ–11 (ಪ್ರಾಯಶ್ಚಿತ್ತ ಸರ್ವಶಾಂತಿ ಸಂಗ್ರಹ – ಭಾಗ–1)
17. ಸಂಸ್ಕಾರ ತರಂಗಿಣೀ ಪುಷ್ಪ – 10 – **ದ್ವಿತೀಯ ಮುದ್ರಣ** (ಧರ್ಮಸಂದೇಶ – ಸಂಸ್ಕೃತಿ, ಆಚಾರ, ಧರ್ಮಶಾಸ್ತ್ರಗಳ ವಿಶೇಷ ಸ್ವಾರಸ್ಯ ವಿಚಾರಗಳು)
18. ಸಂಸ್ಕಾರ ತರಂಗಿಣೀ ಪುಷ್ಪ – 12 ಪ್ರೇತ(ಪಿತೃ)ಕಾಂಡ ಭಾಗ–1 (ಶ್ರೀ ವೈದ್ಯನಾಥೀಯ ಸ್ಮೃತಿ ಮುಕ್ತಾಫಲ ಮತ್ತು ಶ್ರೀ ಎಲ್ಲಾಜೀಯ ಅನುಧರ್ಮಶಾಸ್ತ್ರ ಹಾಗೂ ವೆಂಕಟರಾಮಾವಧಾನಿಯ ಪ್ರಯೋಗ ರತ್ನಾಕರ)
19. ಸಂಸ್ಕಾರ ತರಂಗಿಣೀ ಪುಷ್ಪ – 4 – **ದ್ವಿತೀಯ ಮುದ್ರಣ ವಿವಾಹ ದೀಪಿಕಾ**
(ವ್ರತಚತುಷ್ಟಯ – ಸಮಾವರ್ತನ – ವಿವಾಹ – ಗರ್ಭಾಧಾನ ಮತ್ತು ಮಂತ್ರಗಳಿಗೆ ಭಾಷ್ಯಾರ್ಥ ಮತ್ತು ಸೂತ್ರ – ಕಾರಿಕೆ – ಪ್ರಯೋಗ)

ಮುಂದಿನ ಪ್ರಕಟಣೆಗಳು

1. ಸಂಸ್ಕಾರ ತರಂಗಿಣೀ ಪುಷ್ಪ – 14 (ಪ್ರಾಯಶ್ಚಿತ್ತ ಸರ್ವಶಾಂತಿ ಸಂಗ್ರಹ–ಭಾಗ–2)

2. ಸಂಸ್ಕಾರ ತರಂಗಿಣೀ ಪುಷ್ಪ – 15 ಪ್ರೇತ(ಪಿತೃ)ಕಾಂಡ ಭಾಗ–2 (ಶ್ರೀ ವೈದ್ಯನಾಥೀಯ ಸ್ಮೃತಿಮುಕ್ತಾಫಲ ಮತ್ತು ಶ್ರೀ ಎಲ್ಲಾಜೀಯ ಅನುಧರ್ಮಶಾಸ್ತ್ರ ಹಾಗೂ ವೆಂಕಟರಾಮಾವಧಾನಿಯ ಪ್ರಯೋಗ ರತ್ನಾಕರ)

3. ಸಂಸ್ಕಾರ ತರಂಗಿಣೀ ಪುಷ್ಪ – 16 ಪಿತೃಮೇಧಪ್ರಯೋಗ ಭಾಗ–2
(ಭಾರದ್ವಾಜೀಯ / ಆಪಸ್ತಂಬೀಯ ಅಪರಸೂತ್ರ – ಗೋಪಾಲಮುನಿಗಳ ಮತ್ತು ಕಪರ್ದಿಸ್ವಾಮಿಗಳ ವ್ಯಾಖ್ಯಾನ ಮತ್ತು ಕಾರಿಕಾವಳಿ ಮತ್ತು ಪ್ರಯೋಗ ಹಾಗೂ ಮಂತ್ರಗಳಿಗೆ ಸಾಯಣರ ಮತ್ತು ಹರದತ್ತರ ಭಾಷ್ಯಾರ್ಥ)

4. ಸಂಸ್ಕಾರ ತರಂಗಿಣೀ ಪುಷ್ಪ – 17 ಆಪಸ್ತಂಬೀಯ ಧರ್ಮಸೂತ್ರ –

5. ಸಂಸ್ಕಾರ ತರಂಗಿಣೀ ಪುಷ್ಪ – 18 ಶ್ರಾದ್ಧ ಪ್ರಕರಣ –

ಪ್ರತಿಗಳು ದೊರೆಯುವ ಸ್ಥಳಗಳು :

1. ವೇ॥ ಬ್ರ॥ ಶ್ರೀ ಎ.ಸಿ. ಶಕ್ತಿಧರ ಶರ್ಮಾ
   ಶಿವಮೊಗ್ಗ ಮೊ. : 9686497982
   Karnataka Bank A/c. No. : 7322500102385001
   ಸವಳಂಗ ರಸ್ತೆ ಶಾಖೆ, ಶಿವಮೊಗ್ಗ
   IFSC Code : KARB0000732

2. ಶ್ರೀಮಠ ಪುಸ್ತಕಾಲಯ
   ಶಾರದಾಪೀಠಮ್, ಶೃಂಗೇರಿ

3. ವೇದಾಂತ ಬುಕ್ ಹೌಸ್
   ಉಮಾ ಟಾಕೀಸ್ ಹತ್ತಿರ, ಬೆಂಗಳೂರು

4. ಪ್ರಚೇತಾ ಬುಕ್ ಹೌಸ್
   ಹೋಟೆಲ್ ಶಾಂತಿಸಾಗರ್ ಬಿಲ್ಡಿಂಗ್, ಬುಲ್‌ಟೆಂಪಲ್ ರಸ್ತೆ, ಬೆಂಗಳೂರು

5. ಶೃಂಗೇರಿ ಶಂಕರ ಮಠ
   ಉಮಾ ಟಾಕೀಸ್ ಹತ್ತಿರ, ಶಂಕರಪುರಂ, ಬೆಂಗಳೂರು

6. ರಾಜಾರಾಮ್ ಬುಕ್ ಹೌಸ್
   ಶಿವಮೊಗ್ಗ

7. ಉಡುಪಿ ಸ್ಟೋರ್ಸ್
   ಗಾಂಧಿನಗರ, ಶಿವಮೊಗ್ಗ

ಹಿರಿಯರ ನುಡಿ

ಶ್ರೀ ಶಾರದಾ ಗುರು ಅನುಗ್ರಹ ಪಡೆದ ಶ್ರೀ ಶಕ್ತಿಧರ ಶರ್ಮ ನಮ್ಮ ನಾಡಿನ ಒಂದು ಶಕ್ತಿಯೇ ಸೈ. ಅವರ ಪರಿಶ್ರಮದಿಂದ ಪುರೋಹಿತರಿಗೆ ಮತ್ತು ಪ್ರಯೋಕ್ತೃಗಳಿಗೆ ಹಾಗೂ ಕರ್ಮ ಭಾಗದಲ್ಲಿ ಶ್ರದ್ಧೆಯಿರುವ ಎಲ್ಲರಿಗೂ ಸಂಸ್ಕಾರ ತರಂಗಿಣೀ ಎಂಬ ಪೂರ್ವ ಪ್ರಯೋಗ ಪುಸ್ತಕ ಬಂದದ್ದು ತುಂಬಾ ಉಪಕಾರವಾಗಿದೆ. ಈ ಕೈಪಿಡಿಯು ಜೊತೆಯಲ್ಲಿದ್ದರೆ ಗುರುವೇ ಜೊತೆಯಲ್ಲಿದ್ದಂತೆ. ನಿಮಗೆ ಯಾವ ವಿಷಯ ಬೇಕು? ಋಷಿವಾಕ್ಯ ಬೇಕೇ, ಕಪರ್ದಿಮುನಿಯ ಕಾರಿಕೆ ಇದೆ. ಸೂತ್ರಕಾರರ ವಾಕ್ಯ ಬೇಕೇ, ಆಪಸ್ತಂಬ ಗೃಹ್ಯಸೂತ್ರ ವಾಕ್ಯ ಇದೆ. ಪ್ರಯೋಗ ಬೇಕೇ, ಅಜಸ್ರಾಗ್ನಿ ಧಾರಕರೂ ಹಾಗೂ ಕರ್ಮಠರೂ ನಡೆಸಿಕೊಂಡು ಬಂದಿರುವ, ಸರಳಮಂತ್ರಾನುಪೂರ್ವಿ ಪ್ರಯೋಗ ಇದೆ.

ಅಲ್ಲದೆ ಕಪರ್ದಿಕಾರಿಕೆ – ಅದರ ಕನ್ನಡ ಅರ್ಥ...., ಆಪಸ್ತಂಬ ಗೃಹ್ಯಸೂತ್ರ – ಅದರ ಕನ್ನಡ ಸರಳ ಅನುವಾದ...., ಪ್ರಯೋಗ ಅದರ ತಿಳಿ ಕನ್ನಡ ಅರ್ಥ. ಈ ರೀತಿಯ ಶೈಲಿ ಇವರ ಎಲ್ಲಾ ಪುಸ್ತಕಗಳಲ್ಲೂ ಬಂದಿರುವುದೇ ವಿಶೇಷತೆಯ ಲಕ್ಷಣವಾಗಿದೆ.

ಈಗಾಗಲೇ ಪುಂಸವನ, ಸೀಮಂತ, ಜಾತಕರ್ಮ, ನಾಮಕರಣ, ಉಪನಿಷ್ಕ್ರಮಣ, ಅನ್ನಪ್ರಾಶನ, ಚೂಡಾಕರ್ಮ, ಅಕ್ಷರಾರಂಭ, ಉಪನಯನ, ವ್ರತಚತುಷ್ಟಯ, ಸಮಾವರ್ತನ, ವಿವಾಹ, ಗರ್ಭಾಧಾನ, ಸರಳ ಪೂಜಾಕ್ರಮ, ವಿಸ್ತಾರ ಪೂಜಾಕ್ರಮ, ಅವಧೂತಗೀತೆ, ಗುರುಗೀತೆ, ಯತಿ ಆರಾಧನಾಪ್ರಯೋಗ, ಸಂಕಲ್ಪ, ಪುಣ್ಯಾಹ, ನಾಂದಿ, ಅಂಕುರಾರೋಪಣ, ರಕ್ಷಾಬಂಧನ, ಅಗ್ನಿಮುಖ (ಹೋಮ), ಸ್ನಾನ, ಸರಳ ಶಾಸ್ತ್ರೀಯ ಸಂಧ್ಯಾವಂದನೆ, ಔಪಾಸನ, ಅಗ್ನಿಪುನಸ್ಸಂಧಾನ, ಬ್ರಹ್ಮಯಜ್ಞ, ವೈಶ್ವದೇವ, ತರ್ಪಣಕ್ರಮ, ಭೋಜನವಿಷಯ, ಯಜ್ಞೋಪವೀತ ಧಾರಣ ವಿಚಾರ, ಉಪಾಕರ್ಮ, ಗೃಹಪ್ರವೇಶ, ಪ್ರಾಯಶ್ಚಿತ್ತ ಪ್ರಕರಣ, ಇಷ್ಟೂ ಕರ್ಮಗಳನ್ನು ಒಳಗೊಂಡಂತಹ ಹನ್ನೊಂದು ಗ್ರಂಥಗಳು ಸಮಾಜಕ್ಕೆ ಬಂದಾಗಿದೆ. ಹಾಗೂ ಇವುಗಳಲ್ಲಿ ಮೊದಲ ಎಂಟು ಪುಸ್ತಕಗಳು ದ್ವಿತೀಯ ಮುದ್ರಣವನ್ನೂ ಕಂಡಿವೆ.

ಮತ್ತೂ ಮುಂದಿನವುಗಳಲ್ಲಿ ಅಂತ್ಯೇಷ್ಟಿ, ಶ್ರಾದ್ಧ, ಷೋಡಶ ಸಂಸ್ಕಾರಗಳಲ್ಲಿ ಬರುವ ಅಷ್ಟೂ ಮಂತ್ರಗಳಿಗೆ ಕನ್ನಡದಲ್ಲಿ ಭಾಷ್ಯ ಮತ್ತು ಅರ್ಥ ಇಷ್ಟೂ ಪುಸ್ತಕಗಳು

ಬರಲಿಕ್ಕಿವೆ. ಇದಲ್ಲದೆ ಪ್ರಪ್ರಥಮ ಬಾರಿಗೆ ಸುವ್ಯವಸ್ಥಿತ (ಡಿಜಿಟಲ್ ಸ್ಟುಡಿಯೋ ರೆಕಾರ್ಡಿಂಗ್) ಡಿ.ವಿ.ಡಿ. ಧ್ವನಿಸುರುಳಿಗಳಲ್ಲಿ ಕೃಷ್ಣಯಜುರ್ವೇದ ತೈತ್ತಿರೀಯ ಶಾಖೆಯ ಸಂಪೂರ್ಣ ಬ್ರಾಹ್ಮಣ – ಆರಣ್ಯಕ – 7 ಕಾಂಡಗಳಿಂದ 102 ಸಂಹಿತಾ ಅನುವಾಕ – ಅವುಗಳಿಗೆ ಕ್ರಮಪಾಠ – 100 ಕ್ಕೂ ಹೆಚ್ಚು ಮಂತ್ರಗಳಿಗೆ ಘನಪಾಠ – ಶರ್ಮರ ಮಡದಿಯಾದ ಚಿ.ಸೌ. ಭಾರತಿಯವರ ಭಾವ ಪ್ರಧಾನವಾದ ಉತ್ತಮ ಶಾರೀರದಿಂದ 150 ಕ್ಕೂ ಹೆಚ್ಚು ಭಜನೆ, ದೇವರನಾಮಗಳನ್ನು –'ವೇದನಾದ ಸಂಗಮ' ಎಂಬ ಹೆಸರಿನಿಂದ ಶರ್ಮಾ ದಂಪತಿಗಳು ಹೊರತಂದು, ವೇದ ನಾದಗಳನ್ನು ಹೇಳುವವರಿಗೆ ಮಾತ್ರವಲ್ಲದೆ ಕೇಳುವವರಿಗೂ 'ಶ್ರುತಂ ಹರತಿ ಪಾಪಾನಿ ತಥಾ ಆರೋಗ್ಯಂ ಪ್ರಯಚ್ಛತಿ' ಎಂಬ ಸ್ಮೃತಿ ವಾಕ್ಯದಂತೆ ಆರೋಗ್ಯ ಹಾಗೂ ಯಶಸ್ಸನ್ನು ಪಡೆಯುವ ಉತ್ತಮ ಅವಕಾಶವನ್ನು ಒದಗಿಸಿದ್ದಾರೆ.

ಇದಲ್ಲದೆ ಶೃಂಗೇರಿ ಶಾರದಾಪೀಠ ಸಂಸ್ಥಾನದವರು ಕನ್ನಡ, ತೆಲಗು, ತಮಿಳು, ಇಂಗ್ಲೀಷ್ ಭಾಷೆಗಳಲ್ಲಿ ಬಿಡುಗಡೆ ಮಾಡಿರುವ, ಶಂಕರಾಚಾರ್ಯರ ಜೀವನಚರಿತ್ರೆಯನ್ನು ನಿಖರವಾಗಿ ತಿಳಿಸುವ 'ಸಾಕ್ಷ್ಯಚಿತ್ರ'ದಲ್ಲಿ ಶಂಕರಾಚಾರ್ಯರ ಪಾತ್ರವನ್ನು ಶರ್ಮರು ಅಚ್ಚುಕಟ್ಟಾಗಿ ನಿರ್ವಹಿಸಿರುತ್ತಾರೆ. ಹಾಗೂ ಶ್ರೀಮಠದವರು ಸಮಾಜದ ಸಮಸ್ತ ಜನರಿಗೂ ಕಲಿಕೆಗೆ ಅನುಕೂಲವಾಗುವಂತೆ ಹೊರತಂದಿರುವ 'ಶ್ರೀ ಲಲಿತಾಸಹಸ್ರನಾಮ', 'ಶ್ರೀ ವಿಷ್ಣು ಸಹಸ್ರನಾಮ' ಧ್ವನಿಸುರುಳಿಗಳಲ್ಲೂ ಮತ್ತು ನಿತ್ಯ ಪೂಜೆಗಳಿಗೆ ಅಗತ್ಯವಾಗಿ ಬೇಕಾದ ಮಂತ್ರ ಭಾಗಗಳಾದ ರುದ್ರ, ಚಮಕ, ಪುರುಷಸೂಕ್ತ, ಶ್ರೀಸೂಕ್ತ, ನಾರಾಯಣಸೂಕ್ತ, ದುರ್ಗಾಸೂಕ್ತಗಳಿರುವ ಧ್ವನಿಸುರುಳಿಗಳಲ್ಲೂ ಶರ್ಮರು ತಮ್ಮ ಸ್ಪಷ್ಟ ಹಾಗೂ ಸುಶ್ರಾವ್ಯ ಕಂಠಸಿರಿಯನ್ನು ಒದಗಿಸಿರುತ್ತಾರೆ.

ಅಲ್ಲದೆ ಬೆಂಗಳೂರಿನ ಪ್ರತಿಷ್ಠಿತ ಶ್ರೀ ಸೀತಾರಾಮಾಂಜನೇಯ ವೇದಪಾಠ ಶಾಲೆಯವರು, ಶೃಂಗೇರಿ ಜಗದ್ಗುರು ಮಹಾಸ್ವಾಮಿಗಳವರ ಆದೇಶ ಹಾಗೂ ಸೂಚನೆಯಂತೆ ಕೊಡಲ್ಪಡುವ ಗೌರವ ಸನ್ಮಾನಕ್ಕೆ 2004ರಲ್ಲಿ

ಶ್ರೀಯುತ ಶರ್ಮರು 'ವೇದಭೂಷಣ' ಎಂಬ ಬಿರುದಿನೊಂದಿಗೆ ಭಾಜನಾಗಿರುತ್ತಾರೆ ಹಾಗೂ 2012ರಲ್ಲಿ ಶಿವಮೊಗ್ಗ ನಗರದ ವೈದಿಕ ಪರಿಷತ್ ವತಿಯಿಂದಲೂ ಮತ್ತು ದೆಹಲಿಯ ಭಾರತೀಯ ಜ್ಯೋತಿರ್ವಿಜ್ಞಾನ ಸಂಸ್ಥೆಯಿಂದಲೂ ಹಾಗೂ 2013ರಲ್ಲಿ ರೋಟರಿ ಸಂಸ್ಥೆಯಿಂದಲೂ ಸನ್ಮಾನಕ್ಕೆ ಭಾಜನರಾಗಿರುತ್ತಾರೆ. ಈ ಎಲ್ಲಾ ಸಾಹಸ ಕೆಲಸಗಳಿಗೆ ಪ್ರೇರಕ ಶಕ್ತಿ ಯಾವುದೋ ನಾನರಿಯೇ?

ಬಹುಶ: ಈ ಪುಸ್ತಕ ಕಾರ್ಯಗಳಲ್ಲಿ ಕಂಡುಬರುವ ಗುರು ನಿಷ್ಠೆ–ಭಕ್ತಿಗಳೇ ಆಂತರ್ಯದ ಶಕ್ತಿಯಾಗಿರಬೇಕು. ಇವನ್ನೆಲ್ಲಾ ಮಾಡುತ್ತಿರುವುದು ಸಾಹಸೀ, 32ರ ವಯೋಮಾನದ ತರುಣ, ಜಾಣ ವೇ.ಬ್ರ.ಶ್ರೀ. ಎ.ಸಿ. ಶಕ್ತಿಧರ ಶರ್ಮ. ಇವರ ಶ್ರಮಕ್ಕೆ ಬೆಲೆ ಕಟ್ಟಲಾರೆ. ಈ ಕಾರ್ಯಕ್ಕೆ ಶ್ರೀಮಾನ್ ಚಂದ್ರಶೇಖರಶರ್ಮರು ಅಗ್ರಹಾರ (ಶ್ರೀಯುತ ಶರ್ಮರ ತಂದೆಯವರು), ಶ್ರೀಮಾನ್ ವೆಂಕಟೇಶ ಅವಧಾನಿಗಳು ರಾಮನಾಥಪುರ ಇವರುಗಳ ಸಲಹೆ ಪಡೆದಿದ್ದಾರೆ. ಅಲ್ಲದೇ ಮತ್ತೂರಿನ ತರುಣ ಅಧ್ವರ್ಯು ಶ್ರೀಮಾನ್ ಶಿವಕುಮಾರ ಅವಧಾನಿ, ತರುಣ ವಿದ್ವಾನ್ ಶ್ರೀಮಾನ್ ಕಿರಣ ಅವಧಾನಿ ಇವರುಗಳ ಪ್ರೀತಿ, ವಾತ್ಸಲ್ಯ ಯುಕ್ತ ಅಮೂಲ್ಯ ಮಾರ್ಗದರ್ಶನ ಪಡೆದಿದ್ದಾರೆ.

ಪುರೋಹಿತರ ಅಭಾವದಲ್ಲಿ, ಮಂತ್ರಾಧ್ಯಯನ ಆದವರೆಲ್ಲಾ ಈ ಪುಸ್ತಕಗಳ ಸಹಾಯದಿಂದ, ಒದಗಿಬರುವ ಸಂಸ್ಕಾರ ಮಂಗಳ ಕಾರ್ಯಗಳನ್ನು (ಶಾಸ್ತ್ರಂ ಪ್ರಮಾಣಂ ತೇ ಕಾರ್ಯಾಕಾರ್ಯ ವ್ಯವಸ್ಥಿತೌ) ಎಂಬಂತೆ ಶಾಸ್ತ್ರೀಯ ತಿಳುವಳಿಕೆಯನ್ನು ಪಡೆದು ಯಥಾ ವಿಧಿಯಂತೆ ನಡೆಸಬಹುದಾಗಿದೆ. ಪ್ರತಿಯೊಬ್ಬರ ಮನೆಯಲ್ಲೂ ಈ ಸಂಸ್ಕಾರ ತರಂಗಿಣೀ ಪುಸ್ತಕಗಳಿದ್ದರೆ ಪ್ರತಿ ಮನೆಯಲ್ಲೂ ಒಬ್ಬ ಪುರೋಹಿತರು ಇದ್ದಂತೆ, ಏಕೆಂದರೆ ಕರ್ಮಾಚರಣೆಯ ವಿಚಾರದಲ್ಲಿ, ಪ್ರತಿಯೊಬ್ಬರೂ ಶಾಸ್ತ್ರೀಯ ತಿಳುವಳಿಕೆಯನ್ನು ಹೊಂದುವುದು ಅತ್ಯಂತ ಅವಶ್ಯಕವೂ, ಅಧಿಕಾರಯುತವೂ ಆಗಿದೆ. ಈ ದೃಷ್ಟಿಯಲ್ಲಿ ಈ ಪುಸ್ತಕಗಳು ತ್ರಿಮತಸ್ಥ-ಬ್ರಾಹ್ಮಣರಿಗೂ ಅವಶ್ಯ ಸಂಗ್ರಾಹ್ಯವೇ ಆಗಿದೆ.

ಶ್ರೀ ಶಕ್ತಿಧರ ಶರ್ಮರು ಶೃಂಗೇರಿ ಗುರುಪೀಠದಲ್ಲಿ ಇದ್ದುಕೊಂಡು ಅಧ್ಯಯನ ಮಾಡಿದವರು, ಇವರಿಂದ ಇನ್ನೂ ಅನೇಕ ಜನೋಪಕಾರಕ ಪುಸ್ತಕಗಳು ಬರಲೀ ಎಂದು ಆಶೀರ್ವದಿಸುತ್ತೇನೆ.

–ಇತಿ ಶರ್ಮ್–

ವೇ॥ ಬ್ರ॥ ಶ್ರೀ ಮಾರ್ಕಂಡೇಯಾವಧಾನಿ, ಮತ್ತೂರು, ಶಿವಮೊಗ್ಗ

ಪ್ರಾಸ್ತಾವಿಕ ನುಡಿ

ಭಾರತೀಯ ಸನಾತನ ವೈದಿಕ ಸಂಸ್ಕೃತಿಯ ಜೀವಾಳವೇ ವೇದಗಳು. ಧರ್ಮ, ಅರ್ಥ, ಕಾಮ, ಮೋಕ್ಷಗಳೆಂಬ ನಾಲ್ಕು ಪುರುಷಾರ್ಥಗಳಲ್ಲಿ ಮೊದಲಿನ ಮೂರು ಸಾಧನಗಳು ಹಾಗೂ ಕೊನೆಯದಾದ ನಿತ್ಯ ನಿರತಿಶಯ ಸುಖ ಸ್ವರೂಪವಾದ ಮೋಕ್ಷವು ಸಾಧಿಸಲ್ಪಡಬೇಕಾದದ್ದು, ಅದನ್ನು ಸಾಧಿಸಿದಾಗಲೇ ಮನುಷ್ಯ ಜೀವನ ಸಾರ್ಥಕವಾಗುವುದು. ಅದಕ್ಕೆ ಧರ್ಮವೇ ಮೂಲ ಎಂಬುದಾಗಿ ಬೋಧಿಸಿ, ಅವುಗಳ ಸ್ವರೂಪ ಹಾಗೂ ಪ್ರಾಪ್ಯುಪಾಯವನ್ನು ತಿಳಿಸಿ ಮನುಷ್ಯನನ್ನು ಅಧ್ಯಾತ್ಮದೆಡೆಗೆ ಒಯ್ಯುವ ಏಕಮಾತ್ರ ಸಾಧನವಾಗಿರುವುದರಿಂದ ವೇದಗಳು ಪರಮ ಪೂಜನೀಯವಾದವುಗಳು.

ವೇದವಿಹಿತವಾದ ಯಾಗಾದಿ ಕರ್ಮಗಳೇ ಧರ್ಮ. ಧರ್ಮವೇ ಶ್ರೇಯಸ್ಸಾಧನ. ವೇದದಲ್ಲಿ ತಿಳಿಸಿದ ಈ ಯಜ್ಞಯಾಗಾದಿಗಳನ್ನು ಅರ್ಥಜ್ಞಾನ ಸಹಿತವಾಗಿ ಶ್ರದ್ಧೆಯಿಂದ ಕ್ರಮವಾಗಿ ಅನುಷ್ಠಾನ ಮಾಡಿದಾಗ ವಿಹಿತವಾದ ಫಲವನ್ನು ದೊರಕಿಸಿ ಕೊಡುತ್ತದೆ ಎಂಬುದು ಆರ್ಷ ಸಿದ್ಧಾಂತ.

ವೇದದ ತಾತ್ಪರ್ಯಾರ್ಥವನ್ನೇ ನಿರ್ಣಯಿಸಲು ಹೊರಟ ಪೂರ್ವಮೀಮಾಂಸಾ ಶಾಸ್ತ್ರದಲ್ಲಿ ಸೂತ್ರಕಾರರಾದ ಜೈಮಿನೀ ಮಹರ್ಷಿಗಳೂ ಸಹ 'ಚೋದನಾ ಲಕ್ಷಣೋऽರ್ಥೋ ಧರ್ಮಃ' ಎಂಬುದಾಗಿ ವೇದದಲ್ಲಿ ತಿಳಿಸಿದ ಶ್ರೇಯಸ್ಸಾಧನೀಭೂತವಾದ ಯಾಗಾದಿಗಳೇ ಧರ್ಮವೆಂದು ತಿಳಿಸಿ, ವೇದದ ತಾತ್ಪರ್ಯಾರ್ಥವನ್ನೇ ಬಹು ವಿಸ್ತಾರವಾಗಿ ವಿಮರ್ಶಿಸಿದ್ದಾರೆ. ಮೀಮಾಂಸಾ ಭಾಷ್ಯಕಾರರಾದ ಶಬರ ಸ್ವಾಮಿಗಳೂ ಸಹ 'ಸ ಹಿ ನಿಶ್ರೇಯಸೇನ ಪುರುಷಂ ಸಂಯುನಕ್ತೀತಿ ಪ್ರತಿಜಾನೀಮಹೇ' ಎಂಬುದಾಗಿ ಧರ್ಮವೇ ಐಹಿಕ ಮತ್ತು ಆಮುಷ್ಮಿಕ ಸುಖ ಸಾಧನವೆಂದು ಸ್ಪಷ್ಟಪಡಿಸಿದ್ದಾರೆ.

ವೇದದಲ್ಲಿ ವಿಹಿತವಾದ ಧರ್ಮವೆಂಬುದಾಗಿ ಪ್ರಚುರಪಡಿಸಿದ ಯಾಗಾದಿ ರೂಪವಾದ ಕರ್ಮಗಳನ್ನು ಪ್ರಧಾನವಾಗಿ ನಿತ್ಯ, ನೈಮಿತ್ತಿಕ, ಮತ್ತು ಕಾಮ್ಯವೆಂಬುದಾಗಿ ಮೂರು ವಿಧವಾಗಿ ವಿಭಾಗಿಸಿದ್ದಾರೆ. ರಾಜಾಜ್ಞೆಯಂತೆ ನಿಯಮೇನ ಮಾಡಲೇಬೇಕಾದದ್ದಾಗಿ ವಿಹಿತವಾದ ಕರ್ಮಗಳು – ನಿತ್ಯಕರ್ಮಗಳು. ಉದಾ– ಸಂಧ್ಯಾವಂದನೆ, ಔಪಾಸನೆ, ಅಗ್ನಿಹೋತ್ರಾದಿಗಳು. ಪಾಪಕ್ಷಯವೇ ಈ ಕರ್ಮಗಳ ಫಲ.

ನಿಮಿತ್ತ ಒದಗಿದಾಗ ನಿಯಮೇನ ಮಾಡಲೇಬೇಕಾದ ಕರ್ಮಗಳು – ನೈಮಿತ್ತಿಕ ಕರ್ಮಗಳು. ಉದಾ– ಗ್ರಹಣ ಪ್ರಯುಕ್ತವಾದ ಸ್ನಾನಾದಿಗಳು, ಮಗು ಹುಟ್ಟಿದಾಗ ಮಾಡಬೇಕಾದ ವೈಶ್ವಾನರೇಷ್ಟಿ ಮೊದಲಾದ ಶ್ರೌತಸ್ಮಾರ್ತ ಕರ್ಮಗಳು, ಈ ಕರ್ಮಗಳಿಗೂ ಪಾಪಕ್ಷಯವೇ ಫಲ.

ಪಶುಪುತ್ರಾದಿ ಐಶ್ವರ್ಯ ಕಾಮನೆಯಿಂದ ಅನುಷ್ಠಾನ ಮಾಡುವ ಕರ್ಮಗಳು – ಕಾಮ್ಯಕರ್ಮಗಳು. ಉದಾ– ಸೋಮಯಾಗ, ಕಾರೀರೀಷ್ಟಿ, ಪೌಷ್ಟಿಕಾದಿ ಸ್ಮೃತ್ಯುಕ್ತ ಕರ್ಮಗಳು, ಇವುಗಳಿಗೆ ಆಯಾವಿಧಿ ವಾಕ್ಯಗಳಲ್ಲಿ ಅಥವಾ ಪ್ರಕರಣಗಳಲ್ಲಿ ತಿಳಿಸಿದ ಸ್ವರ್ಗಾದಿಗಳೇ ಫಲ.

ಈ ಎಲ್ಲವನ್ನೂ ಅರ್ಥಜ್ಞಾನ ಪುರಸ್ಸರ, ವಿಧಿವತ್ತಾಗಿ ಆಚರಿಸಿದಾಗಲೇ ವಿಹಿತವಾದ ಫಲ ದೊರಕುವುದು. ಆಗಲೇ ಅಧ್ಯಯನ ಮಾಡಿದ ವೇದವು ಸಫಲವಾಗುವುದು. ಅಂದರೆ ಮೊದಲು ವೇದಾಧ್ಯಯನ, ನಂತರ ಅಧ್ಯಯನ ಮಾಡಿದ ವೇದದ ಅರ್ಥಜ್ಞಾನ, ಅರ್ಥಜ್ಞಾನ ತಿಳಿದು ಕರ್ಮಾನುಷ್ಠಾನ, ಅದರಿಂದ ಪಾಪಕ್ಷಯ, ಸ್ವರ್ಗಾದಿ ಸಿದ್ಧಿ. ಹಾಗಾಗಿಯೇ ವೇದಗಳ ಅರ್ಥಜ್ಞಾನ, ಉಚ್ಚಾರಣೆ, ವೇದವಿಹಿತ ಕರ್ಮಾನುಷ್ಠಾನದ ಸ್ವರೂಪ ಪರಿಚಯಾದಿಗಳಿಗೆ ಅನಿವಾರ್ಯವಾದ ವೇದದ ಆರು ಅಂಗಗಳನ್ನು ಅಧ್ಯಯನ ಮಾಡಬೇಕೆಂದು, 'ನಿಷ್ಕಾರಣೋ ಷಡಂಗೋ ವೇದೋ ಅಧ್ಯೇಯೋಜ್ಞೇಯಶ್ಚ' ಇತ್ಯಾದಿ ಶ್ರುತಿಗಳು ತಿಳಿಸುತ್ತಿವೆ. ಶಿಕ್ಷಾ, ವ್ಯಾಕರಣ, ಛಂದಸ್ಸು, ನಿರುಕ್ತ, ಜ್ಯೌತಿಷ, ಕಲ್ಪ ಇವು ವೇದದ ಆರು ಅಂಗಗಳು.

ಯಜ್ಞಗಳ ಅನುಷ್ಠಾನ ವಿಧಾನವನ್ನು(ಸ್ವರೂಪ) ತಿಳಿಸುವ ಗ್ರಂಥವೇ ಕಲ್ಪ. ಯಾಗಗಳ ಪ್ರಯೋಗ(ಅನುಷ್ಠಾನ)ವನ್ನೇ ತಿಳಿಸುವುದರಿಂದ ಈ ಗ್ರಂಥಗಳಿಗೂ ಪ್ರಯೋಗ ಗ್ರಂಥಗಳು ಎಂದು ಹೆಸರು ಬಂದಿದೆ. ಸಂಜ್ಞಾ, ಪರಿಭಾಷಾದಿಗಳಿಂದ ಅವುಗಳ(ಯಾಗಗಳ) ಲಕ್ಷಣವನ್ನು ತಿಳಿಸುವ ಸೂತ್ರಗಳಿಗೆ ಕಲ್ಪಸೂತ್ರಗಳು ಎಂದು ಹೆಸರು.

ಈ ಕಲ್ಪಗಳು ಬೇರೆ ಬೇರೆ ವೇದ ಶಾಖೆಗಳಲ್ಲಿ ಬೇರೆ ಬೇರೆಯಾಗಿವೆ. ಹಾಗೆಯೇ ಒಂದೇ ಶಾಖೆಯಲ್ಲೂ ಅನೇಕ ಸೂತ್ರಗಳು ಕಾಣಸಿಗುತ್ತವೆ. ಋಕ್ ಶಾಖಾನುಯಾಯಿಗಳಿಗೆ – ಆಶ್ವಲಾಯನ ಕಲ್ಪಸೂತ್ರ, ಸಾಮವೇದಿಗಳಿಗೆ – ದ್ರಾಹ್ಯಾಯಣ ಸೂತ್ರ, ಯಜುರ್ವೇದದಲ್ಲೂ ಶುಕ್ಲ ಯಜುಶ್ಶಾಖೆಯಲ್ಲಿ ಭಿನ್ನ ಸೂತ್ರಗಳು ಹಾಗೂ ತೈತ್ತಿರೀಯ ಯಜುಶ್ಶಾಖೆಯಲ್ಲಿ – ಬೋಧಾಯನೀಯ, ಆಪಸ್ತಂಬೀಯ, ಹಿರಣ್ಯಕೇಶೀಯ ಕಲ್ಪಸೂತ್ರಗಳು ಈಗ ಪ್ರಚಲಿತವಿರುವ ಮುಖ್ಯ ಕಲ್ಪಸೂತ್ರಗಳು.

ಈ ಕಲ್ಪಸೂತ್ರಗಳ ಪರಂಪರೆಯನ್ನೇ ಗೋತ್ರಪ್ರವರವನ್ನು ಉಚ್ಚರಿಸುವಾಗ ಹೇಳುವ ಸೂತ್ರಗಳು ತಿಳಿಸುತ್ತವೆ.

ಶ್ರೌತಸೂತ್ರ, ಗೃಹ್ಯಸೂತ್ರ, ಧರ್ಮಸೂತ್ರ ಮತ್ತು ಯಜುರ್ವೇದ ಕಲ್ಪದಲ್ಲಿ ಶುಲ್ಬಸೂತ್ರ – ಇವುಗಳ ಸಮುದಾಯವನ್ನೇ ಕಲ್ಪಸೂತ್ರ ಎಂದು ಕರೆದಿದ್ದಾರೆ. ಶ್ರೌತಸೂತ್ರಗಳು, ಸಾಕ್ಷಾತ್ ಶ್ರೌತಕರ್ಮಗಳ ಅನುಷ್ಠಾನ ಪ್ರಕಾರವನ್ನು ಮತ್ತು ಸಂಬಂಧಿಸಿದ ಮಂತ್ರ ವಿನಿಯೋಗಾದಿಗಳನ್ನು ತಿಳಿಸುತ್ತವೆ. ಗೃಹ್ಯಸೂತ್ರಗಳು, ಗೃಹಸ್ಥರು ಅನುಷ್ಠಾನ ಮಾಡಬೇಕಾದ ಯಾಗಗಳನ್ನು, ಔಪಾಸನಾಗ್ನಿಯಲ್ಲಿ ಮಾಡುವ ಕರ್ಮಗಳನ್ನು, ಮತ್ತು ಉಪನಯನವೇ ಮೊದಲಾದ ಸಂಸ್ಕಾರಗಳ ಅನುಷ್ಠಾನ ಕ್ರಮವನ್ನು ತಿಳಿಸುತ್ತವೆ. ಧರ್ಮಸೂತ್ರಗಳು, ಯಜಮಾನ–ಋತ್ವಿಜರುಗಳಿಗೆ ಸಂಬಂಧಿಸಿದ ನಿಯಮಗಳನ್ನು, ಬ್ರಾಹ್ಮಣ–ಕ್ಷತ್ರಿಯಾದಿ ವರ್ಣಗಳಿಗೆ ಸಂಬಂಧಿಸಿದ ಧರ್ಮಪಾಲನೆಯ ಬಗ್ಗೆ, ಬ್ರಹ್ಮಚರ್ಯಾದಿ ಆಶ್ರಮ ಧರ್ಮಗಳು ಮತ್ತು ಸಮಸ್ತ ಮನುಕುಲಕ್ಕೆ ಸಂಬಂಧಿಸಿದ ಎಲ್ಲಾ ಸಾಮಾನ್ಯಧರ್ಮ ವಿಚಾರಗಳನ್ನೂ ತಿಳಿಸುತ್ತವೆ. ಶುಲ್ಬಸೂತ್ರಗಳು, ಯಜ್ಞಾನುಷ್ಠಾನಕ್ಕೆ ಉಪಯುಕ್ತವಾದ ಯಜ್ಞಶಾಲಾ ನಿರ್ಮಾಣ ಸಂಬಂಧಿ ವಿಚಾರಗಳನ್ನು ತಿಳಿಸುತ್ತವೆ. ಹೀಗೆ ಈ ಎಲ್ಲಾ ವಿಭಾಗಗಳೂ ಸಾಕ್ಷಾತ್ತಾಗಿ, ಅಥವಾ ಪರಂಪರೆಯಿಂದ ಯಜ್ಞಗಳ ಅನುಷ್ಠಾನದ ಸಂಬಂಧವನ್ನು ಹೊಂದಿವೆ, ಹಾಗಾಗಿಯೇ ಇವುಗಳಿಗೆ ಏಕವಾಕ್ಯತೆ ಇದೆ.

ಆಪಸ್ತಂಬ ಕಲ್ಪಸೂತ್ರದಲ್ಲಿ ಹೇಳುವುದಿದ್ದರೆ – ಮೊದಲನೇ ಪ್ರಶ್ನೇ ಸರ್ವಕರ್ಮಸಾಧಾರಣ ಪರಿಭಾಷಾ ಸೂತ್ರಗಳು. ಎರಡರಿಂದ ಇಪ್ಪತ್ತನಾಲ್ಕನೇ ಪ್ರಶ್ನೆಗಳವರೆಗೆ(23 ಪ್ರಶ್ನೆಗಳು) ಶ್ರೌತಸೂತ್ರಗಳು. ಮುಂದಿನ ಮೂರು ಪ್ರಶ್ನೆಗಳು(25,26,27) ಗೃಹ್ಯಸೂತ್ರಗಳು. ಈ ಮೂರರಲ್ಲಿ ಕೊನೆಯದು(27ನೇ ಪ್ರಶ್ನೆ) ಪಿತೃಮೇಧ ಸೂತ್ರಗಳು. 28,29 ನೇ ಪ್ರಶ್ನೆಗಳು ಧರ್ಮಸೂತ್ರಗಳು. 30ನೇ ಪ್ರಶ್ನೆ ಶುಲ್ಬಸೂತ್ರಗಳು. ಹೀಗೆ ಒಟ್ಟಿಗೆ 30 ಪ್ರಶ್ನಾತ್ಮಕವಾದದ್ದು ಆಪಸ್ತಂಬ ಕಲ್ಪಸೂತ್ರ.

ಅವುಗಳಲ್ಲಿ ಸ್ಮಾರ್ತಕರ್ಮಗಳೂ ಮತ್ತು ಏಕಾಗ್ನಿಸಾಧ್ಯವಾದ (ಔಪಾಸನಾಗ್ನಿಯಲ್ಲಿ ನಿರ್ವಹಿಸುವ), ಉಪನಯನಾದಿ ಸಂಸ್ಕಾರಗಳ ಪ್ರಯೋಗವನ್ನು, ಸಂಬಂಧಿಸಿದ ಸೂತ್ರ ಮತ್ತು ಕಪರ್ದಿಕಾರಿಕೆಗಳನ್ನು ಸಂಗ್ರಹಿಸಿ ಕನ್ನಡದಲ್ಲಿ ಭಾವಾನುವಾದವನ್ನು ತಿಳಿಸಿ, ಸಂಸ್ಕಾರ ತರಂಗಿಣೀ ಎಂಬ ಹೆಸರಿನಲ್ಲಿ ಗ್ರಂಥವನ್ನು ಪ್ರಕಟಿಸಿ ಹೊರತರುತ್ತಿದ್ದಾರೆ ನಮ್ಮ ವೇದಬ್ರಹ್ಮ ಶ್ರೀಯುತ ಶಕ್ತಿಧರ ಶರ್ಮರು. ಸ್ಮಾರ್ತಕರ್ಮಗಳಿಗೆಲ್ಲಾ ಮೂಲ ಆಧಾರ ಗೃಹ್ಯಸೂತ್ರಗಳು. ಕಪರ್ದಿಸ್ವಾಮಿಗಳು ಕಾರಿಕಾರೂಪದಲ್ಲಿ ಪ್ರಯೋಗವನ್ನು ತಿಳಿಸಿದ್ದಾರೆ.

ಇವುಗಳ ಆಧಾರದ ಮೇಲೆ ವಿಧಿವತ್ತಾಗಿ ಪ್ರಯೋಗವನ್ನೂ ತಿಳಿಸಿ ಅನುಷ್ಠಾನ ಮಾಡುವ ಕ್ರಮವನ್ನೂ ಈ ಗ್ರಂಥಗಳಲ್ಲಿ ತಿಳಿಸಿಕೊಟ್ಟಿದ್ದಾರೆ.

ಆಪಸ್ತಂಬ ಪ್ರಯೋಗ ಗ್ರಂಥವು ಬೇರೆ ಬೇರೆ ವಿದ್ವಾಂಸರಿಂದ ಅನೇಕ ಪ್ರಕಾಶನಗಳಲ್ಲಿ ಉಪಲಬ್ಧವಿದ್ದರೂ, ಆಯಾ ಪ್ರಕರಣಗಳಿಗೆ ಸಂಬಂಧಿಸಿದ ಕಾರಿಕೆ, ಮೂಲ ಗೃಹ್ಯಸೂತ್ರ ಸಹಿತವಾಗಿ ಪ್ರಕಟಿತವಾದ ಪ್ರಯೋಗಗ್ರಂಥ ಇಲ್ಲವೇಇಲ್ಲ ಎಂಬುವಷ್ಟು ಅತಿವಿರಳ. ಇದೇ ಈ ಗ್ರಂಥಮಾಲಿಕೆಯ ವಿಶೇಷ ಲಕ್ಷಣವಾಗಿದೆ. ಗೃಹ್ಯಸೂತ್ರಗಳ ಅಧ್ಯಯನ ಕ್ರಮವೂ ಈಗ ನಮ್ಮಲ್ಲಿಲ್ಲ, ಹೀಗಿರುವಾಗ ಶ್ರೀಯುತ ಶರ್ಮರು ಈ ವಿಶಿಷ್ಟವಾದ ಪ್ರಕಾಶನಕ್ಕೆ ವಹಿಸಿದ ಶ್ರಮವು ಅತ್ಯಮೂಲ್ಯ.

ಇದು ವೈದಿಕ ಸಮಾಜಕ್ಕೆ ತುಂಬಾ ಉಪಯುಕ್ತವಾದದ್ದು. ವೈದಿಕರಿಗೆ, ಪ್ರಯೋಗದ ಮೂಲಪ್ರಮಾಣವಾದ ಸೂತ್ರ, ಕಾರಿಕೆಗಳನ್ನು ತಿಳಿದುಕೊಳ್ಳಲು ಆಸಕ್ತರಾದ ಜಿಜ್ಞಾಸುಗಳಿಗೆ, ವಿದ್ಯಾರ್ಥಿಗಳಿಗೆ, ಸಮಸ್ತ ಆಸ್ತಿಕ ಬಂಧುಗಳಿಗೆ ಈ ಗ್ರಂಥಗಳು ತುಂಬಾ ಉಪಯುಕ್ತವಾಗಿವೆ. ಕರ್ಮಜ್ಞಾನವನ್ನು ಹೊಂದಿ, ಅನುಷ್ಠಾನವನ್ನು ಮಾಡಿದಾಗ ಮಾತ್ರ ಆ ವೈದಿಕ ಕರ್ಮ ವಿಶೇಷಫಲವನ್ನೇ ಕೊಡುವುದೆಂದು ಶಾಸ್ತ್ರಗಳೇ ತಿಳಿಸುತ್ತಿವೆ.

ಇವರಿಂದ ಇನ್ನೂ ಹೆಚ್ಚಿನ ಸನಾತನ ಪರಂಪರೆಯ ಸೇವೆ ನಡೆಯಲು, ಇವರಿಗೆ ಹಾಗೂ ಈ ವಿಷಯದಲ್ಲಿ ಅಮೂಲ್ಯ ಮಾರ್ಗದರ್ಶನ ನೀಡುತ್ತಿರುವ ಮಹನೀಯರಾದ ವಿದ್ವಾನ್, ಶ್ರೀಮಾನ್ ಶಿವಕುಮಾರ ಅವಧಾನಿಗಳಿಗೂ ಮತ್ತು ವಿದ್ವಾನ್, ಶ್ರೀಮಾನ್ ಕಿರಣ ಅವಧಾನಿಗಳಿಗೂ ಆಯುಷ್ಯ, ಆರೋಗ್ಯ ಮತ್ತು ಭಾಗ್ಯವನ್ನು ಅನುಗ್ರಹಿಸಲೆಂದು ವೇದಮಾತೆಯಾದ ಶಾರದಾಂಬೆ ಮತ್ತು ಜಗದ್ಗುರುಗಳ ಸನ್ನಿಧಿಯಲ್ಲಿ ಪ್ರಾರ್ಥಿಸುತ್ತೇನೆ.

ವಿದ್ವಾನ್, ವೇದಬ್ರಹ್ಮಶ್ರೀ, ಡಾ – ಸುಬ್ರಾಯ ವಿ ಭಟ್
ಪ್ರಾಧ್ಯಾಪಕರು, ಮೀಮಾಂಸಾಶಾಸ್ತ್ರ ವಿಭಾಗ,
ರಾಜೀವಗಾಂಧಿ ಕೇಂದ್ರೀಯ ಸಂಸ್ಕೃತ ವಿದ್ಯಾಪೀಠಂ, ಶೃಂಗೇರಿ.

ಸಂಪಾದಕರು ಮಾತು...

ಈ ಜಗತ್ತಿನಲ್ಲಿರುವ ಎಲ್ಲ ವಿಚಾರಗಳಿಗೂ ಆಧಾರ – ಕರ್ಮಭಾಗದ ಪಿತೃಗಳಾದ ಋಷಿಗಳೇ ಹೊರತು, ದೇಹಭಾವದ ಅಂದರೆ ಶರೀರವನ್ನು ಕೊಟ್ಟಂತಹ ಪಿತೃಗಳಲ್ಲ. ಏಕೆಂದರೆ ನಮಗಿಂತ ಮೊದಲು ಭೂಮಿಗೆ ಬಂದಿರುತ್ತಾರಾದ್ದರಿಂದ ಹಾಗೂ ನಮ್ಮ ದೇಹವು ಭೂಮಿಗೆ ಬರಲು ಅವಕಾಶ ಮಾಡಿರುತ್ತಾರಾದ್ದರಿಂದ ಅವರು ನಮಗೆ ಹಿರಿಯರು, ಪಿತೃಗಳು, ಆದರಣೀಯರು. ಹಾಗೂ ಈ ಎಲ್ಲಾ ಕೃತಜ್ಞತೆ – ಉನ್ನತಗೌರವ – ಆದರಗಳು ಅವರುಗಳಿಗೆ ಸಿಗಲೇಬೇಕು, ಮತ್ತೂ ಕಿರಿಯರಾದವರು ಕೊಡಲೇಬೇಕು, ಸಂದೇಹವೇ ಇಲ್ಲ!.

ಆದರೆ, ಅವರೆಂದಿಗೂ(ದೇಹಭಾವದ ಪಿತೃಗಳು) ಅತ್ಯಂತ ಸೂಕ್ಷ್ಮವಾದ, ಗೂಢವಾದ, ವಿಸ್ತಾರವಾದ ಜ್ಞಾನದ ರಾಶಿಯ ಕರ್ತೃವಾಗಲೂ, ಆಧಾರವಾಗಲೂ ಸಾಧ್ಯವೇಇಲ್ಲ!!. ಏಕೆಂದರೆ ಅವರುಗಳೂ ಸಹ ಅವರವರ ಜನ್ಮಾಂತರದ ಪಾಪಪುಣ್ಯಗಳ ಫಲಗಳನ್ನು ಅನುಭವಿಸಲು ಬಂದಿರುವವರೇ ಆಗಿರುತ್ತಾರೆ. ಹಾಗಾಗಿಯೇ ನಾವುಗಳು ನಮಸ್ಕಾರ ಮಾಡುವಾಗ ಹೇಳುವ ಪ್ರವರದಲ್ಲಿ, ಜನ್ಮಕ್ಕೆ ಕಾರಣರಾದ ತಂದೆ, ಅಜ್ಜ, ಮುತ್ತಜ್ಜರ ಹೆಸರುಗಳನ್ನು ಹೇಳುವುದಿಲ್ಲ!, ಬದಲಿಗೆ ಕರ್ಮಭಾಗದ ಪಿತೃಗಳಾದ, ನಮ್ಮ ಪರಂಪರೆಯ ಮಹರ್ಷಿಗಳ ಹೆಸರುಗಳನ್ನು(ನಾವು ಅವರ ಪರಂಪರೆಯವರು ಎಂದು) ಹೇಳುವುದು. ಹಾಗಾಗಿ ಇಂದು ನಾವುಗಳು ನೋಡುತ್ತಿರುವ, ಹಾಗೆಯೇ ಕೇಳುತ್ತಿರುವ ಅನೇಕ ರೀತಿಯ ಸಮುದಾಯಗಳ ಭಿನ್ನಭಿನ್ನ ನಡವಳಿಕೆಗಳನ್ನು 'ಇದೇ ನಮ್ಮ ಸಂಪ್ರದಾಯ – ಆಚಾರ' ಎಂಬ ಬ್ರಹ್ಮಾಸ್ತ್ರದಂತಹ ವಾಕ್ಯಗಳಿಂದ ಅವರುಗಳು ಮಾಡಿಕೊಳ್ಳುವ ಯಾವ ಸಮರ್ಥನೆಗೂ ಬೆಲೆಯಿಲ್ಲ.

ಏಕೆಂದರೆ, ಕರ್ಮಭಾಗದ ಪಿತೃಗಳಾದ, ಸಹಸ್ರಸಹಸ್ರ ವರ್ಷಗಳು ಭಗವಂತನನ್ನು ಧ್ಯಾನಿಸಿ ಮಂತ್ರದ್ರಷ್ಟಾರರಾದ ಋಷಿಪುಂಗವರು, ಶಾಸ್ತ್ರ ಗ್ರಂಥಗಳನ್ನು ಭಗವಂತನ ಸೂಚನೆಯಂತೆ ರಚಿಸಿ, ಸಮಸ್ತ ಲೋಕಕ್ಕೆ ಏನನ್ನು ಆದೇಶಿಸಿ ಉಪದೇಶಿಸಿದ್ದಾರೋ ಆ ನಡವಳಿಕೆಗಳನ್ನು, ಆ ನಿಯಮಗಳನ್ನು, ಮನುಷ್ಯರು ತಲತಲಾಂತರ ವರ್ಷಗಳಿಂದ ಅವಿಚ್ಛಿನ್ನವಾಗಿ ಚಾಚೂತಪ್ಪದೆ ಅನುಸರಿಸುವಂತಹ ಪ್ರಕ್ರಿಯೆಗೇ – ಅಂತಹ

ವ್ಯವಸ್ಥಿತವಾದ ನಡವಳಿಕೆಗೇ **ಸಂಪ್ರದಾಯ – ಆಚಾರ** ಎಂದು ಹೆಸರೇ ಹೊರತು, ನಾವು ನೀವು ಮಾಡುವಂತಹ, ಆಚರಿಸುವಂತಹ, ಶಾಸ್ತ್ರಗಳಲ್ಲಿಲ್ಲದಿರುವ – ಶಾಸ್ತ್ರಗಳಿಗೆ ಪೂರಕವಲ್ಲದ ಹಾಗೂ ಶಾಸ್ತ್ರವಿರೋಧವಾದ ಯಾವ ಕ್ರಿಯೆಗಳಿಗೂ ಸಂಪ್ರದಾಯ ಎಂದು ಹೇಳಲು ಬರುವುದಿಲ್ಲ!!.

ಏಕೆಂದರೆ ಋಷಿಗಳಿಂದ ರಚಿತವಾಗಿರುವ ಸಕಲ ಶಾಸ್ತ್ರಗ್ರಂಥಗಳೂ ಕೂಡ ಕೇವಲ ಆಯಾ ವೇದಗಳು – ಆ ವೇದಗಳ ಶಾಖೆಗಳು – ವೇದದ ಅರ್ಥ ಹಾಗೂ ಅಂಗಗಳನ್ನು ಮಾನದಂಡವಾಗಿ ಇಟ್ಟುಕೊಂಡು, ಅವುಗಳನ್ನು ಅನುಸರಿಸಿ ರಚನೆಯಾಗಿವೆಯೇ ಹೊರತು, ಇಂದಿನ ಸಮಾಜದಲ್ಲಿ ಕಂಡುಬರುವ ಯಾವುದೇ ಮತ, ಸಮುದಾಯ, ಒಳಪಂಗಡಗಳನ್ನು, ಉದಾಹರಣೆಗೆ : ಸಂಕೇತಿಗಳನ್ನು – ಹವ್ಯಕರನ್ನು – ಕಮ್ಮೆಗಳನ್ನು – ಮಾಧ್ವರನ್ನು – ಸ್ಮಾರ್ತರನ್ನು – ಐಯ್ಯಂಗಾರರನ್ನು – ದ್ರಾವಿಡರನ್ನು – ಆಂಧ್ರದವರನ್ನು – ನಮ್ಮೂರಿನ ಪುರೋಹಿತರನ್ನು – ನಿಮ್ಮೂರಿನ ಪುರೋಹಿತರನ್ನು – ವೇದಶಾಸ್ತ್ರಗಳ ಬಗ್ಗೆ ಏನೂ ಗೊತ್ತಿಲ್ಲದ, ಆದರೆ ವಯಸ್ಸಿ (ದೇಹದಲ್ಲಿ)ನಲ್ಲಿ ಹಿರಿಯರಾದ ಹೆಂಗಸರು ಅಥವಾ ಗಂಡಸರನ್ನು.....!!!, ಹೀಗೆ ಇಂತಹ ಯಾವ ಮಾನದಂಡಗಳನ್ನೂ ದೃಷ್ಟಿಯಲ್ಲಿಟ್ಟುಕೊಂಡು ನಮ್ಮ ಒಂದೇಒಂದು ಶಾಸ್ತ್ರಗ್ರಂಥವೂ ಸಹ ರಚನೆಯಾಗಿಲ್ಲ ಎಂಬುದನ್ನು ನಾವು ಮೊದಲು ಅರಿತುಕೊಳ್ಳಬೇಕು.

ಅಲ್ಲದೇ, ಭಗವಂತನು ತನ್ನ ಮೂಲಕ ರಚಿತವಾಗಿರುವ ಶಾಸ್ತ್ರಗಳನ್ನು ಕೇವಲ ಅನುಸರಿಸಲು ಮಾತ್ರ ಮನುಷ್ಯರಿಗೆ ಅವಕಾಶವನ್ನು ಕೊಟ್ಟಿದ್ದಾನೆಯೇ ಹೊರತು ಅದನ್ನು ಮೀರಲು ಅವಕಾಶ ಕೊಟ್ಟಿಲ್ಲ. ಹಾಗಾಗಿಯೇ ಗೀತೆಯಲ್ಲಿ ಕೃಷ್ಣನು,

ತಸ್ಮಾತ್ ಶಾಸ್ತ್ರಂ ಪ್ರಮಾಣಂತೇ ಕಾರ್ಯಾಕಾರ್ಯ ವ್ಯವಸ್ಥಿತೌ ।
ಜ್ಞಾತ್ವಾ ಶಾಸ್ತ್ರ ವಿಧಾನೋಕ್ತಂ ಕರ್ಮಕರ್ತುಮಿಹಾರ್ಹಸಿ ॥

ಅಂದರೆ, ತಪ್ಪು–ಸರಿ, ನ್ಯಾಯ–ಅನ್ಯಾಯ ಈ ವಿಷಯಗಳಲ್ಲಿ ಶಾಸ್ತ್ರಗಳೇ ಪ್ರಮಾಣವಾಗಿವೆ ಎಂದು ಹೇಳಿರುವುದು. ಹಾಗೆಯೇ,

ವೇದೋಕ್ತ: ಪ್ರಥಮೋ ಧರ್ಮೋ ಧರ್ಮಶಾಸ್ತ್ರೇಷು ಚಾಪರ: ।
ಶಿಷ್ಟಾಚಾರ ಸ್ಮೃತೀಯಸ್ತು ತ್ರಿವಿಧಂ ಧರ್ಮಲಕ್ಷಣಂ ॥ ಮತ್ತೂ

ಶ್ರುತಿಃಸ್ಮೃತಿ ವಿರೋಧೇ ಶ್ರುತಿಃ ಗರೀಯಸಿ ।
ಸ್ಮೃತಿಸ್ಸಂಪ್ರದಾಯ ವಿರೋಧೇ ಸ್ಮೃತಿಃ ಗರೀಯಸಿ ॥

ಅಂದರೆ – ವೇದಗಳಲ್ಲಿ ಹೇಳಿದ ಧರ್ಮವೇ ಮುಖ್ಯ, ಅದಕ್ಕೇ ಮೊದಲ ಪ್ರಾಶಸ್ತ್ಯ । ಧರ್ಮಶಾಸ್ತ್ರಗಳಲ್ಲಿ ಹೇಳಿರುವುದಕ್ಕೆ 2ನೇ ಆದ್ಯತೆ । ಶಿಷ್ಟಾಚಾರಕ್ಕೆ 3ನೇ ಆದ್ಯತೆ, ಅದೂ ಶ್ರುತಿ, ಸ್ಮೃತಿ, ಪುರಾಣಾದಿಶಾಸ್ತ್ರಗಳು ಒಪ್ಪುವಂತಹ (ವಿರೋಧವಲ್ಲದ) ಅಥವಾ ತತ್ಕಾಲದಲ್ಲಿ ಯಾವುದೇ ಶಾಸ್ತ್ರದ(ಋಷಿವಾಕ್ಯ) ಆಧಾರವಾಕ್ಯಗಳು ಸಿಗದಿದ್ದಾಗ ಮಾತ್ರ 3 ನೇ ಆದ್ಯತೆಯಾಗಿ ಶಿಷ್ಟಾಚಾರವನ್ನು ಒಪ್ಪಿಕೊಳ್ಳಬಹುದು ॥ ಮತ್ತೂ ವೇದಕ್ಕೂ ಹಾಗೂ ಧರ್ಮಶಾಸ್ತ್ರಾದಿ ಸ್ಮೃತಿಗಳಿಗೂ ಪರಸ್ಪರವಿರೋಧ ಕಂಡುಬಂದಾಗ, ವೇದಕ್ಕೇ ಆದ್ಯತೆಯೆಂದೂ ಮತ್ತೂ ಸ್ಮೃತಿಗಳಿಗೂ ಹಾಗೂ ಲೋಕದ ನಡವಳಿಕೆಗಳಿಗೂ(ಆಚರಣೆ) ಪರಸ್ಪರವಿರೋಧ ಕಂಡುಬಂದರೆ, ಆಗ ಸ್ಮೃತಿವಾಕ್ಯಗಳಿಗೇ ಆದ್ಯತೆ ಇರಬೇಕು ॥

ವೇದೋನಿತ್ಯಮಧೀಯತಾಂ ತದುದಿತಃ ಕರ್ಮಸ್ವನುಷ್ಠೀಯತಾಮ್ ।

ಎಂದು ಶಂಕರಾಚಾರ್ಯರು ಆದೇಶಿಸಿದ್ದಾರೆ. ಇದರ ಅರ್ಥ, ವೇದವನ್ನು ಮೊದಲು ಅಧ್ಯಯನ ಮಾಡಿ ಅರ್ಥಜ್ಞಾನವನ್ನು ತಿಳಿಯಿರಿ ಹಾಗೂ ಅದರಲ್ಲಿ ಹೇಳಿರುವಂತೆಯೇ ಕರ್ಮಗಳನ್ನು (ಕೆಲಸ) ಆಚರಿಸಿರಿ ॥ ಇನ್ನು,

ಯಸ್ಯ ನಾಸ್ತಿ ಸ್ವಯಂ ಪ್ರಜ್ಞಾ ಶಾಸ್ತ್ರಂ ತಸ್ಯ ಕರೋತಿ ಕಿಮ್ ।
ಲೋಚನಾಭ್ಯಾಂ ವಿಹೀನಸ್ಯ ದರ್ಪಣ: ಕಿಂ ಕರಿಷ್ಯತಿ ॥

ಅಂದರೆ, ಯಾವಾತನಿಗೆ ಸ್ವಯಂ ಪ್ರಜ್ಞೆ ಇರುವುದಿಲ್ಲವೋ, ಅವನಿಗೆ ಶಾಸ್ತ್ರವು ಏನನ್ನು ತಾನೇ ಮಾಡುತ್ತದೆ. 2 ಕಣ್ಣುಗಳೂ ಇಲ್ಲದವನಿಗೆ ಕನ್ನಡಿಯು ತಾನೇ ಏನನ್ನು ಮಾಡುತ್ತದೆ. ಮನುಷ್ಯನಿಗೆ ಶಾಸ್ತ್ರಜ್ಞಾನವು ಅತ್ಯವಶ್ಯಕ, ಸ್ವಂತ ಬುದ್ಧಿಯಿಂದ

ಶಾಸ್ತ್ರವನ್ನು ವಿವೇಚಿಸಿ, ಮುಕ್ತವಾಗಿ ಒಪ್ಪಿಕೊಳ್ಳುವಂತಹ ಮನೋಧರ್ಮವನ್ನು ಬೆಳಸಿಕೊಳ್ಳಬೇಕು. ಶಾಸ್ತ್ರಗಳು ಮನುಷ್ಯರಿಗೆ ಒಳಿತನ್ನು ಮಾಡುವುದಕ್ಕಾಗಿಯೇ ಹೊರತೇ ನೆ. ಶಾಸ್ತ್ರಗ್ರಂಥಗಳು ಋಷಿಗಳ ತಪಸ್ಸಿನ ಫಲರೂಪಗಳು. ಮನುಷ್ಯರಿಗೆ ಇವು ದಾರಿದೀಪಗಳಾಗಿವೆ. ಮೋಕ್ಷವು ಒಂದೆರಡು ಜನ್ಮಗಳಲ್ಲಿ ಸಿದ್ಧಿಸುವಂತಹದ್ದಲ್ಲ, ಮನುಷ್ಯನು ಅದನ್ನು ಪಡೆಯಲು ಪ್ರತಿಜನ್ಮದಲ್ಲಿಯೂ ಪ್ರಯತ್ನಶೀಲನಾಗಿರಬೇಕು. ಹೀಗೆ ಪ್ರಯತ್ನಶೀಲನಾಗಬೇಕಾದರೆ ಶಾಸ್ತ್ರಗಳು ಅತ್ಯವಶ್ಯಕ. ಅವುಗಳನ್ನು ಧಿಕ್ಕರಿಸಿದರೆ, ಕುರುಡನು ಕನ್ನಡಿಯನ್ನು ತಿರಸ್ಕರಿಸಿದಂತೆ ಆಗುತ್ತದೆ. ಸರ್ವಸ್ಯ ಲೋಚನಂ ಶಾಸ್ತ್ರಂ – ಎನ್ನುವಂತೆ ನಮ್ಮ ಬದುಕಿನ ಸಾರ್ಥಕತೆಗೆ ಶಾಸ್ತ್ರವೆಂಬ ಕಣ್ಣು ಬೇಕು, ಅದಿಲ್ಲದಿದ್ದರೆ ಅವನು ಕುರುಡನೇ ಸರಿ.

ಕೊನೆಯದಾಗಿ –

'ಅವಶ್ಯಂ ಪಿತ್ರಾಚಾರಂ!' ಹೌದು ಕರ್ಮಮಾರ್ಗದ ವಿಷಯದಲ್ಲಿ ಅವಶ್ಯವಾಗಿ ನಮ್ಮ ಪಿತೃಗಳ ಆಚಾರವನ್ನು, ನಡವಳಿಕೆಗಳನ್ನು ಅನುಸರಿಸಬೇಕು, ಅದೇ ಸಂಪ್ರದಾಯ–ಆಚಾರ. ಆದರೆ ಯಾವ ಪಿತೃಗಳ?, ಅಂದರೆ ಕರ್ಮಪಿತೃಗಳಾದ ಋಷಿಗಳ ವಚನಗಳನ್ನು ಮೊದಲು ಅಧ್ಯಯನ ಮಾಡಿ, ಹಾಗೆಯೇ ಅರ್ಥಜ್ಞಾನ ತಿಳಿದು, ನಂತರ ನಿಷ್ಕಾಮವಾಗಿ ಕರ್ಮಾಚರಣೆಯನ್ನು ಮಾಡಿದರೆ, ಅದರಿಂದ ಚಿತ್ತಶುದ್ಧಿ, ತನ್ಮೂಲಕ ಬ್ರಹ್ಮಜ್ಞಾನ(ಸಚ್ಚಿದಾನಂದ ಸ್ವರೂಪ) ಪ್ರಾಪ್ತಿಯಾಗುತ್ತದೆ.

ಪ್ರಸ್ತುತ, ಈ ಗ್ರಂಥವನ್ನು ಮೊದಲ ಬಾರಿಗೆ ಕನ್ನಡ ಭಾಷೆಯಲ್ಲಿ ನಾವೇ ನಾಲ್ಕು ವರ್ಷಗಳ ಹಿಂದೆ ಪ್ರಕಟಿಸಿದ್ದು, ಈಗ ಮತ್ತೆ ಜಿಜ್ಞಾಸುಗಳ ಅಪೇಕ್ಷೆ ಮೇರೆಗೆ ದ್ವಿತೀಯ ಬಾರಿ ಪ್ರಕಟಿಸುತ್ತಿದ್ದೇವೆ. ಈ ಬಾರಿ ವಿಶೇಷವಾಗಿ ಮಂತ್ರಗಳನ್ನು ಪದ ವಿಭಾಗ ಮಾಡಿದ್ದು, ಪ್ರಯೋಗ ಮಾಡಿಸುವವರಿಗೆ ಬಹಳ ಅನುಕೂಲವಾಗುತ್ತದೆಂದು ಭಾವಿಸಿದ್ದೇವೆ. ಹಾಗೆಯೇ ಮಂತ್ರಾರ್ಥವನ್ನು ಈ ಬಾರಿ ಮುದ್ರಿಸಿರುವುದು ವಿಶೇಷವಾಗಿದೆ. ಹಾಗೆಯೇ ಈ ಗ್ರಂಥವು ಈ ರೂಪಕ್ಕೆ ಬರಲು ಕಾರಣೀಭೂತರಾದಂತಹ ನಮ್ಮ ಎಲ್ಲಾ

ಮಾರ್ಗದರ್ಶಕ ವಿದ್ವಾಂಸರುಗಳಿಗೂ ವಿಶೇಷವಾಗಿ ಕೃತಜ್ಞತೆಗಳನ್ನು ಸಲ್ಲಿಸುತ್ತೇವೆ. ಮತ್ತೂ ವಾತ್ಸಲ್ಯದಿಂದ ವಿಶೇಷ ಮಾರ್ಗದರ್ಶನವನ್ನು ನೀಡುತ್ತಿರುವ **ವಿದ್ವಾಂಸರಾದ, ಅಗ್ನಿಹೋತ್ರಿಗಳಾದ ಶ್ರೀಮಾನ್ ಕಿರಣಾವಧಾನಿಗಳಿಗೆ** ಈ ಸಂದರ್ಭದಲ್ಲಿ ಸಾಷ್ಟಾಂಗ ಪ್ರಣಾಮಗಳನ್ನು ಸಲ್ಲಿಸುತ್ತಿದ್ದೇನೆ ಎಂಗೂ ಈ ಗ್ರಂಥವನ್ನು ಹೊರತರಲು ಆರ್ಥಿಕ ಸಹಾಯವನ್ನು ನೀಡಿದಂತಹ ಶ್ರೀಯುತ ರಾಜೇಶ್ ಶ್ರೀಮತಿ ಸ್ನೇಹಲತಾ ದಂಪತಿಗಳಿಗೆ ಮತ್ತು ಅವರ ಪರಿವಾರದವರಿಗೆ ವಿಶೇಷವಾದಂತಹ ಅಭಿನಂದನೆಗಳನ್ನು ಸಲ್ಲಿಸುತ್ತೇನೆ.

ಇಂತಹ ಅವಕಾಶವನ್ನು ನಮಗೆ ದೊರಕಿಸಿಕೊಟ್ಟಂತಹ **ಪೂಜ್ಯ ಅವಧೂತ ಮಹಾತ್ಮರಾದ ಶ್ರೀ ವೆಂಕಟಾಚಲ ಸದ್ಗುರುಗಳ** ಸಂಕಲ್ಪವೇ ಈ ಎಲ್ಲಾ ಆಗುಹೋಗುಗಳಿಗೂ ಮೂಲ ಕಾರಣವು.

ವೇದಬ್ರಹ್ಮ ಶ್ರೀ ಎ.ಸಿ ಶಕ್ತಿಧರ ಶರ್ಮರು
ಸಂಪಾದಕರು ಹಾಗೂ ಪ್ರಕಾಶಕರು

1 ವ್ರತೋಪಕ್ರಮಃ – ಕಪರ್ದಿಕಾರಿಕಾ

ಉಪಕ್ರಮೋತ್ಸರ್ಜನಯೋಸ್ಸಶಿಷ್ಯ ಆಚಾರ್ಯ ಆಪ್ಲುತ್ಯ ಮಹಾನದೀಷು । ಸಂತರ್ಪ್ಯ ವಾರ್ಯಂಜಲಿಭಿರ್ಮುನೀಂಸ್ತಾನ್ ಏಭ್ಯಸ್ತು ಹೋಷ್ಯನ್ ಸದಸಸ್ಪತಿಂ ಚ ॥

ವ್ರತೋಪಕ್ರಮ ಹಾಗೂ ವ್ರತೋತ್ಸರ್ಜನದಲ್ಲಿ ಶಿಷ್ಯಸಹಿತನಾದ ಆಚಾರ್ಯರು ಮಹಾನದಿಗಳಲ್ಲಿ ಮುಳುಗುಸ್ನಾನ ಮಾಡಿ । ಯಾವ ಋಷಿಗಳಿಗೆ ಉಪಕ್ರಮ ಉತ್ಸರ್ಜನಗಳಲ್ಲಿ ಪ್ರಧಾನಹೋಮವು ಮಾಡಲ್ಪಡುತ್ತದೋ, ಆ ಋಷಿಗಳಿಗೆ ನೀರಿನಲ್ಲಿ ತರ್ಪಣವನ್ನು ಕೊಟ್ಟು, ಸ್ವಿಷ್ಟಕೃತ್ ಸ್ಥಾನದಲ್ಲಿ ಸದಸಸ್ಪತಿಯನ್ನು ಹೋಮಿಸಬೇಕು ॥

ಕೇಂದ್ವಗ್ನಿ ವಿಶ್ವಾಂಶ್ಚ ನಿಷತ್ಸ್ವಯಂಭುಂ ಹುತ್ವಾ ಮುಖಾಂತೇ ಸದಸಸ್ಪತಿಂ ಚ ।
ಆದ್ಯಾನುವಾಕಾಂಶ್ಚತುರೋಽವರಾರ್ಧ್ಯಾನ್ ಅಧೀಯತೇ ತತ್ರ ಜಯಾದಿಕಂ ಚ ॥

ಪ್ರಜಾಪತಿಕಾಂಡಋಷಿ ಹಾಗೂ ಸೋಮಕಾಂಡಋಷಿ, ಅಗ್ನಿಕಾಂಡಋಷಿ, ವಿಶ್ವೇದೇವಕಾಂಡಋಷಿಗಳು, ಸಾಗ್ಂಹಿತೀ ದೇವತೆಗಳು, ಯಾಜ್ಞೀಕೀದೇವತೆಗಳು, ವಾರುಣೀದೇವತೆಗಳು, ಸ್ವಯಂಭುಬ್ರಹ್ಮ ಇವರುಗಳಿಗೆ ಹೋಮಿಸಿ, ಮುಖಾಂತದಲ್ಲಿ ಸದಸಸ್ಪತಿ ದೇವತೆಗೆ ಹೋಮಿಸಬೇಕು । ನಂತರ ಈ ಕಾಂಡಋಷಿಗಳ ಮಂತ್ರಗಳನ್ನು ಮೊದಲಿನ ೪–೪ ಅನುವಾಕಗಳಿಗೆ ಕಡಿಮೆಯಿಲ್ಲದಂತೆ ಅಧ್ಯಯನ ಮಾಡಿ, ನಂತರ ಜಯಾದಿಯೇ ಮೊದಲಾದ ಉತ್ತರ ಪ್ರಯೋಗವನ್ನು ಮಾಡಬೇಕು ॥

ಋಷೀನ್ ಮುಖಾಂತೇ ಜುಹುಯಾತ್ ವ್ರತೇಷು ಸೂಕ್ತೋಪಹೋಮಾನ್ ಸದಸಸ್ಪತಿಂ ಚ ।
ಉಪಸ್ಥಿತಿಶ್ಚಾಪಿ ಚ ದೇವತಾನಾಂ ಜಯಾದಯೋ ಬ್ರಾಹ್ಮಣ ತರ್ಪಣಂ ಚ ॥

ವ್ರತೋಪಕ್ರಮ, ಉತ್ಸರ್ಜನಗಳಲ್ಲಿ ಋಷಿದೇವತೆಗಳಿಗೆ ಪ್ರಧಾನಹೋಮವನ್ನು ಮಾಡಿ, ಆಯಾಯಾ ಋಷಿಸೂಕ್ತಮಂತ್ರಗಳಿಂದ ಉಪಹೋಮಗಳನ್ನು ಮಾಡಿ, ಸ್ವಿಷ್ಟಕೃತ್ ಸ್ಥಾನದಲ್ಲಿ ಸದಸಸ್ಪತಿಗೆ ಹೋಮಿಸಬೇಕು । ನಂತರ ಆಯಾಯಾ ಕಾಂಡಋಷಿದೇವತೆಗಳ ಪೂಜೆಯನ್ನೂ ಆವಾಹನಾದಿಯಾಗಿ ಮಾಡಬೇಕು, ನಂತರ ಜಯಾದಿಯೇ ಮೊದಲಾದ ಪ್ರಯೋಗವನ್ನು ಪೂರ್ಣಮಾಡಿ, ಬ್ರಾಹ್ಮಣ ಭೋಜನವನ್ನು ಮಾಡಬೇಕು ॥

ಸೋಮಸೂಕ್ತನಿಷತ್ ಸದಸಸ್ಪತಿಂ ತಂತ್ರವಜ್ಜುಹುಯಾತ್ ಸಲಿಲಂ ನಮಃ ।
ಶುಕ್ರಿಯೇ ಸಮಿಧೋಽಗ್ನ ಇತಿ ವ್ರತೀ ಯುಂಜತೇ ಸವಿತಾ ಜಂಯು ವಾರಿ ಶಮ್ ॥

ಸೋಮ ಮುಂತಾದ ಕಾಂಡಋಷಿಗಳ ಸೂಕ್ತಗಳನ್ನು ಹಾಗೂ ಮೂರು ಉಪನಿಷತ್ತುಗಳನ್ನು ಹಾಗೂ ಸದಸಸ್ಪತಿಯ ಹೋಮಗಳನ್ನು ವಿಧಿಯಂತೆ ಹೋಮಿಸಬೇಕು ಹಾಗೂ ಋಷಿತರ್ಪಣ (ನೀರಿನಿಂದ)ವನ್ನು ಹಾಗೂ ಋಷಿಪೂಜೆಯನ್ನೂ ಮಾಡಬೇಕು । ನವೋವಾಚೇ + ದೇವಾ ವೈ,,,, ಎಂಬ ೨ ಶುಕ್ರಿಯ ಪ್ರಶ್ನೆಗಳನ್ನು ಹಾಗೂ ಪೃಥಿವೀ ಸಮಿತ್,,, ಎಂಬ ಮಂತ್ರದಿಂದ ಸಮಿದಾಧಾನವನ್ನೂ ಹಾಗೂ ಅಗ್ನೇ ವ್ರತಪತೇ,,, ಎಂಬ ವ್ರತೋಪಸ್ಥಾನವನ್ನೂ ಹಾಗೂ ಯುಂಜತೇ ಯಿಂದ (ಆರಣ್ಯಕ ೪ ನೇ ಪ್ರಶ್ನೇ) ಸವಿತಾಭೂತ್ವಾ (ಆರಣ್ಯಕ ೫ ನೇ ಪ್ರಶ್ನೆ) ಎಂಬ ವರೆಗೆ ಪಾರಾಯಣವನ್ನು ಹಾಗೂ ಜಯಾದಿ, ಮದಂತೀ(ಬಿಸಿನೀರು) ಸ್ಪರ್ಶನ ಹಾಗೂ ಶನ್ನೋವಾತಃ,,, ಎಂಬ ಶಾಂತಿಮಂತ್ರ ಪಠನ ಇವುಗಳನ್ನೂ ಸಹಾ ಈ ಕರ್ಮವನ್ನು ಮಾಡಿಕೊಳ್ಳುವವನು ಮಾಡಬೇಕು ॥

ಮೀಲನೇ ಯತವಾಕ್‌ಶಿರಸಃ ಸ್ಮೃತೇ ವೇಷ್ಟನೇಽಸ್ತಮಿತೇ ಗೃಹಮಾವಿಶೇತ್ ।
ಸ್ಥೀಯತೇಽಂಧ ಇವ ತ್ವಥವಾऽऽಸ್ಯತೇ ವಾಗ್ಯತೇನ ತತೋಽಭ್ಯುದಿತಕ್ರಿಯಾ ॥

ನಂತರ ಕುರುಡನಂತೆ ಕಣ್ಣುಗಳನ್ನು ಮುಚ್ಚಿಕೊಂಡು, ಮೌನವಾಗಿದ್ದು ಮತ್ತು ತಲೆಗೆ ಪೇಟವನ್ನು ಧರಿಸಿ, ಸೂರ್ಯಾಸ್ತವಾದಮೇಲೆ ಮನೆಯನ್ನು ಪ್ರವೇಶಿಸಬೇಕು । ಹಾಗೂ ಸೂರ್ಯೋದಯದವರೆಗೂ ಕಣ್ಣಿಗೆ ಕಟ್ಟಿದ ಬಟ್ಟೆಯನ್ನು ತೆಗೆಯಬಾರದು ಮತ್ತು ಮೌನವಾಗಿಯೇ ಇರಬೇಕು ॥

ತತಃ ಪ್ರಭಾತೇ ತು ಬಹಿರ್ಗೃಹಾಣಾಂ ವಹ್ನಿಂ ಚ ಸೂರ್ಯಂ ಚ ತತೋದಕುಂಭಮ್ ।
ಆಕಾಶಮುದ್ವೀಕ್ಷ್ಯ ಗಿರಿಂ ಚ ವತ್ಸಂ ಪಶ್ಯೇದ್ಧಿರಣ್ಯಂ ಚ ವಯಸ್ಸುಪರ್ಣಾಃ ॥

ಸೂರ್ಯೋದಯವಾದ ಮೇಲೆ, ಮನೆಯಿಂದ ಹೊರಗೆ ಇರುವ ಅಗ್ನಿ, ಸೂರ್ಯ ಹಾಗೂ ನೀರಿನ ಬಿಂದಿಗೆ । ಹಾಗೂ ಆಕಾಶ, ಪರ್ವತ, ಕರು, ಹಣ, ಚಿನ್ನ ಇವುಗಳನ್ನು ವಯಸ್ಸುಪರ್ಣಾ,,, ಮಂತ್ರದಿಂದ ನೋಡಬೇಕು ॥

ಸಮಿದಾಧಾನ ಮಂತ್ರಾಣಾಂ ದ್ಯೌಸ್ಸಮಿತ್ ಪೂರ್ವ ಇಷ್ಯತೇ ।
ಆದಿತ್ಯ ವಾಯ್ವಗ್ನ ಇತಿ ವ್ರತಾನಾಮಿತಿ ಚ ಕ್ರಮಾತ್ ॥

ಸಮಿದಾಧಾನ ಮಂತ್ರಗಳನ್ನು ದ್ಯೌಸ್ಸಮಿತ್,,, ಎಂಬ ವ್ಯುತ್ಕ್ರಮದಿಂದ ಹೋಮಿಸಬೇಕು, ವ್ರತೋತ್ಸರ್ಜನದಲ್ಲಿ । ಹಾಗೂ ವ್ರತಮಂತ್ರಗಳನ್ನೂ ಆದಿತ್ಯ ವ್ರತಪತೇ,,, ಎಂಬ ವ್ಯುತ್ಕ್ರಮರೀತಿಯಲ್ಲೇ ಮಾಡಬೇಕು ॥

ಶ್ರಾವಣ್ಯಾಂ ಪ್ರೋಷ್ಠಪದ್ಯಾಂ ವಾ ವೈಶಾಖ್ಯಾಂ ಅಪಿ ವಾ ದ್ವಿಜಃ ।
ಆಸನ್ನೋದ್ವಾಹ ಆತೋರ್ ವಾ ಹ್ಯಾಪದಿ ಸ್ವಯಮೇವ ವಾ ॥

ಶ್ರಾವಣಮಾಸ, ಪ್ರೋಷ್ಠಪದಾ ನಕ್ಷತ್ರ ಅಥವಾ ವೈಶಾಖ ಮಾಸದಲ್ಲಾಗಲೀ ದ್ವಿಜನು । ಕುಳಿತುಕೊಂಡು ತಾನೇ ಪ್ರತ್ಯೇಕ ಪ್ರತ್ಯೇಕ ತಂತ್ರದಲ್ಲಿ ಅಥವಾ ದೇಹಾರೋಗ್ಯದಲ್ಲಿ ತೀವ್ರತರ ತೊಂದರೆ ಇದ್ದಾಗ ಅಥವಾ ಸಂಬಂಧಿಕರುಗಳಿಲ್ಲದೇ ಏಕಾಂಗಿಯಾಗಿದ್ದಾಗಲೂ ಸ್ವತಃ ಅಥವಾ ಬೇರೆಯವರ ಸಹಾಯದಿಂದಲೂ ಇದನ್ನು ಮಾಡಬಹುದು ॥

ಏಕತಂತ್ರೇಣ ವಾ ಕುರ್ಯಾತ್ ಏತತ್ ವ್ರತಚತುಷ್ಟಯಮ್ ।
ವ್ರತೇಷು ಚಾಪರೋ ವಿಧಿರ್ನ ಸೂಕ್ತ ಚಿತ್ತಮಾದಿಕಂ ॥

ಮತ್ತೂ ಈ ವ್ರತಚತುಷ್ಟಯವನ್ನು ಅನಿವಾರ್ಯದಲ್ಲಿ ಒಂದೇ ತಂತ್ರದಿಂದಲೂ ಮಾಡಬಹುದಾಗಿದೆ । ವ್ರತಚತುಷ್ಟಯಕ್ಕೆ ಬೇರೆಯೊಂದು ವಿಧಿಯನ್ನು ಹೇಳುತ್ತಿದ್ದೇವೆ ಇದರಲ್ಲಿ ಸೂಕ್ತವಾಗಲೀ, ಚಿತ್ತವಾಗಲೀ, ಇಲ್ಲ ॥

ಉಪಸ್ಥಿತಿರ್ನ(ರ್ಹಿ) ದೇವತಾಗಣಸ್ಯ ಶುಕ್ರಿಯಾದೃತೇ ।
ಏಕತಂತ್ರ ಪ್ರಯೋಗಸ್ಯ ಪಕ್ಷಂ ವಕ್ಷ್ಯಾಮ್ಯತಿ ಸ್ಫುಟಮ್ ॥

ಉಪಸ್ಥಾನವಿಲ್ಲ, ಶುಕ್ರಿಯಾ ವ್ರತವನ್ನು ಬಿಟ್ಟು ಬೇರೆ ವ್ರತಗಳಲ್ಲಿ ಇಲ್ಲ । ಅನಿವಾರ್ಯ ಸಂದರ್ಭಗಳಲ್ಲಿ ಸ್ವತಃ ತಾನೇ ವ್ರತಚತುಷ್ಟಯವನ್ನು ಮಾಡಿಕೊಳ್ಳಬಹುದು । ಒಂದೇ ತಂತ್ರದಿಂದಲೂ ಇದನ್ನು ಮಾಡಬಹುದು । ಏಕತಂತ್ರ ಪ್ರಯೋಗ ಕ್ರಮವನ್ನು ಸ್ಫುಟವಾಗಿ ಹೇಳುತ್ತೇನೆ ॥

ಏಕತಂತ್ರೇಣ ಚೇತ್ಯಾಹುಃ ಋಷೀಣಾಂ ತರ್ಪಣಾದಿಕಮ್ ।
ಅಗ್ನೇರುಪಸಮಾಧಾನಂ ಮುಖಾಂತೇ ಜುಹುಯಾತ್ ಋಷೀನ್ ॥

ಒಂದೇ ತಂತ್ರದ ಪ್ರಯೋಗದಲ್ಲಿ, ಒಂದು ಸಲ ಋಷಿ ತರ್ಪಣ । ಅಗ್ನಿಪ್ರತಿಷ್ಠೆಯೇ ಮೊದಲಾಗಿ ಪ್ರಯೋಗವನ್ನು ಪ್ರಾರಂಭಿಸಿ ಮುಖಾಂತದವರೆಗೆ ಮಾಡಿ ಋಷಿ ಹೋಮ ಮಾಡಬೇಕು ॥

ಪ್ರಜಾಪತಂಯು ಇತ್ಯೇಕಂ ಷಟ್ ಪ್ರಜಾಪತಿಸೂಕ್ತತಃ ।
ಸೋಮಾಂಯು ಸೋಮೋಧೇನುಂ ಚ ಅಗ್ನಂಯೇ ಅಗ್ನೇನಯೋತಿ ಚ ॥

ನಿವೀತಿಯಲ್ಲಿ ಪ್ರಜಾಪತಯೇ ಕಾಂಡ ಋಷಯೇ ಸ್ವಾಹಾ ಎಂದು ೧ ಸಲ ನಾಮಮಂತ್ರದಿಂದ ಹೋಮಿಸಿ, ಉಪವೀತಿಯಲ್ಲಿ ಪ್ರಜಾಪತಿ ಸೂಕ್ತದ ೬ ಮಂತ್ರಗಳಿಂದ ಹೋಮಿಸಬೇಕು । ಇದೇ ಕ್ರಮದಲ್ಲಿ, ಪುನಃ ನಿವೀತಿಯಲ್ಲಿ ಸೋಮನಿಗೆ ೧ ಸಲ ನಾಮಮಂತ್ರದಿಂದ ಹೋಮಿಸಿ, ಉಪವೀತಿಯಲ್ಲಿ ಸೋಮೋಧೇನುಂ ಎಂಬ ೬ ಮಂತ್ರಗಳಿಂದಲೂ । ಪುನಃ ನಿವೀತಿಯಲ್ಲಿ ಅಗ್ನಿಗೆ ೧ ಸಲ ನಾಮಮಂತ್ರದಿಂದ ಹೋಮಿಸಿ, ಉಪವೀತಿಯಲ್ಲಿ ಅಗ್ನೇನಯ ಎಂಬ ೬ ಮಂತ್ರಗಳಿಂದಲೂ ಹೋಮಿಸಬೇಕು ।

ವಿಶ್ವೇಭ್ಯೋ ಆನೋವಿಶ್ವೇ ಚ ಹುತ್ವಾ ಚ ಉಪನಿಷತ್ತ್ರಯಮ್ ।
ಬ್ರಹ್ಮಾಣಂ ಚ ತತೋ ಹುತ್ವಾ ಸದಸಸ್ಪತಂಯೇ ತಥಾ ॥

ಪುನಃ ನಿವೀತಿಯಲ್ಲಿ ವಿಶ್ವೇದೇವತೆಗಳಿಗೆ ೧ ಸಲ ನಾಮಮಂತ್ರದಿಂದ ಹೋಮಿಸಿ, ಉಪವೀತಿಯಲ್ಲಿ ಆನೋವಿಶ್ವೇ ಎಂಬ ೬ ಮಂತ್ರಗಳಿಂದಲೂ । ಪುನಃ ನಿವೀತಿಯಲ್ಲಿ ಸಾಗ್ಂಹಿತೀ ದೇವತೆಗೆ ಹಾಗೂ । ಯಾಜ್ಞಿಕೀ ದೇವತೆಗೆ । ವಾರುಣೀ ದೇವತೆಗೆ । ಬ್ರಹ್ಮನಿಗೆ ಹಾಗೂ । ಸದಸಸ್ಪತಿಗೆ ಹೋಮಿಸಬೇಕು ।

ಹುತ್ವಾ ಸ್ವಿಷ್ಟಕೃತಿಸ್ಥಾನೇ ಸದಸಸ್ಪತಿಂ ಇತಿ ಋಚಾ ।
ವಟುಃ ಉತ್ತರತಃ ತಿಷ್ಠನ್ ಪ್ರಾಜಾಪತ್ಯಮಿತಿ ಬ್ರುವನ್ ॥

ಉಪವೀತಿಯಲ್ಲಿ, ಸ್ವಿಷ್ಟಕೃತ್ ಸ್ಥಾನದಲ್ಲಿ, ಸದಸಸ್ಪತಿಂ... ಮಂತ್ರದಿಂದ ಹೋಮ ಮಾಡಬೇಕು । ವಟುವು ಉತ್ತರದಲ್ಲಿ ನಿಂತು, ಪ್ರಾಜಾಪತ್ಯ ವ್ರತವನ್ನು ಮಂತ್ರಸಹಿತ ಮಾಡುತ್ತಾನೆ ।

ಅಗ್ನ ಆದಿ ಚತುರ್ಭಿಶ್ಚ ದೇವತಾ ಉಪತಿಷ್ಠತೇ ।
ಮದಂತೀ ಸ್ಪರ್ಶನಂ ಕೃತ್ವಾ ನಮೋವಾಚಾದಿಕಂ ಪಠೇತ್ ॥

ಈ ಮೂಲಕ ಅಗ್ನಿ ಮುಂತಾದ ೪ ದೇವತೆಗಳಿಗೆ ಉಪಸ್ಥಾನ ಮಾಡುತ್ತಾನೆ । ಯಥಾಸ್ಥಾನದಲ್ಲಿ ಕುಳಿತು, ಬಿಸಿನೀರನ್ನು ಮುಟ್ಟಿ, ನಮೋವಾಚೇ... ಶಾಂತಿ ಮಂತ್ರವನ್ನು ಹೇಳಬೇಕು ।

ಪೃಥಿವ್ಯಾದಿ ಚತುರ್ಭಿಶ್ಚ ಸಮಿದಾಧಾನಂ ಏವ ಚ ।
ದೇವತೋಪಸ್ಥಿತಿಂ ಕೃತ್ವಾ ಸೌಮ್ಯಂ ವ್ರತಮಿತಿ ಬ್ರುವನ್ ॥

ಪೃಥಿವೀ ಸಮಿತ್., ಮುಂತಾದ ೪ ಮಂತ್ರಗಳಿಂದ ಸಮಿದಾಧಾನ ಮಾಡಬೇಕು। ವಟುವು ಉತ್ತರದಲ್ಲಿ ನಿಂತು, **ಸೌಮ್ಯ** ವ್ರತವನ್ನು ಮಂತ್ರಸಹಿತವಾಗಿ ದೇವತಾ ಉಪಸ್ಥಾನ ಮಾಡುತ್ತಾನೆ।

ಮಂತ್ರವಿಧ್ಯನುವಾಕಾದಿ ಪದಾನ್ಯೇತಾನಿ ವಾಚಯೇತ್ ।
ಯುಂಜತೇ ಸವಿತಾ ದ್ವೇ ವಾ ತೃತೀಯಾದೇರುಪಸ್ಥಿತಿಃ ॥

ಯಥಾಸ್ಥಾನದಲ್ಲಿ ಕುಳಿತು, ಆರಣ್ಯಕ ೪ ಮತ್ತು ೫ ನೇ ಪ್ರಶ್ನೆ ಪಾರಾಯಣಮಾಡಬೇಕು, ಸಮಯಾಭಾವವಿದ್ದಲ್ಲಿ ಅನುವಾಕಗಳ ಆದಿಗಳನ್ನು ಹೇಳಬಹುದು। ಅದೂ ಆಗದಿದ್ದಲ್ಲಿ **ಯುಂಜತೇ ಸವಿತಾ** ಎಂದಾದರೂ ಹೇಳಬೇಕು । ಪುನಃ ವಟುವು ಉತ್ತರದಲ್ಲಿ ನಿಂತು **ಆಗ್ನೇಯ** ವ್ರತವನ್ನು ಹಾಗೆಯೇ **ವೈಶ್ವದೇವ** ವ್ರತವನ್ನು ಮಂತ್ರಸಹಿತ ಮಾಡುವುದರ ಮೂಲಕ ದೇವತಾ ಉಪಸ್ಥಾನ ಮಾಡುತ್ತಾನೆ।

ಜಯಾದೀಂಶ್ಚ ತತೋ ಹುತ್ವಾ ಮದಂತೀನಾಂ ಉಪಸ್ಪೃಶನ್ ।
ಶನ್ನೋನುವಾಕ ಪಠನಂ ತತಃ ಸಮ್ಮೀಲನಾದಿಕಮ್ ॥

ನಂತರ ಜಯಾದಿ ಹೋಮಗಳನ್ನು ಮಾಡಿ, ಬಿಸಿನೀರನ್ನು ಮುಟ್ಟಬೇಕು। ವ್ರತೋಪಕ್ರಮದ ಕೊನೆಯಲ್ಲಿ, ಶನ್ನೋವಾತಃ,,,, ಎಂಬ ಮಂತ್ರವನ್ನು ಹೇಳಿ, ಕಣ್ಣುಮುಚ್ಚಿಕೊಳ್ಳುವ ಮತ್ತು ಮೌನ ಮಾಡುವ ವಿಧಿಗಳನ್ನು ಮಾಡಬೇಕು ॥

----********----

ವ್ರತೋಪಕ್ರಮಃ–ಆಪಸ್ತಂಬ ಗೃಹ್ಯಸೂತ್ರಂ

೧. ಉಪಾಕರಣೇ ಸಮಾಪನೇ ಚ ಋಷಿರ್ಯಃ ಪ್ರಜ್ಞಾಯತೇ ॥

ಉಪಾಕರಣದಲ್ಲೂ ಮತ್ತು ಸಮಾಪಸದಲ್ಲೂ ಯಾವ ಋಷಿಗಳು ಶಾಸ್ತ್ರ ರೀತಿಯಂತೆ ವಿಧಿಸಿರುವುದು ತಿಳಿದು ಬರುತ್ತದೆಯೋ ಆ ಋಷಿಗಳು ಮೊದಲು ಪ್ರಧಾನರು ॥

೨. ಸದಸಸ್ಪತಿರ್ದ್ವಿತೀಯಃ ॥

ಎರಡನೇ ದೇವತೆಯು ಸದಸಸ್ಪತಿಯು(ಸ್ವಿಷ್ಟಕೃತ್) ॥

ವ್ರತೋಪಕ್ರಮಃ – ಪ್ರಯೋಗಃ

* ಮಂಗಳ ಸ್ನಾನವನ್ನೂ, ನಿತ್ಯಾನುಷ್ಠಾನಗಳನ್ನೂ ಮಾಡಿಕೊಂಡು । ಭೂಪೂಜೆ, ಆಚಮನ, ಪವಿತ್ರಧಾರಣೆ, ಪ್ರಾಣಾಯಾಮ, ಘಂಟಾನಾದ, ದೀಪಪೂಜೆ ಗಳನ್ನು ಮಾಡಿ ॥

ಮಂಗಳಸ್ನಾನಂ, ನಿತ್ಯಾಹ್ನಿಕಂ ಚ ಕೃತ್ವಾ । ಭೂಪೂಜಾಂ, ಆಚಮನಂ, ಪವಿತ್ರಧಾರಣಂ, ಪ್ರಾಣಾಯಾಮಂ, ಘಂಟಾನಾದಂ, ದೀಪಪೂಜಾಂ, ಚ ಕೃತ್ವಾ ॥

* ಸಂಕಲ್ಪಿಸಿ.... ಪರಮೇಶ್ವರ ಪ್ರೀತ್ಯರ್ಥವಾಗಿ.... ಗೋತ್ರದಲ್ಲಿ.... ನಕ್ಷತ್ರದಲ್ಲಿ.... ರಾಶಿಯಲ್ಲಿ ಜನಿಸಿರುವ.... ಹೆಸರಿನ ನನ್ನ ಕುಮಾರನನ್ನು ಪ್ರಾಜಾಪತ್ಯ– ಸೌಮ್ಯ– ಆಗ್ನೇಯ– ವೈಶ್ವದೇವ ವ್ರತಗಳ ಉಪಕ್ರಮ ಕರ್ಮದಿಂದ ಸಂಸ್ಕಾರವನ್ನು ಮಾಡುತ್ತೇನೆ ಎಂದು ತಂದೆಯು ಸಂಕಲ್ಪಿಸಿ ।

ಶುಭೇ, ಶೋಭನೇ ಮುಹೂರ್ತೇ.. ಏವಂಗುಣ ವಿಶೇಷಣ ವಿಶಿಷ್ಟಾಯಾಂ ಶುಭತಿಥೌ, ಮಮ ..ಪ್ರೀತ್ಯರ್ಥಂ ..ಗೋತ್ರೇ ..ನಕ್ಷತ್ರೇ ..ರಾಶೌ ಜಾತಂ ..ಶರ್ಮಾಣಂ ಮಮ ಕುಮಾರಂ ಪ್ರಾಜಾಪತ್ಯ–ಸೌಮ್ಯ–ಆಗ್ನೇಯ– ವೈಶ್ವದೇವ–ವ್ರತೋಪಕ್ರಮ ಕರ್ಮಣಾ ಸಂಸ್ಕರಿಷ್ಯೇ ಇತಿ ಪಿತಾ ಸಂಕಲ್ಪ್ಯ ॥

* ವಟುವೂ ಸಹ ಪ್ರಾಜಾಪತ್ಯ– ಸೌಮ್ಯ– ಆಗ್ನೇಯ– ವೈಶ್ವದೇವ ವ್ರತಗಳ ಉಪಕ್ರಮ ಕರ್ಮಗಳನ್ನು ಆಚರಿಸುತ್ತೇನೆ ಎಂದು ಸಂಕಲ್ಪಿಸಬೇಕು ॥

ಕುಮಾರಃ ಪ್ರಾಜಾಪತ್ಯ–ಸೌಮ್ಯ–ಆಗ್ನೇಯ–ವೈಶ್ವದೇವ–ವ್ರತೋಪಕ್ರಮ ಕರ್ಮ ಆಚರಿಷ್ಯಾಮಿ ಇತಿಸಂಕಲ್ಪ್ಯ ॥

* ಅದಕ್ಕೆ ಮೊದಲು, ಕಲಶಪೂಜೆಯನ್ನೂ ಮತ್ತೂ ನಿರ್ವಿಘ್ನತೆಗಾಗಿ ಗಣಪತಿ ಪೂಜೆಯನ್ನು ಮಾಡುತ್ತೇನೆ ಎಂದು ಸಂಕಲ್ಪಿಸಿ – ಮಾಡುವುದು ॥

ತದಾದೌ, ಕಲಶಪೂಜಾಂ, ನಿರ್ವಿಘ್ನೇನ ಪರಿಸಮಾಪ್ತ್ಯರ್ಥಂ ಗಣಪತಿ ಪೂಜಾಂ ಚ ಕರಿಷ್ಯೇ – ಕೃತ್ವಾ ॥

* ಅದರ ಅಂಗವಾಗಿ, ಸ್ಥಳ–ದ್ರವ್ಯಗಳ ಶುದ್ಧಿಗಾಗಿ ಪುಣ್ಯಾಹವಾಚನವನ್ನು ಮಾಡುತ್ತೇನೆ ಎಂದು ಸಂಕಲ್ಪಿಸಿ – ಪುಣ್ಯಾಹವನ್ನು ಮಾಡಿ । ಕರ್ಮಾಂಗವಾಗಿ, ನವಕಾಂಡ ಋಷಿ ಪೂಜೆ ಮತ್ತು ತರ್ಪಣಗಳನ್ನು ಮಾಡುತ್ತೇನೆ ಎಂದು, ಈ ಕೆಳಗಿನಂತೆ ಸಂಕಲ್ಪಿಸಿ, ಷೋಡಶ ಉಪಚಾರಗಳಿಂದ ಪೂಜೆ ಮಾಡಿ ॥

ತದಂಗಂ, ಸ್ಥಲಶುದ್ಧ್ಯರ್ಥಂ, ದ್ರವ್ಯಶುದ್ಧ್ಯರ್ಥಂ, ಪುಣ್ಯಾಹವಾಚನ ಕರ್ಮ ಕರಿಷ್ಯೇ – ಪುಣ್ಯಾಹಂ ಕೃತ್ವಾ । ತದಂಗಂ ನವಕಾಂಡ ಋಷಿಪೂಜಾಂ ತರ್ಪಣಂ ಚ ಕರಿಷ್ಯೇ – ಪೂಜಾಂ ಕೃತ್ವಾ ॥

ಋಷಿತರ್ಪಣಂ –

* ನಿವೀತಿಯಲ್ಲಿ, ಈ ಕೆಳಗೆ ತಿಳಿಸಿರುವ ಋಷಿಗಳಿಗೆ, ನೀರಿನಲ್ಲಿ ತರ್ಪಣಗಳನ್ನು ಪ್ರತ್ಯೇಕವಾಗಿ ಎರಡೆರಡುಬಾರಿ ಕೊಡಬೇಕು ॥

ಪ್ರಜಾಪತಿಂ ಸೋಮಮಥಾಗ್ನಿವಿಶ್ವಾನ್ನುಪನಿಷತ್ಕ್ರಂಯಂ ಸ್ವಯಂಭುವಂ ಸದಸಸ್ಪತಿಂ ತರ್ಪಯಾಮಿ ತರ್ಪಯಾಮಿ ಇತಿ ಪ್ರತ್ಯೇಕೈಕಂ ತರ್ಪಯಿತ್ವಾ ॥

ಪ್ರಜಾಪತಿಂ ಕಾಂಡಋಷಿಂ ತರ್ಪಯಾಮಿ ತರ್ಪಯಾಮಿ ।

ಸೋಮಂ ಕಾಂಡಋಷಿಂ ತರ್ಪಯಾಮಿ ತರ್ಪಯಾಮಿ ।

ಅಗ್ನಿಂ ಕಾಂಡಋಷಿಂ ತರ್ಪಯಾಮಿ ತರ್ಪಯಾಮಿ ।

ವಿಶ್ವಾನ್‌ದೇವಾನ್ ಕಾಂಡಋಷೀನ್ ತರ್ಪಯಾಮಿ ತರ್ಪಯಾಮಿ ।

ಸಾಗ್ಂಹಿತೀರ್ ದೇವತಾ ಉಪನಿಷದಃ ತರ್ಪಯಾಮಿ ತರ್ಪಯಾಮಿ ।

ಯಾಜ್ಞಿಕೀರ್ ದೇವತಾ ಉಪನಿಷದಃ ತರ್ಪಯಾಮಿ ತರ್ಪಯಾಮಿ ।

ವಾರುಣೀರ್ ದೇವತಾ ಉಪನಿಷದಃ ತರ್ಪಯಾಮಿ ತರ್ಪಯಾಮಿ ।

ಬ್ರಹ್ಮಾಣಂ ಸ್ವಯಂಭುವಂ ತರ್ಪಯಾಮಿ ತರ್ಪಯಾಮಿ ।

ಸದಸಸ್ಪತಿಂ ತರ್ಪಯಾಮಿ ತರ್ಪಯಾಮಿ ।

ಋಷಿಹೋಮಃ

* ಉಪವೀತಿಯಲ್ಲಿ, ಹೋಮಕ್ಕಾಗಿ ಚೌಕಾಕಾರದ ಕುಂಡವನ್ನು ಮಾಡಿ ಅದರಲ್ಲಿ ಲೌಕಿಕವಾಗಿ ಅಗ್ನಿಪ್ರತಿಷ್ಠೆಮಾಡಿ(ಕಪರ್ದಿಸ್ವಾಮಿಗಳ ಕೆಳಗಿನ ಆಧಾರವಾಕ್ಯದಂತೆ)

ಚೌಲ ಜಾತಕ ಗೋದಾನ ಸ್ನಾನೋಪನಯನ **ವ್ರತಮ್** ।

ಲಾಜಾಹೋಮಃ ಸಮಿತ್ಕಾರ್ಯಂ ಲೌಕಿಕಾಗ್ನಾವಿತಿ ಸ್ಥಿತಿಃ ॥

ಉಪಾಯನೇ ವಿವಾಹೇ ಚ ಚೌಲೋಪಕರ್ಮ ಜಾತಕೇ ।

ಸ್ನಾನೇ **"ವ್ರತೇಷು ಚತುರ್ಷು"** ಲೌಕಿಕಾಗ್ನೌ ವಿಧೀಯತೇ ॥

* ಷಟ್ಪಾತ್ರ ಪ್ರಯೋಗದಿಂದ, ಮುಖಾಂತದವರೆಗೆ ಪ್ರಯೋಗ ಮಾಡಬೇಕು (ಕೇವಲ ಆಜ್ಯಹೋಮವೇ ಆದರೂ ಸಹಾ, ವ್ರತಚತುಷ್ಟಯಗಳಲ್ಲಿ ಮಾತ್ರ, ಮುಖಾಂತವೇ ಎಂದು ಕಪರ್ದಿಮುನಿಗಳ ಈ ಕೆಳಗಿನ ಆಧಾರವಾಕ್ಯದಂತೆ)

ಕರ್ಮಸ್ವೌಷಧಿ ಮತ್ಸು ಚ **"ವ್ರತೇಷು ಹಿ ಚತುರ್ಷ್ವಪಿ"** ।

"ಮುಖಾಹುತಿರವಶ್ಯಂ" ಹಿ ಸರ್ವಾಚಾರ್ಯೈಃ ಸುನಿಶ್ಚಿತಾ ॥

ಅಧ್ಯಾಯೋಪಾಕರ್ಮಾಣಿ ಚ **"ವ್ರತೇಷೂತ್ಸರ್ಜನೇಷು ಚ"** ।

"ಮುಖಾಹುತಿ" ಶ್ಚಾಗ್ನಿಮುಖಂ ಕರ್ತವ್ಯಶ್ಚ ಜಯಾದಯಃ ॥

* ಅಲ್ಲದೇ, ಈ ಕರ್ಮದಲ್ಲಿ, ಆಜ್ಯಸಂಸ್ಕಾರವನ್ನು ಪರಿಸ್ತರಣದ ಒಳಗೆ (ಅನಿರೂಢಾಗ್ನಿ) ಮಾಡಬೇಕು. (ಕಪರ್ದಿಮುನಿಗಳ ಈ ಕೆಳಗಿನ ಆಧಾರವಾಕ್ಯದಂತೆ)

ನಿರೂಢೋ ಯೋ ವಿಭಕ್ತೋಗ್ನಿಃ ಯಃ ಪರಿಸ್ತರಣಾದ್ಬಹಿಃ ।

ಅನಿರೂಢಃ ಸ ವೈ ವಹ್ನಿಃ ಯಃ ಪರಿಸ್ತೃತ ಮಧ್ಯಗಃ ॥

ವಿವಾಹೇ ಚೌಲ ಸೀಮಂತೇ ಸ್ವಾಧ್ಯಾಯೇ **"ವ್ರತ"** ಕರ್ಮಣಿ ।

ಸ್ನಾನ ಗೋದಾನ ಸಂಧಾನೇ **"ಆಜ್ಯ ಸಂಸ್ಕಾರಮಂತರೇ"** ॥

* ತಂದೆಯ ಉಪಸ್ಥಿತಿಯಲ್ಲಿ, ವಟುವು ಈ ಕೆಳಗಿನಂತೆ ಹೋಮಗಳನ್ನು ಮಾಡುವುದು । ಅದು ಹೇಗೆಂದರೆ–ಪ್ರಜಾಪತಿ ದೇವತೆಯ ನಾಮಮಂತ್ರ ಹೋಮವನ್ನು ನಿವೀತಿಯಲ್ಲಿಯೂ ಮತ್ತೂ ವೇದಮಂತ್ರ(೬)ಗಳ ಹೋಮಗಳನ್ನು ಉಪವೀತಿಯಲ್ಲಿಯೂ ಈ ಕೆಳಗಿನಂತೆ ಮಾಡಬೇಕು । ಹಾಗೆಯೇ, ಸೋಮದೇವತೆಯ–ಅಗ್ನಿದೇವತೆಯ–ವಿಶ್ವೇದೇವತೆಗಳ ಹೋಮಗಳನ್ನು, ನಿವೀತಿಯಲ್ಲಿ೧ ಹೋಮ ಮತ್ತು ಉಪವೀತಿಯಲ್ಲಿ ೬ ಹೋಮಗಳನ್ನೂ ಮತ್ತೂ ನಿವೀತಿಯಲ್ಲಿ, ಸಾಗ್ಂಹಿತೀ ದೇವತೆಗಳ–ಯಾಜ್ಞಿಕೀ ದೇವತೆಗಳ–ವಾರುಣೀದೇವತೆಗಳ–ಬ್ರಹ್ಮದೇವತೆಯ–ಸದಸಸ್ಪತಿಯ ಹೋಮಗಳನ್ನು ಮಾಡಿ, ಉಪವೀತಿಯಲ್ಲಿ ಸ್ವಿಷ್ಟಕೃತ್ ಹೋಮವನ್ನೂ ಈ ಕೆಳಗಿನಂತೆ ಮಾಡುವುದು ॥

ತದಂಗಂ ಸ್ಥಂಡಿಲೋಲ್ಲೇಖನಾದಿ 'ಸಂಭವ' ನಾಮಾನಮಗ್ನಿಂ(ಲೌಕಿಕಾಗ್ನಿಂ) ಪ್ರತಿಷ್ಠಾಪಯಾಮಿ ಇತಿ ಸಂಕಲ್ಪ್ಯ, ಪ್ರತಿಷ್ಠಾಪ್ಯ । ಷಟ್ಪಾತ್ರ ಪ್ರಯೋಗೇಣ, ಮುಖಾಂತಂ ಕೃತ್ವಾ ।

ವಟುಃ ನಿವೀತೀಭೂತ್ವಾ(ನಿವೀತಿಯಲ್ಲಿ),

೧. ಪ್ರಜಾಪತಯೇ । ಕಾಂಡಋಷಯೇ ಸ್ವಾಹಾ–ಪ್ರಜಾಪತಯೇ ಕಾಂಡಋಷಯ ಇದಂ ನಮಮ ॥

ಉಪವೀತೀ ಭೂತ್ವಾ(ಉಪವೀತಿಯಲ್ಲಿ),

(ಅ). ಪ್ರಜಾಪತೇನತ್ವತ್ । ಏತಾನ್ಯನ್ಯಃ ॥ ವಿಶ್ವಾಜಾತಾನಿ । ಪರಿತಾ

ಬಭೂವ ॥ ಯತ್ಕಾಮಾಸ್ತೇ । ಜುಹುಮಸ್ತನ್ನೋ ಅಸ್ತು ॥ ವಯಗ್ಂ ಸ್ಯಾಮ । ಪತಯಃ । ರಯೀಣಾಗ್ ಸ್ವಾಹಾ – ಪ್ರಜಾಪತಯ ಇದಂ ನಮಮ ॥

(ಆ). ರಯೀಣಾಂ ಪತಿಂ । ಯಜತಂ ಬೃಹಂತಮ್ ॥ ಅಸ್ಮಿನ್ಭರೇ । ನೃತಮಂ । ವಾಜಸಾತೌ ॥ ಪ್ರಜಾಪತಿಂ । ಪ್ರಥಮಜಾಂ । ಋತಸ್ಯ ॥ ಯಜಾಮ ದೇವಂ । ಅಧಿನೋ ಬ್ರವೀತು ಸ್ವಾಹಾ – ಪ್ರಜಾಪತಯ ಇದಂ ನಮಮ ॥

(ಇ). ಪ್ರಜಾಪತೇ ತ್ವಂ । ನಿಧಿಪಾಃ ಪುರಾಣಃ ॥ ದೇವಾನಾಂ ಪಿತಾ । ಜನಿತಾ ಪ್ರಜಾನಾಮ್ ॥ ಪತಿರ್ವಿಶ್ವಸ್ಯ । ಜಗತಃ ಪರಸ್ಯಾಃ ॥ ಹವಿರ್ನೋ ದೇವ । ವಿಹವೇ ಜುಷಸ್ವ ಸ್ವಾಹಾ – ಪ್ರಜಾಪತಯ ಇದಂ ನಮಮ ॥

(ಈ). ತವೇ ಮೇ ಲೋಕಾಃ । ಪ್ರದಿಶೋ ದಿಶಶ್ಚ ॥ ಪರಾವತಃ । ನಿವತ ಉದ್ವತಶ್ಚ ॥ ಪ್ರಜಾಪತೇ । ವಿಶ್ವಸೃಜ್ಜೀವ ಧನ್ಯ । ಇದಂ ನೋ ದೇವ ॥ ಪ್ರತಿಹರ್ಯ ಹವ್ಯಗ್ ಸ್ವಾಹಾ – ಪ್ರಜಾಪತಯ ಇದಂ ನಮಮ ॥

(ಉ). ಪ್ರಜಾಪತಿಂ ಪ್ರಥಮಂ । ಯಜ್ಞಿಯಾನಾಮ್ ॥ ದೇವಾನಾಮಗ್ರೇ । ಯಜತಂ ಯಜಧ್ವಮ್ ॥ ಸನೋ ದದಾತು । ದ್ರವಿಣಂ । ಸುವೀರ್ಯಮ್ ॥ ರಾಯಸ್ಪೋಷಂ । ವಿಷ್ಯತು । ನಾಭಿಮಸ್ಮೇ ಸ್ವಾಹಾ – ಪ್ರಜಾಪತಯ ಇದಂ ನಮಮ ॥

(ಊ). ಯೋ ರಾಯ ಈಶೇ । ಶತದಾಯ ಉಕ್ಥ್ಯಃ ॥ ಯಃ ಪಶೂನಾಂ । ರಕ್ಷಿತಾ ವಿಷ್ಮಿತಾನಾಮ್ ॥ ಪ್ರಜಾಪತಿಃ ಪ್ರಥಮಜಾ । ಋತಸ್ಯ ॥ ಸಹಸ್ರಧಾಮಾ ಜುಷತಾಂ । ಹವಿರ್ನಸ್ಸ್ವಾಹಾ – ಪ್ರಜಾಪತಯ ಇದಂ ನಮಮ ॥

ನಿವೀತೀ ಭೂತ್ವಾ(ನಿವೀತಿಯಲ್ಲಿ),

೨. ಸೋಮಾಯ ಕಾಂಡಋಷಯೇ ಸ್ವಾಹಾ – ಸೋಮಾಯ ಕಾಂಡಋಷಯ ಇದಂ ನಮಮ ॥

ಉಪವೀತೀ ಭೂತ್ವಾ(ಉಪವೀತಿಯಲ್ಲಿ),

(ಅ). ಸೋಮೋದ್ಧೇನುಂ । ಸೋಮಃ । ಅರ್ವಂತಂ । ಆಶುಮ್ ॥ ಸೋಮೋವೀರಂ । ಕರ್ಮಣ್ಯಂ । ದದಾತು ॥ ಸಾದನ್ಯಂ । ವಿದಥ್ಯಂ । ಸಭೇಯಮ್ ॥ ಪಿತುಶ್ರವಣಂ । ಯೋ ದದಾಶತ್ । ಅಸ್ಮೈ ॥ ಸ್ವಾಹಾ – ಸೋಮಾಯ ಇದಂ ನಮಮ ॥

(ಆ). ಅಷಾಢಂ । ಯುತ್ಸು । ಪೃತನಾಸು । ಪಪ್ರಿಮ್ ॥ ಸುವರ್ಷಾಂ । ಅಪ್ಸಾವಂ । ವೃಜನಸ್ಯ । ಗೋಪಾಮ್ ॥ ಭರೇಷುಜಾಂ । ಸುಕ್ಷಿತಿಂ । ಸುಶ್ರವಸಮ್ ॥ ಜಯಂತಂ ತ್ವಾಂ । ಅನುಮದೇಮ । ಸೋಮ । ಸ್ವಾಹಾ – ಸೋಮಾಯ ಇದಂ ನಮಮ ॥

(ಇ). ತ್ವಗ್ಂ ಸೋಮ । ಕ್ರತುಭಿ: । ಸುಕ್ರತುರ್ಭೂಃ ॥ ತ್ವಂದಕ್ಷೈ: । ಸುದಕ್ಷಃ । ವಿಶ್ವವೇದಾಃ ॥ ತ್ವಂ ವೃಷಾ । ವೃಷತ್ವೇಭಿ: । ಮಹಿತ್ವಾ ॥

ದ್ಯುಮ್ನೇಭಿಃ । ದ್ಯುಮ್ನ್ಯಭವಃ । ನೃಚಕ್ಷಾಃ । ಸ್ವಾಹಾ – ಸೋಮಾಯ ಇದಂ ನಮಮ ॥

(ಈ). ಯಾತೇ । ಧಾಮಾನಿ । ಹವಿಷಾ । ಯಜಂತಿ । ತಾತೇ । ವಿಶ್ವಾ । ಪರಿಭೂರಸ್ತು । ಯಜ್ಞಮ್ ॥ ಗಯಸ್ಫಾನಃ । ಪ್ರತರಣಃ । ಸುವೀರಃ । ಅವೀರಹಾ । ಪ್ರಚರಾ । ಸೋಮ । ದುರ್ಯಾನ್ । ಸ್ವಾಹಾ – ಸೋಮಾಯೇದಂ ನಮಮ ॥

(ಉ). ತ್ವಮಿಮಾ । ಓಷಧೀಃ । ಸೋಮ । ವಿಶ್ವಾಃ ॥ ತ್ವಂ । ಅಪಃ । ಅಜನಯಃ । ತ್ವಂ । ಗಾಃ ॥ ತ್ವಂ । ಅತತಂಥ । ಉರು । ಅಂತರಿಕ್ಷಮ್ ॥ ತ್ವಂ । ಜ್ಯೋತಿಷಾ । ವಿತಮಃ । ವವರ್ಥ । ಸ್ವಾಹಾ – ಸೋಮಾಯ ಇದಂ ನಮಮ ॥

(ಊ). ಯಾತೇ । ಧಾಮಾನಿ । ದಿವಿ । ಯಾ । ಪೃಥಿವ್ಯಾಮ್ ॥ ಯಾ । ಪರ್ವತೇಷು । ಓಷಧೀಷು । ಅಪ್ಸು ॥ ತೇಭಿಃ । ನಃ । ವಿಶ್ವೈಃ । ಸುಮನಾಃ । ಅಹೇಡನ್ ॥ ರಾಜನ್ । ಸೋಮ । ಪ್ರತಿಹವ್ಯಾ । ಗೃಭಾಯ । ಸ್ವಾಹಾ – ಸೋಮಾಯ ಇದಂ ನಮಮ ॥

ನಿವೀತೀ ಭೂತ್ವಾ(ನಿವೀತಿಯಲ್ಲಿ),

೩. ಅಗ್ನಯೇ ಕಾಂಡಋಷಯೇ ಸ್ವಾಹಾ – ಅಗ್ನಯೇ ಕಾಂಡಋಷಯೇದಂ ನಮಮ ॥

ಉಪವೀತೀ ಭೂತ್ವಾ(ಉಪವೀತಿಯಲ್ಲಿ),

(ಅ). ಅಗ್ನೇ । ನಯ । ಸುಪಥಾ । ರಾಯೇ । ಅಸ್ಮಾನ್ ॥ ವಿಶ್ವಾನಿ । ದೇವ । ವಯುನಾನಿ । ವಿದ್ವಾನ್ ॥ ಯುಯೋಧಿ । ಅಸ್ಮತ್ । ಜುಹುರಾಣಂ । ಏನಃ ॥ ಭೂಯಿಷ್ಠಾಂ । ತೇ । ನಮ ಉಕ್ತಿಂ । ವಿಧೇಮ । ಸ್ವಾಹಾ – ಅಗ್ನಯ ಇದಂ ನಮಮ ॥

(ಆ). ಪ್ರವಃ । ಶುಕ್ರಾಯ । ಭಾನವೇ । ಭರಧ್ವಮ್ ॥ ಹವ್ಯಂ । ಮತಿಂ । ಚಾಗ್ನಯೇ । ಸುಪೂತಮ್ ॥ ಯಃ । ದೈವ್ಯಾನಿ । ಮಾನುಷಾ । ಜನೂಗ್ಂಷಿ ॥ ಅಂತರ್ವಿಶ್ವಾನಿ । ವಿದ್ಮನಾ । ಜಿಗಾತಿ । ಸ್ವಾಹಾ – ಅಗ್ನಯ ಇದಂ ನಮಮ ॥

(ಇ). ಅಚ್ಛಾಗಿರಃ । ಮತಯಃ । ದೇವಯಂತೀಃ ॥ ಅಗ್ನಿಂ । ಯಂತಿ । ದ್ರವಿಣಂ । ಭಿಕ್ಷಮಾಣಾಃ ॥ ಸುಸಂದೃಶಂ । ಸುಪ್ರತೀಕಂ । ಸ್ವಂಚಮ್ ॥ ಹವ್ಯವಾಹಂ । ಅರತಿಂ । ಮಾನುಷಾಣಾಮ್ । ಸ್ವಾಹಾ – ಅಗ್ನಯ ಇದಂ ನಮಮ ॥

(ಈ). ಅಗ್ನೇ । ತ್ವಂ । ಅಸ್ಮತ್ । ಯುಯೋಧಿ । ಅಮೀವಾಃ ॥ ಅನಗ್ನಿತ್ರಾ । ಅಭ್ಯಮಂತ । ಕೃಷ್ಟೀಃ ॥ ಪುನಃ । ಅಸ್ಮಭ್ಯಂ । ಸುವಿತಾಯ । ದೇವ ॥ ಕ್ಷಾಂ । ವಿಶ್ವೇಭಿಃ । ಅಜರೇಭಿಃ । ಯಜತ್ರ । ಸ್ವಾಹಾ – ಅಗ್ನಯ ಇದಂ ನಮಮ ॥

(ಉ). ಅಗ್ನೇ । ತ್ವಂ । ಪಾರಯ । ನವ್ಯಃ । ಅಸ್ಮಾನ್ ॥ ಸ್ವಸ್ತಿಭಿಃ । ಅತಿ ದುರ್ಗಾಣಿ । ವಿಶ್ವಾ ॥ ಪೂಶ್ಚ । ಪೃಥ್ವೀ । ಬಹುಲಾ । ನಃ । ಉರ್ವೀ ॥ ಭವ । ತೋಕಾಯ । ತನಯಾಯ । ಶಂ । ಯೋಃ । ಸ್ವಾಹಾ - ಅಗ್ನಯ ಇದಂ ನಮಮ ॥

(ಊ). ಪ್ರಕಾರವಃ । ಮನನಾ । ವಚ್ಯಮಾನಾಃ ॥ ದೇವದ್ರೀಚೀಂ । ನಯಥ । ದೇವಯಂತಃ ॥ ದಕ್ಷಿಣಾವಾಟ್ । ವಾಜಿನೀ । ಪ್ರಾಚ್ಯೇತಿ ॥ ಹವಿರ್ಭರನ್ತ್ಯಗ್ನಯೇ । ಘೃತಾಚೀ । ಸ್ವಾಹಾ - ಅಗ್ನಯ ಇದಂ ನಮಮ ॥

ನಿವೀತೀ ಭೂತ್ವಾ(ನಿವೀತಿಯಲ್ಲಿ),

೪. ವಿಶ್ವೇಭ್ಯೋ ದೇವೇಭ್ಯಃ ಕಾಂಡಋಷಿಭ್ಯಃ ಸ್ವಾಹಾ - ವಿಶ್ವೇಭ್ಯೋ ದೇವೇಭ್ಯಃ ಕಾಂಡಋಷಿಭ್ಯ ಇದಂನಮಮ ॥

ಉಪವೀತೀಭೂತ್ವಾ(ಉಪವೀತಿಯಲ್ಲಿ),

(ಅ). ಆನಃ । ವಿಶ್ವೇ । ಅಸ್ಯಾಗಮಂತು । ದೇವಾಃ ॥ ಮಿತ್ರಃ । ಅರ್ಯಮಾ । ವರುಣಃ । ಸಜೋಷಾಃ ॥ ಭುವನ್ । ಯಥಾ । ನಃ । ವಿಶ್ವೇ । ವೃಧಾಸಃ ॥ ಕರನ್ । ಸುಷಾಹಾ । ವಿಥುರಂ । ನ । ಶವಃ । ಸ್ವಾಹಾ - ವಿಶ್ವೇಭ್ಯೋ ದೇವೇಭ್ಯ ಇದಂ ನಮಮ ॥

(ಆ). ಶಂ । ನಃ । ದೇವಾಃ । ವಿಶ್ವದೇವಾಃ । ಭವಂತು ॥ ಶಂ । ಸರಸ್ವತೀ । ಸಹ । ಧೀಭಿಃ । ಅಸ್ತು ॥ ಶಂ । ಅಭಿಶಾಚಃ । ಶಂ । ಉರಾತಿಷಾಚಃ ॥

ಶಂ । ನಃ । ದಿವ್ಯಾಃ । ಪಾರ್ಥಿವಾಃ । ಶಃ । ನಃ । ಅಪ್ಯಾಃ । ಸ್ವಾಹಾ - ವಿಶ್ವೇಭ್ಯೋ ದೇವೇಭ್ಯ ಇದಂ ನಮಮ ॥

(೧). ಯೇ । ಸವಿತುಃ । ಸತ್ಯ ಸವಸ್ಯ । ವಿಶ್ವೇ ॥ ಮಿತ್ರಸ್ಯ । ವ್ರತೇ । ವರುಣಸ್ಯ । ದೇವಾಃ ॥ ತೇ । ಸೌಭಗಂ । ವೀರವತ್ । ಗೋಮ ದಪ್ನಃ । ದಧಾತನ । ದ್ರವಿಣಂ । ಚಿತ್ರಂ । ಅಸ್ಮೇ । ಸ್ವಾಹಾ - ವಿಶ್ವೇಭ್ಯೋ ದೇವೇಭ್ಯ ಇದಂ ನಮಮ ॥

(೨). ಅಗ್ನೇ । ಯಾಹಿ । ದೂತ್ಯಂ । ವಾರಿಷೇಣ್ಯಃ ॥ ದೇವಾನ್ । ಅಚ್ಛ । ಬ್ರಹ್ಮಕೃತಾ । ಗಣೇನ ॥ ಸರಸ್ವತೀಂ । ಮರುತಃ । ಅಶ್ವಿನಾ । ಅಪಃ ॥ ಯಕ್ಷಿ । ದೇವಾನ್ । ರತ್ನ ಧೇಯಾಯ । ವಿಶ್ವಾನ್ । ಸ್ವಾಹಾ - ವಿಶ್ವೇಭ್ಯೋ ದೇವೇಭ್ಯ ಇದಂ ನಮಮ ॥

(೩). ದ್ಯೌಃ । ಪಿತಃ । ಪೃಥಿವಿ । ಮಾತಃ । ಅಧ್ರುಕ್ ॥ ಅಗ್ನೇ । ಭ್ರಾತಃ । ವಸವಃ । ಮೃಡತ । ನಃ ॥ ವಿಶ್ವ ಆದಿತ್ಯ । ಅದಿತೇ । ಸಜೋಷಾಃ ॥ ಅಸ್ಮಭ್ಯಂ । ಶರ್ಮ । ಬಹುಲಂ । ವಿಯಂತ । ಸ್ವಾಹಾ - ವಿಶ್ವೇಭ್ಯೋ ದೇವೇಭ್ಯ ಇದಂ ನಮಮ ॥

(೪). ವಿಶ್ವೇದೇವಾಃ । ಶೃಣುತ । ಇಮಂ । ಹವಂ । ಮೇ ॥ ಯೇ । ಅಂತರಿಕ್ಷೇ । ಯೇ । ಉಪದ್ಯವಿಷ್ಠ ॥ ಯೇ । ಅಗ್ನಿ ಜಿಹ್ವಾಃ । ಉತ । ವಾ । ಯಜತ್ರಾಃ ॥ ಆಸದ್ಯ । ಅಸ್ಮಿನ್ । ಬರ್ಹಿಷಿ । ಮಾದಯಧ್ವಮ್ ।

ಸ್ವಾ॑ಹಾ – ವಿಶ್ವೇ॑ಭ್ಯೋ ದೇವೇ॑ಭ್ಯ ಇದಂ ನಮಮ ॥

ನಿವೀತೀ ಭೂತ್ವಾ (ನಿವೀತಿಯಲ್ಲಿ),

೫. ಸಾಗ್ಂಹಿತೀ॑ಭ್ಯೋ ದೇವತಾ॑ಭ್ಯ ಉಪನಿ॑ಷದ್ಭ್ಯ ಸ್ಸ್ವಾಹಾ – ಸಾಗ್ಂಹಿತೀ॑ಭ್ಯೋ ದೇವತಾ॑ಭ್ಯ ಉಪನಿಷದ್ಭ್ಯ ಇದಂ ನಮಮ ॥

೬. ಯಾಜ್ಞಿ॑ಕೀಭ್ಯೋ ದೇವತಾ॑ಭ್ಯ ಉಪನಿ॑ಷದ್ಭ್ಯ ಸ್ಸ್ವಾಹಾ – ಯಾಜ್ಞಿ॑ಕೀಭ್ಯೋ ದೇವತಾ॑ಭ್ಯ ಉಪನಿಷದ್ಭ್ಯ ಇದಂ ನಮಮ ॥

೭. ವಾರು॑ಣೀಭ್ಯೋ ದೇವತಾ॑ಭ್ಯ ಉಪನಿ॑ಷದ್ಭ್ಯ ಸ್ಸ್ವಾಹಾ – ವಾರುಣೀಭ್ಯೋ ದೇವತಾಭ್ಯ ಉಪನಿಷದ್ಭ್ಯ ಇದಂ ನಮಮ ॥

೮. ಬ್ರಹ್ಮ॑ಣೇ ಸ್ವಯಂ॑ಭುವೇ ಸ್ವಾಹಾ – ಬ್ರಹ್ಮಣೇ ಸ್ವಯಂಭುವ ಇದಂ ನಮಮ ॥

೯. ಸದಸಸ್ಪ॑ತಯೇ ಸ್ವಾಹಾ – ಸದಸಸ್ಪತಯ ಇದಂ ನಮಮ ॥

ಸ್ವಿಷ್ಟಕೃತ್ –

ಉಪವೀತೀ ಭೂತ್ವಾ (ಉಪವೀತಿಯಲ್ಲಿ),

ಓಂ ಸ॑ದಸಃ । ಪ॑ತಿಂ । ಅ॑ದ್ಭುತಂ । ಪ್ರಿಯಂ । ಇಂ॑ದ್ರಸ್ಯ । ಕಾ॑ಮ್ಯಮ್ ॥ ಸ॑ನಿಂ । ವೇ॒ಧಾಂ । ಅಯಾ॑ಸಿಷಮ್ । ಸ್ವಾ॑ಹಾ – ಅಗ್ನಯೇ ಸ್ವಿಷ್ಟಕೃತ ಇದಂ ನಮಮ ॥

ಉಪಸ್ಥಾನಂ –

* ಸಂತರ ವಟುವು ಅಗ್ನಿಯ ಉತ್ತರದಲ್ಲಿ ನಿಂತುಕೊಂಡು । ಅಗ್ನಿ – ವಾಯು – ಆದಿತ್ಯ – ವ್ರತಾನಾಂ ವ್ರತಪತೇ, ಈ ೪ ಮಂತ್ರಗಳಿಂದ, ಪ್ರಾಜಾಪತ್ಯ ವ್ರತವನ್ನು ಈ ಕೆಳಗಿನಂತೆ ಉಪಸ್ಥಾನ (ಹೇಳುವುದು) ಮಾಡುವುದು ॥

(ಅ) ಅಗ್ನೇ । ವ್ರತಪತೇ । ಕಾಂಡ ಋಷಿಭ್ಯಃ । ಪ್ರಾಜಾಪತ್ಯಂ । ವ್ರತಂ । ಚರಿಷ್ಯಾಮಿ । ತಚ್ಛಕೇಯಂ । ತನ್ಮೇ । ರಾಧ್ಯತಾಮ್ ॥

(ಆ) ವಾಯೋ । ವ್ರತಪತೇ । ಕಾಂಡ ಋಷಿಭ್ಯಃ । ಪ್ರಾಜಾಪತ್ಯಂ । ವ್ರತಂ । ಚರಿಷ್ಯಾಮಿ । ತಚ್ಛಕೇಯಂ । ತನ್ಮೇ । ರಾಧ್ಯತಾಮ್ ॥

(ಇ) ಆದಿತ್ಯ । ವ್ರತಪತೇ । ಕಾಂಡ ಋಷಿಭ್ಯಃ । ಪ್ರಾಜಾಪತ್ಯಂ । ವ್ರತಂ । ಚರಿಷ್ಯಾಮಿ । ತಚ್ಛಕೇಯಂ । ತನ್ಮೇ ರಾಧ್ಯತಾಂ ॥

(ಈ) ವ್ರತಾನಾಂ । ವ್ರತಪತೇ । ಕಾಂಡ ಋಷಿಭ್ಯಃ । ಪ್ರಾಜಾಪತ್ಯಂ । ವ್ರತಂ । ಚರಿಷ್ಯಾಮಿ । ತಚ್ಛಕೇಯಂ । ತನ್ಮೇ ರಾಧ್ಯತಾಂ ॥

* ವಟುವು, ಬಿಸಿಯಾಗಿರುವ ನೀರನ್ನು ಮುಟ್ಟುವುದು । ನಮೋವಾಚೇ....(ಆರಣ್ಯಕ ೪ನೇ ಪ್ರಶ್ನೆ ಮೊದಲ ಅನುವಾಕ) ಮುಂತಾದ ಮಂತ್ರಗಳನ್ನು ಈ ಕೆಳಗಿನಂತೆ ಹೇಳುವುದು ॥

ವಟುಃ ಮದಂತೀ(ಉಷ್ಣೋದಕಂ) ಸ್ಪರ್ಶನಂ ಕುರ್ಯಾತ್ । ನಮೋ ವಾಚಾದಿಕಂ ಪಠೇತ್,

ಓಂ ನಮಃ । ವಾಚೇ । ಯಾ । ಚೋದಿತಾ । ಯಾ ಚ । ಅನುದಿತಾ । ತಸ್ಯೈ । ವಾಚೇ । ನಮೋ ನಮಃ । ವಾಚೇ । ನಮಃ । ವಾಚಸ್ಪತಯೇ । ನಮಃ । ಋಷಿಭ್ಯಃ । ಮಂತ್ರಕೃದ್ಭ್ಯಃ । ಮಂತ್ರಪತಿಭ್ಯಃ । ಮಾ ಮಾಂ ।

ಋಷಯಃ । ಮಂತ್ರಕೃತಃ । ಮಂತ್ರಪತಯಃ । ಪರಾದುಃ । ಮಾಹಂ ।
ಋಷೀನ್ । ಮಂತ್ರಕೃತಃ । ಮಂತ್ರಪತೀನ್ । ಪರಾದಾಂ । ವೈಶ್ವದೇವೀಂ ।
ವಾಚಮುದ್ಯಾಸಂ । ಶಿವಾಂ । ಅದಸ್ತಾಂ । ಜುಷ್ಟಾಂ । ದೇವೇಭ್ಯಃ ।
ಶರ್ಮ ಮೇ । ದ್ಯೌಶ್ಶರ್ಮ । ಪೃಥಿವೀ ಶರ್ಮ । ವಿಶ್ವಮಿದಂ । ಜಗತ್ ॥
ಶರ್ಮ । ಚಂದ್ರಶ್ಚ । ಸೂರ್ಯಶ್ಚ । ಶರ್ಮ । ಬ್ರಹ್ಮ ಪ್ರಜಾಪತೀ ॥
ಭೂತಂ ವದಿಷ್ಯೇ । ಭುವನಂ ವದಿಷ್ಯೇ । ತೇಜೋ ವದಿಷ್ಯೇ । ಯಶೋ
ವದಿಷ್ಯೇ । ತಪೋ ವದಿಷ್ಯೇ । ಬ್ರಹ್ಮ ವದಿಷ್ಯೇ । ಸತ್ಯಂ ವದಿಷ್ಯೇ ।
ತಸ್ಮಾ ಅಹಂ । ಇದಂ । ಉಪಸ್ತರಣಂ । ಉಪಸ್ತೃಣ । ಉಪಸ್ತರಣಂ
ಮೇ । ಪ್ರಜಾಂಯೈ । ಪಶೂನಾಂ । ಭೂಯಾತ್ । ಉಪಸ್ತರಣಮಹಂ ।
ಪ್ರಜಾಯೈ । ಪಶೂನಾಂ । ಭೂಯಾಸಂ । ಪ್ರಾಣಾಪಾನೌ । ಮೃತ್ಯೋಃ । ಮಾ
ಪಾತಂ । ಪ್ರಾಣಾಪಾನೌ । ಮಾ ಮಾ । ಹಾಸಿಷ್ಟಂ । ಮಧುಮನಿಷ್ಯೇ । ಮಧು
ಜನಿಷ್ಯೇ । ಮಧು ವಕ್ಷ್ಯಾಮಿ । ಮಧು ವದಿಷ್ಯಾಮಿ । ಮಧುಮತೀಂ ।
ದೇವೇಭ್ಯಃ । ವಾಚಮುದ್ಯಾಸಂ । ಶುಶ್ರೂಷೇಣ್ಯಾಂ । ಮನುಷ್ಯೇಭ್ಯಃ ।
ತಂ ಮಾ । ದೇವಾ ಅವನ್ತು । ಶೋಭಾಯೈ । ಪಿತರಃ । ಅನುಮದನ್ತು ॥
ಓಂ ಶಾಂತಿಃ ಶಾಂತಿಃ ಶಾಂತಿಃ ॥

ಸಮಿದಾಧಾನಮ್ –

* ಆದಾದನಂತರ ಸಮಿದಾಧಾನವನ್ನು, ನಿಂತುಕೊಂಡೇ (ಕಪರ್ದಿಮುನಿಗಳ ಈ ಕೆಳಗಿನ ಆಧಾರದಂತೆ) ಕೆಳಗೆ ತಿಳಿಸಿರುವ ರೀತಿಯಲ್ಲಿ ಮಂತ್ರವನ್ನು ಹೇಳಿ, ಅತ್ತಿಯ(ಔದುಂಬರ) ಸಮಿತ್ತನ್ನು ಅಗ್ನಿಗೆ ಹಾಕುವುದು ।

"ತಿಷ್ಠದ್ಧೋಮಾನ್" ಪ್ರವಕ್ಷ್ಯಾಮಿ ಪೂರ್ಣಾಹುತಿ ಪುರೋಗಮಾನ್ ।
ಆಘಾರ ಸ್ರುಚ್ಯ ಏವಾನ್ಯಃ ಫಲೀಕರಣಮೇವ ಚ ॥
"ಔದುಂಬರಗತೋ ಹೋಮೋ" ಲಲಾಟೇ ಹೋಮ ಏವ ಚ ।
ಲಾಜಾನಾಂ ಚ ತಥಾ ಹೋಮೋ ವಿವಾಹೇಷು ನ ಸಂಶಯಃ ॥
ಫಲೀಕರಣ ಹೋಮಶ್ಚ ಜಾತಕರ್ಮಣಿ ಕೀರ್ತ್ಯತೇ ।
"ಸೌಮ್ಯವ್ರತೇ ಸಮಿದ್ಧೋಮಃ" ಐಂದ್ರಾಘಾರಸ್ತಥೈವ ಚ ॥
ಪೂರ್ಣಾಹುತಿಶ್ಚ ಶ್ರೌತೇ ಽಪಿ..... ಹೋಮಶ್ಚ **"ತಿಷ್ಠನ್ನೇವ ನ ಸಂಶಯಃ"**॥

(ಅ) ಪೃಥಿವೀ । ಸಮಿತ್ ॥ ತಾಮಗ್ನಿಃ । ಸಮಿಂಧೇ ॥ ಸಾಗ್ನಿಂ । ಸಮಿಂಧೇ ॥
ತಾಮಹಂ । ಸಮಿಂಧೇ ॥ ಸಾ ಮಾ । ಸಮಿದ್ಧಾ ॥ ಆಯುಷಾ । ತೇಜಸಾ ॥
ವರ್ಚಸಾ । ಶ್ರಿಯಾ ॥ ಯಶಸಾ । ಬ್ರಹ್ಮವರ್ಚಸೇನ ॥ ಅನ್ನಾದ್ಯೇನ ।
ಸಮಿನ್ಧಾಂ । ಸ್ವಾಹಾ – ಅಗ್ನಯ ಇದಂ ನಮಮ ॥

(ಆ) ಅಂತರಿಕ್ಷಂ । ಸಮಿತ್ ॥ ತಾಂ ವಾಯುಃ । ಸಮಿಂಧೇ ॥ ಸಾ ವಾಯುಂ ।
ಸಮಿಂಧೇ ॥ ತಾಮಹಂ । ಸಮಿಂಧೇ ॥ ಸಾ ಮಾ । ಸಮಿದ್ಧಾ ॥ ಆಯುಷಾ ।
ತೇಜಸಾ ॥ ವರ್ಚಸಾ । ಶ್ರಿಯಾ ॥ ಯಶಸಾ । ಬ್ರಹ್ಮವರ್ಚಸೇನ ॥ ಅನ್ನಾದ್ಯೇನ ।
ಸಮಿನ್ಧಾಂ । ಸ್ವಾಹಾ – ವಾಯವ ಇದಂ ನಮಮ ॥

(ಇ) ದ್ಯೌಸ್ಸಮಿತ್ ॥ ತಾಮಾದಿತ್ಯಃ । ಸಮಿಂಧೇ ॥ ಸಾದಿತ್ಯಂ । ಸಮಿಂಧೇ ॥
ತಾಮಹಂ । ಸಮಿಂಧೇ ॥ ಸಾ ಮಾ । ಸಮಿದ್ಧಾ ॥ ಆಯುಷಾ । ತೇಜಸಾ ॥
ವರ್ಚಸಾ । ಶ್ರಿಯಾ ॥ ಯಶಸಾ । ಬ್ರಹ್ಮವರ್ಚಸೇನ ॥ ಅನ್ನಾದ್ಯೇನ ।
ಸಮಿನ್ಧಾಂ । ಸ್ವಾಹಾ – ಆದಿತ್ಯಾಯ ಇದಂ ನಮಮ ॥

(ಈ) ಪ್ರಾಜಾಪತ್ಯಾಮೇ । ಸಮಿದಸಿ । ಸಪತ್ನಕ್ಷಯಣೀ ॥ ಭ್ರಾತೃವ್ಯಹಾ । ಮೇಽಸಿ । ಸ್ವಾಹಾ – ಪ್ರಜಾಪತಯ ಇದಂ ನಮಮ ॥

ಉಪಸ್ಥಾನಂ –

* ಸಂತರ ವಟುವು ಅಗ್ನಿಯ ಉತ್ತರದಲ್ಲಿ ನಿಂತುಕೊಂಡು । ಅಗ್ನಿ – ವಾಯು – ಆದಿತ್ಯ – ವ್ರತಾನಾಂ ವ್ರತಪತೇ, ಈ ೪ ಮಂತ್ರಗಳಿಂದ, ಸೌಮ್ಯವ್ರತವನ್ನು ಈ ಕೆಳಗಿನಂತೆ ಉಪಸ್ಥಾನ(ಹೇಳುವುದು)ಮಾಡುವುದು ॥

(ಅ) ಅಗ್ನೇ ವ್ರತಪತೇ । ಕಾಂಡಋಷಿಭ್ಯಃ । ಸೌಮ್ಯಂ ವ್ರತಂ । ಚರಿಷ್ಯಾಮಿ । ತಚ್ಛಕೇಯಂ । ತನ್ಮೇ ರಾಧ್ಯತಾಂ ॥

(ಆ) ವಾಯೋ ವ್ರತಪತೇ । ಕಾಂಡಋಷಿಭ್ಯಃ । ಸೌಮ್ಯಂ ವ್ರತಂ । ಚರಿಷ್ಯಾಮಿ । ತಚ್ಛಕೇಯಂ । ತನ್ಮೇರಾಧ್ಯತಾಂ ॥

(ಇ) ಆದಿತ್ಯ ವ್ರತಪತೇ । ಕಾಂಡ ಋಷಿಭ್ಯಃ । ಸೌಮ್ಯಂ ವ್ರತಂ । ಚರಿಷ್ಯಾಮಿ । ತಚ್ಛಕೇಯಂ । ತನ್ಮೇ ರಾಧ್ಯತಾಂ ॥

(ಈ) ವ್ರತಾನಾಂ ವ್ರತಪತೇ । ಕಾಂಡ ಋಷಿಭ್ಯಃ । ಸೌಮ್ಯಂ ವ್ರತಂ । ಚರಿಷ್ಯಾಮಿ । ತಚ್ಛಕೇಯಂ । ತನ್ಮೇ ರಾಧ್ಯತಾಂ ॥

* ಆರಣ್ಯಕ ೪ (ಯುಂಜತೇ ಮನ.....,) ಮತ್ತು ೫ ನೇ (ದೇವಾ ವ್ಯೆ.....,) ಪ್ರಶ್ನೆಯ ಪೂರ್ಣಮಂತ್ರಗಳನ್ನು ಅಥವಾ ಅನುವಾಕವಾದರೂ ಹೇಳಬೇಕು । ಅನಿವಾರ್ಯ ಪಕ್ಷದಲ್ಲಿ 'ಯುಂಜತೇ ಸವಿತಾ' ಹೀಗಾದರೂ ಹೇಳಬೇಕು ।

ಮಂತ್ರವಿಧ್ಯನುವಾಕಾದಿ ಪದಾನ್ಯೇತಾನಿವಾಚಯೇತ್ । "ಯುಂಜತೇ ಸವಿತಾ" ಇತಿ ವಾಚಯಿತ್ವಾ ।

ಉಪಸ್ಥಾನಂ –

* ನಂತರ ವಟುವು ಅಗ್ನಿಯ ಉತ್ತರದಲ್ಲಿ ನಿಂತುಕೊಂಡು। ಅಗ್ನಿ – ವಾಯು – ಆದಿತ್ಯ – ವ್ರತಾನಾಂ ವ್ರತಪತೇ – ಈ ೪ ಮಂತ್ರಗಳಿಂದ, ಆಗ್ನೇಯವ್ರತವನ್ನು ಮತ್ತು ವೈಶ್ವದೇವವ್ರತವನ್ನೂ ಈ ಕೆಳಗಿನಂತೆ ಉಪಸ್ಥಾನ(ಹೇಳುವುದು)ಮಾಡುವುದು ॥

(ಅ) ಅಗ್ನೇ॥ ವ್ರತಪತೇ । ಕಾಂಡ ಋಷಿಭ್ಯಃ । ಆಗ್ನೇಯಂ ವ್ರತಂ । ಚರಿಷ್ಯಾಮಿ । ತಚ್ಛಕೇಯಂ । ತನ್ಮೇ ರಾಧ್ಯತಾಂ ॥

(ಆ) ವಾಂಯೋ॥ ವ್ರತಪತೇ । ಕಾಂಡ ಋಷಿಭ್ಯಃ । ಆಗ್ನೇಯಂ ವ್ರತಂ । ಚರಿಷ್ಯಾಮಿ । ತಚ್ಛಕೇಯಂ । ತನ್ಮೇ ರಾಧ್ಯತಾಂ ॥

(ಇ) ಆದಿತ್ಯ ವ್ರತಪತೇ । ಕಾಂಡ ಋಷಿಭ್ಯಃ । ಆಗ್ನೇಯಂ ವ್ರತಂ । ಚರಿಷ್ಯಾಮಿ । ತಚ್ಛಕೇಯಂ । ತನ್ಮೇ ರಾಧ್ಯತಾಂ ॥

(ಈ) ವ್ರತಾನಾಂ॥ ವ್ರತಪತೇ । ಕಾಂಡ ಋಷಿಭ್ಯಃ । ಆಗ್ನೇಯಂ ವ್ರತಂ । ಚರಿಷ್ಯಾಮಿ । ತಚ್ಛಕೇಯಂ । ತನ್ಮೇ ರಾಧ್ಯತಾಂ ॥

(ಅ) ಅಗ್ನೇ॥ ವ್ರತಪತೇ । ಕಾಂಡ ಋಷಿಭ್ಯಃ । ವೈಶ್ವದೇವಂ ವ್ರತಂ । ಚರಿಷ್ಯಾಮಿ । ತಚ್ಛಕೇಯಂ । ತನ್ಮೇ ರಾಧ್ಯತಾಂ ॥

(ಆ) ವಾಂಯೋ॥ ವ್ರತಪತೇ । ಕಾಂಡ ಋಷಿಭ್ಯಃ । ವೈಶ್ವದೇವಂ ವ್ರತಂ । ಚರಿಷ್ಯಾಮಿ । ತಚ್ಛಕೇಯಂ । ತನ್ಮೇ ರಾಧ್ಯತಾಂ ॥

(೫) ಆದಿತ್ಯ ವ್ರತಪತೇ । ಕಾಂಡ ಋಷಿಭ್ಯಃ । ವೈಶ್ವದೇವಂ ವ್ರತಂ । ಚರಿಷ್ಯಾಮಿ । ತಚ್ಛಕೇಯಂ । ತನ್ಮೇ ರಾಧ್ಯತಾಂ ॥

(ಈ) ವ್ರತಾನಾಂ ವ್ರತಪತೇ । ಕಾಂಡ ಋಷಿಭ್ಯಃ । ವೈಶ್ವದೇವಂ ವ್ರತಂ । ಚರಿಷ್ಯಾಮಿ । ತಚ್ಛಕೇಯಂ । ತನ್ಮೇ ರಾಧ್ಯತಾಂ ॥

ಉತ್ತರತಂತ್ರಂ

ಅನೂಯಾಜ ಸಮಿತ್ತಿನ ಮತ್ತು ಇಧ್ಮವನ್ನು ಕಟ್ಟಿದ ದಾರದ ಹೋಮ –

ಇದೆ.

ಸಮಿತ್ ಸನ್ನಹನಂ ಕುರ್ಯಾತ್ ಪ್ರಧಾನಾಹುತ್ಯನಂತರಮ್ ।
ಸ ತು ಅನ್ಯಥೇತಿ ನಿಶ್ಚಿತ್ಯ ತತ್ರೈವ ಉಕ್ತಂ ಕಪರ್ದಿನಾ ॥
ಆಗ್ನಾವಮಂತ್ರಕಂ ಸ್ಮಾರ್ತೇ ದೇವಮುದ್ದಿಶ್ಯ ಸಂತ್ಯಜೇತ್ ।
ಯತ್ರಯತ್ರ ಇಧ್ಮತಂತ್ರಸ್ಯ ತತ್ರತತ್ರ ಏವಂ ಇಶ್ಯತೇ ॥

ಜಂಯಾದಿ (ಜಂಯಾ=ಚಿತ್ತಿ, ಅಭ್ಯಾತಾನ=ಅಗ್ನಿಭ್ಯೋತಾನಾಂ, ರಾಷ್ಟ್ರಭೃತ್=ಋತಾಷಾಟ್) ಹೋಮ–

ಇದೆ.

ಅಷ್ಟಕಾಸು ಚ ದಧ್ಯನ್ನಹೋಮ ಈಶಾನಬಲಾವಪಿ ।
ವೃಷೋತ್ಸರ್ಗೇ ಚ ಸಂಸರ್ಗೇ ಗೋದಾನಾಖ್ಯವ್ರತೇ ತಥಾ ॥
ಅಧ್ಯಾಯೋಪಾಕರ್ಮಣಿ ಚ "ವ್ರತೇಷೂತ್ಸರ್ಜನೇಷು"ಚ ।
ಮುಖಾಹುತಿಶ್ಚಾಗ್ನಿಮುಖಂ "ಕರ್ತವ್ಯಾಶ್ಚ ಜಂಯಾದಯಃ" ॥

ಪರಿಧ್ಯಂಜನ –

ಇದೆ.

ಲೇಪಕಾರ್ಯ –

ಈ ಕರ್ಮದಲ್ಲಿ ಇದು ಇಲ್ಲ.

"ವ್ರತೇಷು" ಸುವನೇ ಚೈವ ತಥಾ ವಾಧ್ಯಯನೇ ಮಖೇ ।
ಪರಿಧಿ ಪ್ರಹರಣಂ ಕುರ್ಯಾತ್ **"ಲೇಪಕಾರ್ಯಂ ನ ವಿದ್ಯತೇ"** ॥

ಪರಿಧಿಪ್ರಹರಣ –

ಇದೆ.

"ವ್ರತೇಷು" ಸುವನೇ ಚೈವ ತಥಾ ವಾಧ್ಯಯನೇ ಮಖೇ ।
"ಪರಿಧಿ ಪ್ರಹರಣಂ ಕುರ್ಯಾತ್" ಲೇಪಕಾರ್ಯಂ ನ ವಿದ್ಯತೇ ॥

ಆಘಾರಹೋಮ –

ಇದೆ.

ಸಂಸ್ರಾವಹೋಮ –

ಇದೆ.

"ನಾಶಂ ಪ್ರಾಪ್ತಾ ಪರಿಧಯೋ" ಯತ್ರಸ್ಯ ಗೃಹ್ಯಭಾಷ್ಯತಃ ।

ತತ್ರ ತತ್ರಾಭಿಸಾಮರ್ಥ್ಯತ್ **"ಸಂಸ್ರಾವೋಪಿ ವಿಧೀಯತೇ"**॥

ಅನಾಜ್ಞಾತ ಮತ್ತು ಸರ್ವಪ್ರಾಯಶ್ಚಿತ್ತ ಹೋಮಗಳು –

ಇವೆ.

ಪೂರ್ಣಾಹುತಿ –

ಇಲ್ಲ.

ವಿವಾಹಾದಿ ಕ್ರಿಯಾಸ್ಸರ್ವಾಃ ಶಾಲಾಯಾಂ ವಾಸ್ತು ಹೋಮಕೇ ।

"ವ್ರತಬಂಧೇ ಚ ಮೋಕ್ಷೇ" ಚ ಪೂರ್ಣಾಹುತಿಂ ನ ಕಾರಯೇತ್ ॥

ಶಾಂತಿಮಂತ್ರ ಪಠನಂ –

ಬಿಸಿನೀರನ್ನು ಮುಟ್ಟಿ । ಈ ಕೆಳಗಿನ ಮಂತ್ರಗಳನ್ನು ಪಾರಾಯಣ ಮಾಡುವುದು ।

ಮದಂತೀ ಸ್ಪರ್ಶನಂ ಕುರ್ಯಾತ್ । ಶನ್ನೋನುವಾಕ ಪಠನಂ ಕುರ್ಯಾತ್
(ಆರಣ್ಯಕ ೪ ಪ್ರಶ್ನೆ, ಕಡೆಯಿಂದ ೨ ನೇ ಅನುವಾಕ) –

ಓಂ ಶನ್ನೋ ವಾತಃ । ಪವತಾಂ । ಮಾತರಿಶ್ವಾ । ಶಂ ನಸ್ತಪತು ।
ಸೂರ್ಯಃ ॥ ಅಹಾನಿ । ಶಂ ಭವಂತು ನಃ । ಶಗ್ಂ ರಾತ್ರೀಃ । ಪ್ರತಿಧೀಯತಾಮ್ ॥
ಶಮುಷಾ ನಃ । ವ್ಯುಚ್ಛತು । ಶಮಾದಿತ್ಯಃ । ಉದೇತುನಃ ॥ ಶಿವಾನಃ ।
ಶಂತಮಾ । ಭವ । ಸುಮೃಡೀಕಾ । ಸರಸ್ವತಿ ॥ ಮಾತೇ ವ್ಯೋಮ ।
ಸಂದೃಶೇ ॥ ಇಡಾಯೈ । ವಾಸ್ತ್ವಸಿ । ವಾಸ್ತು ಮತ್ । ವಾಸ್ತುಮಂತಃ ।
ಭೂಯಾಸ್ಮ । ಮಾ ವಾಸ್ತೋಶ್ಛಿಥ್ಸ್ಮಹಿ । ಅವಾಸ್ತು । ಸ ಭೂಯಾತ್ ।
ಯೋಽಸ್ಮಾನ್ । ದ್ವೇಷ್ಟಿ । ಯಂಚ । ವಯಂ । ದ್ವಿಷ್ಮಃ ॥ ಪ್ರತಿಷ್ಠಾಽಸಿ ।
ಪ್ರತಿಷ್ಠಾವಂತಃ । ಭೂಯಾಸ್ಮ । ಮಾ ಪ್ರತಿಷ್ಠಾಯಾಃ । ಛಿಥ್ಸ್ಮಹಿ ।
ಅಪ್ರತಿಷ್ಠಃ । ಸ ಭೂಯಾತ್ । ಯೋಽಸ್ಮಾನ್ । ದ್ವೇಷ್ಟಿ । ಯಂ ಚ । ವಯಂ ।
ದ್ವಿಷ್ಮಃ ॥ ಆವಾತವಾಹಿ । ಭೇಷಜಂ । ವಿವಾತವಾಹಿ । ಯದ್ರಪಃ ॥ ತ್ವಗ್ಂ
ಹಿ । ವಿಶ್ವಭೇಷಜಃ । ದೇವಾನಾಂ । ದೂತ ಈಯಸೇ ॥ ದ್ವಾವಿಮೌ ।
ವಾತೌ ವಾತಃ । ಆಸಿಂಧೋಃ । ಆ ಪರಾವತಃ ॥

ದಕ್ಷಂ ಮೇ । ಅನ್ಯ ಆವಾತು । ಪರಾ । ಅನ್ಯೋ ವಾತು । ಯದ್ರಪಃ ॥
ಯದದಃ । ವಾತ ತೇ । ಗೃಹೇ । ಅಮೃತಸ್ಯ । ನಿಧಿರ್ಹಿತಃ ॥ ತತೋ
ನಃ । ದೇಹಿ ಜೀವಸೇ । ತತೋ ನಃ । ಧೇಹಿ ಭೇಷಜಮ್ ॥ ತತೋ
ನಃ । ಮಹ ಆವಹ । ವಾತ ಆವಾತು । ಭೇಷಜಮ್ ॥ ಶಂಭೂಃ ।
ಮಂಯೋಭೂಃ । ನೋ ಹೃದೇ । ಪ್ರಣ ಆಯೂಗ್ಂಷಿ । ತಾರಿಷತ್ ॥
ಎಲ್ಲೆ ಭೂಮಿಯೇ, ನೀನು ಧೇನುರೂಪಳಾದ ಇಳಾ(ಡಾ) ದೇವಿಯು ನಿವಾಸಸ್ಥಾನವಾಗಿದ್ದೀಯೇ, ಸಮಸ್ತ ಜಗತ್ತು ನಿನ್ನ ಅನುಗ್ರಹದಿಂದ ನಿವಾಸಸ್ಥಾನವುಳ್ಳದ್ದಾಗಿ ಆಗಲಿ, ನಾವೆಲ್ಲರೂಕೂಡ ನಿನ್ನ ಅನುಗ್ರಹದಿಂದ ನಿವಾಸಸ್ಥಾನವುಳ್ಳವರಾಗೋಣ, ಯಾವಾಗಲೂ ನಾವು ನಮ್ಮ ನಿವಾಸಸ್ಥಾನದಿಂದ ವಿಚ್ಛೇದವನ್ನು ಪಡೆಯದಂತಾಗಲಿ, ನಮ್ಮನ್ನು ದ್ವೇಷ ಮಾಡುವವರು ಹಾಗೂ ನಾವು ದ್ವೇಷಿಸುವವರು ನಿವಾಸಸ್ಥಾನ(ವಾಸ್ತು) ರಹಿತರಾಗಲಿ॥

ಪ್ರತಿಷ್ಠಾಽಸಿ ಪ್ರತಿಷ್ಠಾವಂತೋ ಭೂಯಾಸ್ಮ ವಾ ಪ್ರತಿಷ್ಠಾಂ ವೋಶ್ಮಿಥ್ಸ ಹ್ಯ ಪ್ರತಿಷ್ಠಸ್ಸ ಭೂಯಾದ್ಯೋಽಸ್ಮಾನ್ ದ್ವೇಷ್ಟಿ ಯಂ ಚ ವಯಂ ದ್ವಿಷ್ಮಃ।

ಎಲೈ ಭೂಮಿಯೇ, ನೀನು ಧೇನುರೂಪವಾದ ಇಡಾದೇವಿಗೆ ಆಧಾರಳಾಗಿದ್ದೀಯೇ, ನಾವೆಲ್ಲರೂ ನಿನ್ನ ಅನುಗ್ರಹದಿಂದ ಆಶ್ರಯವುಳ್ಳವರಾಗೋಣ(ಆಧಾರ), ನಾವು ಯಾವಾಗಲೂ ಆಧಾರ ಅಥವಾ ಆಶ್ರಯ ರಹಿತರಾಗದಂತೆ ಆಗಲಿ, ನಮ್ಮನ್ನು ಯಾರು ದ್ವೇಷಿಸುತ್ತಾರೋ, ನಾವು ಯಾರನ್ನು ದ್ವೇಷಿಸುತ್ತೇವೋ ಅವರು ಆಧಾರ(ಆಶ್ರಯ)ವಿಲ್ಲದವರಾಗಲಿ ॥

ಆ ವಾತವಾಹಿ ಭೇಷಜಂ ವಿ ವಾತವಾಹಿ ಯದ್ರಪಃ । ತ್ವಗ್ಂ ಹಿ ವಿಶ್ವಭೇಷಜೋ ದೇವಾನಾಂ ದೂತ ಈಯಸೇ ॥

ಎಲೈ ವಾಯುದೇವನೇ, ನನ್ನ ರೋಗಗಳಿಗೆ ಚಿಕಿತ್ಸೆಯು ಯಾವರೀತಿಯಾಗುತ್ತದೆಯೋ ಹಾಗೆ ನಮ್ಮಕಡೆಗೆ ಎಲ್ಲಕಡೆಯಿಂದಲೂ ಗಾಳಿಯನ್ನು ಬೀಸು, ಎಲೈ ವಾಯುದೇವನೇ ನಮ್ಮ ಪಾಪಗಳನ್ನು ನಮ್ಮಿಂದ ದೂರವಾಗುವಂತೆ ಬೀಸು । ಏಕೆಂದರೆ, ನೀನು ಜಗತ್ತಿಗೆ ಚಿಕಿತ್ಸಕನಾಗಿರುವೆ(ಜಗತ್ತನ್ನೇ ಚಿಕಿತ್ಸೆ ಮಾಡುವೆ), ಹಾಗೂ ದೇವತೆಗಳಿಗೆ ದೂತನಾಗಿ ಸಂಚರಿಸುವೆ ॥

ದ್ವಾವಿಮೌ ವಾತೌ ವಾತ ಆಸಿಂಧೋರಾ ಪರಾವತಃ । ದಕ್ಷಂ ಮೇ ಅನ್ಯ ಆವಾತು ಪರಾನ್ಯೋ ವಾತು ಯದ್ರಪಃ ॥

ಲೋಕದಲ್ಲಿ ಕಾಣುತ್ತಿರುವ ಈ ಎರಡು ರೀತಿಯಾದ ವಾಯುವು ಕ್ರಮವಾಗಿ ಸಮುದ್ರದಿಂದ ಕೂಡಿದ ಪ್ರದೇಶದಲ್ಲಿ ಹಾಗೂ ದೂರದಲ್ಲಿರುವ ಲೋಕಗಳಲ್ಲಿ ಸಂಚರಿಸುತ್ತವೆ । ಇವೆರಡರ ಮಧ್ಯೆ ಒಂದುರೀತಿಯಾದ ವಾಯುವು ಶಾಂತವಾಗಿ ನನ್ನ ಸುಖವನ್ನು ಸಂಪಾದಿಸಿ, ನಮಗೆಲ್ಲರಿಗೂ ಸುಖವನ್ನು ಉಂಟುಮಾಡಲಿ, ಇನ್ನೊಂದುರೀತಿಯಾದ ವಾಯುವು ಅತಿ ತೀಕ್ಷ್ಣವಾಗಿ ಹಾಗೂ ತೀವ್ರವಾಗಿ ಯಾವ ನನ್ನ ಪಾಪಗಳಿವೆಯೋ ಅವುಗಳನ್ನು ನಾಶಗೊಳಿಸಲಿ ॥

ಯದದೋ ವಾತ ತೇ ಗೃಹೇsಮೃತಸ್ಯ ನಿಧಿರ್ಹಿತಃ । ತತೋ ನೋ ದೇಹಿ ಜೀವಸೇ ತತೋ ನೋ ಧೇಹಿ ಭೇಷಜಮ್ । ತತೋ ನೋ ಮಹ ಆವಹ ॥

ಎಲೈ ವಾಯುದೇವನೇ, ನಿನ್ನ ಮನೆಯಲ್ಲಿ ಯಾವ ಈ ಅಮೃತರೂಪವಾದ ಐಶ್ವರ್ಯವು ಇಡಲ್ಪಟ್ಟಿದೆಯೋ ಅದರಿಂದ ನಮ್ಮ ಜೀವನಕ್ಕಾಗಿ ಸ್ವಲ್ಪ ಅಮೃತಾಂಶವನ್ನು ನಮಗೆ ಕೊಡು। ಹಾಗೆಯೇ ಆ ಅಮೃತರೂಪವಾದ ನಿಧಿಯಿಂದಲೇ ನಮಗೆ ಚಿಕಿತ್ಸೆಗೆ ಬೇಕಾದ ಔಷಧವನ್ನೂ ಕೊಡು। ಹಾಗೂ ಆ ಅಮೃತನಿಧಿಯಿಂದಲೇ ನಮಗೆ ತೇಜಸ್ಸನ್ನು ಕೊಡು ॥

ವಾತ ಆ ವಾತು ಭೇಷಜಮ್ । ಶಂಭೂರ್ಮಯೋಭೂ ನೋ ಹೃದೇ ಪ್ರಣ ಆಯೂಗ್ಂಷಿ ತಾರಿಷತ್ ॥

ಈ ವಾತವು ಹೇಗೆ ನಮಗೆ ಚಿಕಿತ್ಸೆಯುಂಟಾಗುವುದೋ ಹಾಗೆ ಬೀಸಲಿ । ನಮ್ಮ ಮನಸ್ಸಿನಲ್ಲಿರುವ ಅನಿಷ್ಟದಿಂದ ಶಾಂತಿಯನ್ನು ಹಾಗೂ ಸುಖಯುಕ್ತತೆಯನ್ನು ಈ ವಾತವು ಭಾವಿಸಲಿ(ಉಂಟಾಗುವಂತೆ ಮಾಡಲಿ), ನಮ್ಮ ಆಯಸ್ಸನ್ನು ಚಿರಕಾಲ ಜೀವನಮಾಡುವಂತೆ ಅತ್ಯಂತ ವರ್ಧಿಸಲಿ ॥

ಇಂದ್ರಸ್ಯ ಗೃಹೋಸಿ ತಂ ತ್ವಾ ಪ್ರಪದ್ಯೇ ಸಗುಸ್ಸಾಶ್ವಃ । ಸಹ ಯನ್ಮೇ ಅಸ್ತಿ ತೇನ ॥

ಉತ್ಕೃಷ್ಟವಾದ ಐಶ್ವರ್ಯದಿಂದ ಕೂಡಿದ ಆದಿತ್ಯಮಂಡಲಾಧಿಪತಿಯೇ(ದೇವನೇ), ನೀನು ಆದಿತ್ಯಮಂಡಲವನ್ನು ನಿವಾಸಸ್ಥಾನವುಳ್ಳವನಾಗಿದ್ದೀಯೆ, ಅಂತಹ ಆದಿತ್ಯಮಂಡಲವನ್ನುಳ್ಳ ನಿನ್ನನ್ನು ನಾನು ಪಡೆಯುತ್ತೇನೆ, ಗೋ ಸಂಪತ್ತಿನ ಸಹಿತವಾಗಿ ಹಾಗೂ ಅಶ್ವಸಂಪತ್ತಿನ ಸಹಿತವಾಗಿ ಇನ್ನು ಬೇರೇ ನನ್ನ ಯಾವಯಾವ ಸಂಪತ್ತುಗಳಿವೆಯೋ ಹಾಗೂ ವಸ್ತುಗಳಿವೆಯೋ ಅವುಗಳೊಡನೆ ನಿನ್ನನ್ನು ನಾನು ಸೇರುತ್ತೇನೆ ॥

ಭೂಃ ಪ್ರಪದ್ಯೇ ಭುವಃ ಪ್ರಪದ್ಯೇ ಸುವಃ ಪ್ರಪದ್ಯೇ ಭೂರ್ಭುವಸ್ಸುವಃ ಪ್ರಪದ್ಯೇ ವಾಯುಂ ಪ್ರಪದ್ಯೇsನಾರ್ತಾಂ ದೇವತಾಂ ಪ್ರಪದ್ಯೇsಶ್ಮಾನ ಮಾಖಣಂ ಪ್ರಪದ್ಯೇ ಪ್ರಜಾಪತೇರ್ಬ್ರಹ್ಮ ಕೋಶಂ ಬ್ರಹ್ಮ ಪ್ರಪದ್ಯ ಓಂ ಪ್ರಪದ್ಯೇ ॥

ಭೂಲೋಕ ದೇವತೆಯನ್ನು ನಾನು ಹೊಂದಿದವನಾಗಿದ್ದೇನೆ, ಹಾಗೆಯೇ ಭುವರ್ಲೋಕ–ಸುವರ್ಲೋಕ–ಭೂರ್ಭುವಸ್ಸುವರ್ಲೋಕಗಳನ್ನು ಹಾಗೂ ವಾಯುವನ್ನು ಹಾಗೂ ಆರೋಗ್ಯಕ್ಕೆ ಅಧಿದೇವತೆಯಾದ ಅನಾರ್ತದೇವತೆಯನ್ನು ಹಾಗೂ ಅಗೆಯಲು, ಭಿನ್ನಗೊಳಿಸಲು ಆಗದೇ ಇರುವಂತಹ ಗಟ್ಟಿಯಾದ(ದೃಢ) ಪಾಷಾಣ(ಕಲ್ಲು)ಖಂಡದ ದೃಢತೆಯನ್ನು ಹಾಗೂ ಪ್ರಜಾಪತಿದೇವತೆಗೆ ಸಂಬಂಧಿಸಿದ ಎಲ್ಲಕ್ಕೂ ಆಧಾರಭೂತವಾದ ವೇದಸ್ವರೂಪವನ್ನು ಹಾಗೂ ಪರಮಾತ್ಮನಸ್ವರೂಪವಾದ ಓಂ ಕಾರವನ್ನು ನಾನು ಹೊಂದಿದವನಾಗಿದ್ದೇನೆ ಅಥವಾ ಮುಂದೆ ಹೊಂದುತ್ತೇನೆ ॥

ಅಂತರಿಕ್ಷಂ ಮ ಉರ್ವಂತರಂ ಬೃಹದಗ್ನಯಃ ಪರ್ವತಾಶ್ಚ ಯಂಯಾ ವಾತಸ್ವಸ್ತಾ ಶ ಸ್ವಸ್ತಿ ಮಾಂತಯಾ ॥ ಸ್ವಸ್ತಾ ಶ ಸ್ವಸ್ತಿ ಮಾನಸಾನಿ ॥

ಯಾವ ಈ ಅಂತರಿಕ್ಷವಿದೆಯೋ ಅದು ನನಗೆ ವಿಸ್ತಾರವಾದ ಅವಕಾಶವನ್ನು ಕೊಡುವಂತಾಗಲಿ, ಈ ಅಂತರಿಕ್ಷದಲ್ಲಿ ಗಾರ್ಹಪತ್ಯ ಮುಂತಾದ ಅಗ್ನಿಗಳು ಹಾಗೂ ಮೇರು ಮುಂತಾದ ಪರ್ವತಗಳು ಅತ್ಯಂತ ಸುಖಕರವಾಗಿ ಇರುವಂತಾಗಲಿ, ಈ ಅಂತರಿಕ್ಷದಲ್ಲಿ ಸಂಚರಿಸುತ್ತಾ, ವಾತವು ಹೇಗೆ ನಮಗೆ ಕ್ಷೇಮಕ್ಕೆ, ಸುಖಕ್ಕೆ ಕಾರಣವಾಗುತ್ತದೆಯೋ ಹಾಗೆ ಸುಖಕರವಾಗಿ ಬೀಸುವಂತೆ ಈ ಅಂತರಿಕ್ಷವು ನಮಗೆ ಕ್ಷೇಮವನ್ನು ಉಂಟುಮಾಡಲಿ, ಈ ಕ್ಷೇಮಕ್ಕೆ ಕಾರಣವಾದ ಬೀಸುವ ಕ್ರಿಯೆಯಿಂದ ನಮ್ಮ ಅಂತಃಕರಣ ಮುಂತಾದವುಗಳನ್ನು ಕ್ಷೇಮಕ್ಕೆ ಒಯ್ಯಲಿ(ಕ್ಷೇಮವಾಗಿರುವಂತೆ ಮಾಡಲಿ) ॥

ಪ್ರಾಣಾಪಾನೌ ಮೃತ್ಯೋರ್ಮಾಪಾತಂ ಪ್ರಾಣಾಪಾನೌ ಮಾ ಮಾ ಹಾಸಿಷ್ಟಂ ॥

ಎಲ್ಲೈ ಪ್ರಾಣಾಪಾನ ದೇವತೆಗಳೇ, ಮೃತ್ಯುವಿನಿಂದ ನನ್ನನ್ನು ಕಾಪಾಡಿರಿ, ನೀವಿಬ್ಬರೂ ನನ್ನನ್ನು ಯಾವಾಗಲೂ ಬಿಟ್ಟುಹೋಗದೇ ಇರಿ ॥

ಮಯಿ ಮೇಧಾಂ ಮಯಿ ಪ್ರಜಾಂ ಮಂಗ್ನಿಸ್ತೇಜೋ ದಧಾತು ಮಯಿ ಮೇಧಾಂ ಮಯಿ ಪ್ರಜಾಂ ಮಯೀಂದ್ರ ಇಂದ್ರಿಯಂ ದಧಾತು ಮಯಿ ಮೇಧಾಂ ಮಯಿ ಪ್ರಜಾಂ ಮಯಿ ಸೂರ್ಯೋಭ್ರಾಜೋ ದಧಾತು ॥

ನನಗೆ ಮೇಧಾಶಕ್ತಿಯನ್ನು(ಸ್ಮರಣಶಕ್ತಿ) ಹಾಗೂ ಪ್ರಜೆಗಳನ್ನು ಹಾಗೂ ತೇಜಸ್ಸನ್ನು ಅಗ್ನಿದೇವನು ಕೊಟ್ಟು, ಸದಾ ಪೋಷಿಸಲಿ ಹಾಗೆಯೇ ನನಗೆ ಮೇಧಾಶಕ್ತಿಯನ್ನು(ಸ್ಮರಣಶಕ್ತಿ) ಹಾಗೂ ಪ್ರಜೆಗಳನ್ನು ಹಾಗೂ ಇಂದ್ರಿಯಶಕ್ತಿಯನ್ನು ಇಂದ್ರದೇವನು ಕೊಟ್ಟು ಸದಾ ಪೋಷಿಸಲಿ ಹಾಗೆಯೇ ನನಗೆ ಮೇಧಾಶಕ್ತಿಯನ್ನು(ಸ್ಮರಣಶಕ್ತಿ) ಹಾಗೂ ಪ್ರಜೆಗಳನ್ನು ಹಾಗೂ ಕಾಂತಿಸಮೂಹವನ್ನು ಸೂರ್ಯದೇವನು ಕೊಟ್ಟು ಪೋಷಿಸಲಿ ॥

ದ್ಯುಭಿರಕ್ತುಭಿಃ ಪರಿಪಾತಮಸ್ಮಾನರಿಷ್ಟೇಭಿರಶ್ವಿನಾ ಸೌಭಗೇಭಿಃ । ತನ್ನೋ ಮಿತ್ರೋವರುಣೋ ಮಾಮಹನ್ತಾಮದಿತಿಸ್ಸಿನ್ಧುಃ ಪೃಥಿವೀ ಉತ ದ್ಯೌಃ ॥

ಎಲೈ ಅಶ್ವಿನೀದೇವತೆಗಳೇ, ಸೌಭಾಗ್ಯವನ್ನು ತಂದುಕೊಡುವ ಹಾಗೂ ಅತ್ಯಂತ ಪ್ರಕಾಶಮಾನವಾದ ಲೇಪನಮಾಡುವ ತುಪ್ಪ ಮುಂತಾದ ದ್ರವ್ಯಗಳಿಂದ ಕೂಡಿದ ವಿನಾಶವಿಲ್ಲದ ಸೂಕ್ತಗಳಿಂದ ನಮ್ಮನ್ನು ಕಾಪಾಡಿರಿ । ನಮ್ಮನ್ನು ಕಾಪಾಡುವ ಆ ಅಶ್ವಿನೀದೇವತೆಗಳನ್ನು ಮಿತ್ರ – ವರುಣ – ಅದಿತಿ – ಸಿಂಧು – ಪೃಥಿವೀ ಮತ್ತು ದ್ಯುಲೋಕದ ದೇವತೆಗಳು ಅತ್ಯಂತ ಗೌರವದಿಂದ ಅಂಗೀಕರಿಸಲಿ ॥

ಕಯಾನಶ್ಚಿತ್ರ ಆ ಭುವದೂತೀ ಸದಾ ವೃಧಸ್ಸಖಾ । ಕಯಾ ಶಚಿಷ್ಠಯಾ ವೃತಾ ॥

ಪ್ರಜಾಪತಿಗೆ ಸಂಬಂಧಿಸಿದ ರಕ್ಷಣೆಯಿಂದ ಈ ನಾನಾವಿಧವಾದ ಯಜ್ಞಗಳು ನಮಗೆ ಪ್ರಾಪ್ತವಾಗಿವೆ, ಈ ಯಜ್ಞಗಳು ಯಾವಾಗಲೂ ವರ್ಧಿಸುವ ಹಾಗೂ ಅತ್ಯಂತ ಪ್ರೀತಿಗೆ ಪಾತ್ರವಾದವುಗಳಾಗಿವೆ । ಈ ಯಜ್ಞವು ಪ್ರಜಾಪತಿಗೆ ಸಂಬಂಧಿಸಿದ ಅತಿಯಾದ ಶಕ್ತಿ ಮಾಹಾತ್ಮೆಯಿಂದ ಸುತ್ತುವರಿಯಲ್ಪಟ್ಟು ರಕ್ಷಿಸಲ್ಪಟ್ಟಿದೆ ॥

ಕಸ್ತ್ವಾ ಸತ್ಯೋ ಮದಾನಾಂ ಮಗ್ಂ ಹಿಷ್ಠೋ ಮತ್ಸದನ್ಧಸಃ । ದೃಢಾ ಚಿದಾರುಜೇ ವಸು ॥

ಎಲೈ ಪ್ರವರ್ಗ್ಯದೇವತೆಯೇ, ನಿನ್ನನ್ನು ಪ್ರಜಾಪತಿಯು ಪ್ರೀತಿಯಿಂದ ನನ್ನ ಬಳಿಗೆ ಬರುವಂತೆ ಮಾಡಲಿ । ಆ ಪ್ರಜಾಪತಿಯು ಸತ್ಯಸ್ವರೂಪನೂ ಹಾಗೂ ಸಂತೋಷಕ್ಕೆ ಕಾರಣನಾದ, ಆಯಸ್ಸು ಮುಂತಾದವುಗಳನ್ನು ಹಾಗೂ ಅನ್ನವನ್ನೂ ಅತಿಶಯವಾಗಿ ವರ್ಧಿಸುವವನಾಗಿದ್ದಾನೆ ।

ಎಲ್ಲಾ ರೀತಿಯಿಂದಲೂ ಅನಿಷ್ಟ ನಿವಾರಣೆಗಾಗಿ ಯಾವ ಸಂಪತ್ತಿನ ಅವಶ್ಯಕತೆ ಇದೆಯೋ ಅದನ್ನು ನನಗೆ ಸಿಗುವಂತೆ ಮಾಡಲಿ ॥

ಅಭೀಷುಣಸ್ಸಖೀನಾಮವಿತಾ ಜರಿತೄಣಾಮ್ । ಶತಂ ಭವಾಸ್ಯೂತಿಭಿಃ ॥

ಎಲೈ ಪ್ರಜಾಪತಿಯೇ, ಕ್ಷಯಸ್ವಭಾವವಿರುವ ಹಾಗೂ ಗೆಳೆಯರಂತೆ ಪ್ರಿಯರಾಗಿರುವ ನಮ್ಮ ಕುಟುಂಬವನ್ನು ನಾನಾವಿಧವಾಗಿ ರಕ್ಷಣೆಯನ್ನು ಮಾಡುತ್ತಾ, ಎಲ್ಲ ರೀತಿಯಿಂದಲೂ ಚೆನ್ನಾಗಿ ಕಾಪಾಡುವವನಾಗು ॥

ವಯಸ್ಸುಪರ್ಣಾ ಉಪಸೇದುರಿಂದ್ರಂ ಪ್ರಿಯಮೇಧಾ ಋಷಯೋ ನಾಧಮಾನಾಃ ।
ಅಪಧ್ವಾನ್ತ ಮೂರ್ಣುಹಿ ಪೂರ್ಧಿ ಚಖ್ಷುರ್ಮುಗ್ಧ್ಯಸ್ಮಾನ್ನಿಧಯೇಽವ ಬದ್ಧಾನ್ ॥

ಕೆಲವುಜನ ಪಕ್ಷಿಯ ವೇಷವನ್ನು ಧರಿಸಿದ, ಆದರಿಂದಲೇ ಒಳ್ಳೆಯ ರಕ್ಕೆಗಳಿಂದ ಕೂಡಿದ, ಅಧ್ಯಯನ ಮಾಡಿದ ವೇದ ಶಾಸ್ತ್ರಗಳನ್ನು ಅತ್ಯಂತ ಉತ್ಕೃಷ್ಟವಾಗಿ ನೆನಪಿನಲ್ಲಿ ಇಟ್ಟುಕೊಂಡಿರುವ, ತಮಗೆ ಸಹಾಯವನ್ನು ಬೇಡುವವರಾದ ಋಷಿಗಳು ಇಂದ್ರನ ಬಳಿಗೆ ಹೋದರು । ಅವರೆಲ್ಲರೂ ಇಂದ್ರನನ್ನು ಕುರಿತು, ನಮ್ಮ ಅಜ್ಞಾನರೂಪವಾದ ಅಂಧಕಾರವನ್ನು ಹೋಗಲಾಡಿಸು ಹಾಗೂ ಪರಮಾರ್ಥ ಜ್ಞಾನರೂಪವಾದ ದೃಷ್ಟಿಯಿಂದ ನಮ್ಮನ್ನು ಪೂರ್ಣಗೊಳಿಸು । ಹೇಗೆ ಬೇಡಿಯಲ್ಲಿ ಬಂಧಿತರಾದವರನ್ನು ಬಿಡುಗಡೆ ಮಾಡುವಂತೆ ನಮ್ಮನ್ನು ಅಜ್ಞಾನಬಂಧನದಿಂದ ಬಿಡುಗಡೆ ಮಾಡು ಎಂದು ಪ್ರಾರ್ಥಿಸಿದರು ॥

ಶನ್ನೋ ದೇವೀರಭಿಷ್ಟಯ ಆಪೋಭವನ್ತು ಪೀತಯೇ । ಶಂ ಯೋರಭಿಸ್ರವನ್ತು ನಃ ॥

ಎಲೈ ಅಬ್ದೇವತೆಗಳೇ, ನಮ್ಮ ಇಷ್ಟಾರ್ಥಸಿದ್ಧಿಗಾಗಿ ಸುಖವನ್ನು ಕೊಡುವವರಾಗಿ ಹಾಗೂ ನಮ್ಮನ್ನು ಸುಖಿಗಳಾಗುವಂತೆ ಹಾಗೂ ದು:ಖರಹಿತರಾಗುವಂತೆ ನಮಗೆ ಎಲ್ಲಕಡೆಯಿಂದಲೂ ಸುಖದ ಪ್ರವಾಹವನ್ನು ಹರಿಸಿರಿ ॥

ಈಶಾನಾವಾರ್ಯಾಣಾಂ ಕ್ಷಯಂತೀಶ್ಚರ್ಷಣೀನಾಮ್ । ಅಪೋ ಯಾಚಾಮಿ ಭೇಷಜಮ್ ॥

ನಾನು ಅಬ್ದೇವತೆಗಳನ್ನು ಕುರಿತು, ಪಾಪವನ್ನು ನಾಶಮಾಡುವ ಔಷಧವನ್ನು ಯಾಚಿಸುತ್ತೇನೆ । ಈ ಅಬ್ದೇವತೆಗಳು, ಬೇಡುವ ಕಾಮನೆಗಳನ್ನು ಕೊಡಲು ಸಮರ್ಥರಾಗಿರುವರು ಹಾಗೂ ಮನುಷ್ಯರ ಸುಖ ನಿವಾಸಕ್ಕೆ ಕಾರಣರಾಗಿರುವರು ॥

ಸುಮಿತ್ರಾ ನ ಆಪ ಓಷಧ್ಯಃ ಸಂತು ದುರ್ಮಿತ್ರಾಸ್ತಸ್ಮೈ ಭೂಯಾಸುರ್ಯೋऽಸ್ಮಾನ್ದ್ವೇಷ್ಟಿ ಯಂ ಚ ವಯಂ ದ್ವಿಷ್ಮಃ ॥

ಆಪ್ ಹಾಗೂ ಓಷಧಿಗಳೆಂಬ ಎರಡು ವಿಧವಾದ ದೇವತೆಗಳು ನಮಗೆ ಅತ್ಯಂತ ಪ್ರಿಯರಾಗಲಿ । ಯಾರು ನಮ್ಮ ಶತ್ರುಗಳೋ (ನಮ್ಮನ್ನು ಯಾರು ದ್ವೇಷಿಸುತ್ತಾರೋ ಹಾಗೂ ನಾವು ಯಾರನ್ನು ದ್ವೇಷಿಸುತ್ತೇವೆಯೋ) ಅವರನ್ನು ನಾಶಪಡಿಸುವವರಾಗಲಿ ॥

ಆಪೋಹಿಷ್ಠಾ ಮಯೋ ಭುವಸ್ತಾ ನ ಊರ್ಜೇ ದಧಾತನ । ಮಹೇರಣಾಯ ಚಕ್ಷಸೇ ॥

ಎಲ್ಲೈ ಅಬ್ದೇವತೆಗಳೇ, ಸುಖವನ್ನು ಕೊಡುವವರಾಗಿದ್ದೀರಿ, ಅಂತಹಾ ನೀವು ನಮಗೆ ಬಲವನ್ನೂ ಬಲಕ್ಕೆ ಕಾರಣವಾದ ರಸವನ್ನೂ ಕೊಡುವವರಾಗಿ, ನಮ್ಮನ್ನು ಧರಿಸಿರಿ । ಹಾಗೂ ಅತ್ಯಂತ ಸುಂದರವಾಗಿ, ರಮಣೀಯವಾಗಿ ನಾವು ಕಾಣುವಂತೆ ನಮ್ಮನ್ನು ಧರಿಸಿರಿ (ಪರಮಾರ್ಥ ತತ್ವ ಸ್ವರೂಪವನ್ನು ಅರಿಯಲು ಯೋಗ್ಯರನ್ನಾಗಿ ಮಾಡಿರಿ) ॥

ಯೋ ವಶ್ಶಿವತಮೋ ರಸಸ್ತಸ್ಯ ಭಾಜಯತೇಹ ನಃ । ಉಶತೀರಿವ ಮಾತರಃ ॥

ನಿಮ್ಮ ಅತ್ಯಂತ ಶಾಂತವಾದ, ಸುಖಕ್ಕೆ ಕಾರಣವಾದ ಯಾವ ರಸಸ್ವರೂಪವಿದೆಯೋ ಅದು ನಾವು ಮಾಡುವ ಈ ಕರ್ಮದಲ್ಲಿ ಸೇರಿಕೊಂಡು ನಮಗೆ ಪ್ರಾಪ್ತವಾಗುವಂತೆ ಮಾಡಿರಿ । ಹೇಗೆಂದರೆ, ತಮ್ಮ ಮಕ್ಕಳಿಗೆ ತಾಯಂದಿರು ಅತ್ಯಂತ ಪ್ರೀತಿಯಿಂದ, ವಾತ್ಸಲ್ಯದಿಂದ

ತಮ್ಮ ಎದೆಹಾಲನ್ನು ಕುಡಿಸುವಂತೆ, ನಮಗೆ ಆ ರಸವು ಪ್ರಾಪ್ತವಾಗುವಂತೆ ಆಗಲಿ ॥

ತಸ್ಮಾ ಅರಂಗಮಾಮ ವೋ ಯಸ್ಯ ಕ್ಷಯಾಯ ಜಿನ್ವಥ । ಆಪೋ ಜನಯಥಾ ಚ ನಃ ॥

ಯಾವ ರಸದ ನಿವಾಸದಿಂದ ನೀವು ಅತ್ಯಂತ ಪ್ರೀತಿಪಾತ್ರರಾಗಿದ್ದೀರೋ ಆ ರಸವನ್ನು ಪಡೆಯಲು ನಮ್ಮನ್ನು ಯೋಗ್ಯರನ್ನಾಗಿ ಮಾಡಿ, ನಮಗೆ ಆ ರಸವನ್ನು ಸುರಿಸಿರಿ । ಎಲೈ ಅಬ್ದೇವತೆಗಳೇ, ನಮಗೆ ಪ್ರಜಾಸಂತತಿಯು ನಿರಂತರವಾಗಿ ಉಂಟಾಗುವಂತೆ ಮಾಡಿರಿ ॥

ಪೃಥಿವೀ ಶಾಂತಾ ಸಾऽಗ್ನಿನಾ ಶಾಂತಾ ಸಾಮೇ ಶಾಂತಾ ಶುಚಗ್ಂ ಶಮಯತು ॥

ಈ ಪೃಥಿವೀದೇವತೆಯು ಎಲ್ಲಾ ತೊಂದರೆಗಳನ್ನೂ ಶಮನ ಮಾಡುವವಳಾಗಿದ್ದಾಳೆ ಹಾಗೂ ಅಗ್ನಿಯೊಡನೆ ಈ ಪೃಥಿವೀದೇವತೆಯು ಸೇರಿ ಎಲ್ಲ ತೊಂದರೆಗಳನ್ನೂ ನಾಶಪಡಿಸುವವಳಾಗಿದ್ದಾಳೆ । ಇಂತಹಾ ಶಾಂತದೇವತೆಯಾದ ಪೃಥಿವಿಯು ನನ್ನ ದು:ಖವನ್ನು ಪರಿಹರಿಸಲಿ ॥

ಅಂತರಿಕ್ಷಗ್ಂ ಶಾಂತಂ ತದ್ವಾಯುನಾ ಶಾಂತಂ ತನ್ಮೇ ಶಾಂತಗ್ಂ ಶುಚಗ್ಂ ಶಮಯತು । ದ್ಯೌಶ್ಶಾಂತಾ ಸಾऽऽದಿತ್ಯೇನ ಶಾಂತಾ ಸಾಮೇ ಶಾಂತಾ ಶುಚಗ್ಂ ಶಮಯತು ॥

ಈ ಅಂತರಿಕ್ಷದೇವತೆಯು, ಎಲ್ಲ ತೊಂದರೆಗಳನ್ನೂ ಶಮನ ಮಾಡುವವಳಾಗಿದ್ದಾಳೆ । ಇವಳು ವಾಯುದೇವತೆಯು ಜೊತೆ ಸೇರಿ ಎಲ್ಲ ಉಪದ್ರವಗಳನ್ನೂ ಶಮನಗೊಳಿಸುವವಳಾಗಿದ್ದಾಳೆ । ಅಂತಹಾ ಈ ಅಂತರಿಕ್ಷದೇವತೆಯು ನನ್ನ ಶೋಕವನ್ನು ಪರಿಹರಿಸಲಿ । ದ್ಯುಲೋಕದೇವತೆಯು ಎಲ್ಲ ತೊಂದರೆಗಳನ್ನೂ ಉಪಶಮನ ಮಾಡುವವಳಾಗಿದ್ದಾಳೆ, ಇವಳು ಆದಿತ್ಯದೇವತೆಯ ಜೊತೆ ಸೇರಿ ಎಲ್ಲ ತೊಂದರೆಗಳನ್ನೂ ಶಮನ ಮಾಡುವವಳಾಗಿದ್ದಾಳೆ । ಅಂತಹಾ ಈ ದ್ಯುಲೋಕದೇವತೆಯು ನನ್ನ ಎಲ್ಲಾ ದು:ಖಗಳನ್ನೂ ಪರಿಹರಿಸಲಿ ॥

ಪೃಥಿವೀ ಶಾಂತಿರಂತರಿಕ್ಷಗ್ಂ ಶಾಂತಿ ರ್ದ್ಯೌಶ್ಶಾಂತಿರ್ದಿಶಶ್ಶಾಂತಿರವಾಂತರ ದಿಶಾಶ್ಶಾಂತಿರಗ್ನಿಶ್ಶಾಂತಿ ರ್ವಾಯುಶ್ಶಾಂತಿ ರಾದಿತ್ಯಶ್ಶಾಂತಿ ಶ್ಚಂದ್ರಮಾಶ್ಶಾಂತಿ ರ್ನಕ್ಷತ್ರಾಣಿ ಶಾಂತಿರಾಪಶ್ಶಾಂತಿ ರೋಷಧಯಶ್ಶಾಂತಿ ರ್ವನಸ್ಪತಯಶ್ಶಾಂತಿ ರ್ಗೌಶ್ಶಾಂತಿ ರಜಾಶಾಂತಿರಶ್ವ ಶ್ಶಾಂತಿಃ ಪುರುಷ ಶ್ಶಾಂತಿ ರ್ಬ್ರಹ್ಮಶಾಂತಿ ರ್ಬ್ರಾಹ್ಮಣಶ್ಶಾಂತಿಃ ಶಾಂತಿರೇವ ಶಾಂತಿಃ ಶಾಂತಿರ್ಮೇ ಅಸ್ತುಶಾಂತಿಃ ॥

ಪೃಥಿವೀ–ಅಂತರಿಕ್ಷ–ದ್ಯುಲೋಕ–ದಿಗ್ದೇವತೆಗಳು–ಅವಾಂತರ ದಿಗ್ದೇವತೆಗಳು–ಅಗ್ನಿ–ವಾಯು–ಆದಿತ್ಯ–ಚಂದ್ರಮಾ–ನಕ್ಷತ್ರದೇವತೆಗಳು–ಅಬ್ದೇವತೆಗಳು–ಓಷಧಿದೇವತೆಗಳು –ವನಸ್ಪತಿದೇವತೆಗಳು–ಗೌರ್ದೇವತೆ –ಅಜಾದೇವತೆ –ಅಶ್ವದೇವತೆ –ಪುರುಷದೇವತೆ–ವೇದದೇವತೆ–ಬ್ರಾಹ್ಮಣದೇವತೆಗಳು....., ಈ ಎಲ್ಲಾ ದೇವತೆಗಳೂ ಉಪದ್ರವವನ್ನು ಶಮನಗೊಳಿಸುವ ಶಾಂತಸ್ವರೂಪರಾಗಿದ್ದಾರೆ । ಶಾಂತ್ಯಭಿಮಾನೀ ದೇವತೆಯಾದ ಅವಳಿಗೆ ಮುಖ್ಯವಾಗಿಯೇ ಶಾಂತಸ್ವರೂಪತೆಯು । ಆದ್ದರಿಂದ ಆ ಶಾಂತಿದೇವತೆಯು ನನಗೆ ಎಲ್ಲಾ ಅನಿಷ್ಟಗಳನ್ನೂ ನಾಶಗೊಳಿಸಲು ಕಾರಣವಾಗಲಿ ॥

ತಯಾಹಗ್ಂ ಶಾಂತ್ಯಾ ಸರ್ವಶಾಂತ್ಯಾ ಮಹ್ಯಂ ದ್ವಿಪದೇ ಚತುಷ್ಪದೇಚ ಶಾಂತಿಂ ಕರೋಮಿ ಶಾಂತಿರ್ಮೇ ಅಸ್ತು ಶಾಂತಿಃ ॥

ಯಜಮಾನನಾದ ನಾನು, ಎಲ್ಲ ಅನಿಷ್ಟಗಳನ್ನೂ ನಾಶಪಡಿಸುವ ಶಾಂತಿಯನ್ನು ಸ್ತೋತ್ರಮಾಡಿರುವುದರಿಂದ ಹಾಗೂ ಹಿಂದೆ ಹೇಳಿದ ವಿಶೇಷಗುಣಗಳಿಂದ ಕೂಡಿದ ಶಾಂತಿದೇವತೆಯಿಂದ ನನ್ನ ಶರೀರಕ್ಕೆ ಹಾಗೂ ನನ್ನ ಕುಟುಂಬದವರಿಗೆ ಹಾಗೂ ನನ್ನ ಪಶುಗಳಿಗೆ ಎಲ್ಲ ಅರಿಷ್ಟವನ್ನೂ ನಾಶಮಾಡುತ್ತೇನೆ । ಆದ್ದರಿಂದ ಶಾಂತಿದೇವತೆಯು ನನಗೆ ಎಲ್ಲ ಅನಿಷ್ಟನಾಶಕ್ಕೆ ಕಾರಣವಾಗಲಿ ॥

ಏಹ ಶ್ರೀಶ್ಚ ಹ್ರೀಶ್ಚ ಧೃತಿಶ್ಚ ತಪೋ ಮೇಧಾ ಪ್ರತಿಷ್ಠಾ ಶ್ರದ್ಧಾ ಸತ್ಯಂ ಧರ್ಮಶ್ಚೈತಾನಿ ಮೋತಿಷ್ಠಂತಮನೂತಿಷ್ಠಂತು ಮಾ ಮಾಗ್ ಶ್ರೀಶ್ಚ ಹ್ರೀಶ್ಚ ಧೃತಿಶ್ಚ ತಪೋ ಮೇಧಾ ಪ್ರತಿಷ್ಠಾ ಶ್ರದ್ಧಾ ಸತ್ಯಂ ಧರ್ಮಶ್ಚೈತಾನಿ ಮಾ ಮಾ ಹಾಸಿಷುಃ ॥

ಶ್ರೀ, ಹ್ರೀ, ಧೃತಿ, ತಪಸ್ಸು, ಮೇಧಾ, ಪ್ರತಿಷ್ಠಾ, ಶ್ರದ್ಧಾ, ಸತ್ಯ, ಧರ್ಮ....., ಈ ದೇವತೆಗಳು ನನ್ನ ಕರ್ಮಸಮಾಪ್ತಿಯ ನಂತರ ನಾನು ಕರ್ಮದಿಂದ ಬಿಟ್ಟೇಳುವುದನ್ನನುಸರಿಸಿ ಇವುಗಳೂ ಕರ್ಮದಿಂದ ಬಿಟ್ಟೇಳಲಿ । ಈ ಶ್ರೀ ಮುಂತಾದ ದೇವತೆಗಳ ಸ್ವರೂಪಗಳು ನನ್ನನ್ನು ಯಾವಾಗಲೂ ಬಿಡದೇ ಇರಲಿ । ಯಾವಪ್ರಕಾರದಿಂದಲೂ ಹೋಗದಿರಲಿ ॥

ಉದಾಯುಷಾ ಸ್ವಾಯುಷೋದೋಷಧೀನಾಗ್ಂ ರಸೇನೋತ್ಪರ್ಜನ್ಯಸ್ಯ ಶುಷ್ಮೇಣೋದಸ್ಥಾಮ ಮೃತಾಗ್ಂ ಅನು ॥

ನಾನು ಅಮೃತರಾದ ದೇವತೆಗಳನ್ನು ಕುರಿತು ಆಯಸ್ಸು ಮುಂತಾದ ವಿಶೇಷಗಳಿಂದ(ಆಯು, ಸ್ವಾಯು, ಓಷಧಿ, ರಸ, ಪರ್ಜನ್ಯ, ಶುಷ್ಮ) ಕೂಡಿದ ಸೋಮಸೊಡನೆ ಮೇಲೇಳುತ್ತೇನೆ । ಆಯಸ್ಸು ಎಂದರೆ – ಬಹಳಕಾಲ ಬದುಕಿರುವುದು, ಸ್ವಾಯು ಎಂದರೆ – ರೋಗಾದಿಗಳಿಲ್ಲದೆ ಬಹಳಕಾಲ ಬದುಕಿರುವುದು, ರಸವೆಂದರೆ–ಆಯು ಮತ್ತು ಸ್ವಾಯುಗಳೆರಡನ್ನು ಪ್ರಾಪ್ತಮಾಡುವುದು, ಓಷಧಿಗಳ ಮತ್ತು ಪರ್ಜನ್ಯಗಳ ಸಾರ ॥

ತಚ್ಛಕ್ಷುರ್ದೇವಹಿತಂ ಪುರಸ್ತಾಚ್ಛುಕ್ರಮುಚ್ಚರತ್ । ಪಶ್ಯೇಮ ಶರದಶ್ಶತಂ ಜೀವೇಮ ಶರದಶ್ಶತಂ ನಂದಾಮಶರದಶ್ಶತಂ ಮೋದಾಮ ಶರದಶ್ಶತಂ ಭವಾಮ ಶರದಶ್ಶತಗ್ಂ ಶೃಣವಾಮ ಶರದಶ್ಶತಂ ಪ್ರಬ್ರವಾಮ ಶರದಶ್ಶತಮದೀತಾಸ್ಯಾಮ ಶರದಶ್ಶತಂ ಜ್ಯೋಕ್ಚ ಸೂರ್ಯಂ ದೃಶೇ ॥

ಪೂರ್ವದಿಕ್ಕಿನಲ್ಲಿ ಉದಯಿಸುತ್ತಾ, ಜ್ಯೋತಿಸ್ವರೂಪವನ್ನು ಹೊಂದಿದ ಸೂರ್ಯದೇವನು

ಎಲ್ಲಾ ದೇವತೆಗಳಿಗೂ ಹಿತಕಾರಿಯಾಗಿ ಹಾಗೂ ಚಕ್ಷುರಿಂದ್ರಿಯಕ್ಕೆ ಅನುಗ್ರಹವನ್ನು ಮಾಡುತ್ತಾ ಇರುವನು। ಅಂತಹಾ ಸೂರ್ಯದೇವನನ್ನು ನಾವು ನೂರು ವರ್ಷಗಳ ಕಾಲ ಬಾಳಿ, ಯಾವಾಗಲೂ ನೋಡುವಂತಾಗಲಿ ಹಾಗೂ ನೂರುವರ್ಷಗಳ ಕಾಲ ಎಲ್ಲಾ ಭೋಗವಸ್ತುಗಳಿಂದ ಸಮೃದ್ಧರಾಗಿ ಆನಂದಿಸುವಂತಾಗಲಿ । ಹಾಗೆಯೇ ಅತೀವ ಸಂತೋಷವನ್ನು ಹೊಂದುವಂತಾಗಲಿ। ಹಾಗೆಯೇ ನಮ್ಮ ನಿವಾಸಸ್ಥಾನದಲ್ಲಿ ಇರುವಂತಾಗಲಿ ಹಾಗೂ ಗುರುಮುಖದಿಂದ ವೇದಶಾಸ್ತ್ರಗಳ ಸಕಲ ರಹಸ್ಯವನ್ನೂ ತಿಳಿಯುವಂತಾಗಲಿ। ಹಾಗೂ ಆ ತಿಳಿದ ರಹಸ್ಯಗಳನ್ನೂ ಶಿಷ್ಯರಿಗೆ ಸಂಪೂರ್ಣವಾಗಿ ಉಪದೇಶ ಮಾಡುವಂತಾಗಲಿ ಹಾಗೂ ಯಾವ ಶತ್ರುಗಳಿಂದಲೂ ಸೋಲಿಸಲ್ಪಡದೇ ಇರುವಂತಾಗಲಿ । ಹಾಗೂ ಬಹಳಕಾಲದವರೆಗೆ ಸೂರ್ಯನ ಜ್ಯೋತಿಯನ್ನು ನೋಡಿ, ಧ್ಯಾನ ಮಾಡುವುದಕ್ಕೆ ಯೋಗ್ಯರಾಗೋಣ ॥

ಯು ಉದಗಾನ್ಮಹ ತೋರ್ಣವಾದ್ವಿಭ್ರಾಜಮಾನಸ್ಸರಿರಸ್ಯ ಮಧ್ಯಾತ್ಸಮಾ
ವೃಷಭೋ ಲೋಹಿತಾಕ್ಷಸ್ಸುಂಸೋಮವಿಪಶ್ಚಿನ್ ಮನಸಾ ಪುನಾತು ॥

ಯಾವ ಸೂರ್ಯನು ಪೂರ್ವಸಮುದ್ರದಿಂದ ಅಲ್ಲೂ ವಿಶೇಷವಾಗಿ ನೀರಿನ ಮಧ್ಯದಿಂದ ವಿಶೇಷವಾಗಿ ಪ್ರಕಾಶಿಸುತ್ತಾ, ಉದಯಿಸುತ್ತಾನೆ । ಅಂತಹಾ ಸೂರ್ಯನು ಮನಸ್ಸಿನಿಂದ ನನ್ನನ್ನು ಶುದ್ಧಿಗೊಳಿಸಲಿ । ಆ ಸೂರ್ಯನು ಎಲ್ಲ ನಮ್ಮ ಕಾಮನೆಗಳನ್ನೂ ಪೂರ್ಣಗೊಳಿಸುವವನಾಗಿ, ಕೆಂಪುಬಣ್ಣದ ಕಣ್ಣುಳ್ಳವನಾಗಿ ಹಾಗೂ ಸರ್ವಜ್ಞನಾಗಿ ಇರುವನು ॥

ಬ್ರಹ್ಮಣಶ್ಚೀತನ್ಯಸಿ ಬ್ರಹ್ಮಣ ಆಣೀಸ್ಥೋ ಬ್ರಹ್ಮಣ ಆವಪನಮಸಿ
ಧಾರಿತೇಯಂ ಪೃಥಿವೀ ಬ್ರಹ್ಮಣಾ ಮಹೀ ಧಾರಿತ ವೌನೇನ
ಮಹದಂತರಿಕ್ಷಂ ದಿವಂದಾಧಾರ ಪೃಥಿವೀಗ್ಂ ಸ ದೇವಾಂ ಯುದಹಂ
ವೇದ ತದಹಂ ಧಾರಯಾಣಿ ಮಾಮದ್ವೇದೋಧಿ ವಿಸ್ರಸತ್ ॥

ಎಲೈ ವೇದ(ಶ್ರುತಿ)ವೇ, ನೀನು ಪರಮಾತ್ಮನ ವಿಚಾರವನ್ನು ಮಾಡಲು ಹಾಗೂ ತಿಳಿಯಲು ಅತ್ಯುತ್ತಮ ಸಾಧನವಾಗಿ ನಮಗೆ ಅದನ್ನು ತಿಳಿಸುತ್ತಿರುವೆ । ಎಲೈ ನನ್ನ ಎರಡು ಕಿವಿಗಳೇ,

ನೀವಿಬ್ಬರು ವೇದದ ಅರ್ಥವನ್ನೂ ತಿಳಿಯುವವರಾಗಿದ್ದೀರಿ, ಆದ್ದರಿಂದ ನೀವು ಈ ನಿರಂತರವಾಗಿ ವೇದಾರ್ಥವನ್ನು ತಿಳಿಯಿರಿ । ಎಲ್ಲೆ ಮನಸ್ಸೇ ನೀನು ವೇದದ ಧಾರಣಸ್ಥಾನವಾಗಿರುವೆ, ಈ ಬೃಹತ್ತಾದ ಪೃಥಿವಿಯು ವೇದವು ತಿಳಿಸುವ ಪರಮಾತ್ಮನಿಂದ ಧರಿಸಲ್ಪಟ್ಟಿದೆ ಹಾಗೆಯೇ ಈ ಬೃಹತ್ತಾದ ಅಂತರಿಕ್ಷವೂ ಕೂಡ ಪರಮಾತ್ಮನಿಂದ ಧರಿಸಲ್ಪಟ್ಟಿದೆ । ಈ ವಿಸ್ತೀರ್ಣವಾದ ಜಗತ್ತನ್ನು(ಸಕಲ ಲೋಕಗಳನ್ನೂ) ದೇವತೆಗಳ ಸಹಿತವಾಗಿ ಪರಮಾತ್ಮನು ಧರಿಸಿದ್ದಾನೆ । ಯಾವ ಪರಮಾತ್ಮನ ವಿಚಾರವಿದೆಯೋ ಅದನ್ನು ತಿಳಿಸುವ ವೇದವಾಕ್ಯಗಳನ್ನು ಯಜಮಾನನಾದ ನಾನು ತಿಳಿಯುವಂತಾಗಲಿ । ಅದು ನನ್ನ ಮನಸ್ಸಿನಲ್ಲಿ ಸರ್ವದಾ ಧರಿಸಲ್ಪಡಲಿ(ಸದಾ ಪರಮಾತ್ಮನ ವಿಚಾರವನ್ನು ಮಾಡುವಂತಾಗಲಿ) । ಇಂತಹಾ ವೇದವು ನನ್ನಿಂದ ಮತ್ತು ನನ್ನ ವಂಶಜರಿಂದ ಯಾವಾಗಲೂ ಬಿಟ್ಟುಹೋಗದಂತಿರಲಿ ॥

ಮೇಧಾಮನೀಶೇ ಮಾ ವಿಶತಾಗ್ಂ ಸಮೀಚೀ ಭೂತಸ್ಯ ಭವ್ಯಸ್ಯಾವರುದ್ಧ್ಯೈ
ಸರ್ವಮಾಯುರಯಾಣಿ ಸರ್ವಮಾಯುರಯಾಣಿ ॥

ಮೇಧಾ ಎಂದರೆ ಧಾರಣಶಕ್ತಿಯು । ಮನೀಷಾ ಎಂದರೆ ತಿಳಿಯುವ ಶಕ್ತಿಯು । ಅವೆರಡೂ ಯಜಮಾನನಾದ ನನ್ನಲ್ಲಿ ಯಾವಾಗಲೂ ಇರುವಂತಾಗಲಿ । ಏಕೆಂದರೆ, ಹಿಂದೆ ಅಧ್ಯಯನ ಮಾಡಿದ ಹಾಗೂ ಮುಂದೆ ಅಧ್ಯಯನ ಮಾಡುವ ಸಾಮರ್ಥ್ಯವು ಹಾಗೂ ಯೋಗ್ಯತೆಯು ನನಗೆ ಬರುವುದಕ್ಕಾಗಿ(ಪ್ರಾಪ್ತವಾಗುವುದಕ್ಕಾಗಿ) । ಇದಕ್ಕಾಗಿಯೇ ನಾನು ನೂರುವರ್ಷದ ಪೂರ್ಣಾಯಸ್ಸನ್ನು ಪಡೆಯುವಂತಾಗಲಿ ॥

ಆಭಿರ್ಗೀರ್ಭಿರ್ಯದತೋ ನ ಊನಮಾಪ್ಯಾಯಯ ಹರಿವೋವರ್ಧಮಾನಃ ।
ಯದಾ ಸ್ತೋತೃಭ್ಯೋ ಮಹಿ ಗೋತ್ರಾ ರುಜಾಸಿ ಭೂಯಿಷ್ಠಭಾಜೋ
ಅಧತೇಸ್ಯಾಮ ॥

ಎಲ್ಲೆ ಹರಿಯೆಂಬ ಕುದುರೆಯುಳ್ಳ ಇಂದ್ರನೇ, ನಮ್ಮ ಸ್ತುತಿಗಳಿಂದ ವರ್ಧಿಸುತ್ತಾ ಈ ನಮ್ಮ ಕರ್ಮದಲ್ಲಿರುವ ನ್ಯೂನತೆಗಳನ್ನು ನಮಗಾಗಿ ಹೋಗಲಾಡಿಸಿ, ಕರ್ಮಸಮೃದ್ಧಿಯಾಗುವಂತೆ ಮಾಡು । ಯಾವಾಗ ಸ್ತೋತ್ರದ ಅನುಗ್ರಹಕ್ಕಾಗಿ

ದೊಡ್ಡವೋಡಗಳನ್ನು ಭೇದಿಸಿ, ಮಳೆಯನ್ನು ಸುರಿಸುತ್ತೀಯೋ ಆಗ ನಾವು ನಿನ್ನ ಅನುಗ್ರಹದಿಂದ ತುಂಬಾ ಸಂಪತ್ತುಳ್ಳವರಾಗುತ್ತೇವೆ ॥

ಬ್ರಹ್ಮಪ್ರಾವಾದಿಷ್ಮ ತನ್ನೋ ಮಾಹಾಸೀತ್ ॥ ಓಂ ಶಾಂತಿಶ್ಶಾಂತಿಶ್ಶಾಂತಿಃ ॥

ಪರಮಾತ್ಮನನ್ನು ಉಪದೇಶಿಸುವ ಮಂತ್ರಸಮೂಹಗಳಾದ ವೇದಗಳೇ, ನಾವು ನಿನ್ನನ್ನು ಅರ್ಥಸಹಿತವಾಗಿ ಹಾಗೂ ಅನುಷ್ಠಾನ ಸಹಿತವಾಗಿ ಅಧ್ಯಯನವನ್ನು ಮಾಡುತ್ತಿರುವೆವು। ಆದ್ದರಿಂದ ಆ ಬ್ರಹ್ಮತತ್ವವನ್ನು ತಿಳಿಸುವ ವೇದವಾಕ್ಯಗಳು ಯಾವಾಗಲೂ ನಮ್ಮನ್ನು ಬಿಟ್ಟುಹೋಗದೇ ಇರಲಿ। ಓಂ ಕಾರದಿಂದ ಹೇಳಲ್ಪಡುವ ಪರಮಾತ್ಮನೇ, ಆಧ್ಯಾತ್ಮಿಕ ಜ್ವರಾದಿ ಕಷ್ಟಗಳಿಂದ ಹಾಗೂ ಆಧಿದೈವಿಕವಾದ ಅನಾವೃಷ್ಟಿ – ಭೂಕಂಪ ಮುಂತಾದವುಗಳಿಂದ ಹಾಗೂ ಯಕ್ಷರಾಕ್ಷಸಾದಿ ಬಾಧೆಗಳಿಂದ ಹಾಗೂ ಆಧಿಭೌತಿಕವಾದ ಕಳ್ಳರು, ದುಷ್ಟಜಂತುಗಳ ಬಾಧೆಗಳನ್ನು ಪರಿಹರಿಸಿ ನಮ್ಮನ್ನು ರಕ್ಷಿಸು ॥

....*********....

೩ ಸಮಾವರ್ತನಂ – ಕಪರ್ದಿಕಾರಿಕಾ

ಅಜಿನಂ ಮೇಖಲಾ ದಂಡೋ ಭೈಕ್ಷಚರ್ಯಾ ವ್ರತಾನಿ ಚ ।
ನಿವರ್ತಂತೇ ದ್ವಿಜಾತೀನಾಂ ಪುನಃ ಸಂಸ್ಕಾರ ಕರ್ಮಣಿ ॥

ಅಜಿನ, ಮೇಖಲ, ದಂಡ, ಭಿಕ್ಷಾಟನೆ । ಈ ವ್ರತಗಳು ಬ್ರಾಹ್ಮಣರಿಗೆ, ಮತ್ತೆ ಮುಂದಿನ ಸಂಸ್ಕಾರ ಮಾಡಿದಾಗ ಹೊರಟು ಹೋಗುತ್ತವೆ ॥

ಮೇಖಲಾಮಜಿನಂ ದಂಡಂ ಉಪವೀತಂ ಕಮಂಡಲುಂ ।
ಅಪ್ಸುಪ್ರಾಶ್ಯೇತ್ ವಿನಷ್ಟಾನಿ ಗೃಹೀತ್ವಾನ್ಯಾನಿಮಂತ್ರತಃ ॥

ಹಾಳಾದ (ಹಳೆಯ) ಮೇಖಲ, ಅಜಿನ, ದಂಡ, ಉಪವೀತ, ಕಮಂಡಲುಗಳನ್ನು । ನೀರಿನಲ್ಲಿ ಹಾಕಬೇಕು, ಮಂತ್ರಪೂರ್ವಕವಾಗಿ ಹೊಸದನ್ನು ಸ್ವೀಕರಿಸಿದ ಮೇಲೆ ॥

ಸೂತ್ರೇ ವಸ್ತ್ರೇ ಮಣಿಯುಗ ಸಮಿತ್ ಸ್ರಕ್ ಸುಗಂಧಪ್ರವರ್ತೌ ।
ಶೀತೋಷ್ಣಾಂಬು ಕ್ಷುರ ಕಟ ಯುವಚ್ಛತ್ರ ದಂಡಾಜಿನಾನಿ ॥

ಸೂತ್ರ(ಉಪವೀತ), ವಸ್ತ್ರ, ೨ ಮಣಿ, ಸಮಿತ್, ಮಾಲೆ, ಸುಗಂಧವನ್ನು ಸೂಸುವ ವಸ್ತುಗಳು । ತಣ್ಣನೆ ಮತ್ತು ಬಿಸಿ ನೀರು, ಕತ್ತಿ, ಆಸನ, ಗೋಧಿ, ಛತ್ರಿ, ದಂಡ, ಅಜಿನಗಳು ॥

ಆದಶೋರ್ಪಾನ ದ್ವಯು ಕುಶ ಶಕೃತ್ ಸ್ನಾನ ಚೂರ್ಣ ಉದಪಾತ್ರವಮ್ ।
ಸ್ನಾಸ್ಯನ್ ಯುಂಜಾತ್ ಸಕೃದಿಹ ನರಃ ಕಾಷ್ಮವೌದುಂಬರಂ ಚ ॥

ಕನ್ನಡಿ, ಚಪ್ಪಲಿ, ದರ್ಭೆ, ಎತ್ತಿನ ಸಗಣಿ, ಸ್ನಾನದಲ್ಲಿ ಉಪಯೋಗಿಸುವ ಚೂರ್ಣ(ಪುಡಿ), ನೀರಿನ ಪಾತ್ರೆ । ಸ್ನಾತಕನು ೫ವುಗಳನ್ನು ಹೊಂದಿಸಿಕೊಳ್ಳಬೇಕು ಹಾಗೂ ಔದುಂಬರ ಮರದ ೧ ಸಮಿತ್ತನ್ನು ಹೊಂದಿರಬೇಕು ॥

ಸ್ನಾತಕಾಯು ಸಕೃನ್ಮಧುಪರ್ಕೋ ಗಾರ್ಹ್ಯಕಃ ಶ್ರುತಿ ಚೋದಿತ ಏವ ।
ಸ್ನಾನ ಆಚರಿತೇದಿನ ಆಗತೇ ತಸ್ಯ ನಕ್ತಂ ಅಥಾಪ್ಯಯಮಿಷ್ಯತೇ ॥

ಸ್ನಾತಕನಿಗೆ ೧ ಸಲ ಮಧುಪರ್ಕಮಾಡಬೇಕು, ಆ ಸ್ನಾತಕವಾದ ದಿನ ಅವನು ಪುನಃ ಬಂದರೆ ಮಾತ್ರ ಅವನಿಗೆ ಮತ್ತೊಮ್ಮೆ ಮಧುಪರ್ಕ ಎಂಬುದು ಶ್ರುತಿ ವಚನ। ಅವನಿಗೆ ಆ ರಾತ್ರಿ ಅಲ್ಲಿಯೇ ವಾಸವು ಎಂದು ಹೇಳಲ್ಪಟ್ಟಿದೆ ॥

ಅನ್ಯತ್ರ – ಅಥ ಶಿಷ್ಯಃ ಸಮಾವತೋ೯ ನಾಮ ಉಪಾಂಶು ಗುರೋಃ ವದೇತ್ । ಉಚ್ಚೈರೂರ್ಧ್ವಂ ವದೇತ್ ಸಾಕಂ ಇದಂ ಅಸ್ಯೇಷ್ಟಮಾಶ್ರಮಮ್ । ಹೇ, ದೇವದತ್ತ ಗಾರ್ಹಸ್ಥ್ಯಂ ವತ್ಸ್ಯಾವೋ ಭೋ ಇತಿ ವದ ॥

ಇನ್ನೊಂದು ಕಡೆ – ಸಮಾವರ್ತನೆ ಆದ ಶಿಷ್ಯನು ತನ್ನ ಗುರುವಿನ ಹೆಸರನ್ನು ಗುರುಗಳು ಇದ್ದಾಗ ಮೆಲ್ಲಗೆ ಹೇಳಬೇಕು। ಆಮೇಲೆ ಸ್ನಾತಕವಾದವನು ತನಗೆ ಇಷ್ಟವಾದ ಆಶ್ರಮವನ್ನು ಜೋರಾಗಿ ಹೇಳಿ ಸ್ವೀಕರಿಸಬಹುದು । ಹೇಗೆಂದರೆ, 'ಎಲೈ ದೇವದತ್ತನೇ, ನಾವು ಗೃಹಸ್ಥಾಶ್ರಮದಲ್ಲಿ ವಾಸಮಾಡೋಣ ಎಂದು ಹೇಳು', ಈ ರೀತಿಯಾಗಿ ತನಗೆ ಇಷ್ಟವಾದ ಆಶ್ರಮವನ್ನು ಸ್ವೀಕರಿಸಬಹುದು ॥

ಸಮಾವರ್ತನಂ – ಆಪಸ್ತಂಬ ಗೃಹ್ಯಸೂತ್ರಂ

೧. ವೇದಮಧೀತ್ಯ ಸ್ನಾಸ್ಯನ್ ಪ್ರಾಗುದಯಾದ್ವ್ರಜಂ ಪ್ರವಿಷ್ಯಾಂತಲೋ೯ಮ್ನಾ ಚರ್ಮಣಾ ದ್ವಾರಮುಪಿಧಾಯಾಸ್ತೇ ॥

ವೇದವನ್ನು ಅಧ್ಯಯನ ಮಾಡಿ ಸ್ನಾನವೆಂಬ ಕರ್ಮವನ್ನು ಮಾಡುತ್ತಾ ಸೂರ್ಯೋದಯಕ್ಕೆ ಮೊದಲು ಗೋಶಾಲೆ ಪ್ರವೇಶಿಸಿ, ಕೂದಲುಗಳು ಒಳಗೆ ಬರುವಹಾಗೆ ಇರುವ ಜಿಂಕೆ ಚರ್ಮವನ್ನು ಗೋಶಾಲೆಯ ಬಾಗಿಲಮೇಲೆ ಹಾಕಿ, ಬಾಗಿಲನ್ನು ಮುಚ್ಚಿ ಅಲ್ಲೇ ಇರಬೇಕು ॥

೨. ನೈನಂ ಏತದಹರಾದಿತ್ಯೋಭಿತಪೇತ್ ॥

• ಇವನನ್ನು ಆ ಹಗಲಿನಲ್ಲಿ ಸೂರ್ಯನು ಸುಡಬಾರದು ॥

೩. ಮಧ್ಯಂದಿನೇ ಅಗ್ನೇರುಪಸಮಾಧಾನಾದ್ಯಾಜ್ಯಭಾಗಾಂತೇ ಪಾಲಾಶೀಂ ಸಮಿಧಂ ಉತ್ತರಯಾಧಾಯಾಪರೇಣಾಗ್ನಿಂ ಕಟ ಏರಕಾಯಾಂ ವೋಪವಿಷ್ಯೋತ್ತರಯಾ ಕ್ಪುರಮುಭಿಮಂತ್ರ್ಯೋತ್ತರೇಣ ಯಜುಷಾ ವಪ್ತ್ರೇ ಪ್ರದಾಯಾಪಾಗ್ಂ ಸಂಸರ್ಜನಾದ್ಯಾಕೇಶ ನಿಧಾನಾತ್ ಸಮಾನಮ್ ॥

ಮಧ್ಯಾಹ್ನದಲ್ಲಿ ಅಗ್ನಿಪ್ರತಿಷ್ಠೆಯಿಂದ ಆರಂಭಿಸಿ ಆಜ್ಯಭಾಗಾಂತದವರೆಗೆ ಪ್ರಯೋಗವನ್ನು ಮಾಡಿ, ಪಾಲಾಶ ಸಮಿತ್ತನ್ನು ಇಮಗ್ಂ ಸ್ತೋಮಂ ಮಂತ್ರದಿಂದ ಹಾಕಬೇಕು, ಅಗ್ನಿಯ ಮುಂದೆ ಚಾಪೆ ಅಥವಾ ನೊಜೆಹುಲ್ಲಿನ ಮೇಲೆ ಕುಳಿತು ಮುಂದಿನ ತ್ರ್ಯಾಯುಷಂ ೨ ಮಂತ್ರದಿಂದ ಕತ್ತಿಯನ್ನು ಅಭಿಮಂತ್ರಿಸಿ ಮುಂದಿನ ಶಿವೋ ನಾಮಾಸಿ ಮಂತ್ರದಿಂದ ವಪನ ಮಾಡುವವನಿಗೆ ಕತ್ತಿಯನ್ನು ಕೊಟ್ಟು, ನೀರನ್ನು ತಲೆಗೆ ಹಾಕುವುದರಿಂದ ಹಿಡಿದು ಕೇಶವಪನಾಂತದವರೆಗೆ ಉಪನಯನದಂತೆ ಮಾಡುವುದು ॥

೪. ಜಘನಾರ್ಧೇ ವ್ರಜಸ್ಯೋಪವಿಷ್ಯ ವಿಸ್ರಸ್ಯ ಮೇಖಲಾಂ ಬ್ರಹ್ಮಚಾರಿಣೇ ಪ್ರಯುಚ್ಛತಿ ॥

ಗೋ ಶಾಲೆಯ ಜಗಲಿಯ ಹಿಂದಿನ ತುದಿಯಲ್ಲಿ ಕುಳಿತು ಮೇಖಲೆ ತೆಗೆದು ಬ್ರಹ್ಮಚಾರಿಗೆ ಕೊಡಬೇಕು ॥

೫. ತಾಂ ಸ ಉತ್ತರೇಣ ಯಜುಷೋದುಂಬರ ಮೂಲೇ ದರ್ಭಸ್ತಂಬೇ ವೋಪಗೂಹತಿ ॥

ಆ ಮೇಖಲೆಯನ್ನು ಬ್ರಹ್ಮಚಾರಿಯು, ಇದಮಹಂ ಯಜ್ಞಶರ್ಮಣಃ ....ಗೋತ್ರಸ್ಯ ಪಾಪ್ಮಾನಮುಪಗೂಹಾಮಿ ಉತ್ತರೋ ....ಶರ್ಮಾ ದ್ವಿಷದ್ಭ್ಯಃ.... ಎಂಬ ಮಂತ್ರದಿಂದ ಔದುಂಬರ ಮರದ ಬುಡದಲ್ಲೋ ದರ್ಭೆಗಳ ಸಮೂಹದಲ್ಲಿಯೋ, ಕಾಣದಂತೆ ಹಾಕುತ್ತಾನೆ ॥

೬. ಏವಂ ವಿಹಿತಾಭಿರೇವಾದ್ಭಿಃ ಉತ್ತರಾಭಿಷ್ಷಡ್ಭಿಃ ಸ್ನಾತ್ವೋತ್ತರಂವೋ ದುಂಬರೇಣ ದತೋಧಾವತೇ ॥

ಸುಮ್ಮನೆ ಸೇರಿಸಿದ ಶೀತ ಮತ್ತು ಉಷ್ಣಗಳಿಂದ ಕೂಡಿದ ನೀರಿನಿಂದ ಮುಂದಿನ ಆಪೋಹಿಷ್ಠಾ... ಹಿರಣ್ಯವರ್ಣಾದಿ ೬ ಮಂತ್ರಗಳಿಂದ ಸ್ನಾನ ಮಾಡುತ್ತಾನೆ, ಅನ್ನಾದ್ಯಾಯ ವ್ಯೂಹಧ್ವಂ ಮಂತ್ರದಿಂದ ಹಲ್ಲನ್ನು ಉಜ್ಜುತ್ತಾನೆ ॥

೭. ಸ್ನಾನೀಯೋಚ್ಛಾದಿತಃ ಸ್ನಾತಃ ॥

ಸ್ನಾನ ಮಾಡುತ್ತಾ ಸ್ನಾನದಲ್ಲಿ ಮೈತಿಕ್ಕಿಕೊಳ್ಳುವ ನೆಲ್ಲಿಕಾಯಿಯ ಪುಡಿಯೇ ಮುಂತಾದ ವಸ್ತುಗಳಿಂದ ದೇಹವನ್ನು ತಿಕ್ಕಿಕೊಂಡು ಸ್ನಾನ ಮಾಡಬೇಕು ॥

೮. ಉತ್ತರೇಣ ಯಜುಷಾऽಹತಂ ಅಂತರಂ ವಾಸಃ ಪರಿಧಾಯು ಸಾರ್ವ ಸುರಭಿಣಾ ಚಂದನೇನೋತ್ತರೈ ರ್ದೇವತಾಭ್ಯಃ ಪ್ರದಾಯೋತ್ತರಯಾನುಲಿಪ್ಯ ಮಣಿಂ ಸೌವರ್ಣಸೋಪಧಾನಂ ಸೂತ್ರೋತ ಮುತ್ತರಯೋದಪಾತ್ರೇ ತ್ರಿಃ ಪ್ರದಕ್ಷಿಣಂ ಪರಿಪ್ಲಾವ್ಯೋತ್ತರಯಾ ಗ್ರೀವಾಸ್ವಾಬಧ್ಯೈವಮೇವ ಬಾದರಂ ಮಣಿಂ ಮಂತ್ರವರ್ಜಂ ಸವ್ಯೇ ಪಾಣಾವಾಬಧ್ಯಾಹತಮುತ್ತರಂ ವಾಸೋ ರೇವತೀಸ್ತ್ವೇತಿ ಸಮಾನಮ್ ॥

ಮುಂದಿನ, ಸೋಮಸ್ಯ ತನೂರಸಿ..., ಮಂತ್ರದಿಂದ ಪೊಸದಾದ ಒಳಗಿನ ಉಡುವ ಬಟ್ಟೆಯನ್ನು ಉಡಬೇಕು – ಮುಂದಿನ, ನಮೋ ಗ್ರಹಾಯ ಚ, ಎಂಬ ೩ ಮಂತ್ರಗಳಿಂದ ದೇವತೆಗಳಿಗೆ ಸುಗಂಧಯುಕ್ತವಾದಂತಹ ಚಂದನ ಮುಂತಾದ ದ್ರವ್ಯಗಳನ್ನು ಕೊಟ್ಟು – ನಂತರ ಅಪ್ಸರಸ್ಸುಯೋ ಗಂಧಃ, ಮಂತ್ರದಿಂದ ತಾನು ಲೇಪನ ಮಾಡಿಕೊಳ್ಳಬೇಕು – ನಂತರ ಸುವರ್ಣಯುಕ್ತವಾದಂತಹ ಆಭರಣಗಳಿಂದ ೨ ಕಡೆಯಿಂದ ಹಿಡಿಯಲ್ಪಟ್ಟಂತಹ ದಾರಕ್ಕೆ ಪೋಣಿಸಿದ ಮಣಿಯನ್ನು ಮುಂದಿನ, ಇಯಮೋಷಧೇ, ಮಂತ್ರದಿಂದ ನೀರಿನ ಪಾತ್ರೆಯಲ್ಲಿ ಪ್ರದಕ್ಷಿಣವಾಗಿ ಸಂತತವಾಗಿ ೩ ಸಲ ಸುತ್ತಬೇಕು – ನಂತರ ಆವಾಶೋಸ್ಯುರೋಮೇ..., ಮಂತ್ರವನ್ನು ಪುಣ್ಯಾಯ ಎಂಬವರೆಗೆ ಹೇಳಿ ಆ ಮಣಿಯನ್ನು ತನ್ನ ಕಂಠಕ್ಕೆ ಕಟ್ಟಿಕೊಳ್ಳಬೇಕು, ದಾರಕ್ಕೆ ಕಟ್ಟಿರುವಂತಹ ಬಾದರಬೀಜದಿಂದ ಕೂಡಿದ ಮಣಿಯನ್ನು ಅಮಂತ್ರಕವಾಗಿ ೩ ಸಲ ಉದಪಾತ್ರೆಯಲ್ಲಿ ಪ್ರದಕ್ಷಿಣೆಯಾಗಿ ಸುತ್ತಿ ಎಡಕೈಗೆ ಕಟ್ಟಿಕೊಳ್ಳಬೇಕು - ರೇವತೀಸ್ತ್ವಾ, ೨ ಮಂತ್ರಗಳಿಂದ ಹೊದೆಯುವ ಬಟ್ಟೆಯನ್ನು ಅಭಿಮಂತ್ರಿಸಿ – ಯಾ ಆಕೃಂತನ್, ೩ ಮಂತ್ರಗಳಿಂದ ಹೊದ್ದು–ಪರೀದಂ ವಾಸಃ, ಮಂತ್ರದಿಂದ ಹೊದ್ದ ಬಟ್ಟೆಯನ್ನು ಅನುಮಂತ್ರಣೆ ಮಾಡಬೇಕು ॥

೯. ತಸ್ಯ ದಶಾಯಾಂ ಪ್ರವರ್ತ್ಯೌ ಪ್ರಬಧ್ಯ ದರ್ವ್ಯಾಮಾದಾಯು ಆಜ್ಯೇನ ಆಭ್ಯಾನಾಯನ್ನುತ್ತರಾ ಆಹುತೀರ್ಹುತ್ವಾ ಜಯಾದಿ ಪ್ರತಿಪದ್ಯತೇ ॥

ಆ ಹೊದ್ದ ಬಟ್ಟೆಯ ಅಂಚಿನಲ್ಲಿ ಚಿನ್ನದ ೨ ಕುಂಡಲಗಳನ್ನು ಕಟ್ಟಿಕೊಂಡು ಆ ೨ ಕುಂಡಲಗಳನ್ನು ದರ್ವಿಯ ಅಗ್ರದಲ್ಲಿ ಇಟ್ಟು ಆಜ್ಯದಿಂದ ಅದನ್ನು ನೆನೆಸುತ್ತಾ ತಾನು ಎಡಕ್ಕೈಯಿಂದ ಆ ೨ ಕುಂಡಲಗಳ ಮೇಲೆ ಆಜ್ಯವನ್ನು ಹಾಕಿಕೊಂಡು ಮುಂದಿನ ಆಯುಷ್ಯಂ ವರ್ಚಸ್ಯಂ, ಎಂಬ ೮ ಮಂತ್ರಗಳಿಂದ ಪ್ರಧಾನ ಆಹುತಿಗಳನ್ನು ಹೋಮಿಸಿ – ನಂತರ ದರ್ವಿಯ ಅಗ್ರದಿಂದ ೨ ಕುಂಡಲಗಳನ್ನು ತೆಗೆದು ಜಯಾದಿಗಳನ್ನು ಮಾಡಬೇಕು ॥

೧೦. ಪರಿಷೇಚನಾಂತಂ ಕೃತ್ವಾ ಏತಾಭಿರೇವ ದಕ್ಷಿಣೇ ಕರ್ಣ ಆಬಧ್ನೀತೈತಾಭಿಸ್ಸವ್ಯೇ ॥

ಪರಿಷೇಚನಾಂತದವರೆಗೆ ಪ್ರಯೋಗವನ್ನು ಮಾಡಿ ಆಯುಷ್ಯಂ, ಎಂಬ ೮ ಮಂತ್ರಗಳಿಂದ ಆ ೨ ಕುಂಡಲಗಳನ್ನು ತನ್ನ ಕಿವಿಗಳಿಗೆ ಹಾಕಿಕೊಳ್ಳಬೇಕು, (ಪ್ರತಿಯೊಂದು ಕುಂಡಲಕ್ಕೂ ೮ ಮಂತ್ರಗಳನ್ನು ಹೇಳಬೇಕು, ಮೊದಲು ಬಲಕಿವಿಗೆ) ॥

೧೧. ಏವಮುತ್ತರೈರ್ಯಥಾಲಿಂಗಂ ಸ್ರಜಶ್ಶಿರಸ್ಯಾಂಜನಮಾದರ್ಶಾವೇಕ್ಷಣಂ ಉಪಾನಾಹೌ ಛತ್ರಂ ದಂಡಮಿತಿ ॥

ಮುಂದಿನ, ಶುಭಿಕೇಶಿರ, ಮಂತ್ರದಿಂದ ತಲೆಗೆ ಮಾಲೆಯನ್ನು ಮುಡಿಸಬೇಕು – ಯದಾಂಜನಂ, ಮಂತ್ರವನ್ನು ಹೇಳಿ ಕಾಡಿಗೆಯನ್ನು ಒಟ್ಟಿಗೆ ೨ ಕಣ್ಣುಗಳಿಗೆ ಹಚ್ಚಬೇಕು – ಯನ್ಮೇವರ್ಚಃ..., ಮಂತ್ರದಿಂದ ಕನ್ನಡಿಯನ್ನು ಅಲ್ಲಿರುವ ಬ್ರಾಹ್ಮಣರಿಗೆ ತೋರಿಸಿ ನಂತರ ತಾನು ನೋಡಿಕೊಳ್ಳಬೇಕು – ಪ್ರತಿಷ್ಠೇಸ್ಥೋ, ಮಂತ್ರದಿಂದ ಪಾದರಕ್ಷೆಗಳನ್ನು ಹಾಕಿಕೊಳ್ಳಬೇಕು – ಛತ್ರಿಯನ್ನು ತೆಗೆದುಕೊಂಡು ಪ್ರಜಾಪತೇಃ, ಮಂತ್ರದಿಂದ ತನಗೆ ಹಿಡಿದುಕೊಳ್ಳಬೇಕು – ಬಿದಿರಿನ ಕೋಲನ್ನು ದೇವಸ್ಯತ್ವಾ, ಮಂತ್ರದಿಂದ ಹಿಡಿದುಕೊಳ್ಳುತ್ತಾನೆ ॥

೧೨. ವಾಚಂ ಯಚ್ಛತ್ಯಾ ನಕ್ಷತ್ರೇಭ್ಯಃ ॥

ನಕ್ಷತ್ರಗಳು ಕಾಣುವವರೆಗೆ ಮೌನವಾಗಿರಬೇಕು ॥

೧೩. ಉದಿತೇಷು ನಕ್ಷತ್ರೇಷು ಪ್ರಾಚೀಮುದೀಚೀಂ ವಾ ದಿಶಮುಪ ನಿಷ್ಕ್ರಮ್ಯ ಉತ್ತರೇಣಾರ್ಘಪಾತ್ರೇಣ ದಿಶ ಉಪಸ್ಥಾಯೋತ್ತರೇಣ ನಕ್ಷತ್ರಾಣಿ ಚಂದ್ರಮಸಮಿತಿ ॥

ನಕ್ಷತ್ರಗಳು ಉದಯವಾದ ನಂತರ ದೇವೀಷ್ಟಪ್ರದೇಶಕ್ಕೆ, ಋಕ್ಕನ್ನು ಅರ್ಘಪಾತ್ರೆಯಲ್ಲಿ ಪೂರ್ವ ಅಥವಾ ಉತ್ತರದಿಕ್ಕಿಗೆ ಸ್ವಲ್ಪದೂರಹೋಗಿ ಮುಂದಿನ ಮಾಹಾಸ್ಮಹಿ, ಮಂತ್ರದಿಂದ ನಕ್ಷತ್ರಗಳನ್ನು ಮತ್ತು ಚಂದ್ರನನ್ನು ಉಪಸ್ಥಾನ ಮಾಡುತ್ತಾನೆ ॥

೧೪. ರಾತಿನಾ ಸಂಭಾಷ್ಯ ಯಥಾರ್ಥಂ ಗಚ್ಛತಿ ॥

ನಂತರ ಮಿತ್ರನೊಡನೆ ಧರ್ಮ ಮತ್ತು ಶಾಸ್ತ್ರಾದಿ ವಿಚಾರಗಳನ್ನು ಮಾಡಿ ತನಗೆ ಇಷ್ಟ ಬಂದ ಆಶ್ರಮಕ್ಕೆ ಹೋಗುತ್ತಾನೆ ॥

೧೫. ಆಥೈತತ್ ಅಪರಂ ತೂಷ್ಣೀಂ ಏವ ತೀರ್ಥೇಸ್ನಾತ್ವಾ ತೂಷ್ಣೀಂ ಸಮಿಧಂ ಆದಧಾತಿ ॥

ಈ ಸ್ನಾನವ್ರತವನ್ನು ಬೇರೆಯವರು ಇನ್ನೊಂದು ರೀತಿಯಲ್ಲಿಯೂ ತಿಳಿಸಿದ್ದಾರೆ, ಹೇಗೆಂದರೆ, ನದ್ಯಾದಿ ತೀರ್ಥಗಳಲ್ಲಿ ಅಮಂತ್ರಕವಾಗಿ ಸ್ನಾನ ಮಾಡಿ ಪಾಲಾಶಸಮಿತ್ತನ್ನು ಅಮಂತ್ರಕವಾಗಿ ಅಗ್ನಿಗೆ ಹಾಕಬೇಕು ॥

ಸಮಾವರ್ತನಂ – ಪ್ರಯೋಗಃ

* ವೇದಾಧ್ಯಯನದ ನಂತರ ಸ್ನಾನವ್ರತ ಮಾಡಬೇಕು । ಉದಯಕ್ಕೆ ಮುಂಚೆ ಒಂದು ಕೋಣೆಯ ಒಳಗೆ ಹೋಗಿ, ಚರ್ಮದ ಆಸನದ ಮೇಲ್ಭಾಗವು ಕೋಣೆಯ ಒಳಭಾಗಕ್ಕೆ ಬರುವಂತೆ ಕೋಣೆಯ ಬಾಗಿಲನ್ನು ಮುಚ್ಚಬೇಕು । ಈ ಹಗಲಿನಲ್ಲಿ ಸೂರ್ಯನನ್ನು ನೋಡಬಾರದು ।

ವೇದಮಧೀತ್ಯ ಸ್ನಾಸ್ಯನ್ ಪ್ರಾಗುದಯಾದ್ವ್ರಜಂ ಪ್ರವಿಷ್ಯಾಂತರ್ಗೋರ್ಮ್ನಾ ಚರ್ಮಣಾ ದ್ವಾರಮಪಿಧಾಯಾಸ್ತೇ । ನೈನಮೇತದಹರಾದಿತ್ಯೋಭಿತಪೇತ್ ॥

* ಮಧ್ಯಾಹ್ನದಲ್ಲಿ – ಆಚಮನ, ಪವಿತ್ರಧಾರಣೆ, ಆಸನವಿಧಿ, ಪ್ರಾಣಾಯಾಮ, ಘಂಟಾನಾದ, ದೀಪಪೂಜೆ, ಕಲಶಪೂಜೆಗಳನ್ನೂ ಕೂಡ ಮಾಡಿ ।

ಮಧ್ಯಂದಿನೇ, ಆಚಮನಂ, ಪವಿತ್ರಧಾರಣಂ, ಆಸನವಿಧಿಂ, ಪ್ರಾಣಾಯೋಮಂ, ಘಂಟಾನಾದಂ, ದೀಪಪೂಜಾಂ, ಕಲಶಪೂಜಾಂ ಚ ಕೃತ್ವಾ ।

* ಶುಭತಿಥೌ...ಮಮ...ಪ್ರೀತ್ಯರ್ಥವಾಗಿ ವೇದಾಧ್ಯಯನ ಮಾಡಿದ ಮೇಲೆ ಸ್ನಾನವ್ರತ ಮಾಡುತ್ತೇನೆ ಎಂದು ಸಂಕಲ್ಪಿಸಿ । ಅದರ ಅಂಗವಾಗಿ ಋತ್ವಿಗ್ವರಣವನ್ನು ಮಾಡುತ್ತೇನೆಂದು ಹೇಳಿ, ಮಾಡಿ ।

ಶುಭತಿಥೌ.....ಮಮ....ಪ್ರೀತ್ಯರ್ಥಂ, ವೇದಮಧೀತ್ಯ ಸ್ನಾಸ್ಯೇ ಇತಿ ಸಂಕಲ್ಪ್ಯ । ತದಂಗ ಋತ್ವಿಗ್ವರಣಂ ಕರಿಷ್ಯಾಮಿ, ಇತಿ ಉಕ್ತ್ವಾ, ಕೃತ್ವಾ ।

* ಮೊದಲಿಗೆ, ಮಾಡಲಿರುವ ಕರ್ಮದ ನಿರ್ವಿಘ್ನತೆಗಾಗಿ ಗಣಪತಿಪೂಜೆಯನ್ನು ಮಾಡುತ್ತೇನೆ ಎಂದು ಸಂಕಲ್ಪಿಸಿ – ಪೂಜೆಯನ್ನು ಮಾಡಿ ।

ಆದೌ, ಪ್ರಾರಿಪ್ಸಿತಸ್ಯ ಕರ್ಮಣಃ ನಿರ್ವಿಘ್ನೇನ ಪರಿಸಮಾಪ್ತ್ಯರ್ಥಂ ಗಣಪತಿ ಪೂಜಾಂ ಕರಿಷ್ಯಾಮಿ, ಇತಿ ಸಂಕಲ್ಪ್ಯ, ಪೂಜಾಂ ಕೃತ್ವಾ ।

* ಸ್ಥಳ ಹಾಗೂ ದ್ರವ್ಯಗಳ ಶುದ್ಧಿಗಾಗಿ ಪುಣ್ಯಾಹವನ್ನು ಮಾಡುತ್ತೇನೆ ಎಂದು ಸಂಕಲ್ಪಿಸಿ– ಪುಣ್ಯಾಹವನ್ನು ಮಾಡಿ ।

ಸ್ಥಲ, ದ್ರವ್ಯ ಶುದ್ಧ್ಯರ್ಥಂ ಪುಣ್ಯಾಹಂ ಕರಿಷ್ಯಾಮಿ ಇತಿ ಸಂಕಲ್ಪ್ಯ, ಪುಣ್ಯಾಹಂ ಕೃತ್ವಾ ॥

* ಸ್ನಾನವ್ರತದ ಅಂಗವಾಗಿ, ಪಾವಕ ಎಂಬ ಹೆಸರಿನ ಲೌಕಿಕಅಗ್ನಿಯ ಪ್ರತಿಷ್ಠೆಯೇ ಮೊದಲಾಗಿ ಪ್ರಯೋಗವನ್ನು ಮಾಡುವುದು ।

ಸ್ಥಂಡಿಲೋಲ್ಲೇಖನಾದಿ, 'ಪಾವಕ'ನಾಮಾನಂ ಲೌಕಿಕಾಗ್ನಿಂ ಪ್ರತಿಷ್ಠಾಪಯಾಮಿ ಇತಿ ಸಂಕಲ್ಪ್ಯ, ಕೃತ್ವಾ ।

* ಷಟ್ಪಾತ್ರಪ್ರಯೋಗಕಾಲದಲ್ಲಿ– ಈ ಕರ್ಮಕ್ಕೆ ಬೇಕಾದ, ಯಜ್ಞೋಪವೀತ, ಅರಿಶಿಣ ಯುಕ್ತವಸ್ತ್ರ, ಬಾದರಮರದ ಮಣೆ, ಪಾಲಾಶ ಸಮಿತ್, ಹಾರ, ಸುಗಂಧದ್ರವ್ಯ, ಕರ್ಣಕುಂಡಲ, ಬಿಸಿನೀರು, ತಣ್ಣೀರು, ಕತ್ತಿ, ಚಾಪೆ, ಜವೇಗೋಧಿ ಅಥವಾ ಅರಳು, ಛತ್ರಿ, ಬಿದುರಿನ ದಂಡ, ಕಾಡಿಗೆ । ಕನ್ನಡಿ, ಚಪ್ಪಲಿ, ದರ್ಭೆ, ಎತ್ತಿನ ಸಗಣಿ, ಸ್ನಾನದಲ್ಲಿ ಮೈಗೆ ತಿಕ್ಕಿಕೊಳ್ಳುವ ವಸ್ತು, ನೀರಿನಪಾತ್ರೆ, ಔದುಂಬರ ಕಡ್ಡಿ ಇವೆಲ್ಲವನ್ನೂ ಜೋಡಿಸಿಟ್ಟುಕೊಂಡು ।

ಅಗ್ನೇರುಪಸಮಾಧಾನಾದಿ, ಷಟ್ಪಾತ್ರ ಪ್ರಯೋಗೇ,

ಸೂತ್ರೇ ವಸ್ತ್ರೇ ಮಣಿಯುಗ ಸಮಿತ್ ಸ್ರಕ್ ಸುಗಂಧೌ ಪ್ರವೃತ್ತೌ
ಶೀತೋಷ್ಣಾಂಬು ಕ್ಷುರ ಕಟ ಯುವ ಛತ್ರ ದಂಡಾಂಜನಾನಿ ।
ಮಾನೋಪಾನಟ್ದ್ವಯು ಕುಶ ಶಕೃತ್ ಸ್ನಾನ ಚೂರ್ಣೋದಪಾತ್ರಂ
ಸ್ನಾಸ್ಯನ್ ಯುಂಜ್ಯಾತ್ ಸಕೃದಿಹ ನರಃ ಕಾಷ್ಠಮೌದುಂಬರಂ ಚ ॥

* (ಚಕ್ಷುಷೀಹೋಮ)ಆಜ್ಯಭಾಗಾಂತದವರೆಗೆ ಪ್ರಯೋಗ ಮಾಡಿ ।

ಆಜ್ಯಭಾಗಾಂತಂ ಕೃತ್ವಾ ।

* ಈ ಕರ್ಮದಲ್ಲಿ, ಆಜ್ಯಸಂಸ್ಕಾರವನ್ನು ಪರಿಸ್ತರಣದ ಒಳಗೆ(ಅನಿರೂಢಾಗ್ನಿ) ಮಾಡಬೇಕು. (ಕಪರ್ದಿಮುನಿಗಳ ಈ ಕೆಳಗಿನ ಆಧಾರವಾಕ್ಯದಂತೆ)

ನಿರೂಢೋ ಯೋ ವಿಭಕ್ತೋಗ್ನಿಃ ಯಃ ಪರಿಸ್ತರಣಾದ್ಬಹಿಃ ।
ಅನಿರೂಢಃ ಸ ವೈ ವಹ್ನಿಃ ಯಃ ಪರಿಸ್ತೃತ ಮಧ್ಯಗಃ ॥
ವಿವಾಹೇ ಚೌಲ ಸೀಮಂತೇ ಸ್ವಾಧ್ಯಾಯೇ ವ್ರತ ಕರ್ಮಣಿ ।
"ಸ್ನಾನ" ಗೋದಾನ ಸಂಧಾನೇ **"ಆಜ್ಯ ಸಂಸ್ಕಾರಮಂತರೇ"**॥

* ಮುಖಾಹುತಿಯು ಇಲ್ಲ ।

ಮುಖಾಹುತಿಃ ನ ।

* ಪಾಲಾಶ ಸಮಿತ್ತನ್ನು ಕೆಳಗಿನ ಮಂತ್ರದಿಂದ ಹೋಮಿಸಬೇಕು ।

ಪಾಲಾಶೀಗ್ಂ ಸಮಿಧಂ ಇಮಗ್ಂ ಸ್ತೋಮಂ, ಇತಿ ಆಧಾಯ,

ಓಂ ಇಮಂ । ಸ್ತೋಮಮ್ । ಅರ್ಹತೇ । ಜಾತವೇದಸೇ । ರಥಮಿವ ।
ಸಂಮಹೇಮ । ಮನೀಷಯಾ ॥ ಭದ್ರಾ ಹಿ ನಃ । ಪ್ರಮತಿರಸಿ । ಅಸಗ್ಂ
ಸದ್ಯಗ್ನೇ । ಸಖ್ಯೇ । ಮಾರಿಷಾಮ । ವಯಂ ತವ ॥

* ಚಾಪೆಯಲ್ಲಿ ಕುಳಿತು । ಕೆಳಗಿನ ಮಂತ್ರದಿಂದ ಕತ್ತಿಯನ್ನು ಅಭಿಮಂತ್ರಿಸಿ ।

ಕಟೀಏರಕಾಯಾಂ ವೋಪವಿಶ್ಯ । ತ್ರ್ಯಾಯುಷಮ್, ಇತಿ ಕ್ಷುರಂ ಅಭಿಮಂತ್ರ್ಯ,

ಓಂ ತ್ರ್ಯಂಬಕಂ । ಯಜಾಮಹೇ । ಸುಗಂಧಿಂ । ಪುಷ್ಟಿವರ್ಧನಂ । ಉರ್ವಾರುಕಮಿವ ಬಂಧನಾತ್ । ಮೃತ್ಯೋರ್ಮುಕ್ಷೀಯ । ಮಾಮೃತಾತ್ ॥

* ಕೆಳಗಿನ ಮಂತ್ರದಿಂದ ಕರ್ತೃವಿನ ಕೈಯಲ್ಲಿ ಕೊಡುವುದು ।

ಶಿವೋನಾಮಾಸಿ, ಇತಿ ಯಜುಷಾ ಬ್ರಾಹ್ಮಣಾಯ ದದಾತಿ,

ಓಂ ಶಿವೋ ನಾಮಾಸಿ । ಸ್ವಧಿತಿಸ್ತೇ । ಪಿತಾ ನಮಸ್ತೇ । ಅಸ್ತು । ಮಾ ಮಾಹಿಗ್ಂಸೀಃ ॥

ಭದ್ರಾಕರಣಂ(ಕ್ಷೌರಂ)

* ಕರ್ತೃವು ನೀರನ್ನು ತೆಗೆದುಕೊಳ್ಳುವುದರಿಂದ ಹಿಡಿದು ಕೂದಲನ್ನು ಕತ್ತರಿಸಿ, ಅದನ್ನು ಇಡುವ ಪರ್ಯಂತವಾಗಿ ಉಪನಯದಲ್ಲಿ ಮಾಡುವಂತೆಯೇ(ಈ ಕೆಳಗಿನಂತೆ) ಮಾಡುವುದು ।

ಸ ಬ್ರಾಹ್ಮಣಃ ಅಪಾಗ್ಂ ಸಂಸರ್ಜನಾತ್ ಆಕೇಶ ನಿಧಾನಾತ್ ಉಪನಯನವತ್ ಕುರ್ಯಾತ್ ।

* ಕುಮಾರನನ್ನು ಅಗ್ನಿಯ ಪಶ್ಚಿಮದಲ್ಲಿ ಪೂರ್ವಾಭಿಮುಖವಾಗಿ ಕೂರಿಸಿ ॥

ಅಪರೇಣಾಗ್ನಿಂ ಪ್ರಾಂಚಮುಪವೇಶ್ಯ ॥

* ಕುಮಾರನ ತಲೆಯನ್ನು ಸುಮ್ಮನೆ(ಅಮಂತ್ರಕವಾಗಿ) ಬಾಚುವುದು ॥

ತೂಷ್ಣೀಂ ಕೇಶಾನ್ ವಿನೀಯ ॥

* ಕೆಳಗಿನ ಮಂತ್ರದಿಂದ ಬಿಸಿ – ತಣ್ಣನೆಯ ನೀರನ್ನು ಸೇರಿಸುವುದು ॥

ಉಷ್ಣೇನ ವಾಯುವಿತಿ ಉಷ್ಣಾಃ ಶೀತಾಃ ಆಪ ಆನೀಯ,

ಓಂ ಉಷ್ಣೇನ । ವಾಯುವುದಕೇನ । ಇಹ್ಯದಿತಿಃ । ಕೇಶಾನ್ ವಪತು ॥

* ಕೆಳಗಿನ ಮಂತ್ರದಿಂದ ನೀರನ್ನು ಕುಮಾರನ ತಲೆಗೆ ಪ್ರೋಕ್ಷಿಸಿ ಸವರುವುದು ॥

ಆಪ ಉನ್ದಂತು ಇತಿ ಕುಮಾರಸ್ಯ ಶಿರ ಉನತ್ತಿ,

ಓಂ ಆಪ॑ ಉನ್ದಂತು । ಜ್ಯೋ॒ತೀ । ದೀರ್ಘಾ॑ಯುತ್ವಾ॑ಯ । ವರ್ಚ॑ಸೇ ॥
ಜ್ಯೋಕ್ಚ । ಸೂ॒ರ್ಯಂ । ದೃಶೇ ॥

* ೩–೩ ದರ್ಭೆಗಳೊಂದಿಗೆ ಹತ್ತಾರು ಕೂದಲುಗಳನ್ನು ಪ್ರತಿದಿಕ್ಕಿನಲ್ಲೂ ಕತ್ತರಿಸಬೇಕು ।

ತ್ರೀನ್ ತ್ರೀನ್ ದರ್ಭಾನ್ ಅಂತರ್ಧಾ॑ಯ ಪ್ರತಿದಿಶಂ ಪ್ರವಪತಿ ॥

* ಕೆಳಗಿನ ಮಂತ್ರದಿಂದ ಕುಮಾರನ ತಲೆಯ ಪೂರ್ವಭಾಗದ ಕೂದಲುಗಳನ್ನು ಕತ್ತರಿಸುತ್ತಾನೆ । ಪೂರ್ವದಿಕ್ಕಿನ ಮಂತ್ರದಲ್ಲಿ ಯಜ್ಞಶರ್ಮಾ ಎನ್ನುವಕಡೆ ಕುಮಾರನ ಹೆಸರಿನ ಮುಂದೆ 'ಶರ್ಮಾ' ಎಂಬುದನ್ನು ಸೇರಿಸಿ ಹೇಳಬೇಕು ।

ಯೇನಾವಪತ್, ಇತಿ ಪುರಸ್ತಾತ್ ವಪತಿ, ಯಜ್ಞಶರ್ಮೇತಿ ನಾಮಗ್ರಹಣಂ,

ಓಂ ಯೇನಾ॑ವಪತ್ । ಸ॒ವಿತಾ । ಕ್ಷು॒ರೇ॑ಣ । ಸೋ॒ಮ॑ಸ್ಯ । ರಾ॒ಜ್ಞಃ ।
ವರು॑ಣಸ್ಯ । ವಿ॒ದ್ವಾನ್ ॥ ತೇನ॑ ಬ್ರಹ್ಮಾಣಃ । ವ॒ಪ॒ತೇ॒ದಂ । ಅ॒ಸ್ಯಾ॒ಯು॒ಷ್ಮಾನ್ ।
ಜ॒ರ॒ದ॒ಷ್ಟಿ॒ಃ । ಯ॒ಥಾ॒ಸ॒ತ್ । ಅ॒ಯಂ..... ಶರ್ಮಾ ॥

* ವಟುವಿನ ದಕ್ಷಿಣ(ಬಲ)ಭಾಗದಲ್ಲಿ ತಾಯಿಯಾಗಲೀ, ಬ್ರಹ್ಮಚಾರಿಯಾಗಲೀ ನಿಂತುಕೊಂಡು ತಟ್ಟೆಯಲ್ಲಿ ಎತ್ತಿನ ಸಗಣಿ ಉಂಡೆಯನ್ನು ಇಟ್ಟುಕೊಂಡು ಅದರಲ್ಲಿ ಆರತಿ ನೀರನ್ನು ಹಾಕಿಕೊಂಡು, ಜವೇಗೋಧಿ ಅಥವಾ ಅರಳು ಮತ್ತು ದೂರ್ವೆಗಳನ್ನು ಹಾಕಿಕೊಂಡು ಕತ್ತರಿಸಿದ ಕೂದಲು ಮತ್ತು ದರ್ಭೆಗಳನ್ನು ಆ ತಟ್ಟೆಯಲ್ಲಿ ಹಾಕಬೇಕು । ಕೈಯನ್ನು ತೊಳೆದುಕೊಂಡು ॥

ದಕ್ಷಿಣತೋ ಮಾತಾ, ಬ್ರಹ್ಮಚಾರೀ ವಾ ಅನಡುಹೇ ಶಕೃತ್ ಪಿಂಡೇ ಽಽವಾನ್ನಿಧಾಽಽಯ ತಸ್ಮಿನ್ ಕೃತ್ತ ಕೇಶಾನ್ ಉಪಽಽಯಮ್ಯ । ಆಪ ಉಪಸ್ಪೃಶೇತ್ ॥

* ಮೇಲಿನ ಮಂತ್ರವನ್ನು ತಾಯಿ ಅಥವಾ ಬ್ರಹ್ಮಚಾರಿಯು ತಂದೆಯನ್ನು (ಕತ್ತರಿಸುವವನನ್ನು) ಕುರಿತು ಹೇಳಬೇಕು ॥

ಯತ್ ಕ್ಷುರೇಣ... ಇತಿ ವಪಂತಂ ಅನುಮಂತ್ರಯತೇ,

ಓಂ ಯತ್ ಕ್ಷುರೇಣ । ಮರ್ಚಯತಾ । ಸುಪೇಶಸಾ । ವಪ್ತ್ರಾ ವಪಸಿ ।
ಕೇಶಾನ್ ॥ ಶುಂಧಿ ಶಿರಃ । ಮಾಸ್ಯಾಯುಃ । ಪ್ರಮೋಷೀಃ ॥

* ಕೆಳಗಿನ ಮಂತ್ರದಿಂದ ಕುಮಾರನ ತಲೆಯ ದಕ್ಷಿಣಭಾಗದ ಕೂದಲುಗಳನ್ನು ದರ್ಭೆಯ ಸಹಿತವಾಗಿ ಕತ್ತರಿಸಿ ತಟ್ಟೆಯಲ್ಲಿ ಹಾಕಬೇಕು ॥

ಯೇನಪೂಷಾ... ಇತಿ ದಕ್ಷಿಣತಃ,

ಓಂ ಯೇನ ಪೂಷಾ । ಬೃಹಸ್ಪತೇಃ । ಅಗ್ನೇರಿಂದ್ರಸ್ಯ । ಚಾಯುಷೇವಪತ್ ॥
ತೇನಾಸ್ಯಾಯುಷೇ । ವಪ । ಸೌಶ್ಲೋಕ್ಯಾಯ । ಸ್ವಸ್ತ್ಯೈ ॥

* ಕೆಳಗಿನ ಮಂತ್ರದಿಂದ ಕುಮಾರನ ತಲೆಯ ಪಶ್ಚಿಮಭಾಗದ ಕೂದಲುಗಳನ್ನು ದರ್ಭೆಯ ಸಹಿತವಾಗಿ ಕತ್ತರಿಸಿ ತಟ್ಟೆಯಲ್ಲಿ ಹಾಕಬೇಕು ॥

ಯೇನ ಭೂಯಃ ಇತಿ ಪಶ್ಚಾತ್,

ಓಂ ಯೇನ ಭೂಯಃ । ಚರಾತ್ಯಯಂ । ಜ್ಯೋಕ್ಚ । ಪಶ್ಯಾತಿ । ಸೂರ್ಯಮ್ ॥
ತೇನಾಸ್ಯಾಯುಷೇ । ವಪ । ಸೌಶ್ಲೋಕ್ಯಾಯ । ಸ್ವಸ್ತ್ಯೈ ॥

* ಕೆಳಗಿನ ಮಂತ್ರದಿಂದ ಕುಮಾರನ ತಲೆಯ ಉತ್ತರಭಾಗದ ಕೂದಲುಗಳನ್ನು ದರ್ಭೆಯ ಸಹಿತವಾಗಿ ಕತ್ತರಿಸಿ ತಟ್ಟೆಯಲ್ಲಿ ಹಾಕಬೇಕು। ಇಲ್ಲಿ 'ಯಜ್ಞಶರ್ಮನ್' ಎಂಬ ಜಾಗದಲ್ಲಿ ವಟುವಿನ ಹೆಸರಿನ ಮುಂದೆ 'ಶರ್ಮನ್' ಶಬ್ದವನ್ನು ಸೇರಿಸಿ ಹೇಳುವುದು ॥

ಯೇನ ಪೂಷಾ ಇತಿ ಉತ್ತರತಃ, ಯಜ್ಞಶರ್ಮನ್ ಇತಿ ನಾಮಗ್ರಹಣಂ,

ಓಂ ಯೇನ॑ ಪೂ॒ಷಾ । ಬೃ॒ಹಸ್ಪ॑ತೇಃ । ಅ॒ಗ್ನೇರಿಂ॒ದ್ರಸ್ಯ॑ । ಚಾ॒ಯುಷೇ॑ವಪತ್ ॥
ತೇ॑ನ ತೇ । ವ॒ಪಾ॒ಮಿ । .....ಶರ್ಮನ್ । ಆ॑ಯುಷಾ । ವ॑ರ್ಚಸಾ ।
ಯು॒ಥಾ॒ ಜ್ಯೋಕ್ । ಸು॒ಮ॒ನಾ॒ ಅ॒ಸಾಃ ॥

* ವಟುವಿನ ದಕ್ಷಿಣ ಭಾಗದಲ್ಲಿ ತಾಯಿ ಅಥವಾ ಬ್ರಹ್ಮಚಾರಿಯು ಕೆಳಗಿನ ಮಂತ್ರದಿಂದ ಔದುಂಬರ ವೃಕ್ಷದ ಬುಡದಲ್ಲಾಗಲೀ ದರ್ಭೆಗಳ ಮೇಲಾಗಲೀ ರಂಗವಲ್ಲಿಯನ್ನು ಹಾಕಿ ಆ ತಟ್ಟೆಯನ್ನು ಇಡುತ್ತಾರೆ ॥

ದಕ್ಷಿಣತೋ ಮಾತಾ, ಬ್ರಹ್ಮಚಾರೀ ವಾ ಉಪ್ತ್ವಾಯ ಕೇಶಾನ್ ಇತಿ ತಾನ್ ಉದುಂಬರ ಮೂಲೇ ದರ್ಭಸ್ತಂಬೇ ವಾ ನಿದಧಾತಿ,

ಓಂ ಉ॒ಪ್ತ್ವಾ॑ಯ । ಕೇಶಾ॑ನ್ । ವ॑ರುಣಸ್ಯ । ರಾ॒ಜ್ಞಃ । ಬೃ॒ಹಸ್ಪ॑ತಿಃ ।
ಸ॒ವಿತಾ । ಸೋ॑ಮೋ॑ ಅ॒ಗ್ನಿಃ ॥ ತೇ॑ಭ್ಯಃ । ನಿ॒ಧಾ॒ನಂ । ಬ॒ಹು॒ಧಾ ।
ಅ॑ನ್ವವಿಂದನ್ । ಅ॒ಂತ॒ರಾ । ದ್ಯಾ॑ವಾಪೃ॒ಥಿವೀ । ಅ॒ಪಸ್ಸು॑ವಃ ॥

* ಕ್ಷೌರಮಾಡಿರುವ ಆ ಕತ್ತರಿಯನ್ನು ತೊಳೆದು ಇಡಬೇಕು ಅದರಿಂದ ೩ ದಿನಗಳು ಯಾವುದೇ ಕೆಲಸ ಮಾಡಬಾರದು ।

ಕ್ಷುರಂಪ್ರಕ್ಷಾಳ್ಯ ನಿದಧಾತಿ ತೇನತ್ರ್ಯಹಂ ಕರ್ಮ ನಿವೃತ್ತಿಃ ॥

* ಸ್ನಾತಕನಾಗುವವನು ತಾನು ಧರಿಸಿರುವ ಮೇಖಲೆಯನ್ನು ಬ್ರಹ್ಮಚಾರಿಗೆ ಕೊಟ್ಟಿಗೆಯ ಹಿಂದಿನ ಜಗುಲಿಯ ಮೇಲೆ ಕುಳಿತು ಬಿಚ್ಚಿ ಕೊಡಬೇಕು । ಬ್ರಹ್ಮಚಾರಿಯು, ಅದನ್ನು ಔದುಂಬರ ಮರದ ಬುಡದಲ್ಲಿಯೋ ಅಥವಾ ದರ್ಭೆಗಳಮೇಲೋ, ಕೆಳಗಿನ ಮಂತ್ರದಿಂದ, ...ಶರ್ಮಣಃ, ...ಗೋತ್ರಸ್ಯ ಪಾಪ್ಮಾನಂ ಉಪಗೂಹಾಮಿ ಉತ್ತರೋ....ಶರ್ಮಾ ದ್ವಿಷದ್ಭ್ಯಃ ಈ ಮಂತ್ರದಿಂದ ಹಾಕುತ್ತಾನೆ ।

ಜಘನಾರ್ಧೇ ವ್ರಜಸ್ಯೋಪವಿಶ್ಯ । ವಿಸ್ರಸ್ಯ ವೇಖಿಲಾಂ ಬ್ರಹ್ಮಚಾರಿಣೇ ಪ್ರಯಚ್ಛತೀ । ಸ ಬ್ರಹ್ಮಚಾರೀ ತಾನುದುಂಬರಮೂಲೇ ದರ್ಭಸ್ತಂಬೇ ವಾ ಇದಮಹಂ...,

ಓಂ ಇದಮಹಂ । .....ಶರ್ಮಣಃ । ..... ಗೋತ್ರಸ್ಯ । ಪಾಪ್ಮಾನಂ । ಉಪಗೂಹಾಮಿ । ಉತ್ತರಃ । .....ಶರ್ಮಾ । ದ್ವಿಷದ್ಭ್ಯಃ ॥ ಇತಿ ಉಪಗೂಹತಿ ।

* ಕ್ಷೌರಿಕನಿಂದ ಕ್ಷೌರವನ್ನು ಮಾಡಿಸಿಕೊಂಡು ।

ನಾಪಿತೇನ ಉಪ್ತಕೇಶಃ ।

* ಆಪೋಹಿಷ್ಠಾ, ಈ ೩ ಮಂತ್ರಗಳಿಂದ ಹಾಗೂ ಹಿರಣ್ಯವರ್ಣಾ, ಈ ೩ ಮಂತ್ರಗಳಿಂದ ಸ್ನಾನ ಮಾಡಬೇಕು ।

ಆಪೋಹಿಷ್ಠಾ ಮಯೋಭುವಃ.... ಇತಿ ಷಡ್ಭಿಃ ಸ್ನಾತ್ವಾ ।

ಓಂ ಆಪೋಹಿಷ್ಠಾ । ಮಯೋಭುವಃ । ತಾನ ಊರ್ಜೇ । ದಧಾತನ ॥ ಮಹೇರಣಾಯ । ಚಕ್ಷಸೇ ॥

ಯೋ ವಃ । ಶಿವತಮಃ । ರಸಃ । ತಸ್ಯ ಭಾಜಯತ । ಇಹ ನಃ ॥ ಉಶತೀರಿವ । ಮಾತರಃ ॥

ತಸ್ಮೈ । ಅರಂಗಮಾಮ । ವಃ । ಯಸ್ಯ ಕ್ಷಯಾಯ । ಜಿನ್ವಥ ॥ ಆಪಃ । ಜನಯಥ । ಚನಃ ॥

ಹಿರಣ್ಯವರ್ಣಾಃ । ಶುಚಯಃ । ಪಾವಕಾಃ । ಯಾಸು ಜಾತಃ । ಕಶ್ಯಪಃ ।
ಯಾಸ್ವಿಂದ್ರಃ ॥ ಅಗ್ನಿಂ ಯಾ । ಗರ್ಭಂ ದಧಿರೇ । ವಿರೂಪಾಃ । ತಾ ನಃ ।
ಆಪಃ । ಶಗ್ಮಾಸ್ಯೋನಾ । ಭವಂತು ॥

ಯಾಸಾಂ । ರಾಜಾ । ವರುಣಃ । ಯಾತಿ ಮಧ್ಯೇ । ಸತ್ಯಾನೃತೇ ।
ಅವಪಶ್ಯನ್ । ಜನಾನಾಮ್ ॥ ಮಧುಶ್ಚುತಃ । ಶುಚಯಃ । ಯಾಃ
ಪಾವಕಾಃ । ತಾನ ಆಪಃ । ಶಗ್ಮಾಸ್ಯೋನಾ । ಭವಂತು ॥

ಯಾಸಾಂ ದೇವಾ । ದಿವಿ ಕೃಣ್ವಂತಿ । ಭಕ್ಷಂ ಯಾ । ಅಂತರಿಕ್ಷೇ ।
ಬಹುಧಾ ಭವಂತಿ ॥ ಯಾಃ ಪೃಥಿವೀಂ । ಪಯಸೋಂದಂತಿ । ಶುಕ್ರಾಸ್ತಾನಃ ।
ಆಪಶ್ಯಂ । ಸ್ಯೋನಾ ಭವಂತು ॥

* ಔದುಂಬರ ಮರದ ಕಡ್ಡಿಯಿಂದ, ಕೆಳಗಿನ ಮಂತ್ರದಿಂದ ಹಲ್ಲುಗಳನ್ನು ಉಜ್ಜಬೇಕು ।

ಅನ್ನಾದ್ಯಾಯ, ಇತಿ ಉದುಂಬರೇಣ ದತೋ ಧಾವತೇ,

ಓಂ ಅನ್ನಾದ್ಯಾಯ । ವ್ಯೂಹಧ್ವಂ । ದೀರ್ಘಾಯುಃ । ಅಹಮನ್ನಾದಃ ।
ಭೂಯಾಸಮ್ ॥ ಸೋಮೋ ರಾಜಾ । ಯಮಾಗಮತ್ । ಸ ಮೇ ಮುಖಂ ।
ಪ್ರವೇಕ್ಷ್ಯತಿ । ಭಗೇನ । ಸಹವರ್ಚಸಾ ॥

* ಕೆಳಗಿನ ಮಂತ್ರದಿಂದ ವಸ್ತ್ರವನ್ನು ಗಾಳಿಯಲ್ಲಿ ಕೊಡಗಬೇಕು ।

ಅವಧೂತಂ, ಇತಿ ವಸ್ತ್ರಮವಧೂಯ,

ಓಂ ಅವಧೂತಂ । ರಕ್ಷೋವಧೂತಾಃ । ಅರಾತಯಃ ॥

* ಕೆಳಗಿನ ಮಂತ್ರದಿಂದ ವಸ್ತ್ರವನ್ನು ಸೂರ್ಯನಿಗೆ ತೋರಿಸಬೇಕು ।

ಉದುತ್ಯಂ ಇತಿ ಆದಿತ್ಯಂ ದರ್ಶಯಿತ್ವಾ,

ಓಂ ಉದುತ್ಯಂ । ಜಾತವೇದಸಂ । ದೇವಂ ವಹಂತಿ । ಕೇತವಃ ॥
ದೃಶೇ ವಿಶ್ವಾಯ । ಸೂರ್ಯಮ್ ॥

* ಕೆಳಗಿನ ಮಂತ್ರದಿಂದ ಬಟ್ಟೆಯನ್ನು ಉಡಬೇಕು ।

ಸೋಮಸ್ಯ ಇತಿ ಅಹತಂ ವಾಸಃ ಪರಿಧಾಪ್ಯ,

ಓಂ ಸೋಮಸ್ಯ ತನೂರಸಿ । ತನುವಂ ಮೇ । ಪಾಹಿ । ಸ್ವಾ ಮಾ ।
ತನೂರಾವಿಶ ॥

* ಆಚಮನ, ಪ್ರಾಣಾಯಾಮ ಮಾಡಿ । ಸಮಾವರ್ತನೆಯೆಂಬ ಸಂಸ್ಕಾರ ಸ್ವೀಕರಣದ ಯೋಗ್ಯತೆಗಾಗಿ ಎರಡನೇ ಯಜ್ಞೋಪವೀತ ಧಾರಣೆಮಾಡುತ್ತೇನೆ ಎಂದು ಸಂಕಲ್ಪಿಸಿ । ವಿಧಿಯಿಂದ ಯಜ್ಞೋಪವೀತವನ್ನು ಹಾಕಿಕೊಂಡು ಆಚಮನವನ್ನು ಮಾಡಿ ।

ಆಚಮ್ಯ, ಪ್ರಾಣಾನಾಯಮ್ಯ । ಸಮಾವರ್ತನ ಸಂಸ್ಕಾರ ಸ್ವೀಕಾರ ಯೋಗ್ಯತಾ ಸಿದ್ಧ್ಯರ್ಥಂ, ದ್ವಿತೀಯ ಯಜ್ಞೋಪವೀತ ಧಾರಣಂ ಕರಿಷ್ಯೇ ಇತಿ ಸಂಕಲ್ಪ್ಯ। ವಿಧಿನಾ ಯಜ್ಞೋಪವೀತಂ ಧೃತ್ವಾ, ಆಚಮ್ಯ ।

* ಚಂದನವನ್ನು ನಮೋ ಗ್ರಹಾಯ ಚ, ಮಂತ್ರದಿಂದ ದೇವತೆಗಳಿಗೆ ೩ ಸಲ ಕೊಡಬೇಕು ।

ಸಾರ್ವಸುರಭಿಣಾ ಚಂದನೇನ, ನಮೋಗ್ರಹಾಯ ಚ ಇತಿ ದೇವತಾಭ್ಯಃ
ತ್ರಿಃ ಪ್ರದಾಯ,

ಓಂ ನಮೋ ಗ್ರಹಾಯ ಚ । ಅಭಿಗ್ರಹಾಯ ಚ । ನಮಃ । ಶಾಕಜಂಜಭಾಭ್ಯಾಂ ।
ನಮಸ್ತಾಭ್ಯಃ । ದೇವತಾಭ್ಯಃ । ಯಾ ಅಭಿಗ್ರಾಹಿಣೀಃ ॥

* ನಂತರ ಬ್ರಾಹ್ಮಣರಿಗೂ ಸ್ವಲ್ಪ ಸ್ವಲ್ಪ ಕೊಡಬೇಕು ।

ಬ್ರಾಹ್ಮಣಾನಾಂ ಕಿಂಚಿತ್ ಕಿಂಚಿತ್ ದತ್ವಾ ।

* ಅಪ್ಸರಸ್ಸು ಯೋ ಮಂತ್ರದಿಂದ ತಾನು ಹಣೆಗೆ ಹಚ್ಚಿಕೊಳ್ಳಬೇಕು ।

ಅಪ್ಸರಸ್ಸುಂಯೋ ಇತಿ ಸ್ವಯಮನುಲಿಂಪತಿ ಮುಖಮಗ್ರೇ,

ಓಂ ಅಪ್ಸರಸ್ಸು । ಯೋಗಂಧಃ । ಗಂಧರ್ವೇಷು ಚ । ಯದ್ಯಶಃ ॥
ದೈವ್ಯೋ ಯಃ । ಮಾನುಷಃ । ಗಂಧಃ । ಸಮಾ । ಗಂಧಃ । ಸುರಭಿಃ ।
ಜುಷತಾಮ್ ॥

* ಚಿನ್ನದ ಮಣಿ ಮತ್ತು ರತ್ನದ ಮಣಿಯನ್ನು ಪೋಣಿಸಿರುವ ಹಾರವನ್ನು ಇಯ ಮೋಷಧೇ ಮಂತ್ರದಿಂದ ನೀರಿನ ಪಾತ್ರೆಯಲ್ಲಿ ಪ್ರದಕ್ಷಿಣವಾಗಿ ೩ ಸಲ ಸುತ್ತಬೇಕು ।

ಮಣಿಸೌವರ್ಣಂ ಸರತ್ನಂ ಸೂತ್ರೋತಂ ಇಮಮೋಷಧೇ.. ಇತಿ ಉದಪಾತ್ರೇ ತ್ರಿಃ ಪ್ರದಕ್ಷಿಣಂ ಪರಿಪ್ಲಾವ್ಯ,

ಓಂ ಇಯಮೋಷಧೇ । ತ್ರಾಯಮಾಣಾ । ಸಹಮಾನಾ । ಸಹಸ್ವತೀ । ಸಾ
ಮಾ । ಹಿರಣ್ಯವರ್ಚಸಂ । ಬ್ರಹ್ಮವರ್ಚಸಿನಂ । ಮಾ ಕರೋತು ॥

* ಅಪಾಶೋಸಿ ಮಂತ್ರದಿಂದ ಕಂಠದಲ್ಲಿ ಆ ಸರವನ್ನು ಹಾಕಿಕೊಳ್ಳಬೇಕು ।

ಅಪಾಶೋಸಿ ಇತಿ ಅವಸಾನಯಾ ಕಂಠೇಬಧ್ವಾ,

ಓಂ ಅಪಾಶೋಽಸಿ । ಉರೋವೇ । ಮಾ ಸಗ್ಂ ಶಾರೀಃ ।
ಶಿವೋವೋಽಪತಿಷ್ಮಸ್ವ । ದೀರ್ಘಾಯುತ್ವಾಯ । ಶತಶಾರದಾಯ ॥
ಶತಗ್ಂ ಶರದ್ಭ್ಯಃ । ಆಯುಷೇ ವರ್ಚಸೇ । ಜೀವಾತ್ವೈ ಪುಣ್ಯಾಯ ॥

* ಬಾದರ ಮಣಿಯುಕ್ತ ದಾರವನ್ನೂ ಸಹ ಅಮಂತ್ರಕವಾಗಿ ಮೇಲಿನ ರೀತಿಯಲ್ಲಿಯೇ ಮಾಡಿ, ಆಮೇಲೆ ಎಡಕ್ಕೈಗೆ ಕಟ್ಟಿಕೊಳ್ಳಬೇಕು ।

ಏವಮೇವ ಬಾದರಮಣಿಂ ಮಂತ್ರವರ್ಜ್ಯಂ ಸವ್ಯೇ ಪಾಣಾವಾಬದ್ಧ್ನೀ ।

* ವಸ್ತ್ರವು ೧ ಸಲ ಒಗೆದಿರಬೇಕು, ಹೊಸದಾಗಿರಬೇಕು, ಅಂಚಿರಬೇಕು । ಬಿಳಿಯದ್ದಾಗಿರಬೇಕು, ಬೇರೆಯವರು ಉಟ್ಟಿರಬಾರದು (ಸಾಮಾನ್ಯವಾಗಿ ಎಲ್ಲ ವಸ್ತ್ರಗಳಿಗೂ ಈ ನಿಯಮ ಅನ್ವಯಿಸುತ್ತದೆ) ॥

ಈಶದ್ಧೌತಂ ನವ ಶ್ವೇತಂ ಸದಶಂ ಯನ್ನಧಾರಿತಮ್ ।
ಅಹತಂತು ವಿಜಾನೀಯಾತ್ ಸರ್ವ ಕರ್ಮಸು ಪಾವನಮ್ ॥

* ರೇವತೀಸ್ತ್ವಾ ಎಂಬ ೨ ಮಂತ್ರಗಳಿಂದ, ಹೊದೆಯುವ (ಮೇಲಿನ) ವಸ್ತ್ರವನ್ನು ಅಭಿಮಂತ್ರಿಸಬೇಕು(ಮುಟ್ಟಬೇಕು) ।

ಅಹತಂ ಉತ್ತರವಾಸಃ ರೇವತೀಸ್ತ್ವಾ – ಇತಿ ದ್ವಾಭ್ಯಾಂ,

ಓಂ ರೇವತೀಸ್ತ್ವಾ । ವ್ಯಕ್ಷಣ್ । ಕೃತ್ತಿಕಾಃ । ಚಾಕೃನ್ತಗ್ಂ ಸ್ತ್ವಾ ॥
ಧಿಷ್ಣೋ ವಯನ್ । ಅವಗ್ನಾಃ । ಅವ್ಯಂಜನ್ । ಸಹಸ್ರ ಮಂತಾನ್ ।
ಅಭಿತಃ । ಅಯಚ್ಛನ್ ॥

ದೇವೀರ್ದೇವಾಯ । ಪರಿಧೀ ಸವಿತ್ರೇ । ಮಹತ್ತದಾಸಾಂ । ಅಭವತ್ ।
ಮಹಿತ್ವನಮ್ ॥

* ಕೆಳಗಿನ ೩ ಮಂತ್ರಗಳಿಂದ ಆ ಮೇಲಿನ ವಸ್ತ್ರವನ್ನು ಹಾಕಿಕೊಳ್ಳಬೇಕು ।

ಯಾ ಅಕೃಂತನ್ ಇತಿ ತಿಸೃಭಿಃ ವಾಸಃ ಪರಿಧಾಪ್ಯ,

ಓಂ ಯಾ ಅಕೃಂತನ್ । ಅವಯನ್ । ಯಾ ಅತನ್ವತ । ಯಾಶ್ಚ ದೇವೀಃ ।
ಅಂತಾನಭಿತಃ । ಅದದಂತ ॥ ತಾಸ್ತ್ವಾದೇವೀಃ । ಜರಸೇ । ಸಂವ್ಯಯಂತು ।
ಆಯುಷ್ಮಾನಿದಂ । ಪರಿಧತ್ಸ್ವ ವಾಸಃ ॥

ಪರಿಧತ್ತ ಧತ್ತವಾಸಸಾ । ಏನವ್ । ಶತಾಯುಷಂ । ಕೃಣುತ ।
ದೀರ್ಘಮಾಯುಃ ॥ ಬೃಹಸ್ಪತಿಃ । ಪ್ರಾಯಚ್ಛತ್ । ವಾಸ ಏತತ್ ।
ಸೋಮಾಯ ರಾಜ್ಞೇ । ಪರಿಧಾತ ವಾ ಉ ॥

ಜರಾಂಗಚ್ಛಾಸಿ । ಪರಿಧತ್ಸ್ವ ವಾಸಃ । ಭವಾ ಕೃಷ್ಟೀನಾಂ । ಅಭಿಶಸ್ತಿ
ಪಾವಾ ॥ ಶತಂ ಚ ಜೀವ । ಶರದಸ್ಸುವರ್ಚಾಃ । ರಾಯಶ್ಚ ಪೋಷಂ ।
ಉಪ ಸಂವ್ಯಯಸ್ವ ॥

* ಬಟ್ಟೆಗಳನ್ನು ಧರಿಸಿದ ವರನನ್ನು ಮುಟ್ಟಿಕೊಂಡು, ಕೆಳಗಿನ ಮಂತ್ರವನ್ನು ಹೇಳಬೇಕು ।

ಪರೀದಂ ಇತಿ ಪರಿಹತಂ ಕುಮಾರಂ ಅನುಮಂತ್ರಯತೇ,

ಓಂ ಪರೀದಂ ವಾಸಃ । ಅಧಿಧಾಸ್ಸ್ವಸ್ತಯೇ । ಅಭೂರಾಪೀನಾಂ ।
ಅಭಿಶಸ್ತಿಪಾವಾ ॥ ಶತಂ ಚ ಜೀವ । ಶರದಃ ಪುರೂಚೀಃ । ವಸೂನಿ
ಚಾರ್ಯಃ । ವಿಭಜಾಸಿ ಜೀವನ್ ॥

* ೨ ಕರ್ಣಕುಂಡಲಗಳನ್ನು ಆ ಪಂಚೆಯ ಅಂಚಿಗೆ ಕಟ್ಟಿಕೊಳ್ಳಬೇಕು ।

ತಸ್ಯ ದಶಾಂಯಾಂ ಪ್ರವೃತೌ ಪ್ರಬಧ್ನಾತ್ ।

* ಸ್ರುಕ್(ದರ್ವಿ) ನಿಂದ ಆಯುಷ್ಯಂ ವರ್ಚಸ್ಯಂ – ಎಂಬ ಮಂತ್ರಗಳಿಂದ ೮ ಪ್ರಧಾನ ಆಹುತಿಗಳನ್ನು ಹೋಮಿಸಬೇಕು । ಇಲ್ಲಿ ೪-ಮಂತ್ರಗಳಿಗೆ ಹಿರಣ್ಯಾಯೇದಂ ಎಂದೂ । ಉಳಿದ ಮಂತ್ರಗಳಿಗೆ ಮಂತ್ರಗಳಲ್ಲಿ ಗುರುತಿಸಿರುವ ಹಾಗೆಯೇ ಉದ್ದೇಶ ತ್ಯಾಗವನ್ನು ಹೇಳಬೇಕು ।

ದರ್ವ್ಯಾಮಾದಾಯ ಆಜ್ಯೇನಾಭ್ಯಾನಯನ್ ಆಯುಷ್ಯಂ ವರ್ಚಸ್ಯಂ – ಇತಿ ಅಷ್ಟಾವಾಜ್ಯಾಹುತೀರ್ಜುಹೋತಿ, ಅತ್ರ ಚತಸೃಣಾ ಹಿರಣ್ಯಾಯೇದಂ । ಶೇಷಂ ಮಂತ್ರವತ್ ।

ಮಂತ್ರಾಃ

೧. ಆಯುಷ್ಯಂ । ವರ್ಚಸ್ಯಂ । ಸುವೀರ್ಯಂ । ರಾಯಸ್ಪೋಷಂ । ವಿದ್ಯಂ ॥ ಇದಂ ಹಿರಣ್ಯಂ । ಜೈತ್ರಾಯ ಯಾ । ಆವಿಶತಾಂ ಮಾಮ್ । ಸ್ವಾಹಾ – ಹಿರಣ್ಯಾಯ ಇದಂ ನಮಮ ॥

೨. ಉಚ್ಚೈರ್ವಾದಿ । ಪೃತನಾಜಿ । ಸತ್ರಾಸಾಹಂ । ಧನಂಜಯಮ್ ॥ ಸರ್ವಾಃ । ಸಮೃದ್ಧೀಃ । ಋದ್ಧಯಃ । ಹಿರಣ್ಯೇಸ್ಮಿನ್ । ಸಮಾಹಿತಾಃ । ಸ್ವಾಹಾ – ಹಿರಣ್ಯಾಯ ಇದಂ ನಮಮ ॥

೩. ಶುನಮಹಂ । ಹಿರಣ್ಯಸ್ಯ । ಪಿತುರಿವ । ನಾಮಾಗ್ರಭೈಷಮ್ ॥ ತಂ ವಾ । ಹಿರಣ್ಯವರ್ಚಸಂ । ಪೂರುಷು । ಪ್ರಿಯಂ ಕುರು । ಸ್ವಾಹಾ – ಹಿರಣ್ಯಾಯ ಇದಂ ನಮಮ ॥

೪. ಪ್ರಿಯಂ ಮಾ । ದೇವೇಷು ಕುರು । ಪ್ರಿಯಂ ಮಾ । ಬ್ರಹ್ಮಣೇ ಕುರು ॥ ಪ್ರಿಯಂ ವಿಶ್ಯೇಷು । ಶೂದ್ರೇಷು । ಪ್ರಿಯಂ । ರಾಜಸು । ಮಾ ಕುರು । ಸ್ವಾಹಾ – ಹಿರಣ್ಯಾಯ ಇದಂ ನಮಮ ॥

೫. ಯಾ ತಿರಶ್ಚೀ । ನಿಪದ್ಯಸೇಽಹಂ । ವಿಧರಣೇ । ಇತಿ ॥ ತಾಂ ತ್ವಾ । ಘೃತಸ್ಯ । ಧಾರಯಾ । ಯಜೇ । ಸಗ್ಂರಾಧನೀಂ । ಅಹಂ ಸ್ವಾಹಾ – ಸಗ್ಂರಾಧನ್ಯಾ ಇದಂ ನಮಮ ॥

೬. ಸಗ್ಂ ರಾಧನ್ಯೈ । ದೇವ್ಯೈ । ಸ್ವಾಹಾ – ಸಗ್ಂರಾಧನ್ಯೈ ದೇವ್ಯಾ ಇದಂ ನಮಮ ॥

೭. ಪ್ರಸಾಧನ್ಯೈ । ದೇವ್ಯೈ । ಸ್ವಾಹಾ – ಪ್ರಸಾಧನ್ಯೈ ದೇವ್ಯಾ ಇದಂ ನಮಮ ॥

೮. ಸಂರಾಜಂ ಚ । ವಿರಾಜಂ ಚ । ಅಭಿ ಶ್ರೀಃ । ಯಾ ಚ ನಃ । ಗೃಹೇ ॥ ಲಕ್ಷ್ಮೀ । ರಾಷ್ಟ್ರಸ್ಯ । ಯಾ ಮುಖೇ । ತಯಾ ಮಾ । ಸಗ್ಂ ಸೃಜಾಮಸಿ । ಸ್ವಾಹಾ – ಶ್ರೀಲಕ್ಷ್ಮೀಭ್ಯಾಂ ಇದಂ ನಮಮ ॥

ಸ್ವಿಷ್ಟಕೃತ್ –

ಇಲ್ಲ.

ಉಕ್ತಾ "ಮುಖಾಹುತಿರ್ಯತ್ರ" ಪ್ರಧಾನಾಹುತ್ಯನಂತರಮ್ ।
ತತ್ರ ಅಗ್ನಯೇಸ್ವಿಷ್ಟಕೃತೇ ಸ್ವಾಹೇತಿ ಸ್ವಿಷ್ಟಕೃತ್ ಹುವೇತ್ ॥

ಅನೂಯಾಜಸಮಿತ್ + ಇಧ್ಮಸನ್ನಹನ ಹೋಮ –

ಇದೆ.

ಸಮಿತ್ ಸನ್ನಹನಂ ಕುರ್ಯಾತ್ ಪ್ರಧಾನಾಹುತ್ಯನಂತರಮ್ ।
ಸ ತು ಅನ್ಯಥೇತಿ ನಿಶ್ಚಿತ್ಯ ತತ್ರೈವ ಉಕ್ತಂ ಕಪರ್ದಿನಾ ॥
ಅಗ್ನಾವಮಂತ್ರಕಂ ಸ್ಮಾರ್ತೇ ದೇವಮುದ್ದಿಶ್ಯ ಸಂತ್ಯಜೇತ್ ।
ಯತ್ರಯತ್ರ ಇಧ್ಮತಂತ್ರಸ್ಯ ತತ್ರತತ್ರ ಏವಂ ಇಶ್ಯತೇ ॥

ಜಯಾದಿ ಹೋಮ –

ಇದೆ.

ಪರಿಧ್ಯಂಜನ – ಲೇಪಕಾರ್ಯ –

ಇಲ್ಲ.

ಶಮ್ಯೆ = ನಿರಸನ(ಹೊರಗೆ ಹಾಕುವಿಕೆ) –

ಇದೆ.

ಚೌಲ ಗೋದಾನ ಸೀಮಂತ **"ಸ್ನಾನ"** ಉದ್ವಾಹೋಪನಾದಿಷು ।

ಪ್ರಾಯಶ್ಚಿತ್ತೇ **"ಪ್ರಹರಣಂ"** ನ ಪ್ರಹರಸ್ಸುವನೇ ಭವೇತ್ ॥

॥**"ಶಮ್ಯಾಃ"** ಪರಿಧ್ಯರ್ಥೇ ವಿವಾಹೋಪನಯನ **"ಸಮಾವರ್ತನ"** ಸೀಮಂತ ಚೌಲ ಗೋದಾನ ಪ್ರಾಯಶ್ಚಿತ್ತೇಷು ॥

ಆಘಾರ ಹೋಮ –

ಇದೆ.

ಸಂಸ್ರಾವಹೋಮ –

ಇಲ್ಲ.

"ಶಮ್ಯಾಃ" ಯತ್ರ ವಿಧೀಯಂತೇ ಗಾರ್ಹ್ಯಕರ್ಮಸು ಸೂತ್ರತಃ ।

"ಸಂಸ್ರಾವಸ್ತು ನ" ತತ್ರಸ್ಯಾತ್ ಅಭಿಶಬ್ದ ವಿಯೋಗತಃ ॥

ಅನಾಜ್ಞಾತ ಪ್ರಾಯಶ್ಚಿತ್ತ ಹೋಮ –

ಇದೆ.

ಸರ್ವಪ್ರಾಯಶ್ಚಿತ್ತ ಹೋಮ –

ಇದೆ.

ಪೂರ್ಣಾಹುತಿ –

ಇಲ್ಲ.

ಉತ್ತರಪರಿಷೇಚನ –

ಇದೆ.

* ಕೆಳಗಿನ ೮ ಮಂತ್ರಗಳಿಂದ ಮೊದಲು ೧ ಕುಂಡಲವನ್ನು ಬಲಕಿವಿಗೆ ಹಾಕಿಕೊಳ್ಳಬೇಕು। ಅದೇ ೮ ಮಂತ್ರಗಳಿಂದ ಇನ್ನೊಂದು ಕುಂಡಲವನ್ನು ಎಡಕಿವಿಗೆ ಹಾಕಿಕೊಳ್ಳಬೇಕು ।

ಆಯುಷ್ಯಂ, ಇತಿ ಅಷ್ಟಾಭಿರೇವ ಪ್ರವರ್ತಂ ದಕ್ಷಿಣೇ ಕರ್ಣೇ ಆಬಧ್ನೀತ ।
ಏತಾಭಿಃ ಏವ ಸರ್ವೇ ।

೧. ಆ॒ಯು॒ಷ್ಯಂ । ವ॒ರ್ಚ॒ಸ್ಯಂ । ಸು॒ವೀ॒ರ್ಯಂ । ರಾ॒ಯ॒ಸ್ಪೋ॒ಷಂ ।
ಔದ್ಭಿದ್ಯಂ ॥ ಇದಂ ಹಿರಣ್ಯಂ । ಜ್ಯೈತ್ರ್ಯಾ ಯಾ । ಆವಿಶತಾಂ ಮಾಮ್ ॥

೨. ಉಚ್ಚೈರ್ವಾದಿ । ಪೃತನಾಜಿ । ಸತ್ರಾಸಾಹಂ । ಧನಂಜಯಮ್ ॥
ಸರ್ವಾಃ । ಸಮೃದ್ಧೀಃ । ಋದ್ಧಯಃ । ಹಿರಣ್ಯೇಸ್ಮಿನ್ । ಸಮಾಹಿತಾಃ ॥

೩. ಶುನ॒ಮಹಂ । ಹಿರ॑ಣ್ಯಸ್ಯ । ಪಿತು॑ರಿವ । ನಾ॒ಮಾಗ್ರಭ್ಯೈಷಮ್ ॥ ತಂ ವೀ॒ । ಹಿರ॑ಣ್ಯವರ್ಚಸಂ । ಪೂರು॑ಷು । ಪ್ರಿಯಂ ಕು॑ರು ॥

೪. ಪ್ರಿಯಂ ಮೀ॒ । ದೇವೇ॑ಷು ಕುರು । ಪ್ರಿಯಂ ಮೀ॒ । ಬ್ರಹ್ಮ॑ಣೇ ಕುರು ॥ ಪ್ರಿಯಂ ವಿಶ್ಯೇ॑ಷು । ಶೂದ್ರೇ॑ಷು । ಪ್ರಿಯಂ । ರಾಜ॑ಸು । ಮಾ ಕು॑ರು ॥

೫. ಯಾ ತಿ॒ರಶ್ಚೀ॒ । ನಿಪ॑ದ್ಯಸೇ॑ಽಹಂ । ವಿಧ॑ರಣೀ । ಇತಿ ॥ ತಾಂ ತ್ವಾ॒ । ಘೃತ॑ಸ್ಯ । ಧಾರ॑ಯಾ । ಯಜೇ॒ । ಸಗ್ಂರಾಧ॑ನೀಂ । ಅಹಂ ॥

೬. ಸಗ್ಂ ರಾಧ॑ನ್ಯೈ । ದೇವ್ಯೈ । ಸ್ವಾ॒ಹಾ ॥

೭. ಪ್ರಸಾಧ॑ನ್ಯೈ । ದೇವ್ಯೈ । ಸ್ವಾ॒ಹಾ ॥

೮. ಸಂರಾಜ॑ಂ ಚ । ವಿರಾಜ॑ಂ ಚ । ಅಭಿ ಶ್ರೀಃ । ಯಾ ಚ॑ ನಃ । ಗೃಹೇ ॥ ಲಕ್ಷ್ಮೀ । ರಾಷ್ಟ್ರ॑ಸ್ಯ । ಯಾ ಮು॒ಖೇ । ತಯಾ॑ ಮಾ । ಸಗ್ಂ ಸೃ॑ಜಾಮಸಿ ॥

* ಶುಭಿಕೇಶಿರ – ಮಂತ್ರದಿಂದ ಹಾರ ಹಾಕಬೇಕು ಅಥವಾ ಯಾಮಾಹರತ್ – ಮಂತ್ರವನ್ನಾದರೂ ಹೇಳಬಹುದು ।

ಶುಭಿಕೇಶಿರ – ಇತಿ ಶಿರಸಿ ಮಾಲಾಂ ಯಾಮಾಹರತ್ – ಇತಿ ವಾ,

ಓಂ ಶುಭಿ॑ಕೇಶಿರ॑ । ಆರೋ॑ಹ । ಶೋಭ॑ಯಂತೀ । ಮುಖಂ ಮ॑ಮ ॥ ಮುಖಗ್ಂ ಹಿ । ಮ॑ಮ । ಶೋಭ॑ಯ । ಭೂಯಾಗ್ಂ ಸಂ । ಚ ಭ॑ಗಂ ಕುರು ॥

ಯಾವಾಹರತ್ । ಜಮದಗ್ನಿಃ । ಶ್ರದ್ಧಾಯೈ । ಕಾವಾ ಯಾನ್ಯೆ ॥
ಇಮಾಂ ತಾಂ । ಆಪಿನಹ್ಯೇನಂ । ಭಗೇನ ಸಹ । ವರ್ಚಸಾ ॥

* ಯದಾಂಜನಂ – ಅಥವಾ ಮಯಿಪರ್ವತ – ಎಂಬ ಮಂತ್ರಗಳಿಂದಾಗಲೀ ಎರಡೂ ಕಣ್ಣುಗಳಿಗೆ ಒಟ್ಟಿಗೆ ಕಾಡಿಗೆ ಹಚ್ಚಬೇಕು ।

ಯದಾಂಜನಮ್–ಇತಿ ಚಕ್ಷುಶೋಃ ಯುಗಪದಾಂಜನಂ ಮಯಿ ಪರ್ವತ – ಇತಿ ವಾ,

ಓಂ ಯದಾಂಜನಂ । ತ್ರ್ಯಕಕುದಂ । ಜಾತಂ । ಹಿಮವತಃ । ಉಪರಿ ॥
ತೇನ ವಾಂ । ಆಂಜೇ । ತೇಜಸೇ । ವರ್ಚಸೇ । ಭಗಾಯ ಚ ॥

ಮಯಿ ಪರ್ವತ । ಪೂರುಷಂ । ಮಯಿ ಪರ್ವತ । ವರ್ಚಸಂ । ಮಯಿ
ಪರ್ವತ । ಭೇಷಜಂ । ಮಯಿ ಪರ್ವತ । ಆಯುಷಮ್ ॥

* ಕೆಳಗಿನ ಮಂತ್ರದಿಂದ ಕನ್ನಡಿಯಿಂದ ತನ್ನ ಪ್ರತಿಬಿಂಬವನ್ನು ಮೊದಲಸಲ ನೋಡಿಕೊಳ್ಳಬೇಕು ।

ಯನ್ಮೇವರ್ಚಃ ಇತ್ಯಾದರ್ಶಾವೇಕ್ಷಣಮ್,

ಓಂ ಯನ್ಮೇವರ್ಚಃ । ಪರಾಗತಂ । ಆತ್ಮಾನಂ । ಉಪತಿಷ್ಠತು ॥ ಇದಂ
ತತ್ । ಪುನರಾದದೇ । ದೀರ್ಘಾಯುತ್ವಾಯ । ವರ್ಚಸೇ ॥

* ಕೆಳಗಿನ ಮಂತ್ರದಿಂದ, ಪಾದರಕ್ಷೆ ಧರಿಸಬೇಕು ।

ಪ್ರತಿಷ್ಠೇಸ್ಥಃ ಇತಿ ಉಪಾನಹೌ,

ಓಂ ಪ್ರತಿಷ್ಠೇಸ್ಥಃ । ದೇವತಾನಾಂ । ಮಾ ಮಾ । ಸಂತಾಪ್ತಮ್ ॥

* ಕಳಗಿನ ಮಂತ್ರದಿಂದ, ಛತ್ರಿಯನ್ನು ಹಿಡಿಯಬೇಕು ।

ಓಂ ಪ್ರಜಾಪತೇಃ । ಶರಣಮಸಿ । ಬ್ರಹ್ಮಣಃ । ಛದಿಃ । ವಿಶ್ವ ಜನಸ್ಯ । ಛಾಯಾಽಸಿ । ಸರ್ವತಃ । ಮಾ ಪಾಹಿ ॥

* ಕೆಳಗಿನ ಮಂತ್ರದಿಂದ, ಬಿದುರಿನ ದಂಡವನ್ನು (ಊರುಗೋಲು) ಹಿಡಿಯಬೇಕು ।

ದೇವಸ್ಯತ್ವೇತಿ ವೈಣವಂ ದಂಡಂ ಆದತ್ತೇ,

ಓಂ ದೇವಸ್ಯ ತ್ವಾ । ಸವಿತುಃ । ಪ್ರಸವೇ । ಅಶ್ವಿನೋಃ । ಬಾಹುಭ್ಯಾಂ । ಪೂಷ್ಣೋ ಹಸ್ತಾಭ್ಯಾಂ । ಆದದೇ । ದ್ವಿಷತಃ । ವಧಾಯ । ಇಂದ್ರಸ್ಯ । ವಜ್ರೋಸಿ । ವಾರ್ತ್ರಘ್ನಃ । ಶರ್ಮ ಮೇ । ಭವ । ಯುತ್ವಾಪಂ । ತಂ ನಿವಾರಯ ॥

* ನಕ್ಷತ್ರಗಳು ಉದಯವಾಗುವವರೆಗೆ ಮೌನದಿಂದಿರಬೇಕು । ನಕ್ಷತ್ರಗಳು ಉದಯವಾದ ನಂತರ ಪೂರ್ವ ಅಥವ ಉತ್ತರಕ್ಕೆ ಸ್ವಲ್ಪದೂರ ಹೋಗಿ, ದೇವೀಷ್ಷಡುರ್ವೀಃ.., ಎಂಬ ಅರ್ಧಮಂತ್ರದಿಂದ ದಿಕ್ ಉಪಸ್ಥಾನವನ್ನು ಮಾಡಿ ।

ವಾಚಂಯಚ್ಛತ್ಯಾ ನಕ್ಷತ್ರೇಭ್ಯಃ । ಉದಿತೇಷು ನಕ್ಷತ್ರೇಷು ಪ್ರಾಚೀಂ ಉದೀಚೀಂ ವಾ ದಿಶಮುಪನಿಷ್ಕ್ರಮ್ಯ, ದೇವೀಷ್ಷಡುರ್ವೀಃ – ಇತಿ ಅರ್ಧಚೇ೯ನ ದಿಶಉಪಸ್ಥಾಯ,

ಓಂ ದೇವೀಃ । ಷಡುರ್ವೀಃ । ಉರುಣಃ । ಕೃಣೋತ । ವಿಶ್ವೇದೇವಾಸಃ । ಇಹ । ವೀರಯುಧ್ವಮ್ ॥

* ಮಾಹಾಸ್ಮಹಿ, ಅರ್ಧಮಂತ್ರದಿಂದ ನಕ್ಷತ್ರ ಉಪಸ್ಥಾನ ಮಾಡಿ । ಈ ಮಂತ್ರದಿಂದಲೇ ಚಂದ್ರನ ಉಪಸ್ಥಾನವನ್ನೂ ಮಾಡಿ ।

ಮಾಹಾಸ್ಮಹಿ – ಇತಿ ಅರ್ಧಚೇ೯ನ ನಕ್ಷತ್ರಾಣಿ । ಏತೇನೈವ ಚಂದ್ರಮಸಂ ಚ,

ಓಂ ಮಾ॥ಹಾಸ್ಮಹಿ । ಪ್ರಜ॥ಯಾ । ಮಾ ತ॒ನೂ॑ಭಿಃ । ಮಾ॑ರಧಾಮ ।

ದ್ವಿ॒ಷತೇ । ಸೋ॒ಮ॒ರಾ॒ಜ॒ನ್ ॥

* ಮಿತ್ರರೊಂದಿಗೆ ಧರ್ಮ ವಿಚಾರವನ್ನು ಮಾಡುತ್ತಾ, ಆ ಧರ್ಮ ಮಾರ್ಗದಲ್ಲಿಯೇ(ತನಗೆ ಇಷ್ಟವಾದ ಆಶ್ರಮದಲ್ಲಿಯೇ) ಇರತಕ್ಕದ್ದು ।

ಮಿತ್ರೇಣ ಧ॑ರ್ಮಂ ವಿಚಾರ್ಯ ತಂ ಧರ್ಮಂ ಅನುತಿಷ್ಠೇತ ।

ಪ್ರಣೀತಾ ಮಾರ್ಜನಂ –

ಅಮಂತ್ರಕವಾಗಿ ಮಾಡಬೇಕು ।

ಪ್ರಣೀತಾ ಮಾರ್ಜನಂ ಕುರ್ಯಾತ್ **"ಸ್ಮಾರ್ತಕರ್ಮಣ್ಯಮಂತ್ರಕಮ್"** ।
ಪುರತಃ ಪ್ರಸ್ತರಸ್ಥಾನೇ ತೂಷ್ಣೀಮಾಸಾದ್ಯ ಯತ್ನತಃ ॥
ಪೂರ್ಣಪಾತ್ರಂ ತತಸ್ತತ್ರ ಅಪ ಆನೀಯ ತಜ್ಜಲಂ ।
"ಹಸ್ತೇನಾಮಂತ್ರಕಂ" ತತ್ರ ಪ್ರಾಗಾದಿಶ್ಯೇವ ಪಂಚಸು ॥

ಬ್ರಹ್ಮವಿಸರ್ಜನಂ –

ಇದೆ.

* ನಿಂತು, ಮಂಗಳ ನೀರಾಜನವನ್ನು(ಆರತಿ) ಮತ್ತು ಮಂತ್ರಪುಷ್ಪ – ಪ್ರದಕ್ಷಿಣೆ – ಪ್ರಾರ್ಥನೆ ಹಾಗೂ ನಮಸ್ಕಾರಗಳನ್ನೂ ಸಹಾ ಮಾಡಿ ।

ಮಂಗಳಾರತಿಂ, ಮಂತ್ರಪುಷ್ಪಂ, ಪ್ರದಕ್ಷಿಣಂ, ಪ್ರಾರ್ಥನಂ, ನಮಸ್ಕಾರಂ ಚ ಕೃತ್ವಾ ।

* ಕುಳಿತು, ಪರಿಸ್ತರಣಗಳನ್ನು ತೆಗೆದು, ಅಗ್ನಿಯ ಹೊರಗೆ, ಉತ್ತರದಲ್ಲಿ ಹಾಕಿ ।

ಉಪವಿಶ್ಯ, ಪರಿಸ್ತರಣಂ ಉತ್ತರೇ ವಿಸೃಜ್ಯ ।

* ಕರ್ಮಸಮಾಪನೆಯನ್ನು ಮಾಡುವುದು ।

ಕರ್ಮಸಮಾಪನಂ ।

.....ಅನೇನ ಮಯಾ ಆಚರಿತ ಸಮಾವರ್ತನ ಕರ್ಮಣಾ ಭಗವಾನ್ ಸರ್ವಾತ್ಮಕಃ ವಾಸುದೇವಃ ಪ್ರೀಯತಾಂ....., ।

* ಉದ್ವಾಸನೆ, ಪವಿತ್ರದ ಗಂಟನ್ನು ಬಿಚ್ಚಿ, ಆಚಮನ, ಆಸನವಿಧಿಗಳನ್ನೂ ಸಹ ಮಾಡುವುದು ।

ಉದ್ವಾಸನಂ, ಪವಿತ್ರಗ್ರಂಥಿಂ ವಿಸ್ರಸ್ಯ, ಆಚಮನಂ ಆಸನವಿಧಿಂ ಚ ಕೃತ್ವಾ ॥

* ಇದೇ ಕರ್ಮವನ್ನು ಇನ್ನೊಂದು ರೀತಿಯಲ್ಲಿ ಸಂಕ್ಷಿಪ್ತವಾಗಿ ಮಾಡಬಹುದು, ಹೇಗೆಂದರೆ ಅಮಂತ್ರಕವಾಗಿ ಸ್ನಾನಮಾಡಿ, ಅಮಂತ್ರಕವಾಗಿ ೧ ಸಮಿತ್ತನ್ನು ಅಗ್ನಿಯಲ್ಲಿ ಹಾಕುತ್ತಾನೆ ಹೀಗೆ ಮಾಡಿದರೂ ಸಹ ಸಮಾವರ್ತನೆಯೇ(ಸ್ನಾತಕ) ಆಗುತ್ತದೆ ॥

ಅಥೈತದಪರಂ ತೂಷ್ಣೀಮೇವ ತೀರ್ಥೇ ಸ್ನಾತ್ವಾ, ತೂಷ್ಣೀಂ ಸಮಿಧಂ ಆದಧಾತಿ ।

....*********....

ಸಮಾವರ್ತನ ಮಂತ್ರಗಳಿಗೆ ಶ್ರೀಹರದತ್ತರ ಭಾಷ್ಯಾರ್ಥವು

೧. ಓಂ ಇಮಗ್ಗ್ ಸ್ತೋಮಮರ್ಹತೇ ಜಾತವೇದಸೇ ರಥಮಿವ ಸಂಮಹೇಮಾ ಮನೀಷಯಾ । ಭದ್ರಾಹಿನಃ ಪ್ರಮತಿರಸ್ಯ ಸಗ್ಂ ಸದ್ಯಗ್ನೇ ಸಖ್ಯೇ ಮಾರಿಷಾಮಾ ವಯಂ ತವ ॥

ಈ ಸ್ತೋತ್ರಮಾಡಲು ಯೋಗ್ಯನಾದ. ಎಲ್ಲವನ್ನೂ ತಿಳಿದಿರುವ, ಅಗ್ನಿಗೆ ಅತ್ಯಂತ ಶ್ರದ್ಧೆಯಿಂದ ಈ ಸಮಿತ್ತನ್ನು ಹೋಮಿಸುತ್ತೇನೆ । ಹೇಗೆ, ತನ್ನ ಬುದ್ಧಿಯಿಂದ ಮರದಕೆಲಸ ಮಾಡುವವನು ರಥಾದಿಗಳನ್ನು ಮಾಡುತ್ತಾನೋ ಹಾಗೆ ಉತ್ತಮವಾದಂತಹ ಸಂಸ್ಕಾರಗೊಂಡಂತಹ ಮನಸ್ಸಿನಿಂದ ಆರಾಧಿಸುತ್ತೇನೆ । ಯಾವ ಈ ಅಗ್ನಿಯು ನಮ್ಮ ಮೇಲೆ ಒಳ್ಳೆಯ ಮನಸ್ಸನ್ನು ಅನುಗ್ರಹಮಾಡುವ ಬುದ್ಧಿಯನ್ನು ಸಭೆಗಳಲ್ಲಿ ಯಜ್ಞಾದಿಗಳಲ್ಲಿ ಇರಿಸಿಕೊಂಡಿದ್ದಾನೋ ಆ ಕಾರಣಕ್ಕೆ ಈ ಅಗ್ನಿಯನ್ನು ಆರಾಧಿಸುತ್ತೇನೆ । ಎಲೈ ಅಗ್ನಿಯೇ ದೇವತೆಗಳಾದ ಅಥವಾ ಮನುಷ್ಯರಾದ ನಾವು ಸ್ತೋತ್ರದಿಂದ ನಿನ್ನ ಸ್ನೇಹವನ್ನು ಗಳಿಸಿದವರಾಗಿ, ಯಾರಿಂದಲೂ ದುಃಖಕ್ಕೆ ಒಳಗಾಗುವವರಾಗುವುದಿಲ್ಲ ॥

೨. ಓಂ ತ್ರ್ಯಾಯುಷಂ ಜಮದಗ್ನೇಃ ಕಶ್ಯಪಸ್ಯ ತ್ರ್ಯಾಯುಷಂ । ಯದ್ದೇವಾನಾಂ ತ್ರ್ಯಾಯುಷಂ ತನ್ಮೇ ಅಸ್ತು ತ್ರ್ಯಾಯುಷಂ ॥

ಕೌಮಾರ, ಯೌವನ, ವಾರ್ಧಕ್ಯಗಳೆಂಬ ೩ ಬಗೆಯ ಆಯಸ್ಸುಳ್ಳವರಾಗಿ, ನಾವು ಜಮದಗ್ನಿ ಮೊದಲಾದ ಋಷಿಗಳಂತೆ ದೀರ್ಘಾಯುಷ್ಯವುಳ್ಳವರಾಗೋಣ । ದೇವತೆಗಳ ಯಾವ ದೀರ್ಘಾಯಸ್ಸು ಇದೆಯೋ(ಅಮೃತತ್ವ) ಅದು ನನಗೆ ಸೇರಲಿ ॥

೩. ಓಂ ಶಿವೋ ನಾಮಾಸಿ ಸ್ವಧಿತಿಸ್ತೇ ಪಿತಾ ನಮಸ್ತೇ ಅಸ್ತು ಮಾ ಮಾಹಿಗ್ಂಸೀಃ ॥

ಎಲೈ ಕ್ಷೌರದ ಕತ್ತಿಯೇ ನೀನು ಮಂಗಳಕರನಾಗಿದ್ದೀಯ, ಹಾಗೂ ವಜ್ರಾಯುಧಕ್ಕೆ ಸಮನಾಗಿದ್ದೀಯ । ನಿನಗೆ ನನ್ನ ನಮಸ್ಕಾರಗಳು, ನನ್ನನ್ನು ಹಿಂಸಿಸಬೇಡ ॥

೪. ಓಂ ಉಷ್ಣೇನವಾಯು ವುದಕೇನೇಹ್ಯದಿತಿಃ ಕೇಶಾನ್, ವಪತು ॥

ಎಲೈ ವಾಯುವೇ, ಬಿಸಿಯಾದ ನೀರನ್ನು ತೆಗೆದುಕೊಂಡು ಭೂಮಿಗೆ ಬಾ । ಏಕೆಂದರೆ, ಅದಿತಿಯು ವಪನ ಮಾಡಿ ಅನುಗ್ರಹಿಸಲು ಬಂದಿರುವನು, ಹಾಗಾಗಿ ಬಿಸಿನೀರನ್ನು ನೀನು ತೆಗೆದುಕೊಂಡು ಬಾ ॥

೫. ಓಂ ಆಪ ಉನ್ದಂತು ಜೀವಸೇ ದೀರ್ಘಾಯುತ್ವಾಯು ವರ್ಚಸೇ ।
ಜ್ಯೋಕ್ಚ ಸೂರ್ಯಂ ದೃಶೇ ॥

ಈ ಬ್ರಹ್ಮಚಾರಿಯ ತಲೆಯನ್ನು ಈ ಬಿಸಿನೀರು ಚೆನ್ನಾಗಿ ಒದ್ದೆಮಾಡಲಿ । ಏಕೆಂದರೆ ಇವನು ನೂರುವರ್ಷಗಳ ಕಾಲ ಬಾಳಲು । ಹಾಗೂ ಕಾಂತಿಸಮೃದ್ಧಿಗಾಗಿ ಬಹಳಕಾಲ ಸೂರ್ಯನನ್ನು ನೋಡಿ ಧ್ಯಾನಿಸುವುದಕ್ಕಾಗಿ ಹಾಗೂ ನೂರುವರ್ಷಗಳ ಕಾಲ ಚಕ್ಷುಷ್ಮಂತನಾಗಿ ವರ್ಚಸ್ವಿಯಾಗಿ ಇರಲು ನೀವು ಅವನ ತಲೆಯ ಕೂದಲುಗಳನ್ನು ಒದ್ದೆ ಮಾಡಿರಿ ॥

೬. ಓಂ ಯೇನಾವಪತ್ಸವಿತಾ ಕ್ಷುರೇಣ ಸೋಮಸ್ಯ ರಾಜ್ಞೋ ವರುಣಸ್ಯ
ವಿದ್ವಾನ್ । ತೇನ ಬ್ರಹ್ಮಾಣೋ ವಪತೇದಮಸ್ಯಾಯುಷ್ಮಾನ್
ಜರದಷ್ಟಿರ್ಯಥಾ ಸದಯಂ.....ಶರ್ಮಾ ॥

ಯಾವ ಕತ್ತಿಯಿಂದ ಸವಿತೃದೇವನು ಸೋಮರಾಜನ ಹಾಗೂ ವರುಣನ ತಲೆಯನ್ನು ಕ್ಷೌರಕರ್ಮದಲ್ಲಿ ಕುಶಲನಾಗಿ ವಪನ ಮಾಡಿದನೋ, ಆ ಕತ್ತಿಯಿಂದ ಎಲೈ ಬ್ರಾಹ್ಮಣರೇ, ಪುಣ್ಯಾಹವನ್ನು ಹೇಳುವಂತಹ ನೀವು, ಈ ಕತ್ತಿಯಿಂದ ಈ ಬ್ರಹ್ಮಚಾರಿಯ ತಲೆಯನ್ನು ನಾನು ವಪನ ಮಾಡಲು ಸಮರ್ಥನಾಗುವಂತೆ ಅನುಗ್ರಹಿಸಿರಿ । ನಿಮ್ಮ ಅನುಜ್ಞೆಯನ್ನು ಪಡೆದು ನಾನು ವಪನವನ್ನು ಮಾಡುತ್ತೇನೆ । ವಪನವಾದಮೇಲೆ ಈ .....ಹೆಸರಿನ ಬ್ರಹ್ಮಚಾರಿಯು ಆಯುಷ್ಮಂತನಾಗಿ ಹಾಗೂ ಒಳ್ಳೆಯ ರೀತಿಯ ಜೀರ್ಣಕ್ರಿಯೆಯನ್ನು ಹೊಂದಿರುವವನಾಗಲಿ ॥

೭. ಓಂ ಯತ್ ಕ್ಷುರೇಣ ಮರ್ಚಯತಾ ಸುಪೇಶಸಾ ವಪ್ತ್ರಾ ವಪಸಿ
ಕೇಶಾನ್ । ಶುಂಧಿ ಶಿರೋ ಮಾಸ್ಯಾಯುಃ ಪ್ರಮೋಷೀಃ ॥

ತೀಕ್ಷ್ಣವಾದ ಕತ್ತಿಯಿಂದ ಹಾಗೂ ಹೊಸದಾದ ಸುಂದರವಾದ ಕತ್ತಿಯಿಂದ ಯಾವಾಗ ಈ ಬ್ರಹ್ಮಚಾರಿಯ ಕೂದಲನ್ನು ನೀನು ವಪನ(ಕತ್ತರಿಸುತ್ತೀಯೋ) ಮಾಡುತ್ತೀಯೋ, ಆಗ ಈ ಬ್ರಹ್ಮಚಾರಿಯು ತಲೆಯನ್ನು ಶುದ್ಧಗೊಳಿಸು । ಹೇಗೆ ಕೂದಲುಗಳು ನಿರ್ಮಲವಾಗುತ್ತವೋ ಹಾಗೆ ಶುದ್ಧಗೊಳಿಸು । ಹಾಗೂ ಇವನ ಆಯುಸ್ಸನ್ನು ಕಡಿಮೆಯಾಗುವಂತೆ ಮಾಡಬೇಡ । ಏಕೆಂದರೆ ವಪನವು ಅಮಂಗಳವಾದದ್ದೆಂದು ಪ್ರಸಿದ್ಧವಾಗಿದೆ ಆದ್ದರಿಂದ । ಬ್ರಾಹ್ಮಣಮಂತ್ರದಲ್ಲಿ ಹೀಗಿದೆ – 'ರಿಕ್ತೋ ವಾ ಏಷ: ಅನಪಿಹಿತೋ ಯನ್ಮುಂಡಃ' (ಕ್ಷೌರವನ್ನು ಮಾಡಿಸಿಕೊಂಡವನು ಆಯುಸ್ಸಿನಿಂದ ಬರಿದಾದವನಂತಾಗಿ ಮೃತ್ಯುವಿಗೆ ಬಾಗಿಲನ್ನು ತೆರೆದವನಂತಾಗುತ್ತಾನೆ) ॥

೮. ಓಂ ಯೇನ ಪೂಷಾ ಬೃಹಸ್ಪತೇರಗ್ನೇರಿಂದ್ರಸ್ಯ ಚಾಯುಷೇವಪತ್ ।
ತೇನಾಸ್ಯಾಯುಷೇ ವಪ ಸೌಶ್ಲೋಕ್ಯಾಯ ಸ್ವಸ್ತಯೇ ॥

ಯಾವ ಕತ್ತಿಯಿಂದ ಪೂಷ್ಣದೇವನು, ಬೃಹಸ್ಪತಿದೇವನ ಹಾಗೂ ಅಗ್ನಿದೇವನ ಹಾಗೂ ಇಂದ್ರದೇವನ ವಪನವನ್ನು ಮಾಡಿದನೋ, ಆ ಕತ್ತಿಯಿಂದ ಈ ಬ್ರಹ್ಮಚಾರಿಯ ತಲೆಯನ್ನು, ಇವನ ಆಯುಸ್ಸು ವೃದ್ಧಿಸುವುದಕ್ಕಾಗಿ, ಒಳ್ಳೆಯ ಕೀರ್ತಿವಂತನಾಗುವುದಕ್ಕಾಗಿ ಹಾಗೂ ನಾಶವಾಗದೇ ಇರುವುದಕ್ಕಾಗಿ ವಪನವನ್ನು ಮಾಡು ॥

೯. ಓಂ ಯೇನ ಭೂಯಶ್ಚರಾತ್ಯಯಂ ಜ್ಯೋಕ್ಚ ಪಶ್ಯಾತಿ ಸೂರ್ಯಮ್ ।
ತೇನಾಸ್ಯಾಯುಷೇ ವಪ ಸೌಶ್ಲೋಕ್ಯಾಯ ಸ್ವಸ್ತಯೇ ॥

ಯಾವ ಕತ್ತಿಯಿಂದ ವಪನ ಮಾಡಿದರೆ ಈ ಬ್ರಹ್ಮಚಾರಿಯು, ಎಲ್ಲರನ್ನೂ ಮೀರಿಸಿ ಸಮಾಜದಲ್ಲಿ ಉತ್ಕೃಷ್ಟನಾಗುತ್ತಾನೋ ಹಾಗೂ ಬಹಳಕಾಲ ಸೂರ್ಯನನ್ನು ನೋಡಿ ಧ್ಯಾನಿಸುವವನಾಗುತ್ತಾನೋ ಅಂತಹಾ ಕತ್ತಿಯಿಂದ ಇವನ ಆಯುರ್ವರ್ಧನೆಗಾಗಿ ಹಾಗೂ ಒಳ್ಳೆಯ ಕೀರ್ತಿವಂತನಾಗುವುದಕ್ಕಾಗಿ ಹಾಗೂ ಅವಿನಾಶಿಯಾಗಲು ವಪನವನ್ನು ಮಾಡು ॥

೧೦. ಓಂ ಯೇನ ಪೂಷಾ ಬೃಹಸ್ಪತೇರಗ್ನೇರಿಂದ್ರಸ್ಯ ಚಾಯುಷೇವಪತ್ ।
ತೇನ ತೇ ವಪಾಮಿ..... ಶರ್ಮನ್ನಾಂಯುಷಾ ವರ್ಚಸಾ ಂಯುಥಾ
ಜ್ಯೋಕ್ಸುಮನಾ ಅಸಾಃ ॥

ಯಾವ ಕತ್ತಿಯಿಂದ ಪೂಷದೇವನು, ಬೃಹಸ್ಪತಿದೇವನ ಹಾಗೂ ಅಗ್ನಿದೇವನ ಹಾಗೂ ಇಂದ್ರದೇವನ ವಪನವನ್ನು ಮಾಡಿದನೋ, ಅಂತಹಾ ಕತ್ತಿಯಿಂದ ನಿನ್ನ ತಲೆಯನ್ನು ವಪನ ಮಾಡುತ್ತೇನೆ । .....ಈ ಹೆಸರಿನವನಾದ ನೀನು ವಪನವಾದ ಮೇಲೆ ಆಯುಷ್ಮಂತನಾಗಿ, ವರ್ಚಸ್ವಿಯಾಗಿ, ಬಹಳಕಾಲ ಒಳ್ಳೆಯ ಮನಸ್ಸುಳ್ಳವನಾಗಿ ಆಗುತ್ತೀಯೋ ಅಂತಹಾ ಕತ್ತಿಯಿಂದ ವಪನವನ್ನು ಮಾಡುತ್ತೇನೆ ॥

೧೧. ಓಂ ಉಪ್ತ್ವಾಯ ಕೇಶಾನ್ ವರುಣಸ್ಯ ರಾಜ್ಞೋ ಬೃಹಸ್ಪತಿಸ್ಸವಿತಾ
ಸೋವೋ ಅಗ್ನಿಃ । ತೇಭ್ಯೋ ನಿಧಾನಂ ಬಹುಧಾನ್ವವಿಂದನ್ನಂತರಾ
ದ್ಯಾವಾಪೃಥಿವೀ ಅಪಸ್ಸುವಃ ॥

ವರುಣರಾಜನ ಕೂದಲುಗಳನ್ನು, ಬೃಹಸ್ಪತಿ – ಸವಿತೃ – ಸೋಮ – ಅಗ್ನಿ ದೇವತೆಗಳು ವಪನಮಾಡಿ, ಆ ಕೂದಲುಗಳನ್ನು ಹಾಕುವ(ಇಡುವ) ಜಾಗವನ್ನು ಬಹುವಿಧವಾಗಿ ಹುಡುಕಿ, ಈ ಮುಂದಿನ ಕ್ರಮದಲ್ಲಿ ಆ ಜಾಗವನ್ನು ಪಡೆದರು । ಹೇಗೆಂದರೆ, ದ್ಯಾವಾಪೃಥಿವಿಗಳ ನಡುವೆ ಹಾಗೂ ನೀರಿನಲ್ಲಿ, ಅಂತರಿಕ್ಷದಲ್ಲಿ, ಸ್ವರ್ಗದಲ್ಲಿ....., ಎಂಬೀರೀತಿಯಾಗಿ ಜಾಗವನ್ನು ಪಡೆದರು । ಈ ರೀತಿಯಾಗಿ ನಾನೂ ಕೂಡ ಈ ಕೂದಲುಗಳನ್ನು ಅತ್ತಿಮರದ ಬುಡದಲ್ಲಿ ಅಥವ ದರ್ಭೆಗಳಿರುವ ಜಾಗದಲ್ಲಿ ದರ್ಭೆಗಳಮೇಲೆ ಇಡುತ್ತೇನೆ ॥

೧೨. ಓಂ ಇದಮಹಂ .....ಶರ್ಮಣಃ, ...ಗೋತ್ರಸ್ಯ ಪಾಪ್ಮಾನಂ
ಉಪಗೂಹಾಮಿ ಉತ್ತರೋ .....ಶರ್ಮಾ ದ್ವಿಷದ್ಭ್ಯಃ ।

..... ಈ ಹೆಸರಿನವನ ಹಾಗೂ ..... ಈ ಹೆಸರಿನವನ ಮಗನಾದ ಇವನ ಪಾಪಗಳನ್ನು ನಾನು ಪ್ರಕಟವಾಗದಂತೆ ಮುಚ್ಚಿಹಾಕುತ್ತೇನೆ । ಈ ಹೆಸರಿನವನು ತನ್ನ ಶತ್ರುಗಳಿಂದ ಹಾಗೂ ದ್ವೇಷಿಗಳಿಂದ ಎಲ್ಲ ರೀತಿಯಿಂದಲೂ ಉತ್ಕೃಷ್ಟನಾಗಲಿ ॥

೧೩. ಓಂ ಆಪ್ಯೋಹಿಷ್ಠಾ ಮಯೋಭುವಸ್ತಾನ ಊರ್ಜೇ ದಧಾತನ । ಮಹೇರಣಾಯು ಚಕ್ಷಸೇ ॥

ಎಲ್ಲೆ ಅಬ್ದೇವತೆಗಳೇ, ಸುಖವನ್ನು ಕೊಡುವವರಾಗಿದ್ದೀರಿ, ಅಂತಹಾ ನೀವು ನಮಗೆ ಬಲವನ್ನೂ ಬಲಕ್ಕೆ ಕಾರಣವಾದ ರಸವನ್ನೂ ಕೊಡುವವರಾಗಿ, ನಮ್ಮನ್ನು ಧರಿಸಿರಿ । ಹಾಗೂ ಅತ್ಯಂತ ಸುಂದರವಾಗಿ, ರಮಣೀಯವಾಗಿ ನಾವು ಕಾಣುವಂತೆ ನಮ್ಮನ್ನು ಧರಿಸಿರಿ (ಪರಮಾರ್ಥ ತತ್ವ ಸ್ವರೂಪವನ್ನು ಅರಿಯಲು ಯೋಗ್ಯರನ್ನಾಗಿ ಮಾಡಿರಿ) ॥

೧೪. ಯೋ ವಃ ಶಿವತಮೋ ರಸಸ್ತಸ್ಯ ಭಾಜಯತೇ ಹನಃ । ಉಶತೀರಿವ ಮಾತರಃ ॥

ನಿಮ್ಮ ಅತ್ಯಂತ ಶಾಂತವಾದ, ಸುಖಕ್ಕೆ ಕಾರಣವಾದ ಯಾವ ರಸಸ್ವರೂಪವಿದೆಯೋ ಅದು ನಾವು ಮಾಡುವ ಈ ಕರ್ಮದಲ್ಲಿ ಸೇರಿಕೊಂಡು ನಮಗೆ ಪ್ರಾಪ್ತವಾಗುವಂತೆ ಮಾಡಿರಿ। ಹೇಗೆಂದರೆ, ತಮ್ಮ ಮಕ್ಕಳಿಗೆ ತಾಯಂದಿರು ಅತ್ಯಂತ ಪ್ರೀತಿಯಿಂದ, ವಾತ್ಸಲ್ಯದಿಂದ ತಮ್ಮ ಎದೆಹಾಲನ್ನು ಕುಡಿಸುವಂತೆ, ನಮಗೆ ಆ ರಸವು ಪ್ರಾಪ್ತವಾಗುವಂತೆ ಆಗಲಿ ॥

೧೫. ತಸ್ಮಾ ಅರಂಗವಾಮವೋ ಯಸ್ಯ ಕ್ಷಯಾಯು ಜಿನ್ವಥ । ಆಪೋ ಜನಯಥಾಚನಃ ॥

ಯಾವ ರಸದ ನಿವಾಸದಿಂದ ನೀವು ಅತ್ಯಂತ ಪ್ರೀತಿಪಾತ್ರರಾಗಿದ್ದೀರೋ ಆ ರಸವನ್ನು ಪಡೆಯಲು ನಮ್ಮನ್ನು ಯೋಗ್ಯರನ್ನಾಗಿ ಮಾಡಿ, ನಮಗೆ ಆ ರಸವನ್ನು ಸುರಿಸಿರಿ । ಎಲ್ಲೆ ಅಬ್ದೇವತೆಗಳೇ, ನಮಗೆ ಪ್ರಜಾಸಂತತಿಯು ನಿರಂತರವಾಗಿ ಉಂಟಾಗುವಂತೆ ಮಾಡಿರಿ ॥

೧೬. ಹಿರಣ್ಯವರ್ಣಾಶ್ಚಯಃ ಪಾವಕಾ ಯಾಸು ಜಾತಃ ಕಶ್ಯಪೋ ಯಾಸ್ವಿಂದ್ರಃ । ಅಗ್ನಿಂ ಯಾ ಗರ್ಭಂ ದಧಿರೇ ವಿರೂಪಾಸ್ತಾ ನ ಆಪಶ್ಯಗ್ಗ್ಂ ಸ್ಯೋನಾ ಭವಂತು ॥

ಅಬ್ದೇವತೆಗಳು ತುಂಬಾ ಶುದ್ಧರಾಗಿರುವುದರಿಂದ, ಸುವರ್ಣದಂತೆ ಪ್ರಕಾಶವುಳ್ಳವರಾಗಿದ್ದಾರೆ ಹಾಗೂ ಸ್ವಯಂ ಶುದ್ಧರಾಗಿದ್ದಾರೆ ಹಾಗೂ ಸ್ನಾನಾದಿಗಳಿಂದ ಶರೀರ ಮುಂತಾದವುಗಳನ್ನು ಶುದ್ಧಿಗೊಳಿಸುವವರಾಗಿದ್ದಾರೆ, ಯಾವ ಅಬ್ದೇವತೆಗಳಲ್ಲಿ ಕಶ್ಯಪ ಪ್ರಜಾಪತಿಯು ಹುಟ್ಟಿದನೋ ಹಾಗೂ ಇಂದ್ರ । ಅಗ್ನಿ ಈ ದೇವತೆಗಳು ಗರ್ಭಧಾರಣೆಯಿಂದ ಉತ್ಪನ್ನರಾದರೋ ಇಂತಹಾ ಅಬ್ದೇವತೆಗಳು ಸುಖವನ್ನು ಕೊಡುವವರಾಗಿ ನಮಗೆ ಸುಖವನ್ನು ತರಲಿ ॥

೧೭. ಯಾಸಾಗ್ಂ ರಾಜಾ ವರುಣೋ ಯಾತಿ ಮಧ್ಯೇ ಸತ್ಯಾನೃತೇ ಅವಪಶ್ಯಂಜನಾನಾಮ್ । ಮಧುಶ್ಚುತಶ್ಚಯೋ ಯಾಃ ಪಾವಕಾಸ್ತಾನ ಆಪಶ್ಯಗ್ಂ ಸ್ಯೋನಾ ಭವಂತು ॥

ವರುಣರಾಜನು ಅಬ್ದೇವತೆಗಳಿಗೆ ಅಧಿಪತಿಯು, ಅವನು ಅಬ್ದೇವತೆಗಳ ಮಧ್ಯೇ ರಹಸ್ಯವಾಗಿ ಸಂಚರಿಸುತ್ತಾ, ಜನರ ಸತ್ಯ, ಅನೃತ ರೂಪವಾದ (ಸ್ನಾನ ಪಾನಾದಿಗಳಲ್ಲಿ ಶಾಸ್ತ್ರವಿಹಿತ ನಿಷಿದ್ಧಗಳನ್ನು) ಕರ್ಮಗಳನ್ನು ಪರೀಕ್ಷಿಸುತ್ತಾ ಅವರವರ ಕರ್ಮಕ್ಕೆ ತಕ್ಕಂತೆ ಫಲವನ್ನು ಕೊಡುವವನಾಗಿದ್ದಾನೆ । ಈ ಅಬ್ದೇವತೆಗಳು ಮಧುರವಾದ ರಸವನ್ನು ಸುರಿಸುವವರಾಗಿ ಸ್ವಯಂ ಶುದ್ಧರಾಗಿ ಸ್ನಾನಾದಿಗಳಿಂದ ಶರೀರಾದಿಗಳನ್ನು ಶುದ್ಧಗೊಳಿಸುತ್ತಾ ನಮಗೆ ಸುಖವನ್ನು ತರಲಿ ॥

೧೮. ಯಾಸಾಂ ದೇವಾ ದಿವಿ ಕೃಣ್ವಂತಿ ಭಕ್ಷಂ ಯಾ ಅಂತರಿಕ್ಷೇ ಬಹುಧಾ ಭವಂತಿ । ಯಾಃ ಪೃಥಿವೀಂ ಪಯಸೋಂದಂತಿ ಶುಕ್ರಾಸ್ತಾನ ಆಪಶ್ಯಗ್ಂ ಸ್ಯೋನಾ ಭವಂತು ॥

ದ್ಯುಲೋಕದಲ್ಲಿ ದೇವತೆಗಳು ಯಾವ ಅಪ್ಸಂಬಂಧಿ ಸಾರವನ್ನು ಅನುಭವಿಸುತ್ತಾರೋ, ಯಾವ ಅಮೃತವು ಅಬ್ದೇವತೆಗಳ ಸಾರಭೂತವಾಗಿ ದೇವತೆಗಳಿಂದ ಸೇವಿಸಲ್ಪಡುತ್ತದೋ, ಯಾವ ಅಪ್ ಅಂತರಿಕ್ಷದಲ್ಲಿ ಮಳೆಗೆ ಕಾರಣವಾದ ಮೋಡಗಳ ರೂಪದಿಂದ ಬಹುಪ್ರಕಾರವಾಗಿ ಇರುತ್ತವೆಯೋ ಹಾಗೂ ಯಾವ ಅಪ್ ಸಂಪೂರ್ಣಭೂಮಿಯನ್ನು ತನ್ನ ದ್ರವರೂಪವಾದ ಪಯಸ್ಸಿನಿಂದ ಒದ್ದೆ ಮಾಡಿದೆಯೋ ಅಂತಹಾ ನಿರ್ಮಲವಾದ,

ಶುದ್ಧವಾದ ಅಬ್ದೀವತೆಗಳು ಸ್ನಾನಾದಿಗಳಿಂದ ಶರೀರಾದಿಗಳನ್ನು ಶುದ್ಧಗೊಳಿಸುತ್ತಾ ನಮಗೆ ಸುಖವನ್ನು ತರಲಿ ॥

೧೯. ಓಂ ಅನ್ನಾದ್ಯಾಯವ್ಯೂಹಧ್ವಂ ದೀರ್ಘಾಯುರಹವನ್ನಾದೋ ಭೂಯಾಸಂ । ಸೋವೋ ರಾಜಾ ಯವಾಗವತ್ಸವೀ ಮುಖಂ ಪ್ರವೇಕ್ಷ್ಯತಿ ಭಗೇನ ಸಹವರ್ಚಸಾ ॥

ಎಲೈ, ಹಲ್ಲುಗಳೇ!, ಅನ್ನವನ್ನು ಅಗಿಯಲು ಬೇರೆಬೇರೆಯಾಗಿ ನೀವು ಸಜ್ಜುಗೊಳ್ಳಿರಿ ಮತ್ತು ಕೊಳೆಯಿಲ್ಲದಂತಾಗಿರಿ । ನಾನಾದರೋ ನಿಮ್ಮ ಸಹಾಯದಿಂದ ದೀರ್ಘಾಯುವೂ ಬಹಳಕಾಲ ಅನ್ನವನ್ನು ಸೇವಿಸುವವನೂ ಕೂಡ ಆಗುವಂತೆ ಆಗಲಿ । ಓಷಧಿಗಳ ರಾಜನಾದ ಸೋಮನು ನನ್ನಬಳಿಸಾರಿ, ಸೌಭಾಗ್ಯಗಳಿಂದಲೂ ಹಾಗೂ ಕಾಂತಿಯಿಂದಲೂ ಒಡಗೂಡಿ ನನ್ನ ಮುಖವನ್ನು ಪ್ರವೇಶಿಸುತ್ತಾನೆ । ದಂತ ಶೋಧನೆಯಿಂದ ನನ್ನ ಮುಖವು ಅತ್ಯಂತ ಶೋಭೆಯುಳ್ಳದ್ದಾಗಿದೆ ॥

೨೦. ಓಂ ಅವಧೂತಗ್ಂ ರಕ್ಷೋವಧೂತಾ ಅರಾತಯಃ ॥

ಎಲ್ಲಾ ರಾಕ್ಷಸರನ್ನೂ ಹಾಗೂ ಶತ್ರುಗಳನ್ನೂ ನಾನು ಈ ವಸ್ತ್ರವನ್ನು ಕೊಡಗುವುದರ ಮೂಲಕ ನಾಶಗೊಳಿಸಿದೆನು ॥

೨೧. ಓಂ ಉದುತ್ಯಂ ಜಾತವೇದಸಂ ದೇವಂ ವಹಂತಿ ಕೇತವಃ । ದೃಶೇ ವಿಶ್ವಾಯ ಸೂರ್ಯಮ್ ॥

ಈ ಅತ್ಯಂತ ಶ್ರೇಷ್ಠನಾದ ಎಲ್ಲವನ್ನೂ ತಿಳಿದಿರುವ, ಸೂರ್ಯದೇವನನ್ನು ರಶ್ಮಿಗಳು ಕುದುರೆಗಳಾಗಿ ಒಯ್ಯುತ್ತವೆ । ಏತಕ್ಕಾಗಿಯೆಂದರೆ, ಭೂಮಂಡಲಕ್ಕೆ ಸೂರ್ಯನ ದರ್ಶನವಾಗಲಿ ಎಂದು ॥

೨೨. ಓಂ ಸೋವಮಸ್ಯ ತನೂರಸಿ ತನುವಂ ಮೇ ಪಾಹಿ ಸ್ವಾವಾ ತನೂರಾವಿಶ ॥

ಎಲೈ ಉಡುವ ವಸ್ತ್ರವೇ, ನೀನು ಸೋಮದೇವನ ಶರೀರವಾಗಿದ್ದೀಯೇ । ಇಂತಹ ನೀನು ನನ್ನ ಶರೀರವನ್ನು ಕಾಪಾಡು । ಕೇವಲ ನೀನು ಸೋಮದೇವನ ಶರೀರವಷ್ಟೇ ಅಲ್ಲ, ನನ್ನ ಶರೀರವೂ ಕೂಡ ಆಗಿದ್ದೀಯೇ । ಅಂತಹ ನೀನು ನನ್ನಲ್ಲಿ ಸೇರಿ ಒಂದಾಗು ॥

೨೩. ಓಂ ನಮೋ ಗ್ರಹಾಯ ಚಾಭಿಗ್ರಹಾಯ ಚ ನಮಶ್ಶಾಕಜಂಜಭಾಭ್ಯಾಂ ನಮಸ್ತಾಭ್ಯೋ ದೇವತಾಭ್ಯೋ ಯಾ ಅಭಿಗ್ರಾಹಿಣೀಃ ॥

ಗ್ರಹದೇವತೆಗಳಿಗೆ, ಅಭಿಗ್ರಹದೇವತೆಗಳಿಗೆ (ಶ್ರೌತಯಜ್ಞದಲ್ಲಿ ಬರುವ...) ಶಾಖಜಂಜಭ ಎಂಬ ಇಬ್ಬರು ದೇವತೆಗಳಿಗೆ, ಅಭಿಗ್ರಾಹಿಣಿ ದೇವತೆಗಳಿಗೆ ನಮಸ್ಕಾರಗಳು ॥

೨೪. ಓಂ ಅಪ್ಸರಸ್ಸುಯೋಗಂಧೋ ಗಂಧರ್ವೇಷು ಚ ಯದ್ಯಶಃ । ದೈವ್ಯೋ ಯೋ ಮಾನುಷೋ ಗಂಧಸ್ತಮಾ ಗಂಧಸ್ಸುರಭಿರ್ಜುಷತಾಮ್ ॥

ಅಪ್ಸರದೇವತೆಗಳಿಗೆ ಸುಖವನ್ನು ಕೊಡುವ, ಯಾವ ಗಂಧವಿದೆಯೋ ಹಾಗೂ ಗಂಧರ್ವದೇವತೆಗಳಿಗೆ ಅತ್ಯಂತ ಕೀರ್ತಿಯನ್ನು ತಂದುಕೊಡುವ ಹಾಗೂ ಪ್ರಸಿದ್ಧವಾದ ಯಾವ ಗಂಧವಿದೆಯೋ, ಯಾವ ಗಂಧದ ಸೇರುವಿಕೆಯಿಂದ ಗಂಧರ್ವರು ಎನಿಸಿಕೊಳ್ಳುತ್ತಾರೋ, ಹಾಗೂ ದೇವತೆಗಳಿಗೆ ಸಂಬಂಧಿಸಿದ ಹಾಗೂ ಮನುಷ್ಯರಿಗೆ ಸಂಬಂಧಿಸಿದ ಎಲ್ಲಾ ಸುಗಂಧಗಳೂ ಕೂಡ ನನ್ನನ್ನು ಬಂದು ಸೇರಲಿ(ನಾನು ಸೇವಿಸುವಂತಾಗಲಿ) ॥

೨೫. ಓಂ ಇಯಮೋಷಧೀ ತ್ರಾಯಮಾಣಾ ಸಹಮಾನಾ ಸಹಸ್ವತೀ । ಸಾ ಮಾ ಹಿರಣ್ಯವರ್ಚಸಂ ಬ್ರಹ್ಮವರ್ಚಸಿನಂ ಮಾ ಕರೋತು ॥

ಈ ಭೂಮಿಯು, ಔಷಧಿಸ್ವರೂಪವು, ಹಾಗೂ ಎಲ್ಲಾ ಓಷಧಿವನಸ್ಪತಿಗಳಿಗೆ ಆಧಾರವು । ಹಾಗೂ ಎಲ್ಲಾ ಕಾರ್ಯಗಳನ್ನು(ಕ್ರಿಯೆ) ನಡೆಸಲು ಯೋಗ್ಯವುಳ್ಳದ್ದಾಗಿದೆ ಹಾಗೂ ಅತ್ಯಂತ ಬಲವುಳ್ಳದ್ದೂ ಆಗಿದೆ । ಇಂತಹ ಈ ಭೂದೇವಿಯು ನನ್ನನ್ನು ಚಿನ್ನದಂತೆ ಪ್ರಕಾಶವುಳ್ಳವನನ್ನಾಗಿ ಹಾಗೂ ಬ್ರಹ್ಮವರ್ಚಸ್ಸುಳ್ಳವನನ್ನಾಗಿ ಮಾಡಲಿ ॥

೨೬. ಓಂ ಅಪಾಶೋಽಸ್ಯರೋ ಮೇ ಮಾ ಸಗ್ಂ ಶಾರೀಶ್ಮಿವೋಮೋಪತಿಷ್ಠಸ್ವ ದೀರ್ಘಾಯುತ್ವಾಯ ಶತಶಾರದಾಯ । ಶತಗ್ಂ ಶರದ್ಭ್ಯ ಆಯುಷೇ ವರ್ಚಸೇ ಜೀವಾತ್ವೈ ಪುಣ್ಯಾಯ ॥

ಕಳ್ಳ ಮುಂತಾದವರನ್ನು ಪೀಡಿಸುವ ಪಾಶಸ್ವರೂಪನಾಗಬೇಡ ಎಲೈ ಬಾದರಮಣಿಯೇ । ಆ ಕಾರಣದಿಂದಲೇ ನನ್ನ ಕತ್ತು ಮತ್ತು ಎದೆಯಭಾಗಗಳನ್ನು ಹಿಂಸಿಸಬೇಡ । ಮಂಗಳಸ್ವರೂಪನಾಗಿ ನೀನು ನನ್ನ ದೀರ್ಘಾಯುಸ್ಸಿಗಾಗಿ ಕುತ್ತಿಗೆಯಲ್ಲಿ ಇರು । ನೂರುವರ್ಷಗಳ ಕಾಲ ಹಾಗೂ ನೂರು ಶರದೃತುವನ್ನು ಕಾಣಲಿಕ್ಕಾಗಿ, ಹಾಗೂ ನೂರುವರ್ಷಗಳ ಕಾಲ ಕಾಂತಿಯುಳ್ಳವನಾಗಿ ಜೀವನ ನಡೆಸುವುದಕ್ಕಾಗಿ ಹಾಗೂ ಅತ್ಯುತ್ಕೃಷ್ಟ ಪುಣ್ಯಕರ್ಮಗಳಿಂದ ಕೂಡಿದ ನೂರುವರ್ಷಗಳ ಬಾಳಿಗಾಗಿ ನನ್ನ ಕುತ್ತಿಗೆಯಲ್ಲಿರು ॥

೨೭. ಓಂ ರೇವತೀಸ್ತ್ವಾ ವ್ಯಕ್ಷ್ಣನ್ಕೃತ್ತಿಕಾ ಶ್ಚಾಕೃನ್ತ್ಗ್ಂ ಸ್ತ್ವಾ । ಧಿಷಣೋ ವಯನ್ನವಗ್ಂ ಅವ್ಯಂಜನ್ ಸಹಸ್ರ ಮಂತಾಗ್ಂ ಅಭಿತೋ ಅಯಚ್ಛನ್ ॥

ದೇವೀರ್ದೇವಾಯ ಪರಿಧೀ ಸವಿತ್ರೇ ಮಹತ್ತದಾಸಾಮಭವನ್ಮಹಿತ್ವನವ್ ॥

ಎಲೈ ವಸ್ತ್ರವೇ, ನಿನ್ನನ್ನು ರೇವತೀದೇವತೆಗಳು ವಿವಿಧವಾಗಿ ಹೆಣೆದಿದ್ದಾರೆ । ಕೃತ್ತಿಕಾದೇವತೆಗಳು ನಿನ್ನನ್ನು ದಾರವಾಗಿ ಪೋಣಿಸಿದ್ದಾರೆ । ಧೀದೇವತೆಗಳು ನಿನ್ನನ್ನು ಉದ್ದ ಮತ್ತು ಅಡ್ಡಲಾಗಿ ಹೆಣೆದಿದ್ದಾರೆ । ಗ್ನಾ ದೇವತೆಗಳು ಮಧ್ಯೆ ಛಿದ್ರವಿಲ್ಲದಂತೆ ಮಾಡಿದ್ದಾರೆ । ಇನ್ನೂ ಬೇರೆ ಸಾವಿರಾರು ದೇವತೆಗಳು ಅಂಚಿನ ದಾರಗಳನ್ನು ಕೊಡುವುದರ ಮೂಲಕ ಅಂಚನ್ನು ನಿರ್ಮಿಸಲು ಕಾರಣರಾಗಿದ್ದಾರೆ ॥

ಸಾವಿರಾರು ದೇವತೆಗಳು ಸವಿತೃದೇವನಿಗೆ ಸಂಬಂಧಿಸಿದ ಈ ಪರಿಧಾನವನ್ನು (ಉಡುವ+ಹೊದೆಯುವ ವಸ್ತ್ರ) ನಿರ್ಮಿಸಲು ಕಾರಣರಾಗಿದ್ದಾರೆ । ಆದ್ದರಿಂದ ಅಂತಹ ಸಾವಿರಾರು ದೇವತೆಗಳಿಗೆ ಮತ್ತು ಸವಿತೃದೇವನಿಗೆ ಸಂಬಂಧಿಸಿದ ಈ ವಸ್ತ್ರವು ಅತ್ಯಂತ ಮಹತ್ವವುಳ್ಳದ್ದಾಗಿದೆ ॥

೨೮. ಓಂ ಯಾ ಅಕೃಂತನ್ನವಯನ್, ಯಾ ಅತನ್ವತ ಯಾಶ್ಚ ದೇವೀ ರಂತಾನಭಿತೋ ದದಂತ । ತಾಸ್ತ್ವಾದೇವೀರ್ಜರಸೇ ಸಂವ್ಯಯಂತ್ವಾಯುಷ್ಮಾನಿದಂ ಪರಿಧತ್ಸ್ವ ವಾಸಃ ॥

ಪರಿಧತ್ತ ಧತ್ತವಾಸ ಏನಗ್ಂ ಶತಾಯುಷಂ ಕೃಣುತ ದೀರ್ಘಮಾಯುಃ । ಬೃಹಸ್ಪತಿಃ ಪ್ರಾಯಚ್ಛದ್ವಾಸ ಏತತ್ ಸೋಮಾಯ ರಾಜ್ಞೇ ಪರಿಧಾತ ವಾ ಉ ॥

ಜರಾಂಗಚ್ಛಾಸಿ ಪರಿಧತ್ಸ್ವ ವಾಸೋ ಭವಾ ಕೃಷ್ಟೀನಾಮಭಿಶಸ್ತಿ ಪಾವಾ । ಶತಂ ಚ ಜೀವ ಶರದಸ್ಸುವರ್ಚಾ ರಾಯಶ್ಚ ಪೋಷಮುಪ ಸಂವ್ಯಯಸ್ವ ॥

ಯಾವ ದೇವತೆಗಳು, ನಿನ್ನ ದಾರವನ್ನು ನಿರ್ಮಿಸಿದರೋ, ಯಾವ ದೇವತೆಗಳು ನಿನ್ನನ್ನು ಹೆಣೆದರೋ, ಯಾವ ದೇವತೆಗಳು ನಿನ್ನ ವಿಸ್ತಾರಕ್ಕೆ ಕಾರಣರಾದರೋ, ಯಾವ ದೇವತೆಗಳು ಎರಡೂ ಭಾಗಗಳಲ್ಲಿ ನಿನ್ನ ಅಂಚನ್ನು ನಿರ್ಮಿಸಿದರೋ, ಆ ರೇವತೀ ಮುಂತಾದ ದೇವತೆಗಳು ಹೇಗೆ ನೀನು ಜರೆ(ಆಚ್ಛಾದಕನಾಗುವೆಯೋ)ಯನ್ನು ಹೊಂದುವೆಯೋ ಹಾಗೆ, ನಿನ್ನನ್ನು, (ವಸ್ತ್ರವನ್ನು) ವರನಿಗೆ ಉಡಿಸಲಿ । ಎಲ್ಯೆ ವರನೇ ನೀನಾದರೋ ಈ ವಸ್ತ್ರವನ್ನು ಉಡುವುದರ ಮೂಲಕ ಆಯುಷ್ಮಂತನಾಗು ॥

ಎಲ್ಯೆ ರೇವತ್ಯಾದಿ ದೇವತೆಗಳೇ, ಈ ವರನನ್ನು ವಸ್ತ್ರದಿಂದ ಆಚ್ಛಾದನೆಗೊಳಿಸಿರಿ । ಹಾಗೆಯೇ ಇವನನ್ನು ನೂರುವರ್ಷಗಳು ಬಾಳುವಂತೆ ಮಾಡಿರಿ । ದೀರ್ಘಾಯುವಿಗೆ ಕಾರಣವಾದ ಈ ವಸ್ತ್ರವನ್ನು ಬೃಹಸ್ಪತಿದೇವನು ಸೋಮರಾಜನಿಗೆ ಉಡಲು ಕೊಟ್ಟನಲ್ಲವೇ ! ॥

ಈ ವಸ್ತ್ರವನ್ನು ಉಟ್ಟು, ಜರೆಯನ್ನು(ದೀರ್ಘಾಯುತ್ವವನ್ನು) ಹೊಂದುವವನಾಗುತ್ತೀಯೇ । ಸ್ವಬಂಧುಗಳಿಗೆ ಬೇಡಿದ್ದನ್ನು ಕೊಡುವುದರ ಮೂಲಕ ರಕ್ಷಕನಾಗಿರು । ನೂರುವರ್ಷಗಳ ಕಾಲ ಒಳ್ಳೆಯ ಬ್ರಹ್ಮತೇಜಸ್ಸಿನಿಂದ ಕೂಡಿದವನಾಗಿ, ಐಶ್ವರ್ಯ ಮತ್ತು ಬಲಗಳಿಂದ ಕೂಡಿದವನಾಗಿ ಹೇಗೆ ವಸ್ತ್ರವು (ಉತ್ತಮರೀತಿಯಲ್ಲಿ ರಚಿತವಾಗಿ ಹೆಚ್ಚುಕಾಲ

ಕಾಂತಿಯಿಂದಲೂ ಮತ್ತು ದೃಢವಾಗಿಯೂ ಇರುತ್ತದೆಯೋ) ಐಶ್ವರ್ಯ ಬಲಗಳಿಂದ ಕೂಡಿರುತ್ತದೆಯೋ ಹಾಗೆ ನೀನು ಬಾಳು ॥

೨೯. ಓಂ ಪರೀದಂ ವಾಸೋ ಅಧಿಧಾಸ್ಸ್ವಸ್ತಯೇ ಭೂರಾಪೀನಾಮಭಿಶಸ್ತಿಪಾವಾ ।
ಶತಂ ಚ ಜೀವ ಶರದಃ ಪುರೂಚೀರ್ವಸೂನಿ ಚಾರ್ಯೋ ವಿಭಜಾಸಿ ಜೀವನ್ ॥

ನೀನು ಈ ವಸ್ತ್ರವನ್ನು ಉಟ್ಟವನಾಗಿದ್ದೀಯೇ । ಈ ವಸ್ತ್ರದ ಕಾರಣದಿಂದ ಎಲ್ಲ ಮಂಗಳವೂ ನಿನಗೆ ಉಂಟಾಗಲಿ । ನೀನು ಈ ವಸ್ತ್ರವನ್ನುಟ್ಟವನಾಗಿ ನಿನ್ನ ಆಪ್ತರಾದ ಜ್ಞಾತಿಗಳಿಗೆ ರಕ್ಷಕನಾಗಿ, ಪೋಷಕನಾಗಿದ್ದೀಯ । ನೂರುವರ್ಷಗಳಕಾಲ ಬಾಳುವವನಾಗಿದ್ದೀಯೆ । ಬಹಳ ಐಶ್ವರ್ಯವಂತನಾಗಿ ಗೌರವಾದರಗಳನ್ನು ಗಳಿಸಿದವನಾಗಿ, ಬೇರೆಯವರಿಗೆ ಸಂಪತ್ತನ್ನು ದಾನಮಾಡುವವನೂ ಹಾಗೂ ಸ್ವಯಂ ಐಶ್ವರ್ಯವಂತನೂ ಆಗುವವನಾಗಿದ್ದೀಯೇ । ಲೋಕದಲ್ಲಿ ಯಾರು ಐಶ್ವರ್ಯವಂತನೋ, ಅವನನ್ನೇ ಚೆನ್ನಾಗಿ ಬಾಳಿದವನೆನ್ನುತ್ತಾರೆ ॥

ಈಶದ್ಧೌತಂ ನವ ಶ್ವೇತಂ ಸದಶಂ ಯನ್ನಧಾರಿತಮ್ ।
ಅಹತಂತು ವಿಜಾನೀಯಾತ್ ಸರ್ವ ಕರ್ಮಸು ಪಾವನಮ್ ॥

ಒಗೆದಂತಹ, ಹೊಸದಾದ, ಬಿಳಿಯಾದ, ಅಂಚಿನಿಂದ ಕೂಡಿದ, ಬೇರೆಯವರು ಧರಿಸದೇ ಇರುವ । ಹರಿಯದಿರುವ, ಇಂತಹ ಲಕ್ಷಣಗಳಿರುವ ಬಟ್ಟೆಯನ್ನು ಎಲ್ಲಾ ಕರ್ಮಗಳಲ್ಲೂ ಉಡಬೇಕು ॥

೩೦. ಓಂ ಆಯುಷ್ಯಂ ವರ್ಚಸ್ಯಗ್ಂ ಸುವೀರ್ಯಗ್ಂ ರಾಯಸ್ಪೋಷಮೌದ್ಭಿದ್ಯಂ ।
ಇದಗ್ಂ ಹಿರಣ್ಯಂ ಜೈತ್ರಾಯ ಯಾವಿಶತಾಂ ಮಾಗ್ ಸ್ವಾಹಾ – ಹಿರಣ್ಯಾಯ
ಇದಂ ನಮಮ ॥

ಆಯಸ್ಸಿಗೆ ಕಾರಣನಾದ, ಹಾಗೂ ಬ್ರಹ್ಮವರ್ಚಸ್ಸಿಗೆ ಕಾರಣವಾದ, ಬಲಕ್ಕೆ ಕಾರಣವಾದ, ಸಂಪತ್ತಿನ ಪೋಷಕನಾದ ಅತ್ಯಂತ ಕಾಂತಿಯಿಂದ ಕೂಡಿ ನಮಗೆ ಕೀರ್ತಿಯನ್ನು ತರುವ । ಯಾವ ಸುವರ್ಣವಿದೆಯೋ, ಅದು ಜಯಕ್ಕೆ ಕಾರಣವಾದದ್ದಾಗಿದೆ । ಆದ್ದರಿಂದ ಆ ಜಯವು ನನಗೆ ಎಲ್ಲ ಕರ್ಮಗಳಲ್ಲೂ ಸಿಗುವಂತಾಗಲಿ ॥

೩೧. ಓಂ ಉಚ್ಚೈರ್ವಾದಿ ಪತನಾಜಿ ಸತ್ವಾಸಾಹಂ ಧನಂಜಯವಮ್ ।
ಸರ್ವಾಸ್ಸಮೃದ್ಧೀರ್ ಋದ್ಧಂಯೋ ಹಿರಣ್ಯೇಸ್ಮಿನ್ನಹಂ ಸಮಾಹಿತಾಸ್ಸ್ವಾಹಾ
– ಹಿರಣ್ಯಾಯ ಇದಂ ನಮಮ ॥

ಬಹಳ ಚಿನ್ನವನ್ನುಳ್ಳ ಮನುಷ್ಯರೇ ಗಟ್ಟಿಯಾಗಿ ಮಾತನಾಡುವವರಾಗಿರುತ್ತಾರೆ ! । ಆದ್ದರಿಂದ ಗಟ್ಟಿಯಾದ ಮಾತನ್ನಾಡಿಸುವ, ಶತ್ರುಗಳನ್ನು ಜಯಿಸುವ ಮತ್ತು ಶತ್ರುಗಳ ಸತ್ಯತ್ವವನ್ನು ಜಯಿಸುವ, ಶತ್ರುಗಳ ಹಣವನ್ನು ಜಯಿಸುವ ಮತ್ತು ಎಲ್ಲಾ ರೀತಿಯಾದ ಸಮೃದ್ಧಿಗೆ ಕಾರಣವಾದ ಈ ಚಿನ್ನದಲ್ಲಿ ನಾವು ಇರುವಂತಾಗಲಿ(ಯಾವಾಗಲೂ ಐಶ್ವರ್ಯವಂತರಾಗಿ ಇರುವಂತೆ ಆಗಲಿ) । ಹಾಗೂ ಎಲ್ಲಾ ಸಮೃದ್ಧಿಗಳೂ ಈ ಚಿನ್ನದಲ್ಲೇ ಇದೆ ॥

೩೨. ಓಂ ಶುನಮಹಗ್ಂ ಹಿರಣ್ಯಸ್ಯ ಪಿತುರಿವ ನಾಮಾಗ್ರಭೈಷವಮ್ ।
ತಂ ವಾ ಹಿರಣ್ಯವರ್ಚಸಂ ಪೂರುಷು ಪ್ರಿಯಂ ಕುರು ಸ್ವಾಹಾ –
ಹಿರಣ್ಯಾಯ ಇದಂ ನಮಮ ॥

ಎಲೈ ಚಿನ್ನವೇ, ನಿನ್ನ ಹೆಸರಾದ ಸುಖ ರೂಪವಾದ 'ಶುನ' ಎಂಬ ಹೆಸರನ್ನು ನಾನು ಹೇಗೆ ಮಗನು ತನ್ನ ತಂದೆಯ ಹೆಸರನ್ನು ಮತ್ತೆ ಮತ್ತೆ ಆದರದಿಂದ ಹೇಳುತ್ತಾನೋ ಹಾಗೆ, ನಿನ್ನ ಹೆಸರನ್ನು ಮತ್ತೆಮತ್ತೆ ಹೇಳುವ ನನ್ನನ್ನು ಐಶ್ವರ್ಯವಂತನನ್ನಾಗಿಯೂ(ಸುವರ್ಣ), ಸುವರ್ಣದಂತೆ ಕಾಂತಿಯುಳ್ಳವನನ್ನಾಗಿಯೂ ಮಾಡು । ಹೇಗೆ ನೀನು ಎಲ್ಲರಿಗೂ ಪ್ರಿಯವೋ, ಹಾಗೆ ನನ್ನನ್ನು ಎಲ್ಲರಿಗೂ ಪ್ರಿಯನಾಗಿರುವಂತೆ ಮಾಡು ಹಾಗೂ ಎಲ್ಲರೂ ನನ್ನನ್ನು ಪ್ರೀತಿಸುವಂತೆ ಮಾಡು ॥

೩೩. ಓಂ ಪ್ರಿಯಂ ಮಾ ದೇವೇಷು ಕುರು ಪ್ರಿಯಂ ಮಾ ಬ್ರಹ್ಮಣೇ ಕುರು । ಪ್ರಿಯಂ ವಿಶ್ಯೇಷು ಶೂದ್ರೇಷು ಪ್ರಿಯಗ್ಂ ರಾಜಸು ಮಾ ಕುರು ಸ್ವಾಹಾ – ಹಿರಣ್ಯಾಯ ಇದಂ ನಮಮ ॥

ದೇವತೆಗಳಿಗೆ ನಾನು ಪ್ರಿಯವಾಗುವಂತೆ ಮಾಡು, ಬ್ರಾಹ್ಮಣರಿಗೆ ನಾನು ಪ್ರಿಯವಾಗುವಂತೆ ಮಾಡು, ವೈಶ್ಯರಿಗೆ, ರಾಜರಿಗೆ, ಕ್ಷತ್ರಿಯರಿಗೆ, ಶೂದ್ರರಿಗೆ ನಾನು ಪ್ರಿಯವಾಗುವಂತೆ ಮಾಡು ॥

೩೪. ಓಂ ಯಾ ತಿರಶ್ಚೀ ನಿಪದ್ಯಸೇsಹಂ ವಿಧರಣೀ ಇತಿ । ತಾಂ ತ್ವಾ ಘೃತಸ್ಯ ಧಾರಯಾ ಯಜೇ ಸಗ್ಂರಾಧನೀ ಮಹಗ್ಂ ಸ್ವಾಹಾ – ಸಗ್ಂ ರಾಧನ್ಯಾ ಇದಂ ನಮಮ ॥

ಸಮ್ರಾಧನೀ ಎಂಬ ಹೆಸರಿನ ದೇವತೆಯು ಇದೆಯೆಂದು ಕೆಲವರು ಹೇಳುತ್ತಾರೆ, ಇನ್ನು ಕೆಲವರು ಭೂಮಿಯೇ ಸಮ್ರಾಧನೀ ಎಂದು ಹೇಳುತ್ತಾರೆ। ಇನ್ನು ಕೆಲವರು ವಾಗ್ದೇವತೆಯೆಂದು ಹೇಳುತ್ತಾರೆ। ಅಂತಹ ಎಲೈ ದೇವತೆಯೇ ನೀನು ಅಡ್ಡಲಾಗಿ ಎಲ್ಲರನ್ನೂ ಧರಿಸುತ್ತೇನೆಂದು ಚಿಂತಿಸಿ, ಭೂಮಿರೂಪದಿಂದ ಮಲಗಿದ್ದೀಯೋ ಅಥವಾ ಹೋಮಾದಿಗಳಿಗೆ ವಿಘ್ನವನ್ನುಂಟುಮಾಡುವ ದುಷ್ಟರ ನಿವಾರಣೆಗಾಗಿ ವಾಕ್ರೂಪದಿಂದ ನೀನು ಅವರನ್ನು ತಡೆಯಲು ನಿಂತಿರುತ್ತೀಯೇ । ಅಂತಹ ನಿನ್ನನ್ನು ತುಪ್ಪದಧಾರೆಯಿಂದ ನಾನು ಪೂಜಿಸುತ್ತೇನೆ ॥

೩೫. ಓಂ ಸಗ್ಂರಾಧನ್ಯೈ ದೇವ್ಯೈ ಸ್ವಾಹಾ ॥

ಅತ್ಯಂತವಾಗಿ ಎಲ್ಲವನ್ನೂ ಸಾಧಿಸುವ ಸಗ್ಂರಾಧನೀ ದೇವತೆಗೆ ಈ ಹವಿಸ್ಸು ಅರ್ಪಿತವಾಗಲಿ ॥

೩೬. ಓಂ ಪ್ರಸಾಧನ್ಯೈ ದೇವ್ಯೈ ಸ್ವಾಹಾ ॥

ಎಲ್ಲವನ್ನೂ ಪ್ರೇರೇಪಿಸುವ ಪ್ರಸಾಧನೀ ದೇವತೆಗೆ ಈ ಹವಿಸ್ಸು ಅರ್ಪಿತವಾಗಲಿ ॥

೩೭. ಓಂ ಸಂರಾಜಂ ಚ ವಿರಾಜಂ ಚಾಭಿ ಶ್ರೀರ್ಯಾಚನೋ ಗೃಹೇ । ಲಕ್ಷ್ಮೀ ರಾಷ್ಟ್ರಸ್ಯ ಯಾ ಮುಖೇತಯಾ ಮಾ ಸಗ್ಂಸೃಜಾಮಸಿ ಸ್ವಾಹಾ – ಶ್ರೀಲಕ್ಷ್ಮೀಭ್ಯಾಂ ಇದಂ ನಮಮ ॥

ಯಾವ ನನ್ನ ಮನೆಯಲ್ಲಿರುವ ಐಶ್ವರ್ಯಾದಿಗಳಿವೆಯೋ ಹಾಗೂ ಯಾವ ರಾಷ್ಟ್ರದ ಐಶ್ವರ್ಯಾದಿಗಳಿವೆಯೋ ಅವೆರಡರ ಜೊತೆ ನನ್ನನ್ನು ಸೇರಿಸುತ್ತೇನೆ। ಹಾಗೂ ಒಳ್ಳೆಯ ದೀಪ್ತಿಯಿಂದಲೂ ಹಾಗೂ ಅನೇಕರೀತಿಯಾದ ಕಾಂತಿಯಿಂದಲೂ ನನ್ನನ್ನು ಸೇರಿಸಿಕೊಳ್ಳುತ್ತೇನೆ ॥

೩೮. ಓಂ ಶುಭಿಕೇಶಿರ ಆರೋಹ ಶೋಭಯಂತೀ ಮುಖಂ ಮಮ ।
ಮುಖಗ್ಂ ಹಿ ಮಮ ಶೋಭಯ ಭೂಯಾಗ್ಂ ಸಂ ಚ ಭಗಂ ಕುರು ॥

ಯಾಮಾಹರಜ್ಜಮದಗ್ನಿಶ್ರದ್ಧಾಂಯೈ ಕಾಮಾ ಯಾನ್ಯೈ । ಇಮಾಂ ತಾ
ಮಪಿನಹ್ಯೇನಂ ಭಗೇನ ಸಹ ವರ್ಚಸಾ ॥

ಎಲೈ ಶುಭದಾಯಿನಿಯಾದ ಮಾಲೆಯೇ, ನನ್ನ ಶಿರಸ್ಸನ್ನು ಆರೋಹಣ ಮಾಡು(ಹತ್ತು) । ನನ್ನ ಮುಖವನ್ನು ಶೋಭೆಗೊಳಿಸುತ್ತಾ, ಹಾಗೂ ಮತ್ತೆ ಮತ್ತೆ ನನ್ನನ್ನು ಕಾಂತಿಯುಳ್ಳವನನ್ನಾಗಿ ಮಾಡುತ್ತಾ, ನನ್ನ ತಲೆಯಮೇಲೆ ಹತ್ತು । ಹಾಗೂ ಅತ್ಯಂತವಾದಂತಹ ಸೌಭಾಗ್ಯವನ್ನು ಉಂಟುಮಾಡು ॥

ಯಾವ ಮಾಲೆಯನ್ನು ಜಮದಗ್ನಿ ಮಹರ್ಷಿಗಳು ತಂದರೋ, ಶ್ರದ್ಧಾದೇವಿಯು ಇಷ್ಟಪಟ್ಟ ಇಂತಹಾ ಮಾಲೆಯನ್ನು ನಾನು ತೇಜಸ್ಸಿನೊಡನೆ ತಲೆಯಮೇಲೆ ಧರಿಸುತ್ತೇನೆ ॥

೩೯. ಓಂ ಯದಾಂಜನಂ ತ್ರ್ಯಕಕುದಂ ಜಾತಗ್ಂ ಹಿಮವತ ಉಪರಿ ।
ತೇನ ವಾ ಮಾಂಜೀ ತೇಜಸೇ ವರ್ಚಸೇ ಭಗಾಯ ಚ ॥

ಮಯಿ ಪರ್ವತ ಪೂರುಷಂ ಮಯಿ ಪರ್ವತ ವರ್ಚಸಂ ಮಯಿ ಪರ್ವತ
ಭೇಷಜಂ ಮಯಿ ಪರ್ವತಾಯುಷವ್ ॥

ತ್ರಿಕಕುತ್ ಎಂಬ ಪರ್ವತವಿದೆ । ಆ ಪರ್ವತದಮೇಲೆ ಹಿಮವತ್ಪರ್ವತವಿದೆ । ಅದರಮೇಲೆ ಜನ್ಮತಾಳಿದ ಈ ಕಾಡಿಗೆಯಿಂದ ಎಲೈ ೨ ಕಣ್ಣುಗಳೇ ನಿಮಗೆ ಲೇಪನವನ್ನು, ಕಾಂತಿಗಾಗಿ – ದೀಪ್ತಿಗಾಗಿ–ತೇಜಸ್ಸಿಗಾಗಿ ಹಾಗೂ ಸೌಭಾಗ್ಯಕ್ಕಾಗಿ ಮಾಡುತ್ತೇನೆ ॥

ಪರ್ವತದಲ್ಲಿ ಓಡಾಡಲು, ಹತ್ತಲು, ಜೀವನನಡೆಸಲು ಯಾವ ಪೌರುಷಬೇಕೋ ಆ ಪೌರುಷವು ನನಗೆ ಬರಲಿ । ಪರ್ವತದ ಕಾಂತಿ ಹಾಗೂ ಅದರ ಕಾಠಿಣ್ಯ ಹಾಗೂ ಪರ್ವತದಲ್ಲಿರುವ ಔಷಧಿವನಸ್ಪತಿಗಳ ರೋಗನಿರೋಧಕಶಕ್ತಿ ಹಾಗೂ ಪರ್ವತದ ಆಯುಷ್ಯ ಇವೆಲ್ಲವೂ ನನಗೆ ಇರಲಿ ॥

೪೦. ಓಂ ಯನ್ಮೇವರ್ಚಃ ಪ್ರರಾಗತ್ಮಾತ್ಮಾನಮುಪತಿಷ್ಠತು । ಇದಂ ತತ್ಪುನರಾದದೇ ದೀರ್ಘಾಯುತ್ವಾಯ ವರ್ಚಸೇ ॥

ಯಾವ ನನ್ನ ಬ್ರಹ್ಮವರ್ಚಸ ಕಾಂತಿಯು ನನ್ನನ್ನು ಬಿಟ್ಟು ದೂರ ಹೋಗಿದೆಯೋ, ಆ ಕಾಂತಿಯು ಕನ್ನಡಿಯ ಮೇಲಿರುವ ನನ್ನ ಬಿಂಬವನ್ನು ಕುರಿತು ಬಂದು ಸೇರಲಿ । ಆ ಕಾಂತಿಯನ್ನು ದೀರ್ಘಾಯಸ್ಸಿಗಾಗಿ ಹಾಗೂ ಕಾಂತಿಸಮೃದ್ಧಿಗಾಗಿ ಮತ್ತೆ ಪಡೆಯುವೆ ॥

೪೧. ಓಂ ಪ್ರತಿಷ್ಠೇಸ್ಥೋ ದೇವತಾನಾಂ ಮಾಮಾ ಸಂತಾಪ್ತಮ್ ॥

ಎಲೈ ಪಾದರಕ್ಷೆಗಳೇ, ನೀವು ಓಡಾಡಲು ಸಾಧನರಾಗಿದ್ದೀರಿ । ಕೇವಲ ಮನುಷ್ಯರಿಗಲ್ಲದೇ ದೇವತೆಗಳಿಗೂ ಓಡಾಡುವ ಸಾಧನರಾಗಿದ್ದೀರಿ । ಅಂತಹಾ ನೀವು ನಮಗೆ ಮುಳ್ಳು ಮುಂತಾದವುಗಳಿಂದ ನೋವಾಗದಂತೆ ಮಾಡಿರಿ ॥

೪೨. ಓಂ ಪ್ರಜಾಪತೇಶ್ಚರಣಮಸಿ ಬ್ರಹ್ಮಣಶ್ಛದಿರ್ವಿಶ್ವ ಜನಸ್ಯ ಛಾಯಾಽಸಿ ಸರ್ವತೋ ಮಾ ಪಾಹಿ ॥

ಎಲೈ ಛತ್ರವೇ, ನೀನು ಪ್ರಜಾಪತಿಯ ಮನೆಯಾಗಿರುವೆ । ಬ್ರಹ್ಮನಿಗೆ ಆಚ್ಛಾದನೆಯಾಗಿರುವೆ । ನೀನು ಎಲ್ಲ ಜನರಿಗೂ ನೆರಳನ್ನು ಉಂಟುಮಾಡುವುದಾಗಿದ್ದೀಯೆ । ನೀನು ಅತ್ಯಂತ ಪ್ರಶಸ್ತವಾಗಿದ್ದೀಯೆ । ಅಂತಹಾ ನೀನು ಎಲ್ಲಾ ಕಡೆಗಳಿಂದಲೂ ಕಾಪಾಡು ॥

೪೩. ಓಂ ದೇವಸ್ಯತ್ವಾ ಸವಿತುಃ ಪ್ರಸವೇಽಶ್ವಿನೋರ್ಬಾಹುಭ್ಯಾಂ ಪೂಷ್ಣೋ ಹಸ್ತಾಭ್ಯಾಮಾದದೇ ದ್ವಿಷತೋ ವಧಾಯೇಂದ್ರಸ್ಯ ವಜ್ರೋಽಸಿ ವಾರ್ತ್ರಘ್ನಶ್ಚರ್ಮ ಮೇ ಭವ ಯುತ್ಪಾಪಂ ತಂ ನಿವಾರಯ ॥

೪೩. ಸವಿತೃದೇವನ ಅನುಜ್ಞೆಯನ್ನು ಪಡೆದು, ಅಶ್ವಿನೀದೇವತೆಗಳ ಭುಜಗಳಿಂದ, ಪೂಷದೇವತೆಯ ೨ ಕೈಗಳಿಂದ ಎಲೈ ದಂಡವೇ ನಿನ್ನನ್ನು ದ್ವೇಷಿಸುವವರ ನಾಶಕ್ಕಾಗಿ ನಿನ್ನನ್ನು ತಡೆದುಕೊಳ್ಳುವೆ । ಇಂದ್ರನ ವಜ್ರಾಯುಧಕ್ಕೆ ಸಮನಾಗಿರುವೆ । ಹೇಗೆ ಇಂದ್ರನು ವಜ್ರಾಯುಧದಿಂದ ಶತ್ರುಗಳನ್ನು(ವೃತ್ರಾಸುರನನ್ನು) ನಾಶಮಾಡುತ್ತಾನೋ, ಹಾಗೆ ನೀನು ಶತ್ರುಗಳ ನಾಶಕ್ಕಾಗಿ ನನ್ನ ಪಾಪಗಳೆಲ್ಲವನ್ನೂ ಕಳೆದು ಸುಖವನ್ನು ಉಂಟುಮಾಡುವವನಾಗು ॥

ಳಳ. ಓಂ ದೇ॒ವೀಷ್ಷ॑ಡುರ್ವೀ॒ರು॑ರು॒ಣಃ ಕೃ॑ಣೋತ॒ ವಿಶ್ವೇ॑ದೇವಾಸ ಇ॒ಹ ವೀ॑ರಯಧ್ವಮ್ ॥

ಎಲೈ ದೇವತೆಗಳೇ, ನೀವು ಊರ್ಧ್ವ–ಅಧೋಭಾಗಗಳಿಂದ ೬ ಸಂಖ್ಯೆಗಳನ್ನು ಉಳ್ಳವರಾಗಿದ್ದೀರಿ। ಮತ್ತು ಅತ್ಯಂತ ವಿಸ್ತಾರವಾದಂತಹ ಸ್ವರೂಪವನ್ನು ಪಡೆದವರಾಗಿದ್ದೀರಿ। ಆದ್ದರಿಂದ ನಮಗೆ ಹೆಚ್ಚಿನ ಸಂಪತ್ತನ್ನು ಕೊಡುವವರಾಗಿ । ಎಲೈ ವಿಶ್ವೇದೇವತೆಗಳೇ (ದಿಗ್ದೇವತೆಗಳೇ) ನೀವು ಈ ಕರ್ಮದಲ್ಲಿ, ಅತ್ಯಂತ ಪ್ರೀತಿಯುಳ್ಳವರಾಗಿ ನನ್ನ ಕರ್ಮವನ್ನು ವೀರ್ಯವತ್ತರವಾಗಿ ಮಾಡಿ, ವೀರರಾದ ಮಕ್ಕಳು ನಮಗೆ ಉಂಟಾಗುವಂತೆ ಮಾಡಿರಿ ॥

ಳಱ. ಓಂ ಮಾ॒ ಹಾ॑ಸ್ಮಹಿ ಪ್ರ॒ಜಯಾ॒ ಮಾ ತ॒ನೂಭಿ॒ರ್ಮಾ ರ॑ಧಾಮ॒ ದ್ವಿಷ॑ತೇ ಸೋಮರಾಜನ್ ॥

ಎಲೈ ನಕ್ಷತ್ರದೇವತೆಗಳೇ, ನಮ್ಮನ್ನು ನಿಮ್ಮ ಅನುಗ್ರಹದಿಂದ ವಂಚಿತರನ್ನಾಗಿ ಮಾಡದಿರಿ। ಹಾಗೂ ಪ್ರಜೆಗಳಿಂದ ನಮ್ಮನ್ನು ವಂಚಿತರನ್ನಾಗಿ ಮಾಡದಿರಿ। ನಮ್ಮ ಶರೀರಗಳಿಂದ(ಪುತ್ರಾದಿ ಶರೀರಗಳಿಂದ) ನಮ್ಮನ್ನು ವಂಚಿತರನ್ನಾಗಿ ಮಾಡದಿರಿ । ನಮ್ಮನ್ನು ದ್ವೇಷಿಸುವವರಿಗೆ ನಾವು ಅಧೀನರಾಗಿ ಇರದಂತೆ ಮಾಡಿರಿ ॥

ಳಲ. ಓಂ ಮಾ॒ ಹಾ॑ಸ್ಮಹಿ ಪ್ರ॒ಜಯಾ॒ ಮಾ ತ॒ನೂಭಿ॒ರ್ಮಾ ರ॑ಧಾಮ॒ ದ್ವಿಷ॑ತೇ ಸೋಮರಾಜನ್ ॥

ಎಲೈ ಸೋಮದೇವನೇ, ನಮ್ಮನ್ನು ನಿಮ್ಮ ಅನುಗ್ರಹದಿಂದ ವಂಚಿತರನ್ನಾಗಿ ಮಾಡದಿರಿ। ಹಾಗೂ ಪ್ರಜೆಗಳಿಂದ ನಮ್ಮನ್ನು ವಂಚಿತರನ್ನಾಗಿ ಮಾಡದಿರಿ। ನಮ್ಮ ಶರೀರಗಳಿಂದ(ಪುತ್ರಾದಿ ಶರೀರಗಳಿಂದ) ನಮ್ಮನ್ನು ವಂಚಿತರನ್ನಾಗಿ ಮಾಡದಿರಿ । ನಮ್ಮನ್ನು ದ್ವೇಷಿಸುವವರಿಗೆ ನಾವು ಅಧೀನರಾಗಿ ಇರದಂತೆ ಮಾಡಿರಿ ॥

....*********....

೪. ಮಧುಪರ್ಕಃ – ಕಪರ್ದಿಕಾರಿಕಾ

ಸ್ನಾತಕಾಯು ಸಕೃನ್ಮಧುಪರ್ಕತಃ ಗಾರ್ಹ್ಯಕಸ್ಮೃತಿಚೋದಿತ ಏವಂ ಚ ।
ಸ್ನಾನಮಾಚರಿತೇ ದಿನಮಾನಿ: ತಸ್ಯ ನಕ್ತಮಥಾಪಿ ಸಮಿಷ್ಯತೇ ।
ಆಚಾರ್ಯಾಯು ಋತ್ವಿಜೇರಾಜ್ಞೇ ಮಧುಪರ್ಕೋ ಗವಾ ಸಹ ॥೧॥

ಸ್ನಾತಕನಿಗೆ ಒಂದೇಸಲ ಮಧುಪರ್ಕವು ಎಂದು ಗೃಹಸ್ಥಧರ್ಮವನ್ನು ವಿಧಿಸುವ ಸ್ಮೃತಿಯು ಹೇಳಿದೆ। ಏಕೆಂದರೆ, ಸ್ನಾತಕನು ಅನಾಶ್ರಮಿಯಾಗಿರುವುದರಿಂದ ಹಾಗೂ ಅನಾಶ್ರಮಿಯಾಗಿ ಒಂದು ದಿನವೂ ಇರಕೂಡದೆಂಬ ನಿಯಮವಿರುವುದರಿಂದ, ಸ್ನಾತಕವ್ರತವನ್ನು ಆಚರಿಸಿದ ದಿನವೇ ರಾತ್ರಿಯಾದರೂ ಸಹಾ ಈ ಮಧುಪರ್ಕ ವಿಧಿಯನ್ನು ಮಾಡಬೇಕು । ವೇದಶಾಸ್ತ್ರಗಳನ್ನು ಹೇಳಿಕೊಟ್ಟ ಆಚಾರ್ಯನಿಗೆ ಹಾಗೂ ಋತ್ವಿಜರಿಗೆ ಹಾಗೂ ರಾಜನಿಗೆ, ಗೋವಿನ ಮಾಂಸದ ಭೋಜನದೊಂದಿಗೆ ಮಧುಪರ್ಕವಿಧಿಯನ್ನು ಮಾಡತಕ್ಕದ್ದು ॥

ಗೃಹ್ಯೋಕ್ತ ಧರ್ಮಯುಕ್ತೋ ವಾ ಪೂರ್ಣೇ ಸಂವತ್ಸರೇ ಪುನಃ ।
ವರಸ್ಯ ಯುಸ್ಯ ಯುಚ್ಛಾಖಾ ತಚ್ಛಾಖಾಗೃಹ್ಯಚೋದಿತಮ್ ।
ಮಧುಪರ್ಕಃ ಪ್ರದಾತವ್ಯೋ ಹ್ಯನ್ಯಶಾಖೇsಪಿ ದಾತರಿ ॥೨॥

ಗೃಹ್ಯಸೂತ್ರದಲ್ಲಿ ಹೇಳಿರುವ ವಿಧಿಯಂತೆ, ಒಂದುವರ್ಷ ಕಳೆದಮೇಲೆ ಮತ್ತೆ ವರನಿಗೆ ಅವನು ಯಾವಶಾಖೆಯವನೋ ಆ ಶಾಖೆಯಲ್ಲಿ ವಿಧಿಸಿದ ಮಧುಪರ್ಕವನ್ನು ಮಾಡಬೇಕು। ಕನ್ಯಾದಾತೃವು ಬೇರೇ ಶಾಖೆಯವನಾದರೂ ಕೂಡ, ವರನಿಗೆ ವರನ ಶಾಖೆಯ ವಿಧಿಗೆ ತಕ್ಕಂತೆ ಮಧುಪರ್ಕವನ್ನು ಮಾಡಬೇಕು ॥

ವೇದಾಧ್ಯಾಯೀ ಚ ಶೂರಶ್ಚೇತ್ ತಸ್ಮೈಚಾಪಿ ತಥಾ ಭವೇತ್ ।
ವೇದಾಧ್ಯಾಯೀ ಚ ಶ್ವಶುರಸ್ತಸ್ಮೈ ಚಾಪಿ ತಥಾ ಭವೇತ್ ॥೩॥

ವೇದಾಧ್ಯಯನ ಸಂಪನ್ನನೂ, ಸರ್ವಶಾಸ್ತ್ರವೇತ್ತನೂ ಹಾಗೂ ಶೂರಕ್ಷತ್ರಿಯರು(ರಾಜ) ಇವರಿಗೂ ಮೇಲೆ ಹೇಳಿದಂತೆ, ಒಂದುವರ್ಷಬಿಟ್ಟು ಮನೆಗೆ ಬಂದರೆ, ಮಧುಪರ್ಕವನ್ನು ಮಾಡಬೇಕು । ಹಾಗೂ ವೇದಾಧ್ಯಯನ ಸಂಪನ್ನನಾದ ಹೆಣ್ಣುಕೊಟ್ಟ ಮಾವನೂ ಮಧುಪರ್ಕವಾಗಿ ಒಂದುವರ್ಷ ಬಿಟ್ಟುಬಂದರೆ, ಅವರಿಗೂ ಪುನಃ ಮಧುಪರ್ಕವನ್ನು ಮಾಡಬೇಕು ॥

ತಸ್ಮೈ ತ್ವವೇದಾಧ್ಯಾಯಾಯ ಭವೇದ್ಗಾಹ್ರ್ಯೇ ಗವಾ ವಿನಾ ।
ವೇದಾಧ್ಯಾಯಾಯಾತಿಥಯೇ ಧರ್ಮ ಉಕ್ತೋ ಗವಾ ಸಹ ॥೪॥

ಹೆಣ್ಣುಕೊಟ್ಟ ಮಾವನು ವೇದಾಧ್ಯಯನ ಸಂಪನ್ನನಲ್ಲದಿದ್ದರೆ, ಅವನಿಗೆ ಗೋ ರಹಿತವಾದ ಮಧುಪರ್ಕವನ್ನು ಮಾಡಬೇಕು । ಹಾಗೂ ವೇದಾಧ್ಯಯನ ಸಂಪನ್ನನಾದ ಅತಿಥಿಯು ಮನೆಗೆ ಬಂದರೆ, ಅವನಿಗೆ ಗೋಸಹಿತವಾಗಿ ಮಧುಪರ್ಕವನ್ನು ಮಾಡಬೇಕು ॥

ತಥೈವ ವೇದಾಧ್ಯಾಯಾಯ ವರಾಯಾಪಚಿತಾಯ ಚ ।
ತಾಭ್ಯಾಮವೇದಾಧ್ಯಾಯಿಭ್ಯಾಂ ವಿನಾಪ್ಯನ್ಯತರೋ ಗವಾ ॥೫॥

ಹಾಗೆಯೇ ವೇದಾಧ್ಯಯನ ಸಂಪನ್ನನಾದ ವರನಿಗೆ ಹಾಗೂ ವೇದಾಧ್ಯಯನ ಸಂಪನ್ನರಾದ ಪೂಜನೀಯರಿಗೆ ಗೋಸಹಿತವಾಗಿ ಮಧುಪರ್ಕವನ್ನು ಮಾಡಬೇಕು । ಹಾಗೆಯೇ ವೇದಾಧ್ಯಯನ ಸಂಪನ್ನರಲ್ಲದ ವರ ಹಾಗೂ ಹಿರಿಯರಿಗೆ ಗೋ ರಹಿತವಾದ ಮಧುಪರ್ಕವನ್ನು ಮಾಡಬೇಕು ॥

ಪ್ರವಕ್ತ್ರೇ ಚಾಪಿ ಚಿತ್ರಾಯ ಭವೇದ್ಗಾಹ್ರ್ಯೇ ಗವಾ ಸಹ ।
ಅತಿಥಿರ್ಯಃ ಷಡಂಗಂ ತು ವೇದಂ ಜಾನಾತಿ ಚಾರ್ಥತಃ ।
ವೇದಾಧ್ಯಾಯೀ ತು ಸಪ್ರೋಕ್ತಃ ಪ್ರಕಾಶಶ್ಚಿತ್ರ ಉಚ್ಯತೇ ॥೬॥

ಅತ್ಯಂತ ಪ್ರವಚನ, ಉಪನ್ಯಾಸಗಳಲ್ಲಿ ಚತುರರಾದ ಹಾಗೂ ಅವಧೂತಾದಿಗಳಿಗೆ ಗೋವಿನ ಸಹಿತವಾಗಿ ಮಧುಪರ್ಕವನ್ನು ಮಾಡಬೇಕು । ಯಾವ ಅತಿಥಿಯು ಷಡಂಗವನ್ನು, ವೇದವನ್ನೂ ಅರ್ಥಸಹಿತವಾಗಿ ತಿಳಿದಿದ್ದಾನೋ ಅವನೇ ನಿಜವಾದ ವೇದಾಧ್ಯಾಯಿಯು । ಅವನು ಮಹಾತ್ಮನು, ಅದ್ಭುತಪುರಷನು ಹಾಗೂ ಪವಾಡಪುರುಷನು(ಚಿತ್ರ) ಎಂದೆನಿಸಿಕೊಳ್ಳುತ್ತಾನೆ । ಅಂತಹವನಿಗೂ ಗೋಸಹಿತವಾಗಿ ಮಧುಪರ್ಕವನ್ನು ಮಾಡಬೇಕು ॥

ಸೂತ್ರ ಗೋಮಧುಪರ್ಕಾರ್ಹಃ ಇತ್ಯಸ್ಮಿನ್ ದಕ್ಷಿಣಾ ತು ಗೌಃ ।
ಮಧ್ಯೇ ನ ಮಧುಪರ್ಕಸ್ತು ವತ್ಸರೇ ಸರ್ವಥೈವ ತು ॥೭॥

ವೇದಾಧ್ಯಯನ ಸಂಪನ್ನನು ಗೋ ಸಹಿತವಾದ ಮಧುಪರ್ಕಕ್ಕೆ ಅರ್ಹನು । ಇಲ್ಲಿ, ಗೋವು ದಕ್ಷಿಣಾರೂಪದಲ್ಲಿಯೂ ಕೊಡಲ್ಪಡತಕ್ಕದ್ದು । ಮಧುಪರ್ಕಮಾಡಿ ವರ್ಷವಾಗದೇ ಮಧ್ಯದಲ್ಲಿ ಆಗಮಿಸಿದರೆ, ಆಗ ಮಧುಪರ್ಕವನ್ನು ಮಾಡುವ ಅಗತ್ಯವಿಲ್ಲ ॥

ಯಜ್ಞೋಪವೀತೇ ದ್ವೇ ಧಾರ್ಯೇ ಶ್ರೌತೇ ಸ್ಮಾರ್ತೇ ಚ ಕರ್ಮಣಿ ।
ತೃತೀಯಮುತ್ತರೀಯಾರ್ಥೇ ವಸ್ತ್ರಾಭಾವೇ ತದಿಷ್ಯತೇ ॥೮॥

ಗೃಹಸ್ಥರು, ಶ್ರೌತಸ್ಮಾರ್ತ ಕರ್ಮಗಳನ್ನು ಮಾಡುವುದಕ್ಕಾಗಿ, ಎರಡು ಯಜ್ಞೋಪವೀತದ ಧಾರಣೆಯನ್ನು ಮಾಡಬೇಕು । ಉತ್ತರೀಯ(ಮೇಲಿನ) ವಸ್ತ್ರದ ಅಭಾವದಲ್ಲಿ ಮೂರನೇಯಜ್ಞೋಪವೀತವನ್ನು ಧಾರಣೆ ಮಾಡತಕ್ಕದ್ದು ॥

ಮಧುಪರ್ಕಃ – ಆಪಸ್ತಂಬ ಗೃಹ್ಯಸೂತ್ರಂ

೧. ಯತ್ರಾಸ್ಮಾ ಅರ್ಚಯಂತಿ ತತ್ ಕೂರ್ಚ ಉಪವಿಶತಿ ಯಥಾ ಪುರಸ್ತಾತ್ ॥

ನಂತರ ತನ್ನ ಧರ್ಮದಿಂದ ಕೂಡಿದ ಗೃಹಸ್ಥರ ಮನೆಗೆ ಬಂದ ಈ ಸ್ನಾತಕನು ಮಧುಪರ್ಕಾದಿಗಳಿಂದ ಪೂಜಿಸಿ ಸತ್ಕರಿಸಲ್ಪಡುತ್ತಾನೆ, ಗೃಹಸ್ಥನ ಆ ಮನೆಯಲ್ಲಿ, ಆ ಗೃಹಸ್ಥನು ರಾಷ್ಟ್ರಭೃದಸಿ, ಮಂತ್ರದಿಂದ ಕೂರ್ಚದ ಮೇಲೆ ಸ್ನಾತಕನನ್ನು ಕೂರಿಸಬೇಕು ॥

೨. ಏವಮುತ್ತರಾಭ್ಯಾಂ ಯಥಾ ಲಿಂಗಂ ರಾಜಾ ಸ್ಥಪತಿಶ್ಚ ॥

ಹೇಗೆ ಪೂಜ್ಯನಾದ ಬ್ರಾಹ್ಮಣನು ಮಂತ್ರದಿಂದ ಕೂರ್ಚದ ಮೇಲೆ ಕುಳಿತುಕೊಳ್ಳುತ್ತಾನೋ ಹಾಗೆಯೇ ರಾಜಾ ಮತ್ತು ಸ್ಥಪತಿಗಳು ಯಥಾ ಲಿಂಗವಾಗಿ ರಾಷ್ಟ್ರಭೃದಸಿ, ಸಂರಾಡಾಸಂದೀ ಮತ್ತು ರಾಷ್ಟ್ರಭೃದಸಿ, ಅಧಿಪತ್ನ್ಯಾಸಂದೀ ಮಂತ್ರಗಳಿಂದ ಕೂರಬೇಕು ॥

೩. 'ಆಪಃ ಪಾದ್ಯಾ' ಇತಿ ಪ್ರಾಹ ॥

ನಂತರ ಸತ್ಕರಿಸುವವನು ಪೂಜಿಸಲ್ಪಡುವವನ ಪಾದಪ್ರಕ್ಷಾಳನೆಗಾಗಿ ನೀರನ್ನು ತೆಗೆದುಕೊಂಡು ಆಪಃ ಪಾದ್ಯಾಃ, ಎನ್ನಬೇಕು ॥

೪. ಉತ್ತರಯಾಭಿಮಂತ್ರ್ಯ ದಕ್ಷಿಣಂ ಪಾದಂ ಪೂರ್ವಂ ಬ್ರಾಹ್ಮಣಾಯ ಪ್ರಯಚ್ಛೇತ್ ಸವ್ಯಂ ಶೂದ್ರಾಯ ॥

ಸತ್ಕಾರ ಸ್ವೀಕರಿಸುವವನು ಆಪಃ ಪಾದಾ, ಮಂತ್ರದಿಂದ ನೀರನ್ನು ಅಭಿಮಂತ್ರಿಸಿ, ಪಾದವನ್ನು ತೊಳೆಯುವವನು ಬ್ರಾಹ್ಮಣನಾದರೆ ಮೊದಲು ದಕ್ಷಿಣ(ಬಲ) ಪಾದವನ್ನು ಅಥವಾ ಬ್ರಾಹ್ಮಣೇತರರಾದರೆ ಮೊದಲು ವಾಮ(ಎಡ) ಪಾದವನ್ನು ತೋರಿಸಬೇಕು ॥

೫. ಪ್ರಕ್ಷಾಳಯಿತಾರಮುಪಸ್ಪೃಶ್ಯೋತ್ತರೇಣ ಯಜುಷಾತ್ಮಾನಂ ಪ್ರತ್ಯಭಿಮೃಶೇತ್ ॥

ಯಾರು ಕಾಲು ತೊಳೆಯುತ್ತಾನೋ ಅವನನ್ನು ತೊಳೆಸಿಕೊಳ್ಳುವವನು ತನ್ನ ಕೈಯಿಂದ ನಾಭಿಯನ್ನು ಸ್ಪರ್ಶಿಸಿ ಮಯಿ ಮಹೋ ಮಂತ್ರದಿಂದ ತನ್ನ ಹೃದಯವನ್ನು ಮುಟ್ಟಿಕೊಳ್ಳಬೇಕು ॥

೬. ಕೂರ್ಚಾಭ್ಯಾಂ ಪರಿಗೃಹ್ಯ ಮೃನ್ಮಯೇನ 'ಅರ್ಹಣೀಯಾ ಆಪ' ಇತಿ ಪ್ರಾಹ ॥

ಪಾತ್ರೆಯ ಮೇಲಿನ ಹಾಗೂ ಕೆಳಗೆ ೨ ಕೂರ್ಚಗಳಿಂದ ಹಿಡಿಯಲ್ಪಟ್ಟ ಮಣ್ಣಿನ ಪಾತ್ರೆಯಲ್ಲಿ ಪುಷ್ಪ, ಅಕ್ಷತೆಗಳಿಂದ ಸಂಯುಕ್ತವಾದ ನೀರನ್ನು ತಂದು ಆರ್ಹಣೀಯಾ ಆಪಃ, ಎಂದು ಸತ್ಕಾರ ಮಾಡುವವನು ಹೇಳಬೇಕು ॥

೭. ಉತ್ತರಯಾಭಿಮಂತ್ರ್ಯಾಂಜಲಾವೇಕದೇಶ ಆನೀಯಮಾನ ಉತ್ತರಯಾಜುರ್ಜಪೇತ್ ॥

ನಂತರ ಸತ್ಕಾರ ಸ್ವೀಕರಿಸುವವನು ಆಮಾಗನ್, ಮಂತ್ರದಿಂದ ಆ ನೀರನ್ನು ಅಭಿಮಂತ್ರಿಸಿ ಆ ನೀರನ್ನು ಸತ್ಕಾರ ಮಾಡುವವನು ತನ್ನ ಕೈಗೆ ಸ್ವಲ್ಪ ಹಾಕಿದಾಗ ವಿರಾಜೋ ದೋಹೋಸಿ, ಮಂತ್ರವನ್ನು ಜಪಿಸಬೇಕು ॥

೮. ಶೇಷಂ ಪುರಸ್ತಾನ್ನಿನೀಯಮಾನಮುತ್ತರಯಾನುಮಂತ್ರಯತೇ ॥

ಉಳಿದ ನೀರನ್ನು ಮಧುಪರ್ಕಮಾಡುವವನು ತೆಗೆದುಕೊಂಡು ಹೋಗುತ್ತಿರಲಾಗಿ ಸತ್ಕಾರ ಸ್ವೀಕರಿಸುವವನು ಸಮುದ್ರಂ ವಃ, ಮಂತ್ರದಿಂದ ಆ ನೀರನ್ನು ಅಭಿಮಂತ್ರಿಸಬೇಕು ॥

೯. ದಧಿಮಧ್ವಿತಿ ಸಂಸೃಜ್ಯ ಕಾಂಸ್ಯೇನ ವಷೀರ್ಯಸಾಪಿಧಾಯ ಕೂರ್ಚಾಭ್ಯಾಂ ಪರಿಗೃಹ್ಯ ಮಧುಪರ್ಕ ಇತಿ ಪ್ರಾಹ ॥

ದಧಿ, ಮಧುಗಳನ್ನು ಒಂದು ಕಂಚಿನ ಪಾತ್ರೆಯಲ್ಲಿ ಬೆರೆಸಿ ಅದರಮೇಲೆ ಕಂಚಿನ ತಟ್ಟೆಯಿಂದ ಮುಚ್ಚಿ, ಮೇಲೆ ಮತ್ತು ಕೆಳಗೆ ಆ ಮುಚ್ಚಿರುವ ಪಾತ್ರೆಯನ್ನು ೨ ಕೂರ್ಚಗಳಿಂದ ಹಿಡಿದುಕೊಂಡು 'ಮಧುಪರ್ಕಃ' ಎಂದು ಸತ್ಕಾರ ಮಾಡುವವನು ಹೇಳಬೇಕು ॥

೧೦. ತ್ರಿವೃತಮೇಕೇ ಘೃತಂ ಚ ॥

ಕೆಲವರು ದಧಿ, ಮಧು, ಘೃತಗಳನ್ನು ಬೆರೆಸಬೇಕೆಂದು ಹೇಳುತ್ತಾರೆ ॥

೧೧. ಪಾಂಕ್ತಮೇಕೇ ಧಾನಾಸ್ಸಕ್ತೂಂಶ್ಚ ॥

ಇನ್ನೂ ಕೆಲವರು ದಧಿ, ಮಧು, ಘೃತ, ಧಾನಾ, ಸಕ್ತು ಈ ೫ ದ್ರವ್ಯಗಳನ್ನೂ ಸೇರಿಸಬೇಕು ಎನ್ನುತ್ತಾರೆ ॥

೧೨. ಉತ್ತರಾಭ್ಯಾಂ ಅಭಿಮಂತ್ರ್ಯ ಯಜುರ್ಭ್ಯಾಮಪ ಆಚಾಮತಿ ಪುರಸ್ತಾತ್ ಉಪರಿಷ್ಟಾತ್ ಚೋತ್ತರಯಾ ತ್ರಿಃ ಪ್ರಾಶ್ಯಾನುಕಂಪ್ಯಾಯ ಪ್ರಯಚ್ಛೇತ್ ॥

ಸತ್ಕಾರ ಸ್ವೀಕರಿಸುವವನು ಮಧುಪರ್ಕವನ್ನು ಸ್ವೀಕರಿಸಿ, ಅದರ ಮುಚ್ಚಿದ ತಟ್ಟೆಯನ್ನು ತೆಗೆದು ತ್ರಯ್ಯೈ ವಿದ್ಯಾಯೈ, ಮತ್ತು ಆಮಾಗನ್, ಎಂಬ ೨ ಮಂತ್ರಗಳಿಂದ ಅಭಿಮಂತ್ರಣ ಮಾಡಿ – 'ಅಮೃತೋಪಸ್ತರಣಮಸಿ' ಎಂದುಹೇಳಿ ಮೊದಲು ನೀರನ್ನು ಕುಡಿದು ನಂತರ ಆಚಮನ ಮಾಡಿ – ಯನ್ಮಧುನೋ, ಮಂತ್ರದಿಂದ ೩ ಸಲ ಮಧುಪರ್ಕವನ್ನು ಕುಡಿಯಬೇಕು, ೧ ಸಲ ಮಂತ್ರ ಸಹಿತ, ಇನ್ನೆರಡುಸಲ ಅಮಂತ್ರಕವಾಗಿ ಕುಡಿದು – ನಂತರ 'ಅಮೃತಾಪಿಧಾನಮಸಿ' ಎಂದು ಹೇಳಿ ನೀರನ್ನು ಕುಡಿದು ಎರಡು ಸಲ ಆಚಮನ ಮಾಡಿ ಉಳಿದ ಮಧುಪರ್ಕವನ್ನು ಮಗನಿಗೋ, ಶಿಷ್ಯನಿಗೋ ಅಥವಾ ಸಮಾವರ್ತನೆ ಮಾಡಿಕೊಂಡವನಿಗೋ ಕೊಡಬೇಕು ॥

೧೩. ಪ್ರತಿಗೃಹ್ಯೈವ ರಾಜಾ ಸ್ಥಪತಿರ್ವಾ ಪುರೋಹಿತಾಯ ॥

ರಾಜಾ ಮತ್ತು ಸ್ಥಪತಿಗಳು ಮಧುಪರ್ಕವನ್ನು ತೆಗೆದುಕೊಂಡು ಅಭಿಮಂತ್ರಣ ಮಾಡದೇ ಪುರೋಹಿತರಿಗೆ ಕೊಡಬೇಕು, ಪುರೋಹಿತರು ಅಭಿಮಂತ್ರಣದಿಂದ ಹಿಡಿದು ಪ್ರಾಶನಾಂತದವರೆಗೆ ಇರುವ ಕ್ರಿಯೆಗಳನ್ನು ಮಾಡಬೇಕು, ಉಳಿದ ಕರ್ಮವನ್ನು ರಾಜಾ ಮತ್ತು ಸ್ಥಪತಿಗಳು ಮಾಡಬೇಕು ॥

೧೪. 'ಗೌಃ' ಇತಿ ಗಾಂ ಪ್ರಾಹ ॥

ಪ್ರಾಶನ ಮಾಡಿದ ಮೇಲೆ ಸತ್ಕಾರಮಾಡುವವನು 'ಗೌಃ' (ಗೋವು ಸಿದ್ಧವಾಗಿದೆಯೆಂದು) ಎಂದು ಅವರಿಗೆ ಹೇಳಬೇಕು, ಸತ್ಕಾರವನ್ನು ಸ್ವೀಕರಿಸುವವನು, ಮಾಡುವವನಿಗೆ ತನ್ನ ಅಭಿಪ್ರಾಯವನ್ನು ಹೇಳಬೇಕು ॥

೧೫. ಉತ್ತರಯಾಭಿಮಂತ್ರ್ಯ ತಸ್ಯೈವಪಾಂ ಶ್ರಪಯಿತ್ವೋಪಸ್ತೀರ್ಣಾಭಿಘಾರಿತಾಂ ಮಧ್ಯಮೇನಾಂತಮೇನ ವಾ ಪಲಾಶಪರ್ಣೇನೋತ್ತರಯಾ ಜುಹೋತಿ ॥

ಒಪ್ಪಿಗೆ ಕೊಟ್ಟರೆ ಮಾತ್ರ ಮುಂದಿನ ಗೌರಸ್ಯಪಹತ, ಮಂತ್ರವನ್ನು ಮುಗಿಸುವುದರೊಳಗೆ ಗೋವನ್ನು ಅಭಿಮಂತ್ರಿಸಿ 'ಅಮುಷ್ಯಾ' ಎಂಬ ಶಬ್ದದ ಜಾಗದಲ್ಲಿ ಸತ್ಕಾರಸ್ವೀಕರಿಸುವವನ ಹೆಸರನ್ನು ಹೇಳಿ ಗೋವನ್ನು ಸಂಜ್ಞಪನ ಮಾಡಬೇಕು, ಸತ್ಕಾರಮಾಡುವವನು ವಪಾ ಹೋಮಾಂತದವರೆಗೆ ಮಾಡಿ (ಸಂಜ್ಞಪನ ಮಾಡಿ ವಪೆತೆಗೆದು ಬೇಯಿಸಿ) ಮಧ್ಯಮ ಅಥವಾ ಕೊನೆಯ ಪಾಲಾಶ ಎಲೆಯಿಂದ ಲೌಕಿಕಾಜ್ಯವನ್ನು ಉಪಸ್ತರಣಮಾಡಿಕೊಂಡು ಸಂಪೂರ್ಣ ವಪೆಯನ್ನು ಎಲೆಯ ಮೇಲೆ ಇಟ್ಟು, ೧ ಸಲ ಅಭಿಗರಣೆ ಮಾಡಿ ಅಗ್ನಿಃ ಪ್ರಾಶ್ನಾತು, ಮಂತ್ರವನ್ನು ಹೇಳಿ ಆ ಪಾಲಾಶಪರ್ಣದಿಂದ ತನ್ನ ಅಗ್ನಿಯಲ್ಲಿ ಹೋಮಿಸಬೇಕು ॥

೧೬. ಯದ್ಯುತ್ಸೃಜೇದುಪಾಂಶೂತ್ತರಾಂ ಜಪಿತ್ವೋಮುತ್ಸೃಜತೇತ್ಯುಚ್ಚೈಃ ॥

ಒಂದು ವೇಳೆ ಸ್ವೀಕರಿಸುವವನು ಬೇಡವೆಂದು ಹೇಳಿದರೆ ಮುಂದಿನ ಯಜ್ಞೋ ವರ್ಧತಾಂ, ಎಂಬ ೩ ಮಂತ್ರಗಳನ್ನು ಉಪಾಂಶುವಾಗಿ ಜಪಿಸಿ, ಓಮುತ್ಸೃಜತ..., ಎಂದು ಜೋರಾಗಿ ಸತ್ಕಾರ ಮಾಡುವವನು ಹೇಳಬೇಕು ॥

೧೭. ಅನ್ನಂ ಪ್ರೋಕ್ತಮುಪಾಂಶೂತ್ತರೈರಭಿಮಂತ್ರ್ಯೋಂ ಕಲ್ಪಯತೇತ್ಯುಚ್ಚೈಃ ॥

ದಾತೃವು ಅನ್ನ ಸಿದ್ಧವಾದ ಮೇಲೆ 'ಭೂತಂ' ಎಂದು ಸತ್ಕಾರ ಸ್ವೀಕರಿಸುವವನಿಗೆ ಹೇಳಬೇಕು, ಹೀಗೆ ಹೇಳಿದಂತಹ ಅನ್ನವನ್ನು ಸ್ವೀಕರಿಸುವವನು ಭೂತಂ, ಸಾ ವಿರಾಟ್, ಎಂಬ ೩ ಮಂತ್ರಗಳಿಂದ ಅಭಿಮಂತ್ರಿಸಿ 'ಓಂ ಕಲ್ಪಯತ' ಎಂದು ಜೋರಾಗಿ ಹೇಳಬೇಕು ॥

೧೮. ಆಚಾರ್ಯಾಯ ಋತ್ವಿಜೇ ಶ್ವಶುರಾಯ ರಾಜ್ಞ ಇತಿ ಪರಿಸಂವತ್ಸರಾತ್ ಉಪತಿಷ್ಠದ್ಭ್ಯ ಏತತ್ ಕಾರ್ಯಂ ॥

ಈ ಮಧುಪರ್ಕ ಕಾರ್ಯವನ್ನು (ಕೂರ್ಚವನ್ನು ಕೊಡುವುದರಿಂದ ಹಿಡಿದು ಭೋಜನಾಂತದವರೆಗೆ) ಗೃಹಸ್ಥನು – ಆಚಾರ್ಯರು, ಋತ್ವಿಜರು, ಶ್ವಶುರ, ರಾಜ ಇವರುಗಳು ತನ್ನ ಮನೆಗೆ ಯಾವಾಗಲೇ ಆಗಲಿ ೧ ವರ್ಷ ಅವಧಿಯನ್ನು ಬಿಟ್ಟು ಪುನಃ ಒಮ್ಮೆ ಬಂದರೆ ಮಾಡಬೇಕು, ಸ್ನಾತಕನಿಗೆ ಮಾತ್ರ ಒಂದೇ ಸಲ ॥

೧೯. ಸಕೃತ್ ಪ್ರವಕ್ಷ್ಯೇ ಚಿತ್ರಾಯು ॥

ಕೇವಲ ಶಾಸ್ತ್ರಾಧ್ಯಯನ ಮಾಡಿದ್ದು ಆದರೆ ವೇದಾಧ್ಯಯನವನ್ನು ಮಾಡದೇ ಲೋಕಪ್ರಸಿದ್ದನಾದ ವಾಕ್ ಪಟುವಿಗೆ ಯಾವಾಗಲೇ ಆಗಲಿ ಗೋ ರಹಿತವಾದ ಮಧುಪರ್ಕವನ್ನು ೧ ಸಲ ಮಾಡಬೇಕು ॥

ಮಧುಪರ್ಕಃ – ಪ್ರಯೋಗಃ

ಸಮಾವರ್ತನೆಯಾದ ಯಾವ ಪುರುಷನು ಯಾರ ಮನೆಗೇ ಮೊದಲಬಾರಿಗೆ ಬಂದರೂ ಅವನಿಗೆ ಆ ಮನೆಯವರು ಸತ್ಕರಿಸುವ ಶಾಸ್ತ್ರೀಯ ರೀತಿಯೇ ಮಧುಪರ್ಕವೆಂಬ ವಿಧಿಯು

* ಕರ್ತೃವು, ಪ್ರಾಣಾಯಾಮ ಮಾಡಿ, ಪರಮೇಶ್ವರನ ಪ್ರೀತ್ಯರ್ಥವಾಗಿ, ನಮ್ಮಲ್ಲಿಗೆ ಬಂದಿರುವ ಈ ಸ್ನಾತಕನಾದವನಿಗೆ ಮಧುಪರ್ಕವೆಂಬ ಕರ್ಮದಿಂದ ಪೂಜಿಸುತ್ತೇನೆ ಎಂದು ಸಂಕಲ್ಪ ಮಾಡಬೇಕು ॥

ಕರ್ತಾ, ಶುಭೇ....., ಶ್ರೀ ಪರಮೇಶ್ವರ ಪ್ರೀತ್ಯರ್ಥಂ ಆಗತಂ ಸ್ನಾತಕಂ ಮಧುಪರ್ಕೇಣ ಪೂಜಯಿಷ್ಯೇ ಇತಿ ಸಂಕಲ್ಪ್ಯ ॥

* ಮಧುಪರ್ಕಕ್ಕಾಗಿ ಕೂರಲು ಸ್ನಾತಕನಿಗೆ ಆಸನವನ್ನಾಗಿ ಕೂರ್ಚವನ್ನು ಕೊಡಬೇಕು ।

ಮಧುಪರ್ಕಪ್ರದ ಇತಿ ಕೂರ್ಚಂ ದದ್ಯಾತ್ ।

* ಸ್ನಾತಕನು ರಾಷ್ಟ್ರಭೃದಸಿ....., ಮಂತ್ರದಿಂದ ಆ ಕೂರ್ಚದ ಮೇಲೆ ಪಶ್ಚಿಮಾಭಿಮುಖವಾಗಿ ಕೂರುತ್ತಾನೆ ॥

ವರಃ ರಾಷ್ಟ್ರಭೃದಸಿ....., ಇತಿ ಯಜುಷಾ ಕೂರ್ಚೇ ವಾರುಣಮುಖಂ ಉಪವಿಶತಿ,

ಓಂ ರಾಷ್ಟ್ರಭೃದಸಿ । ಆಚಾರ್ಯಾ ಸಂದೀ । ಮಾ ತ್ವದ್ಯೋಷಂ ।

ರಾಷ್ಟ್ರಭೃದಸಿ । ಸಂರಾಡಾ ಸಂದೀ । ಮಾ ತ್ವದ್ಯೋಷಂ । ರಾಷ್ಟ್ರಭೃದಸಿ ।
ಅಧಿಪತ್ನ್ಯಾ ಸಂದೀ । ಮಾ ತ್ವದ್ಯೋಷಮ್ ॥

* ಕರ್ತೃವು ಕಾಲು ತೊಳೆಯಲು ನೀರನ್ನು ತಂದು ಸ್ನಾತಕನನ್ನು ಕುರಿತು 'ಕಾಲು ತೊಳೆಯಲು ನೀರು' ಎನ್ನುತ್ತಾನೆ ॥

ದಾತಾ ಪಾದ್ಯಾರ್ಥಂ ಉದಕಂ ಗೃಹೀತ್ವಾ 'ಆಪಃ ಪಾದ್ಯಾಃ' ಇತ್ಯುಕ್ತೇ ।

* ಆಪಃ ಪಾದಾವನೇ ಜನೀಃ....., ಮಂತ್ರದಿಂದ ಸ್ನಾತಕನು ಆ ನೀರನ್ನು ಅಭಿಮಂತ್ರಿಸುತ್ತಾನೆ ॥

ಆಪಃ ಪಾದಾವನೇ ಜನೀಃ....., ಇತಿ ವರಃ ಆಪೋಽಭಿಮಂತ್ರ್ಯ,

ಓಂ ಆಪಃ । ಪಾದಾವನೇಜನೀಃ । ದ್ವಿಷಂತಂ । ನಾಶಯಂತು । ಮೇ ॥
ಅಸ್ಮಿನ್ ಕುಲೇ । ಬ್ರಹ್ಮವರ್ಚಸ್ಯ । ಸಾನಿ ॥

* ಪಾದ ತೊಳೆಯುವವನು ಬ್ರಾಹ್ಮಣನಾಗಿದ್ದರೆ ಮೊದಲು ಬಲಗಾಲನ್ನು ಕೊಡಬೇಕು, ಇತರರಾದರೆ ಎಡಗಾಲನ್ನು ಕೊಡಬೇಕು ॥

ದಕ್ಷಿಣಂ ಪಾದಂ ಪೂರ್ವಂ ಬ್ರಾಹ್ಮಣಾಯ ಪ್ರಯಚ್ಛೇತ್ ಸವ್ಯಂ ಶೂದ್ರಾಯ ।

* ಕಾಲು ತೊಳೆಯುವಾಗ ತೊಳೆಯುವವರನ್ನು ಸ್ನಾತಕನು ಮುಟ್ಟಿಕೊಂಡು ನಂತರ ಮಯಿಮಹಃ....., ಮಂತ್ರದಿಂದ ತನ್ನ ಹೃದಯವನ್ನು ಮುಟ್ಟಿಕೊಳ್ಳಬೇಕು ॥

ಪ್ರಕ್ಷಾಳಯಿತಾರಂ ಉಪಸ್ಪೃಶ್ಯ ಮಯಿ ಮಹಃ....., ಇತಿ ಯಜುಷಾ
ಆತ್ಮಾನಂ ಪ್ರತ್ಯಭಿಮೃಶೇತ್, ಓಂ ಮಯಿ ಮಹಃ । ಮಯಿ ಯಶಃ ।
ಮಯೀಂದ್ರಿಯಂ । ವೀರ್ಯಮ್ ॥

* ಮಣ್ಣಿನ ಪಾತ್ರೆಯಲ್ಲಿ ಹೂವು, ಅಕ್ಷತೆಗಳನ್ನು ಹಾಕಿಕೊಂಡು ಅರ್ಘ್ಯಾರ್ಥವಾಗಿ ನೀರನ್ನು ಹಾಕಿಕೊಂಡು ಆ ಪಾತ್ರೆಯ ಕೆಳಗೆ ಹಾಗು ಮೇಲೆ ಕೂರ್ಚಗಳಿಂದ ಪಾತ್ರೆಯನ್ನು ಹಿಡಿದುಕೊಂಡು ಕರ್ತೃವು 'ಅರ್ಹಣೀಯಾ ಆಪಃ' ಎಂದು ಹೇಳುತ್ತಾನೆ ॥

ತತೋ ಮೃನ್ಮಯೇ ಪಾತ್ರೇ ಸಪುಷ್ಪಾಕ್ಷತಮ್ ಉದಕಮ್ ಅರ್ಘ್ಯಾರ್ಥಮ್ ಅಧಸ್ಥಾತ್ ಉಪರಿಷ್ಟಾಚ್ಚ ಕೂರ್ಚಾಭ್ಯಾಂ ಪರಿಗೃಹ್ಯ ಗೃಹೀತ್ವಾ ದಾತಾ 'ಅರ್ಹಣೀಯಾ ಆಪಃ' ಇತ್ಯುಕ್ತ್ವೇ ।

* ಆಮಾಗನ್....., ಎಂಬ ಮಂತ್ರದಿಂದ ಸ್ನಾತಕನು ಆ ನೀರನ್ನು ಅಭಿಮಂತ್ರಿಸುತ್ತಾನೆ ।

ಆಮಾಗನ್....., ಇತಿ ವರಃ ಆಪೋಽಭಿಮಂತ್ರ್ಯ,

ಓಂ ಆ॑ಮಾಗನ್ । ಯ॑ಶಸಾ । ವ॑ರ್ಚಸಾ । ಸಗ್ಂ ಸೃ॑ಜ । ಪ॑ಯಸಾ । ತೇ॑ಜಸಾ ಚ ॥ ತಂ ಮಾ॑ । ಪ್ರಿ॑ಯಂ । ಪ್ರ॒ಜಾನಾಂ । ಕು॒ರ್ವ॑ಧಿಪತಿಂ । ಪ॒ಶೂನಾಮ್ ॥

* ವರನ ಬೊಗಸೆಗೆ ಕರ್ತೃವು ಆ ನೀರನ್ನು ಹಾಕುವಾಗ ಸ್ನಾತಕನು ವಿರಾಜೋದೋಹೋಸಿ....., ಮಂತ್ರವನ್ನು ಹೇಳುತ್ತಾನೆ ॥

ವರಸ್ಯ ಅಂಜಲೌ ಉದಕೈಕದೇಶಮ್ ಆನೀಯಮಾನೇ ವಿರಾಜೋ ದೋಹೋಸಿ....., ಇತಿ ಯಜುರ್ಜಪೇತ್,

ಓಂ ವಿ॒ರಾ॑ಜಃ । ದೋ॑ಹೋ॒ಽಸಿ । ವಿ॒ರಾ॑ಜಃ । ದೋ॑ಹ॒ಮಶೀ॑ಯ । ಮ॒ಮ ಪ॑ದ್ಯಾ॑ಯ । ವಿ॑ರಾಜ ॥

* ಉಳಿದಿದ್ದ ನೀರನ್ನು ಮುಂದಕ್ಕೆ ತೆಗೆದುಕೊಂಡು ಹೋಗುವಾಗ ಸಮುದ್ರಂ ವಃ....., ಮಂತ್ರವನ್ನು ಹೇಳುತ್ತಾರೆ ॥

ಶೇಷಂ ಪುರಸ್ತಾನ್ನಿನೀಯಮಾನಂ ಸಮುದ್ರಂ ವಃ ಪ್ರಹಿಣೋಮಿ....., ಇತಿ ಅನುಮಂತ್ರಯತೇ,

ಓಂ ಸಮುದ್ರಂ । ವಃ । ಪ್ರಹಿಣೋಮಿ । ಸ್ವಾಂ ಯೋನಿಂ । ಅಪಿ ಗಚ್ಛತ ॥
ಆಚ್ಛಿದ್ರಃ । ಪ್ರಜಯಾ । ಭೂಯಾಸಂ । ಮಾ ಪರಾಸೇಚಿ । ಮತ್ಪ್ರಯಃ ॥

* ಉಂಗುರವೇ ಮುಂತಾದ ಆಭರಣಗಳನ್ನು ಸ್ನಾತಕನಿಗೆ ಕೊಡುವುದು, ಮತ್ತೂ ಸ್ನಾತಕನು ಅವುಗಳನ್ನು ಪಶ್ಚಿಮಾಭಿಮುಖಿಯಾಗೇ ಧರಿಸಬೇಕು ॥

ಆಂಗುಲೀಯಕಾದಿ ದತ್ವಾ, ವರಃ ಧೃತ್ವಾ ॥

* ಆ ಮಧುಪರ್ಕ(ದಧಿ ಮಧುವಿನ ಮಿಶ್ರಣ)ದ ಪಾತ್ರೆಯ ಕೆಳಗೆ ೧ ಕೂರ್ಚವನ್ನಿಟ್ಟು ಪಾತ್ರೆಯ ಮೇಲೆ ಕಂಚಿನ ಪಾತ್ರೆ(ತಟ್ಟೆ)ಯನ್ನು ಮುಚ್ಚಿ ಅದರಮೇಲೆ ಇನ್ನೊಂದು ಕೂರ್ಚವನ್ನಿಡಬೇಕು, 'ಮಧುಪರ್ಕಃ' ಎಂದು ೩ ಸಲ ಹೇಳಬೇಕು ॥

ದಧಿ ಮಧ್ವಿತಿ ಸಂಸೃಜ್ಯ ಕಾಂಸ್ಯೇನ ವಷೀಯಸಾ ಪಿಧಾಯ ಅಧಸ್ತಾತ್ ಉಪರಿಷ್ಟಾತ್ ಚ ಕೂರ್ಚಾಭ್ಯಾಂ ಪರಿಗೃಹ್ಯ 'ಮಧುಪರ್ಕಃ' ಇತಿ ತ್ರಿಃ ಪ್ರಾಹ ॥

* ಸಂತರ ಸ್ನಾತಕನು ಮಧುಪರ್ಕವನ್ನು ತೆಗೆದುಕೊಂಡು ಮುಚ್ಚಿರುವ ತಟ್ಟೆಯನ್ನು ತೆಗೆದು ತ್ರಂಯ್ಯೈ ವಿದ್ಯಾಯೈ..... ಮತ್ತು ಆಮಾಗನ್....., ಮಂತ್ರಗಳಿಂದ ಅಭಿಮಂತ್ರಣೆ ಮಾಡಬೇಕು ॥

ಅಥ ವರಃ ಮಧುಪರ್ಕಂ ಪ್ರತಿಗೃಹ್ಯ ಪಿಹಿತಪಾತ್ರಂ ಅಮುಪನೀಯ

ತ್ರೈ ಲಂಯ್ಯೈ....., ಆಮಾಗನ್....., ಇತಿ ದ್ವಾಭ್ಯಾಂ ಅಭಿಮಂತ್ರ್ಯ,

ಓಂ ತ್ರಂಯ್ಯೈ । ವಿದ್ಯಾಂಯ್ಯೈ । ಯಶೋಸಿ । ಯಶಸಃ । ಯಶೋಸಿ ।
ಬ್ರಹ್ಮಣಃ । ದೀಪ್ತಿರಸಿ ॥ ತಂ ಮಾ । ಪ್ರಿಯಂ । ಪ್ರಜಾನಾಂ । ಕುರ್ವಧಿಪತಿಂ ।
ಪಶೂನಾಮ್ ॥

ಓಂ ಆ॑ಮಾಗನ್ । ಯ॑ಶಸಾ । ವ॑ರ್ಚಸಾ । ಸಗ್ಂ ಸೃ॑ಜ । ಪ॑ಯಸಾ । ತೇ॑ಜಸಾ ಚ ॥ ತಂ ಮಾ॑ । ಪ್ರಿ॑ಯಂ । ಪ್ರ॒ಜಾನಾಂ॑ । ಕು॒ರ್ವ॒ಧಿ॑ಪತಿಂ । ಪ॒ಶೂನಾ॑ಮ್ ॥

* ಅಮೃತೋಪಸ್ತರಣಮಸಿ....., ಎಂದು ಹೇಳಿ ೧ ಉದ್ದರಣೆಯಷ್ಟು ನೀರು ಕುಡಿದು । ಆಚಮನವನ್ನು ಮಾಡಿ ॥

ಓಂ ಅ॒ಮೃ॒ತಃ । ಉ॒ಪ॒ಸ್ತ॒ರ॑ಣಂ । ಅ॒ಸಿ ॥ ಇತಿ ಅಪಃಪೀತ್ವಾ । ಆಚಮ್ಯ ॥

* ಯನ್ಮಧುನೋ....., ಮಂತ್ರದಿಂದ ಮಧುಪರ್ಕವನ್ನು ಪಶ್ಚಿಮಾಭಿಮುಖಿಯಾಗೇ ೩ ಸಲ ಕುಡಿಯುತ್ತಾನೆ ೧ ಸಲ ಮಂತ್ರ ಪೂರ್ವಕವಾಗಿ ೨ ಸಲ ಅಮಂತ್ರಕವಾಗಿ ಕುಡಿಯುತ್ತಾನೆ ॥

ಯನ್ಮಧುನೋ ಇತಿ ಮಧುಪರ್ಕಂ ತ್ರಿಃ ಪ್ರಾಶ್ನಾತಿ ಸಕೃನ್ಮಂತ್ರೇಣ ದ್ವಿಸ್ತೂಷ್ಣೀಂ,

ಓಂ ಯನ್ಮ॑ಧುನಃ । ಮ॒ಧ॒ವ್ಯಂ । ಪ॒ರ॒ಮಂ । ಅ॒ನ್ನಾ॒ದ್ಯಂ । ವೀ॒ರ್ಯ॑ಮ್ ॥ ತೇ॑ನಾಹಂ । ಮ॑ಧು॒ನಃ । ಮ॒ಧ॒ವ್ಯೇ॑ನ । ಪ॒ರ॒ಮೇ॑ಣ । ಅ॒ನ್ನಾ॒ದ್ಯೇ॑ನ । ವೀ॒ರ್ಯೇ॑ಣ । ಪ॒ರ॒ಮಃ । ಅ॒ನ್ನಾ॒ದಃ । ಮ॒ಧ॒ವ್ಯಃ । ಅ॒ಸಾ॒ನಿ ॥

* ಅಮೃತಾಪಿಧಾನಮಸಿ....., ಎಂದು ಹೇಳಿ ೧ ಉದ್ದರಣೆಯಷ್ಟು ನೀರು ಕುಡಿದು ೨ ಸಲ ಆಚಮನ ಮಾಡಬೇಕು ॥

ಅ॒ಮೃ॒ತಾ॒ಪಿ॒ಧಾ॒ನಂ । ಅ॒ಸಿ ॥ ಇತಿ ಅಪಃ ಪೀತ್ವಾ, ದ್ವಿರಾಚಮ್ಯ ॥

* ಉಳಿದ ಮಧುಪರ್ಕವನ್ನು ಶಿಷ್ಯಾದಿಗಳಿಗೆ ಕೊಡಬೇಕು ಬ್ರಹ್ಮಚಾರಿಗಳಿಗೆ ಕೊಡಬಾರದು ॥

ಶೇಷಂ ಶಿಷ್ಯಾದಿಭ್ಯಃ ಪ್ರಯಚ್ಛೇತ್ ನ ಬ್ರಹ್ಮಚಾರಿಣೇ ॥

* ಸ್ನಾತಕನು(ವರನು) ಪೂರ್ವಾಭಿಮುಖವಾಗಿ ಕುಳಿತುಕೊಳ್ಳಬೇಕು, ಕರ್ತೃವು 'ಗೌಃ' ಎಂದು ವರನನ್ನು ಕುರಿತು ಹೇಳಬೇಕು ॥

'ದಾತಾ ಗೌಃ' ಇತ್ಯುಕ್ತೇ ॥

* ಆಗ ವರನು ಯಜ್ಞೋವರ್ಧತಾಂ....., ಮಂತ್ರವನ್ನು ಮೆಲ್ಲಗೆ ಹೇಳಿ, ಮಂತ್ರದ ಕೊನೆಯಲ್ಲಿ ಬರುವ 'ಓಮುತ್ಸೃಜತ' ಎಂಬುದನ್ನು ಗಟ್ಟಿಯಾಗಿ ಹೇಳಬೇಕು ॥

ವರಃ ಯಜ್ಞೋ ವರ್ಧತಾಂ..., ಇತ್ಯುಪಾಗ್ಂಶೂಕ್ತೇ, ಓಮುತ್ಸೃಜತ ಇತಿ ಉಚ್ಚೈಃ,

ಓಂ ಯಜ್ಞೋ ವರ್ಧತಾಂ । ಯಜ್ಞಸ್ಯ । ವೃದ್ಧಿಂ । ಅನುವರ್ಧ । ಅಪಚಿತಿರಸಿ । ಅಪಚಿತಿಂ ಮಾ । ಕುರು । ಅಪಚಿತೋಽಹಂ । ಮನುಷ್ಯೇಷು । ಭೂಯಾಸಮ್ ॥ ಗೌರ್ಧೇನು । ಭವ್ಯಾ । ಮಾತಾ । ರುದ್ರಾಣಾಂ । ದುಹಿತಾ । ವಸೂನಾಂ । ಸ್ವಸಾದಿತ್ಯಾನಾಂ । ಅಮೃತಸ್ಯ । ನಾಭಿಃ ॥ ಪ್ರಣು ವೋಚಂ । ಚಿಕಿತುಷೇ । ಜನಾಯ । ಮಾಗಾಂ । ಅನಾಗಾಂ । ಅದಿತಿಂ । ವಧಿಷ್ಮ ॥ ಪಿಬತು । ಉದಕಂ । ತೃಣಾನಿ । ಅತ್ತು ॥

ಓಂ । ಉತ್ಸೃಜತ ॥

* ಕರ್ತೃವು ಅನ್ನ ಸಿದ್ಧವಾಗಿದೆ ಎನ್ನುತ್ತಾನೆ ॥

ದಾತಾ 'ಭೂತಂ' ಇತ್ಯುಕ್ತೇ ॥

* ಆಗ ಸ್ನಾತಕನು ಸಾವಿರಾಟ್....., ಮಂತ್ರವನ್ನು ಮೆಲ್ಲಗೆ ಹೇಳಿ, 'ಓಂ ಕಲ್ಪಯತ' ಎಂಬುದನ್ನು ಗಟ್ಟಿಯಾಗಿ ಹೇಳುತ್ತಾನೆ ॥

ವರಃ ಸಾ ವಿರಾಟ್...., ಇತ್ಯುಪಾಂಗ್ಂಶೂಕ್ತೇ, ಓಂ ಕಲ್ಪಯತ ಇತಿ ಉಚ್ಚೈಃ,

ಓಂ ಸಾ ವಿರಾಟ್ । ತನ್ಮಾ ಕ್ಷಾಯಿ । ತಸ್ಯ ತೇ । ಅಶೀಯ । ತನ್ಮೇ ।

ಊರ್ಜಂಧಾಃ ॥

ಓಂ ಕಲ್ಪಯತ ॥

....*********....

ಮಧುಪರ್ಕ ಮಂತ್ರಗಳಿಗೆ ಶ್ರೀಹರದತ್ತರ ಭಾಷ್ಯಾರ್ಥವು

೧. ರಾಷ್ಟ್ರಭೃದಸ್ಯಾಚಾರ್ಯಾ ಸಂದೀ ಮಾ ತ್ವದ್ಯೋಷಂ ॥ ರಾಷ್ಟ್ರಭೃದಸಿ ಸಂರಾಡಾ ಸಂದೀ ಮಾ ತ್ವದ್ಯೋಷಂ ॥ ರಾಷ್ಟ್ರಭೃದಸ್ಯಧಿಪತ್ನ್ಯಾ ಸಂದೀ ಮಾ ತ್ವದ್ಯೋಷಮ್ ॥

ರಾಷ್ಟ್ರವನ್ನು ಪೋಷಣೆ ಮಾಡುವವನಾಗಿದ್ದೀಯೇ। ಗುರುಗಳಿಗೆ ಯೋಗ್ಯವಾದ ಆಸನಸ್ಥಾನ ಸ್ವರೂಪನಾಗಿದ್ದೀಯೇ ಎಲೈ ಕೂರ್ಚವೇ, ನಿನ್ನಿಂದ ನಾನು ಅಗಲದಂತೆ ಮಾಡು ॥

ಎಲೈ ಕೂರ್ಚವೇ, ನೀನು ರಾಷ್ಟ್ರವನ್ನು ಪೋಷಣೆ ಮಾಡುವವನಾಗಿದ್ದೀಯೇ। ಕ್ಷತ್ರಿಯರಿಗೆ ಯೋಗ್ಯವಾದ ಆಸನಸ್ಥಾನ ಸ್ವರೂಪನಾಗಿದ್ದೀಯೇ, ನಿನ್ನಿಂದ ನಾನು ಅಗಲದಂತೆ ಮಾಡು ॥

ರಾಷ್ಟ್ರವನ್ನು ಪೋಷಣೆ ಮಾಡುವ ಎಲೈ ಕೂರ್ಚವೇ, ಮಂಡಲಾಧಿಪತಿಯು ಕೂರುವ ಸ್ಥಾನದ ಸ್ವರೂಪವಾಗಿದ್ದೀಯೇ। ನಿನ್ನಿಂದ ನಾನು ಅಗಲದಂತೆ ಮಾಡು ॥

೨. ಆಪಃ ಪಾದಾವನೇ ಜನೀರ್ದ್ವಿಷಂತಂ ನಾಶಯಂತು ಮೇ। ಅಸ್ಮಿನ್ ಕುಲೇ ಬ್ರಹ್ಮವರ್ಚಸ್ಯ ಸಾನಿ ॥

ಕಾಲುತೊಳೆದುಕೊಳ್ಳಲು ಉಪಯೋಗಿಸುವ ಜಲಸ್ವರೂಪರಾದ ಎಲೈ ಅಬ್ದೇವತೆಗಳೇ ನೀವು, ಸಮ್ಮನ್ನು ದ್ವೇಷಿಸುವವರನ್ನು ನಾಶಮಾಡಿರಿ । ನಾನು ಈ ಕುಲದಲ್ಲಿ ಬ್ರಹ್ಮವರ್ಚಸ್ವಿಯು ಆಗುವಂತೆ ಮಾಡಿರಿ ॥

೩. ಮಯಿ ಮಹೋ ಮಯಿ ಯಶೋ ಮಯೀಂದ್ರಿಯಂ ವೀರ್ಯಮ್ ॥

ನನ್ನಲ್ಲಿ ಪೂಜ್ಯತೆಯೂ(ಪವಿತ್ರತೆಯೂ) ಹಾಗೂ ಕೀರ್ತಿಯೂ ಹಾಗೂ ಇಂದ್ರಿಯಗಳ ಪಟುತ್ವವೂ ಹಾಗೂ ಪ್ರಜನನಶಕ್ತಿಯೂ ಯಾವಾಗಲೂ ಇರುವಂತೆ ಆಗಲಿ। ಬ್ರಾಹ್ಮಣನು

ಪಾದಸ್ಪರ್ಶವನ್ನು ಮಾಡಿದರೆ ಇವೆಲ್ಲವೂ(ಮೇಲೆಹೇಳಿದ) ಅಗಲಿ ಹೋಗುತ್ತದೆಯಾದ್ದರಿಂದ ತನ್ನನ್ನು ತಾನು ಮುಟ್ಟಿಕೊಂಡು ಈ ಮಂತ್ರವನ್ನು ಹೇಳಬೇಕು ॥

೪. ಆ॑ಮಾಗ॒ನ್ ಯ॑ಶ॒ಸಾ ವ॑ರ್ಚ॒ಸಾ ಸಗ್ಂ ಸೃ॑ಜ ಪ॑ಯ॒ಸಾ ತೇ॑ಜ॒ಸಾ ಚ । ತಂ ಮಾ॒ ಪ್ರಿ॑ಯಂ ಪ್ರ॒ಜಾನಾಂ॒ ಕು॑ರ್ವ॒ಧಿ॑ಪತಿಂ ಪ॒ಶೂನಾ॑ಮ್ ॥

ಎಲೈ ಅರ್ಘ್ಯಕ್ಕಾಗಿ ಇರುವ ಅಬ್ದೇವತೆಯೇ ನೀನು ನನ್ನ ಬಳಿಗೆಬಂದು, ಕೀರ್ತಿಯಿಂದಲೂ –ಕಾಂತಿಯಿಂದಲೂ–ಕ್ಷೀರಾದಿರಸಗಳಿಂದಲೂ–ತೇಜಸ್ಸಿನಿಂದಲೂ ಒಡಗೂಡಿ ನನ್ನನ್ನು ಸೇರಿಕೋ । ಇವಿಷ್ಟರಿಂದಲೂ ಕೂಡಿದ ನನ್ನನ್ನು ಪ್ರಜೆಗಳಿಗೆ ಪ್ರಿಯವಾಗುವಂತೆ ಮಾಡು, ಗವಾದಿ ಪಶುಗಳಿಗೆ ಅಧಿಪತಿಯನ್ನಾಗಿ ಮಾಡು ॥

೫. ವಿ॒ರಾ॒ಜೋ॒ ದೋ॒ಹೋ॒ಽಸಿ॒ ವಿ॒ರಾ॒ಜೋ॒ ದೋ॒ಹ॒ಮ॒ಶೀ॒ಯ॒ ಮ॒ಮ॒ ಪ॒ಶ್ಯಾ॒ಯ॒ ವಿ॒ರಾ॒ಜ ॥

ಎಲೈ ಅರ್ಘ್ಯ ಉದಕವೇ, ನೀನು ಅನ್ನವನ್ನು ಕೊಡುವವನಾಗಿದ್ದೀಯೇ । ನನಗೆ ನಿನ್ನ ಅನುಗ್ರಹದಿಂದ ಮತ್ತು ನಿನ್ನ ಸ್ವೀಕಾರದಿಂದ ಅನ್ನದ ಸಮೃದ್ಧಿಯು ಉಂಟಾಗಲಿ । ನನ್ನ ಸ್ಥಾನದಲ್ಲಿರುವ(ಆತ್ಮಾ ವೈ ಪುತ್ರನಾಮಾಸಿ..., ಎಂಬುದರಿಂದ) ನನ್ನ ಮಕ್ಕಳಿಗೆ ನನ್ನಂತೆಯೇ ಅನ್ನಸಮೃದ್ಧಿಯನ್ನು ಕೊಡುವವನಾಗು ॥

೬. ಸ॒ಮು॒ದ್ರಂ ವ॒ಃ ಪ್ರ॑ಹಿ॒ಣೋ॒ಮಿ॒ ಸ್ವಾಂ ಯೋ॒ನಿ॒ಮ॒ಪಿ॒ ಗ॒ಚ್ಛ॒ತ । ಅ॒ಚ್ಛಿ॒ದ್ರಾಃ ಪ್ರ॒ಜ॒ಯಾ॒ ಭೂ॒ಯಾ॒ಸ॒ಂ ಮಾ ಪ॑ರಾ॒ಸೇ॒ಚಿ॒ ಮ॒ತ್ಪ॒ಯ॒ಃ ॥

ಎಲೈ ಅಬ್ದೇವತೆಗಳೇ, ನಿಮ್ಮನ್ನು ಸಮುದ್ರಕ್ಕೆ ಸೇರಿಸುತ್ತಿದ್ದೇನೆ । ನೀವು ನಿಮ್ಮಕಾರಣವಾದ ಸಮುದ್ರಕ್ಕೆ ಹೋಗಿ ಸೇರಿರಿ । ನಾನೂಕೂಡ ನಿಮ್ಮ ಅನುಗ್ರಹದಿಂದ ವಿಚ್ಛೇದವಿಲ್ಲದ ಪ್ರಜಾಸಂತತಿಯಿಂದ ಕೂಡಿದವನಾಗುತ್ತೇನೆ । ನನ್ನಿಂದ ಜಲವು ಮತ್ತೆ ಬಳಸಲಾಗದಂತೆ ಆಗದೇಇರಲಿ ॥

೭. ತ್ರ॒ಯ್ಯೈ॒ ವಿ॒ದ್ಯಾ॒ಯೈ॒ ಯ॒ಶೋ॒ಽಸಿ॒ ಯ॒ಶ॒ಸೋ॒ ಯ॒ಶೋ॒ಽಸಿ॒ ಬ್ರ॒ಹ್ಮ॒ಣೋ

ದೀಪ್ತಿರಸಿ । ತಂ ॥ ಮಾ ಪ್ರಿಯಂ ಪ್ರಜಾನಾಂ ಕುರ್ವಧಿಪತಿಂ ಪಶೂನಾಮ್ ॥

ಆಮಾಂಗನ್ ಯಶಸಾ ವರ್ಚಸಾ ಸಗ್ಂ ಸೃಜ ಪಯಸಾ ತೇಜಸಾ ಚ ।
ತಂ ॥ ಮಾ ಪ್ರಿಯಂ ಪ್ರಜಾನಾಂ ಕುರ್ವಧಿಪತಿಂ ಪಶೂನಾಮ್ ॥

೩ ವೇದಗಳ ಕೀರ್ತಿಸ್ವರೂಪವಾಗಿರುವ ಹಾಗೂ ಕೀರ್ತಿಗೂ ಅತ್ಯಂತ ಪ್ರಶಸ್ತವಾದ ಕೀರ್ತಿಸ್ವರೂಪವಾದ ವೇದದ ಕಾಂತಸ್ವರೂಪವಾಗಿರುವ ನಿನ್ನನ್ನು(ಮಧುಪರ್ಕವನ್ನು) ನಾನು ಪೂಜಿಸುವೆ । ನೀನು ನನಗೆ ನನ್ನ ಮಕ್ಕಳು ಪ್ರಿಯರಾಗಿರುವಂತೆಯೂ ಮತ್ತು ನಾನು ಗವಾದಿ ಪಶುಗಳಿಗೆ ಅಧಿಪತಿಯಾಗಿರುವಂತೆಯೂ ಮಾಡು ॥

ಎಲೈ ಅರ್ಘ್ಯಕ್ಕಾಗಿ ಇರುವ ಮಧುಪರ್ಕವೇ, ನೀನು ನನ್ನ ಬಳಿಗೆಬಂದು, ಕೀರ್ತಿಯಿಂದಲೂ –ಕಾಂತಿಯಿಂದಲೂ – ಕ್ಷೀರಾದಿರಸಗಳಿಂದಲೂ – ತೇಜಸ್ಸಿನಿಂದಲೂ ಒಡಗೂಡಿ ನನ್ನನ್ನು ಸೇರಿಕೋ । ಇವಿಷ್ಟರಿಂದಲೂ ಕೂಡಿದ ನನ್ನನ್ನು ಪ್ರಜೆಗಳಿಗೆ ಪ್ರಿಯವಾಗುವಂತೆ ಮಾಡು, ಗವಾದಿ ಪಶುಗಳಿಗೆ ಅಧಿಪತಿಯನ್ನಾಗಿ ಮಾಡು ॥

೮. ಅಮೃತೋಪಸ್ತರಣಮಸಿ ॥

ಎಲೈ ಉದಕವೇ(ನೀರೇ) ಅಮೃತಸ್ವರೂಪವಾದಂತಹ ಮಧುಪರ್ಕಕ್ಕೆ, ಕೆಳಹೊದಿಕೆಯಾಗಿರುವೆ ॥

೯. ಯುನ್ಮಧುನೋ ಮಧ್ವ್ಯಂ ಪರಮ ಮನ್ನಾದ್ಯಂ ವೀರ್ಯಮ್ ॥ ।
ತೇನಾಹಂ ಮಧುನೋ ಮಧ್ವ್ಯೇನ ಪರಮೇಣಾನ್ನಾದ್ಯೇನ ವೀರ್ಯೇಣ
ಪರಮೋನ್ನಾದೋ ಮಧ್ವ್ಯೋ ಸಾನಿ ॥

ಮಧುಗೆ ಸಂಬಂಧಿಸಿದ, ಹೇಗೆ ಗೋವುಗಳಿಗೆ ಪತಿಯು ಗೋಪತಿಯೋ ಮತ್ತೂ ಹೇಗೆ ವಸುಗೆ ಪತಿಯು ವಸುಪತಿಯೋ ಹಾಗೆ ಮಧುಗಳಿಗೆಲ್ಲಾ ಪತಿಯಾದ ನಿನ್ನಿಂದ(ಮಧುಪರ್ಕದಿಂದ) ನಾನು ಉತ್ತಮವಾದ ಅನ್ನವನ್ನು ತಿನ್ನಲು ಹಾಗೂ

ಉತ್ತಮವಾದ ವೀರ್ಯದಿಂದ(ಪೌರುಷ) ಕೂಡಲು, ಶ್ರೇಷ್ಠವಾದ ಅನ್ನಸ್ವರೂಪವಾದ ಹಾಗೂ ವೀರ್ಯಸ್ವರೂಪವಾದ ನಿನ್ನಿಂದ ಸಾಮರ್ಥ್ಯವನ್ನು ಪಡೆಯುವವನಾಗುತ್ತೇನೆ ॥

೧೦. ಅಮೃತಾಪಿಧಾನಮಸಿ,

ಎಲೈ ಉದಕವೇ, ಅಮೃತಸ್ವರೂಪವಾದ ಮಧುಪರ್ಕಕ್ಕೆ ನೀನು ಮೇಲುಹೊದಿಕೆಯಾಗಿ ಇರುವೆ ॥

೧೧. ಗೌರಸ್ಯಪಹತ ಪಾಪ್ಮಾಪಪಾಪ್ಮಾನಂ ಜಹಿ ಮಮು ಚಾಮುಷ್ಯ ಚ ॥

ಎಲೈ ಹಸುವೇ, ನೀನು ಪಾಪವಿಲ್ಲದವಳಾಗಿದ್ದೀಯೆ । ಆದ್ದರಿಂದ ನನ್ನ ಈ ಹಸುವನ್ನು ಕೊಡುವವನ ಪಾಪವನ್ನು ಕಳೆ ॥

೧೨. ಅಗ್ನಿಃ ಪ್ರಾಶ್ನಾತು ಪ್ರಥಮಃ ಸ ಹಿ ವೇದ ಯಥಾ ಹವಿಃ ।
ಅರಿಷ್ಟಮಸ್ಮಾಕಂ ಕೃಣ್ವನ್ ಬ್ರಾಹ್ಮಣೋ ಬ್ರಾಹ್ಮಣೇಭ್ಯಃ ॥

ಈ ಅಗ್ನಿಯು ವಪಾರೂಪವಾದಂತಹ ಹವಿಸ್ಸನ್ನು ಮೊದಲು ಸ್ವೀಕರಿಸಲಿ । ಏಕೆಂದರೆ ಈ ಹವಿಸ್ಸು ಉತ್ಕೃಷ್ಟವಾದದ್ದೋ ಅಥವಾ ನಿಕೃಷ್ಟವಾದದ್ದೋ ಎಂಬುದನ್ನು ಅಗ್ನಿಯು ತಿಳಿದವನಾಗಿದ್ದಾನೆ । ನಮಗೆ ಹವಿಶ್ಶೇಷವು ಉಳಿಯುವಂತೆ ಅಗ್ನಿಯು ಈ ಹವಿಸ್ಸನ್ನು ಸ್ವೀಕರಿಸಲಿ । ಅಗ್ನಿಯು ಬ್ರಾಹ್ಮಣರಿಗೂ ಬ್ರಾಹ್ಮಣನಾಗಿದ್ದಾನೆ । ಆದ್ದರಿಂದ ಬ್ರಾಹ್ಮಣರಾದ ನಮಗೆ ಹಾನಿಯನ್ನುಂಟುಮಾಡದೇ ಸ್ವಯಂಬ್ರಾಹ್ಮಣ ರೂಪದವನಾಗಿ ಅನುಗ್ರಹಿಸಲಿ ॥

೧೩. ಯಜ್ಞೋ ವರ್ಧತಾಂ ಯಜ್ಞಸ್ಯ ವೃದ್ಧಿ ಮನುವರ್ಧಾಪಚಿತಿರಸ್ಯ
ಪಚಿತಿಂ ಮಾ ಕುರ್ವವಪಚಿತೋಽಹಂ ಮನುಷ್ಯೇಷು ಭೂಯಾಸಮ್ ॥

ಈ ಮನುಷ್ಯಯಜ್ಞವು ಗೋ ಉತ್ಸರ್ಗಪಕ್ಷದಲ್ಲಿಯೂ ವಿಕಲತೆಯಿಲ್ಲದೆ ವೃದ್ಧಿಹೊಂದಲಿ । ಈ ಯಜ್ಞದ ವೃದ್ಧಿಯನ್ನು ಅನುಸರಿಸಿ ಎಲೈ ಹಸುವೇ ನೀನೂ ವೃದ್ಧಿಗೊಳ್ಳು । ನೀನು ಪೂಜನೀಯಳಾಗಿದ್ದೀಯೆ, ಆದ್ದರಿಂದ ನಾನೂ ಕೂಡ ಪೂಜನೀಯನಾಗುವಂತೆ ಮಾಡು । ನಿನ್ನನ್ನು ಉತ್ಸರ್ಗ ಮಾಡುತ್ತಾ, ನಾನು ಮನುಷ್ಯರ ಮಧ್ಯದಲ್ಲಿ ಪೂಜ್ಯನಾಗುವಂತೆ ಆಗಲಿ ॥

೧೪. ಗೌರ್ಧೇನು ಭವ್ಯಾ ॥

ಎಲೈ ಹಸುವೇ, ನಾನು ನಿನ್ನನ್ನು ಉತ್ಸರ್ಗ(ಬಿಡುವಿಕೆ) ಮಾಡುತ್ತಿರುವುದರಿಂದ ಕರುವುಳ್ಳ ಹಸುವಾಗಿ ಒಳ್ಳೆಯಫಲಗಳನ್ನು ಕೊಡುವವಳಾಗುತ್ತೀಯೆ ॥

೧೫. ಮಾತಾ ರುದ್ರಾಣಾಂ ದುಹಿತಾ ವಸೂನಾಗ್ಂ ಸ್ವಸಾ ದಿತ್ಯಾನಾಮಮೃತಸ್ಯ ನಾಭಿಃ । ಪ್ರ ನು ವೋಚಂ ಚಿಕಿತುಷೇ ಜನಾಯ ಮಾಗಾಮನಾಗಾಮದಿತಿಂ ವಧಿಷ್ಮ ॥

ಎಲೈ ಹಸುವೇ ನೀನು ರುದ್ರದೇವತೆಗಳಿಗೆ ಮಾತೃಸ್ಥಾನೀಯಳಾಗಿದ್ದೀಯೆ । ವಸುದೇವತೆಗಳಿಗೆ ಮಗಳಾಗಿದ್ದೀಯೆ । ಆದಿತ್ಯದೇವತೆಗಳಿಗೆ ತಂಗಿಯಾಗಿದ್ದೀಯೆ । ಹಾಗೂ ಅಮೃತರೂಪವಾದ ಯಜ್ಞಕ್ಕೆ ಪ್ರಧಾನ ಅಂಗರೂಪವಾದ ಆಜ್ಯವನ್ನು ಕೊಡುವುದರ ಮೂಲಕ ನಾಭಿಸ್ಥಾನೀಯಳಾಗಿದ್ದೀಯೆ । ಈ ಹಸುವು ಪ್ರಶಸ್ತವಾಗಿದೆ । ಆದ್ದರಿಂದ ಅತೀಶೀಘ್ರವಾಗಿ ನಾನು ಪ್ರಕರ್ಷ(ಜೋರಾಗಿ)ದಿಂದ ಈ ಹಸುವಿನ ಬಗ್ಗೆ ತಿಳಿದ ಜನರಿಗೆ 'ಯಾವ ಪಾಪವೂ ಇಲ್ಲದೇ ಇರುವಂತಹ, ಯಾವ ಅಂಗಲೋಪವೂ ಇಲ್ಲದಿರುವಂತಹ ಈ ಹಸುವನ್ನು ಕೊಲ್ಲಬೇಡಿರಿ', ಎಂದು ಹೇಳುತ್ತೇನೆ ।

೧೬. ಪಿಬತೂದಕಂ ತೃಣಾನ್ಯತ್ತು ॥

ಈ ಹಸುವು ತನಗಿಷ್ಟಬಂದಂತೆ ನೀರನ್ನು ಕುಡಿಯಲಿ ಹಾಗೂ ಹುಲ್ಲನ್ನು ಮೇಯಲಿ ।

೧೭. ಓಮುತ್ಸೃಜತ ॥

ಎಲೈ ಸೇವಕರೇ, ಈ ಹಸುವನ್ನು ಬಿಡಿರಿ ।

೧೮. ಭೂತಂ ॥

ಅನ್ನವು ಸಿದ್ಧವಾಗಿದೆ ॥

೧೯. ಸಾ ವಿರಾಟ್ ॥

ಈ ಅನ್ನವು ವಿವಿಧವಾಗಿ ಕಾಂತಿಯುಕ್ತವಾಗಿದೆ(ವಿರಾಡ್ರೂಪತೆ) ॥

೨೦. ತನ್ಮಾ ಕ್ಷಾಯಿ ತಸ್ಯ ತೇ ಶೀಯ ತನ್ಮ ಊರ್ಜಂಧಾಃ ॥

ಈ ಅನ್ನವು ಕ್ಷಯವಾಗದೇ ಇರಲಿ । ಆ ವಿರಾಡ್ರೂಪವಾದಂತಹ ನಿನ್ನನ್ನು(ಅನ್ನವನ್ನು) ನಾನು ಸ್ವೀಕರಿಸುತ್ತೇನೆ(ತಿನ್ನುತ್ತೇನೆ) । ಈ ಅನ್ನವು ನನಗೆ ಬಲವನ್ನು ಕೊಡಲಿ ॥

೨೧. ಓಂ ಕಲ್ಪಯತ ॥

ಎಲ್ಲೈ ಸೇವಕರೇ, ಈ ಅನ್ನವನ್ನು ತೆಗೆದುಕೊಂಡು ಬನ್ನಿರಿ ॥

....*********....

೫. ವಿವಾಹಃ – ಕಪರ್ದಿಕಾರಿಕಾ

ವಿವಾಹದ ಕಾಲಗಳು –

ಉತ್ತಮದಿನ ಲಗ್ನಂ ಚ ರಾತ್ರಿ ಲಗ್ನಂ ಚ ಮಧ್ಯಮಂ ।
ಸಂಧ್ಯಾಕಾಲೇ ಪಿಶಾಚತ್ವಂ ನಿಶಿವರ್ತತಿ ರಾಕ್ಷಸಂ ॥

ಹಗಲಿನ ಲಗ್ನವು ವಿವಾಹಕ್ಕೆ ಉತ್ತಮ, ರಾತ್ರಿ ಲಗ್ನವು ಮಧ್ಯಮವು । ಸಂಧ್ಯಾಕಾಲದ ಲಗ್ನವು ನೀಚವಾದುದ್ದು ಮಧ್ಯರಾತ್ರಿಯಲ್ಲಿ ನಡೆಯುವ ಲಗ್ನವು ರಾಕ್ಷಸವಾದುದ್ದು(ಅತೀ ಕೆಳದರ್ಜೆಯಾದದ್ದು) ॥

ಮಹಾನದೀ ಪರ್ವತಮಂತರಂ ವಾ ಕೃತ್ವಾ ವಿವಾಹಂ ಸಾನುಜಸ್ಯ ಯಸ್ಯ ।
ತಸ್ಯಾನುಜಸ್ಯಾಪಿ ತದೇವ ಕಾರ್ಯಂ ಮೌಂಜೀನಿ ಬಂಧಾಖ್ಯಂ ಇದಂ ಕಪರ್ದಿನಾ ॥

ಮಹಾನದೀ ಅಥವಾ ಪರ್ವತದ ನಡುವೆ ಮರೆಮಾಡಿ(ಅಂತರವನ್ನು ಕಾಯ್ದುಕೊಂಡು) ಅಣ್ಣತಮ್ಮಂದಿರ ವಿವಾಹವನ್ನು ಮಾಡಬೇಕು । ಅವನ ತಮ್ಮನಿಗೂ ಆ ಮೌಂಜೀ ಬಂಧನ ಎಂಬ ಕಾರ್ಯವನ್ನು ಮಾಡಬೇಕೆಂದು ಕಪರ್ದಿಗಳು ಹೇಳಿದ್ದಾರೆ ॥

ಉದ್ವಾಹ್ಯ ಪುತ್ರೀಂ ಪಿತಾ ವಧೂ ದ್ರವ್ಯಂ ಪರಸ್ಯೋದ್ವಹನಂ ನ ಜಾತು ।
ಯಾವಚ್ಚತುರ್ಥೀ ದಿನ ಮಂಗಲಸ್ಯ ಸಮಾಪನಂ ತಾವದತೋ ವಿದಧ್ಯಾತ್ ॥

ಮಗಳನ್ನು ವಿವಾಹ ಮಾಡಿಕೊಟ್ಟನಂತರ ಎಲ್ಲಿಯವರೆಗೆ ಚತುರ್ಥೀ ದಿನದ ಮಂಗಳದ ಸಮಾಪನ ಆಗುತ್ತದೆಯೋ । ಅಲ್ಲಿಯವರೆಗೂ ಆ ವಿವಾಹಕ್ಕೆ ಉಪಯೋಗಿಸಿದಂತಹ ಮಂಗಳ ದ್ರವ್ಯಗಳನ್ನು ಹಾಗೆಯೇ ಮನೆಯಲ್ಲಿ ಇಟ್ಟಿರಬೇಕು ನಂತರ ತೆಗೆಯಬಹುದು, ಈ ೪ ದಿನಗಳಲ್ಲಿ ಇನ್ನೊಂದು ಮದುವೆ ಮಾಡಬಾರದು ॥

ಭ್ರಾತೃಯುಕ್ ಪಿತೃಯುಗ್ಮೇ ಚ ಭ್ರಾತೃಸ್ವಸೃ ಯುಗೇ ತಥಾ ।
ನ ಜಾತು ಮಂಗಲಂ ಕೇನ ಏಕಸ್ಮಿನ್ ಮಂಗಲೇ ಹನಿ ॥

ಅಣ್ಣತಮ್ಮಂದಿರ ಮತ್ತು ತಂದೆಯ ಹಾಗೂ ಅಣ್ಣತಂಗಿಯರಿಗೆ । ಒಟ್ಟಿಗೇ ಒಂದೇ ದಿನ ಮಂಗಳಮಹೋತ್ಸವವನ್ನು ಮಾಡಬಾರದು ॥

ನ ಪುಂ ವಿವಾಹೌ ಚ ಋತುತ್ರಯಂ ಚ ವಿವಾಹ ಕಾರ್ಯಂ ದುಹಿತುಃ ಪ್ರಕುರ್ಯಾತ್ । ಪ್ರಕೀರ್ತಯಂತ್ಯೇವ ಮುನೀಂದ್ರವರ್ಯಾಃ ನ ಮಂಡನಂ ಮುಂಡನ ತೋಪಿರೇವ ॥

ಮಗನ ವಿವಾಹವನ್ನು ಮಾಡಿ ೩ ಋತುಗಳ ಕಾಲ (೬ ತಿಂಗಳು) ಮಗಳ ವಿವಾಹವನ್ನು ಮಾಡಬಾರದು। ಈ ರೀತಿ ಮುನೀಂದ್ರ ಶ್ರೇಷ್ಠರು ಹೇಳುತ್ತಾರೆ ಹೀಗೆಯೇ ಮುಂಡನವನ್ನೂ ಮಾಡಿಕೊಳ್ಳಬಾರದೂ ಹಾಗೆಯೇ ಚೂಡಾಕರ್ಮವನ್ನೂ ಮಾಡಬಾರದು ॥

ಅವಳಿ ಮತ್ತು ಒಂದೇ ಹೊಟ್ಟೆಯಲ್ಲಿ ಹುಟ್ಟಿದವರ ವಿವಾಹದ ವಿಚಾರ –

ಏಕೋದರ ವಿವಾಹಸ್ತು ಯಥಾ ಫಾಲ್ಗುಣ ಚೈತ್ರಯೋಃ ।
ಮಾಸಯೋಃ ವಿಹಿತಂ ಕುರ್ಯಾತ್ ಅಬ್ದಭೇದಂ ವಿಮುಚ್ಯತೇ ॥

ಒಂದೇ ಉದರದಲ್ಲಿ(ಒಂದೇ ತಾಯಿಯಲ್ಲಿ) ಹುಟ್ಟಿದವರಿಗೆ ಫಾಲ್ಗುಣ ಚೈತ್ರಗಳಲ್ಲಿ ವಿವಾಹಮಾಡಬೇಕು। ಆಗ ಸಂವತ್ಸರ ಭೇದದಿಂದ ನಿಷೇಧವು ತಪ್ಪುತ್ತದೆ ॥

ಭಿನ್ನೋದರೇ ದತ್ತಕೇ ಚ ಪಿತೃವ್ಯ ತನಯಾಗ್ರಜ ।
ದಾರಾಗ್ನಿಹೋತ್ರ ಸಂಯೋಗೇ ಸದೋಷ ಪಾಣಿ ಪೀಡನೇ ॥

ಬೇರೆ ಉದರದಲ್ಲಿ ಹುಟ್ಟಿದವರಿಗೆ(ಒಬ್ಬನೇ ತಂದೆ, ಬೇರೆಬೇರೆ ತಾಯಿಯರು) ಹಾಗೆಯೇ ದತ್ತು ಪುತ್ರನಿಗೆ, ಚಿಕ್ಕಪ್ಪನ ಮಗ ಹಾಗೂ ಅಕ್ಕ ಇವರುಗಳಿಗೆ । ಒಂದೇ ಕಾಲದಲ್ಲಿ ವಿವಾಹ, ಅಗ್ನಿಹೋತ್ರಗಳ ಸಂಯೋಗ ಮಾಡಲಾಗಿ ಅದು ದೋಷವೆಂದು ಕೆಲವರ ಅಭಿಪ್ರಾಯ ॥

ವಿವಾಹೇ ಮೇಷಲಗ್ನೇತು ಕೇಚಿದೇಕ ದಿನೇ ತಥಾ ।
ಏಕೋದರ ಪ್ರಸೂತಾನಾಂ ವಿವಾಹಃ ಶೋಭನಸ್ಮೃತಃ ॥

ಒಂದೇ ಉದರದಲ್ಲಿ ಹುಟ್ಟಿದವರಿಗೆ ಮೇಷ ಲಗ್ನದಲ್ಲಿ ಒಂದೇ ದಿನದಲ್ಲಿ । ವಿವಾಹವನ್ನು ಮಾಡಿದರೆ ಶುಭವೆಂದು ಸ್ಮೃತಿಯಲ್ಲಿ ಹೇಳಲ್ಪಟ್ಟಿದೆ ॥

ಏಕತ್ರಲಗ್ನೇ ಯದಿ ಪುತ್ರ ಲಗ್ನೇ ವಿವಾಹ ಮೌಂಜೀ ವ್ರತ ಬಂಧ ಕರ್ಮ ।
ಆಚಾರ್ಯ ಯುಗ್ಮಂ ಖಲು ವೇದಿ ಯುಗ್ಮಂ ನಾಂದೀ ಮುಖಂ ಸ್ವಸ್ವ ಗೃಹೇಷು ಕುರ್ಯಾತ್ ॥

ತನ್ನ ಅವಳೀ ಮಕ್ಕಳಿಗೆ ವಿವಾಹವು ಒಂದೇಕಡೆಯಲ್ಲಿ ಆದರೆ ವಿವಾಹದ ಮೌಂಜೀ, ವ್ರತಬಂಧಕರ್ಮ । ಇಬ್ಬರು ಆಚಾರ್ಯರು, ೨ ವೇದಿ, ನಾಂದೀ ಮುಂತಾದವುಗಳನ್ನು ತಮ್ಮ ಮನೆಯಲ್ಲಿಯೇ ಮಾಡಬೇಕು ॥

ಪುತ್ರೀ ವಿವಾಹಾತ್ ಪರತಸ್ತಥೈವ ಶುಭಪ್ರದಂ ಪುತ್ರ ವಿವಾಹ ಕರ್ಮ । ಪುತ್ರದ್ವಯಂ ನೈವ ಋತುದ್ವಯಂ ಚ ದ್ವಿಶೋಭನಂ ಚೈಕ ಗೃಹೇ ನ ನಷ್ಟಂ ।

ಉಷಂತಿ ಪಶ್ಚಾನ್ನಪತಿಂ ದಿನೇಭ್ಯಃ ॥

ಮಗಳ ಮದುವೆಯಾದ ಮೇಲೆ ಮಗನ ಮದುವೆ ಆಗುವುದು ಶುಭಪ್ರದವು । ಹಾಗೆಯೇ ಮಕ್ಕಳಿಬ್ಬರ, ೨ ಋತುಗಳ ವಿವಾಹವು, ೨ ಶೋಭನವು ಒಂದೇ ಮನೆಯಲ್ಲಿ ಏಕಕಾಲದಲ್ಲಿ ಶುಭಪ್ರದವಲ್ಲ, ದಿನಗಳನ್ನು ಬಿಟ್ಟು ಮಾಡಿದರೆ ಶುಭವು ॥

ವಿವಾಹ ಮಂಟಪದ ಲಕ್ಷಣ –

ಹಸ್ತೋನ್ನತಾನ್ ಹಸ್ತ ಚತುಷ್ಟಯೇನ ವಿಸ್ತೀರ್ಣತಾಂ ಮಂದಿರ ವಾಮಭಾಗೇ । ಸುಮಂಟಪಸ್ತಂಭ ಚತುಷ್ಟಯೇನ ಸೋಪಾನ ರಮ್ಯಂ ತು ವಿವಾಹ ವೇದಿಮ್ ॥

ಒಂದು ಹಸ್ತ ಎತ್ತರವೂ, ೪ ಹಸ್ತ ವಿಸ್ತೀರ್ಣ ಮತ್ತು ವಾಮ(ಎಡ)ಭಾಗದಲ್ಲಿ ಮಂದಿರವುಳ್ಳದ್ದು, ಒಳ್ಳೆಯ ೪ ಕಂಬಗಳಿಂದ ಕೂಡಿದ ಮಂಟಪ ಹಾಗೂ ರಮ್ಯವಾದ ಸೋಪಾನವಿರುವಂತಹ ವಿವಾಹ ವೇದಿಕೆಯನ್ನು ಮಾಡಬೇಕು ॥

ಎರಡನೇ ಮದುವೆಯ ಕಾಲವು –

ಪತ್ನೀ ವಿಯೋಗೇ ಪ್ರಥಮೇ ಚ ವರ್ಷೇ ನೋಚೇತ್ ದ್ವಿವರ್ಷ ಪುನರುದ್ವಯೇತ್ ಸಹ ।
ಅಯುಗ್ಮ ಮಾಸೇಷು ಶುಭಪ್ರದಸ್ಯಾತ್ ವಸಿಷ್ಠ ಗಾರ್ಗ್ಯಾದಿ ಪರಾಶರಾದ್ಯೈಃ ॥

ಪತ್ನಿಯ ವಿಯೋಗವಾಗಲಾಗಿ(ವ್ಯಕ್ತಿಯು ಕರ್ಮನಿಷ್ಠನಾಗಿದ್ದು ಕರ್ಮಾಚರಣೆಯಲ್ಲಿ ತನ್ನನ್ನು ತೊಡಗಿಸಿಕೊಂಡಿದ್ದರೆ ಕರ್ಮಾಚರಣೆಗಾಗಿ) ಆ ಮೊದಲವರ್ಷ ಅಥವಾ ೨ ನೇ ವರ್ಷದಲ್ಲಿ

ಪುನಃ ವಿವಾಹವನ್ನು ಮಾಡಿಕೊಳ್ಳಬಹುದು । ಬೆಸ ಸಂಖ್ಯೆಯ ಮಾಸಗಳು ಶುಭವು ಎಂದು ವಸಿಷ್ಠ, ಗಾರ್ಗಿ, ಪರಾಶರಾದಿಗಳಿಂದ ಹೇಳಲ್ಪಟ್ಟಿದೆ ॥

ಕನ್ಯಾದಾನ ಮತ್ತು ವಧೂವರರು ಇರಬೇಕಾದ ದಿಕ್ಕುಗಳ ವಿಚಾರ–

ಪ್ರಾಣ ಸಂಯಮನಂ ಪ್ರಥಮಂ ಭವೇತ್ ಪ್ರೇಷಣಂ ಸುಹೃದಾಭಿಮಂತ್ರಣಂ ।
ಸಂಗತಾಯ ವರಾಯ ಸಮರ್ಪ್ಯತೇ ಸ್ವಾಮಿನಾತು ವಧೂಃ ಜಲ ಪೂರ್ವಕಮ್ ॥

ಮೊದಲು ಪ್ರಾಣಾಯಾಮವನ್ನು ಮಾಡಿ, ನಂತರ ಇಬ್ಬರು ಬ್ರಾಹ್ಮಣರನ್ನು ಕಳುಹಿಸಬೇಕು ನಂತರ ಸ್ನೇಹಿತರಿಗೆ ಆಮಂತ್ರಣವನ್ನು ಕೊಡಬೇಕು । ನಂತರ ಬಂದಂತಹ ವರನಿಗೆ ಯಜಮಾನನಿಂದ ವಧುವು ಜಲಪೂರ್ವಕವಾಗಿ ಕೊಡಲ್ಪಡುತ್ತಾಳೆ ॥

ವಿವಾಹ ಮಹೀತಲೇ ಪಾವಕೋ ವಿಧಿವತ್ ಮಧುಪರ್ಕಃ ।
ವಿವಾಹಕರ್ಮ ಪ್ರಥಮೇ ವಿವಾಹೇ ಸಂಕಲ್ಪ್ಯ ಸಮ್ಯಕ್ ಸರಬಂಧನಂ ಚ ॥

ವಿಧಿಯಂತೆ ವಿವಾಹದ ಜಾಗದಲ್ಲಿ ಅಗ್ನಿಯು ಇಡಲ್ಪಡುತ್ತದೆ, ಮೊದಲ ವಿವಾಹದಲ್ಲಿ ಮಧುಪರ್ಕವು ಮಾಡಲ್ಪಡುತ್ತದೆ । ನಂತರ ಒಳ್ಳೆಯ ರೀತಿಯಲ್ಲಿ ಸಂಕಲ್ಪವನ್ನು ಮಾಡಿ, ಆಮೇಲೆ ಸರಬಂಧನಾದಿ ವಿಧಿಗಳನ್ನು ಮಾಡಬೇಕು ॥

ತಿಷ್ಠೇತ್ ಪೂರ್ವಮುಖೋ ದಾತಾ ವರ ಪ್ರತ್ಯಙ್ಮುಖೋ ಭವೇತ್ ।
ಮಧುಪರ್ಕಾರ್ಚಿತಾಯ ಏಷಾ ತಸ್ಮೈ ದದ್ಯಾತ್ ಸದಕ್ಷಿಣಾ ॥

ಕನ್ಯಾದಾತೃವು ಪೂರ್ವಾಭಿಮುಖವಾಗಿ ನಿಂತುಕೊಳ್ಳುವುದು, ವರನು ಪಶ್ಚಿಮಾಭಿಮುಖವಾಗಿ ನಿಲ್ಲುವುದು । ಮಧುಪರ್ಕದಿಂದ ಪೂಜಿಸಲ್ಪಟ್ಟಂತಹ ಈ ವರನಿಗೆ ದಕ್ಷಿಣಾಸಹಿತವಾಗಿ ಕನ್ಯೆಯನ್ನು ಕೊಡಬೇಕು ॥

ಕನ್ಯಾ ಸ್ವೀಕರಣಂ ತತ್ರ ಮುಹೂರ್ತಂ ಕಾರಯೇದಿತಿ ।
ವರ ಪ್ರತ್ಯಙ್ಮುಖೇ ಕರ್ಮ ನ ಸಂದೇಹಃ ಕಪರ್ದಿನಾ ॥

ಕನ್ಯಾ ಸ್ವೀಕರಣವನ್ನು ಶುಭಮುಹೂರ್ತದಲ್ಲಿ ಮಾಡಬೇಕು । ಈ ಕನ್ಯಾ ಸ್ವೀಕರಣವು ವರನು ಪಶ್ಚಿಮಾಭಿಮುಖವಾಗಿ ನಿಂತು ಮಾಡುವ ಕರ್ಮ ಎಂದು ಕಪರ್ದಿಗಳು ನಿಸ್ಸಂದೇಹವಾಗಿ ಹೇಳುತ್ತಾರೆ ॥

ಪ್ರಾಕ್ಪ್ರತ್ಯಙ್ಮುಖಯೋಃ ಚ ಏವ ದಾತೃ ಗ್ರಾಹಕಯೋಃ ಸ್ಥಿತಿಃ ।
ಉದ್ವಾಹೇ ಚೈವ ಸಾವಿತ್ರೀ ಪ್ರಧಾನೇ ಚೈವ ಮೇವ ವಾ ॥

ಎಲ್ಲಾ ಕಡೆಗಳಲ್ಲಿಯೂ ಕನ್ಯಾದಾನದಲ್ಲಿ ದಾತೃವು ಪೂರ್ವಾಭಿಮುಖ, ಸ್ವೀಕರಿಸುವವನು ಪಶ್ಚಿಮಾಭಿಮುಖವಾಗಿ ನಿಲ್ಲುವುದೇ ವಿಧಿ ॥

ದದ್ಯಾತ್ ಪೂರ್ವಮುಖಂ ದಾನಂ ಗೃಹ್ಣೀಯಾತ್ ಉತ್ತರಾಮುಖಃ ।
ಏಷ ಏವ ವಿಧಿಜ್ಞೇಯಃ ವಿವಾಹೇತು ವಿಪರ್ಯಯಃ ॥

ಪೂರ್ವಾಭಿಮುಖವಾಗಿ ದಾನಗಳನ್ನು ಕೊಡಬೇಕು, ದಾನವನ್ನು ಸ್ವೀಕರಿಸುವವನು ಉತ್ತರಾಭಿಮುಖ, ಇದು ಸಾಮಾನ್ಯವಿಧಿಯು। ಆದರೆ ವಿವಾಹದ ಕನ್ಯಾದಾನದಲ್ಲಿ ಮಾತ್ರ, ಇದಕ್ಕೆ ವಿರುದ್ಧವಾಗಿ ಹೇಳಿದೆ ॥

ಕನ್ಯಾಲಕ್ಷಣ –

ಅನನ್ಯ ಪೂರ್ವಿಕಾಂ ಕನ್ಯಾಂ ಅಸಪಿಂಡಾ ಯವೀಯಸೀಮ್ ।
ಅರೋಗಿಣೀಂ ಭ್ರಾತೃಮತೀಂ ಅಸಮಾನಕ ಗೋತ್ರಜಾಮ್ ॥

ಬೇರೆಯವರು ಗೊತ್ತುಮಾಡಿಕೊಳ್ಳದಿರುವ, ಜ್ಞಾತಿಗಳಲ್ಲದ, ತನಗಿಂತ ಚಿಕ್ಕವಳಾದ, ರೋಗಿಷ್ಠೆಯಲ್ಲದ, ಸೋದರರನ್ನುಳ್ಳ, ಸಗೋತ್ರವಲ್ಲದ ಕನ್ಯೆಯನ್ನು ವರಿಸುವುದು ಶ್ರೇಯಸ್ಕರವು ॥

ವರನ ಲಕ್ಷಣ –

ಕುಲಶೀಲ ವಯೋರೂಪ ವಿದ್ಯಾನ್ವಿತ ವರಯಾ ಚ ।
ವರಾಯ ರೂಪ ಸಂಪನ್ನಾಂ ದದ್ಯಾತ್ ಕನ್ಯಾಯ ದೀಯತೇ ॥

ಉತ್ತಮ ಕುಲದಲ್ಲಿ ಹುಟ್ಟಿದ, ಶೀಲವಂತನಾದ, ವಯಸ್ಸು, ರೂಪ ಮತ್ತು ವಿದ್ಯೆಯಿಂದ ಕೂಡಿದ ಶ್ರೇಷ್ಠನಾದ ರೂಪಸಂಪನ್ನನಾದ ವರನಿಗೆ ಕನ್ಯೆಯನ್ನು ಕೊಡುವುದೇ ಶ್ರೇಯಸ್ಸು ॥

ದಾನಕರ್ತೃವಿನ ವಿಚಾರ –

ಪಿತಾ ಪಿತಾಮಹೋ ಭ್ರಾತಾ ಸಕುಲ್ಯೋ ಜನನೀ ತಥಾ ।
ಕನ್ಯಾಪ್ರದಃ ಪೂರ್ವನಾಶೇ ಪ್ರಕೃತಿಸ್ಥಃ ಪರಃ ಪರಃ ॥

ತಂದೆ, ಅಜ್ಜ, ಅಣ್ಣ, ಆ ಕುಲದಲ್ಲಿ ಹುಟ್ಟಿದ ಜ್ಞಾತಿಗಳು ಹಾಗೆಯೇ ತಾಯಿ ಇವರುಗಳು ಕನ್ಯಾದಾನ ಮಾಡಲು ಅರ್ಹರು। ಇವರಲ್ಲಿ ಕ್ರಮವಾಗಿ ಮೊದಲು ಮೊದಲು ಸತ್ತಿದ್ದರೆ, ಮುಂದು ಮುಂದಿನವರು ಆದ್ಯತೆಯಾಗಿ ಕೊಡತಕ್ಕದ್ದು ॥

ಗೋತ್ರ ಪ್ರವರ ವಿಚಾರ –

ಚತುರ್ಥ್ಯಂತಂ ವರಸ್ಯೋಕ್ತ ನಾಮತತ್ ಗೋತ್ರ ಪೂರ್ವಕಮ್ ।
ಕನ್ಯಾನಾಮ ದ್ವಿತೀಯಾಂತಂ ಉಕ್ತ್ವಾ ತತ್ ಗೋತ್ರಪೂರ್ವಕಮ್ ॥
ಆಯುರೇಥಂ ತವೋ ದಾತಾ ದಾಸ್ಯಾಮೀತಿ ವರಂ ವದೇತ್ ।
ವರ ಗೋತ್ರಂ ಸಮುಚ್ಚಾರ್ಯ ಪ್ರಪಿತಾಮಹ ಪೂರ್ವಕಮ್ ॥
ನಾಮ ಸಂಕೀರ್ತನಂ ವಿದ್ವಾನ್ ಅನ್ಯತ್ರ ಪಿತೃ ಪೂರ್ವಕಮ್ ।
ಕನ್ಯಾಯೋಶ್ಚೈವ ಮೇವಹಿ ॥

ಉದಾಹರಣಂ:– ಗಾರ್ಗ್ಯ ಗೋತ್ರಾಯ ಪರಮೇಶ್ವರಶರ್ಮಣೇ ಆತ್ರೇಯಸ ಗೋತ್ರೇ ಪ್ರಭವಾಂಪಾರ್ವತೀ ನಾಮ್ನೀಂ ಪ್ರದದಾಮ್ಯಹಮ್ ॥

ವರನ ಹೆಸರು ಗೋತ್ರಪೂರ್ವಕವಾಗಿ ಚತುರ್ಥೀ ವಿಭಕ್ತಿಯಲ್ಲಿ ಹೇಳಬೇಕು। ಹಾಗೆಯೇ ಕನ್ಯೆಯ ಹೆಸರನ್ನು ಹೇಳಿ ಅವಳ ಗೋತ್ರ ಪೂರ್ವಕವಾಗಿ ದ್ವಿತೀಯಾ ವಿಭಕ್ತಿಯಲ್ಲಿ ಹೇಳಬೇಕು ॥

ಕನ್ಯಾದಾನ ಮಾಡುವವನು ಕಡೆಗೆ ದಾಸ್ಯಾಮಿ ಎಂದು ಹೇಳಿ । ವರನ ಪ್ರವರದಲ್ಲಿ ಆಯುಷ್ಮತೇ ಎಂಬುದನ್ನು ಸೇರಿಸಿಕೊಳ್ಳಬೇಕು ॥

ವರನ ಗೋತ್ರವನ್ನು ಪ್ರಪಿತಾಮಹ ಪೂರ್ವಕವಾಗಿ ಚತುರ್ಥೀ ವಿಭಕ್ತಿಯಲ್ಲಿ ಉಚ್ಚರಿಸಿ ಹೀಗೆಯೇ ಪಿತಾಮಹ, ಪಿತೃ ಪೂರ್ವಕವಾಗಿ ಉಚ್ಚರಿಸಿ ನಂತರ ವರನ ಹೆಸರನ್ನು ಹೇಳಬೇಕು। ಕನ್ಯೆಯ ಹೆಸರನ್ನೂ ಹೀಗೆಯೇ ಹೇಳಬೇಕು ॥

ಉದಾಹರಣೆಗೆ – ಗಾರ್ಗ್ಯ ಗೋತ್ರದಲ್ಲಿ ಹುಟ್ಟಿರುವ ಈಶ್ವರನಿಗೆ ಆತ್ರೇಯ ಗೋತ್ರದಲ್ಲಿ ಹುಟ್ಟಿರುವ ಪಾರ್ವತಿಯನ್ನು ನಾನು ವಿವಾಹ ಮಾಡಿಕೊಡುತ್ತೇನೆ ॥

ಸಪ್ತಪದೀ –

ಆರುಹ್ಯರಾಶೀ ಕೃತ ತಂಡುಲೇನ ಅನ್ಯೋನ್ಯ ವಕ್ತ್ರೇ ವ್ಯವಲೋಕಮಾನೇ ।
ಪ್ರತ್ಯಙ್ಮುಖಃ ಪೂರ್ವಮುಖೀಂ ಸುಲಗ್ನೇ ವರೋ ವರೇಣ್ಯಾಂ ವರಯೇತ್ ಕುಮಾರೀಮ್ ॥

ಅಕ್ಕಿಯ ರಾಶಿಯ ಮೇಲೆ ವಧುವನ್ನು ಹತ್ತಿಸಿ ಒಬ್ಬರಿಗೊಬ್ಬರು ಮುಖವನ್ನು ನೋಡಿಕೊಂಡು । ವರನು ಪಶ್ಚಿಮಾಭಿಮುಖವಾಗಿ ವಧುವನ್ನು ಪೂರ್ವಾಭಿಮುಖವಾಗಿ ಒಳ್ಳೆಯ ಲಗ್ನದಲ್ಲಿ ವರಿಸಬೇಕು ॥

ಮಾಂಗಲ್ಯಧಾರಣಂ –

ಆಚ್ಛಾದ್ಯ ನೂತನಂ ವಾಸಃ ವರೋ ಮಾಂಗಲ್ಯ ಸೂತ್ರಕಮ್ ।
ಸುವರ್ಣಮಣಿ ಸಂಯುಕ್ತಾಂ ಬಧ್ನೀಯಾತ್ ಕನ್ಯಕಾಗಳೇ ॥

ವಧುವಿಗೆ ನೂತನವಾದ ಸೀರೆಯನ್ನು ಉಡಿಸಿ । ಸುವರ್ಣಮಣಿಗಳಿಂದ ಕೂಡಿದ ಮಾಂಗಲ್ಯ ಸೂತ್ರವನ್ನು ವಧುವಿನ ಕಂಠದಲ್ಲಿ ಕಟ್ಟಬೇಕು ॥

ಯೋಕ್ತ್ರ ಲಕ್ಷಣ (ದರ್ಭೆಯಿಂದ ಮಾಡಿದ ದಾರ) –

ಯುಗ್ಮ ದರ್ಭಕೃತಂ ಯೋಕ್ತ್ರಂ ದ್ವಾತ್ರಿಂಶದಂಗುಲೋನ್ನತಮ್ ।
ಚತುರ್ವಿಂಶತಿ ದರ್ಭೈಶ್ಚ ಜ್ಞೇಯಂ ಯೋಕ್ತ್ರಸ್ಯ ಲಕ್ಷಣಮ್ ॥

'ಊರ್ಧ್ವಂ ವೈ ಪುರುಷಸ್ಯ ನಾಭ್ಯೈ' ಉತ್ತರೇಣ ನಾಭಿಗ್ರಂಥಿಂ ನಿಷ್ಪರ್ಕ್ಯಂ ಬಧ್ವಾ ಪ್ರದಕ್ಷಿಣಂ ಪರಿಸಮೂಹ್ಯ ದಕ್ಷಿಣೇನ ನಾಭಿಂ ಅವಸ್ಥಾಪಯತಿ ॥

೨ ದರ್ಭೆಗಳಿಂದ ೩೨ ಅಂಗುಲ ಉದ್ದವಿರುವ ೨೪ ದರ್ಭೆಗಳಿಂದ ಯೋಕ್ತ್ರವನ್ನು ಮಾಡಬೇಕು ॥ ಮನುಷ್ಯನ ನಾಭಿಯಿಂದ ಮೇಲೆ ಪವಿತ್ರವು ಎಂದು ಶ್ರುತಿ ಇರುವುದರಿಂದ ನಾಭಿಯ ಮೇಲೆ ಯೋಕ್ತ್ರ ಗ್ರಂಥಿಯನ್ನು ಕಟ್ಟಿ ಪ್ರದಕ್ಷಿಣೆಯಾಗಿ ತಿರುಗಿಸಿ ನಾಭಿಯ ದಕ್ಷಿಣದ(ಬಲ) ಕಡೆಗೆ ಗ್ರಂಥಿಬರುವಂತೆ ಮಾಡುತ್ತಾನೆ ॥

ಅಕ್ಷತಾರೋಪಣ –

ದ್ವಿಃ ಪೂರ್ಣಸ್ಯಾಂಜಲಿ ಪೂರ್ಣಶ್ಚ ತ್ಯಕ್ತ್ವಾ ಏವಂ ಚತುರಭ್ಯವರ್ತ್ಯ । ಸ್ತ್ರಿಯಃ ಪರಸ್ತ್ರೀಂ ಪ್ರಥಮೇ ತೃತೀಯೇ ವರಶ್ಚ ಏವಂ ದ್ವಿಚತುರ್ಥಯೋಃ ಚ ।

ಕನ್ಯಾಂಜಲಿ ಅಕ್ಷತಾ ಪೂರ್ವಂ ವರಾಂಜಲ್ಯುಪರಿಸ್ಥಿತಾಂ । ಕನ್ಯಾಪಿತುರನ್ಯಜನ್ಯೈಃ ನಿನೇಂಯೇತಿ ಜಪೇದ್ವರಮ್ ॥

೨ ಸಲ ಅಂಜಲಿ ಪೂರ್ಣವಾಗಿ ಪತ್ನಿಗೆ ಅಕ್ಷತೆಯನ್ನು ಹಾಕಿ ಹೀಗೆ ೪ ಸಲ ಮಾಡಬೇಕು । ಸ್ತ್ರೀಯರು ಮೊದಲನೇ ಮತ್ತು ೩ ನೇ ಸಲ ವರನಿಗೆ ಬರುವಂತೆಯೂ, ೨ ನೇ ಮತ್ತು ೪ ನೇ ಸಲ ವಧುವಿಗೆ ಬರುವಂತೆಯೂ ಅಕ್ಷತೆಯನ್ನು ಹಾಕಬೇಕು ॥ ಅಕ್ಷತಾ ಪೂರ್ಣವಾಗಿರುವ ಕನ್ಯೆಯ ಅಂಜಲಿಯು ವರನ ಕೈಗಳ ಮೇಲೆ ಇರುತ್ತದೆ ॥

ಬ್ರಹ್ಮಗ್ರಂಥಿಂ –

ಕೇಶಂಯೋರ್ ವಸ್ತ್ರಂಯೋರಂತೇಪ್ಯಂತರ್ಧಾಯು ಹಿರಣ್ಯಕಮ್ ।
ಬ್ರಹ್ಮಗ್ರಂಥಿಂ ವಿಧಿಂ ಕುರ್ಯಾತ್ ಅಗ್ನೇ ವಿಶ್ವೇಭಿರೀರಿತಮ್ ॥
ವರಸ್ಯ ದಕ್ಷಿಣೇ ಹಸ್ತೇ ವಧೂ ವಾಮ ಕರೇ ತಥಾ ।
ವೇದಿಂ ಕೃತ್ವಾ ಸಮಾಗಮ್ಯ ವರಾತ್ವಾ ದಕ್ಷಿಣೇ ಭವೇತ್ ॥

ಕೂದಲು ಮತ್ತು ವಸ್ತ್ರದ ನಡುವೆ ಹಿರಣ್ಯವನ್ನು ಇಟ್ಟು । ಬ್ರಹ್ಮಗ್ರಂಥಿಯ ವಿಧಿಯನ್ನು ಮಾಡಬೇಕು, ಅಗ್ನಿಯ ಮತ್ತು ವಿಶ್ವೇದೇವರಿಂದ ಹೇಳಿದ ವಿಧಿಯನ್ನು ಮಾಡಬೇಕು ॥

ವರನ ಬಲಕೈಯಲ್ಲಿ ವಧುವಿನ ಎಡಕೈಯಲ್ಲಿ ಆ ಬ್ರಹ್ಮಗ್ರಂಥಿಯನ್ನು ಕಟ್ಟಬೇಕು । ವಧುವಿನೊಡಗೂಡಿ ವೇದಿಯನ್ನು ಮಾಡಿಕೊಂಡು ವರನ ದಕ್ಷಿಣದಲ್ಲಿ(ಬಲ) ವಧುವು ಇರಬೇಕು ॥

ಲಾಜಾಹೋಮ –

ಸೋಮಾಯಾಜ್ಯಾಹುತೀ ಪೂರ್ವಂ ಸ ಬ್ರಹ್ಮಾಗ್ನೌ ಪ್ರದಕ್ಷಿಣಮ್ ।
ಕುರ್ವೀತ ಲಾಜಾಹೋಮಂ ಚ ಬ್ರಹ್ಮಾಪ್ಯೇಕೋ ಬಹಿರ್ಭವೇತ್ ॥

ಸೋಮನಿಗೆ ಆಜ್ಯಾಹುತಿ ಪೂರ್ವಕವಾಗಿ ಬ್ರಹ್ಮ ಸಹಿತನಾಗಿ ಪ್ರದಕ್ಷಿಣೆ ಮಾಡಬೇಕು । ಲಾಜಾಹೋಮದ ಕಾಲದಲ್ಲಿ ಮಾತ್ರ ಪ್ರದಕ್ಷಿಣೆಯಲ್ಲಿ ಬ್ರಹ್ಮನನ್ನು ಬಿಟ್ಟು ಮಾಡಬೇಕು ॥

ಉದ್ದೇಶ ತ್ಯಾಗಃ –

ಪ್ರದಕ್ಷಿಣೇ ತು ಪಾತ್ರಾಣಿ ಸರ್ವಾಣ್ಯಭ್ಯಂತರಾಣಿ ಚ ।
ಕೃತ್ವಾ ಪ್ರದಕ್ಷಿಣಂ ಕುರ್ಯಾತ್ ಬ್ರಹ್ಮಾಪ್ಯೇಕೋ ಬಹಿರ್ಭವೇತ್ ॥

ಎಲ್ಲಾಪಾತ್ರೆಗಳು ಒಳಗೆ ಸೇರುವಂತೆ । ಮತ್ತು ಬ್ರಹ್ಮನೊಬ್ಬ ಹೊರಗಿರುವಂತೆ ಅಗ್ನಿಪ್ರದಕ್ಷಿಣೆ ಮಾಡಬೇಕು ಲಾಜಾ ಹೋಮ ಕಾಲದಲ್ಲಿ ॥

ಲಾಜಾಹೋಮೇ ವಧೂಲಾಜ್ಯೈಃ ದ್ವಿತೀಯೇ ಚಾರ್ಯಮಾಗ್ನಿಕೇ ।
ತೃತೀಯೇ ತ್ವಮರ್ಯಮೇ ವಸ್ಯಾತ್ ಲಾಜಾಹೋಮಂ ತ್ರಯಂ ಸ್ಮೃತಮ್ ॥

ಆಸ್ಥಾಪನಾಂತೇ ವರ ನಿರ್ಮಿತಸ್ಯ ಕನ್ಯಾ ಸ್ಥಿತಾಯಾ ಕರ ಆಜ್ಯಸಿಕ್ತೇ ।
ದ್ವಿರುಪ್ಯ ಲಾಜಾಂ ಅಭಿಘಾರ್ಯ ಪಶ್ಚಾತ್ ಆಸೀನ ಕನ್ಯಾ ಜುಹುಯಾಚ್ಚ ವಹ್ನೌ ॥

ಲಾಜಾ ಹೋಮದಲ್ಲಿ ವಧುವು ೧ ಸಲ ಉಪಸ್ತರಣ ಮಾಡಿದ ಲಾಜಾವನ್ನು ಇಯಂ ನಾರೀ ಮಂತ್ರದಿಂದ ಮೊದಲ ಸಲ ಮತ್ತು ೨ ನೇ ಸಲ ಅರ್ಯಮಣಂ ಮಂತ್ರದಿಂದ ೩ ನೇ ಸಲ ತ್ವಮರ್ಯಮಾ ಮಂತ್ರದಿಂದ ಹೋಮಿಸಿ ಪ್ರತೀ ಸಲವೂ ತುಭ್ಯಮಗ್ನೇ, ಮುಂತಾದ ಮಂತ್ರಗಳಿಂದ ಅಗ್ನಿಪ್ರದಕ್ಷಿಣೇ ಮಾಡಿ ಆತಿಷ್ಠೇಮಂ ಎಂಬ ಮಂತ್ರದಿಂದ ವಧುವನ್ನು ಕಲ್ಲಿನ ಮೇಲೆ ಹತ್ತಿಸಬೇಕು ಹೀಗೆ ೩ ಮಂತ್ರಗಳು ಲಾಜಾಹೋಮದಲ್ಲಿ ಹೇಳಲ್ಪಟ್ಟಿವೆ ॥

ವರನು ವಧುವಿನ ಆಜ್ಯಹಾಕಿದ ಕೈಗೆ ೨ ಸಲ ಲಾಜವನ್ನು ಹಾಕಿ ನಂತರ ಪುನಃ ಅಭಿಘಾರ ಮಾಡಿ ಆಮೇಲೆ ಕನ್ಯೆಯ ಕೈ ಹಿಡಿದು ಕೊಂಡು ಅಗ್ನಿಯಲ್ಲಿ ಹೋಮಿಸಬೇಕು ॥

ಅಭಿನ್ನವರ್ಧ್ವಂಜಲಿ ಲಾಜ ಹೋಮೇ । ಯಥಾ ಜುಹುವಾಗ್ನಿ ಮುಖೇನ ಹೋಮಃ ।
ಸಂಮಾರ್ಜನ ಪ್ರೋಕ್ಷಣಸಾದನಾನಿ । ಯಥಾ ಜುಹುಯಾತ್ ನ ಚ ಲೇಪಕಾರ್ಯಮ್ ॥
ಅಂಗುಲ್ಯಗ್ರೇಣ ಹೋತವ್ಯಂ ತಥೈವಾಂಗುಲಿ ಭೇದತಃ ।
ಅಂಗುಲೀ ವಾಮಭಾಗೇ ತು ಲಾಜಹೋಮಂ ವಿಧೀಯತೇ ॥

ಲಾಜಾಹೋಮದಲ್ಲಿ ವರ, ವಧುವಿನ ಕೈಗಳು ಒಟ್ಟಿಗೆ ಸೇರಿರಬೇಕೇ ಹೊರತು ಭಿನ್ನವಾಗಿರಬಾರದು, ಆ ರೀತಿಯಲ್ಲಿ ಹೋಮಿಸಬೇಕು । ನಂತರ ಸಂಮಾರ್ಜನೆ, ಪ್ರೋಕ್ಷಣೆ, ಆಸಾದನೆ ಮುಂತಾದುದನ್ನು ಮಾಡಬೇಕು, ಲೇಪಕಾರ್ಯವನ್ನು ಬಿಟ್ಟು ಉಳಿದದ್ದನ್ನು ಮಾಡಬೇಕು ॥

ಅಂಗುಲಿಗಳ ತುದಿಯಿಂದ ಹೋಮಿಸಬೇಕು, ಹಾಗೆಯೇ ಎಲ್ಲಾ ಅಂಗುಲಿಗಳಿಂದಲೂ ಬೀಳುವಂತೆ ಹೋಮಿಸಬೇಕು, ಸ್ಮೃತಿಯಲ್ಲಿ ಅಂಗುಲಿಗಳ ವಾಮಭಾಗದಲ್ಲಿ ಲಾಜಾಹೋಮವನ್ನು ವಿಧಿಸಿದೆ ॥

ಸ್ಥಾಲೀಪಾಕಕ್ಕೆ ಮೊದಲು ಅಗ್ನಿಯು ನಾಶವಾದರೆ –

ಉದ್ವಾಹೌಪಾಸನಾತ್ ಪೂರ್ವಮನಲೇ ಶಾಂತಿಮಾಗತೇ ।
ಯುಗಲಾಜಾದಿಕಂ ಕರ್ಮ ಕೃತ್ವಾ ಶೇಷಂ ಸಮಾಪಯೇತ್ ॥

ವಿವಾಹದ ಔಪಾಸನಾಗ್ನಿಯು ಸಾಯಂಕಾಲದ ಔಪಾಸನಕ್ಕಿಂತ ಮೊದಲೇ ನಷ್ಟವಾದರೆ, ಯುಗ ಮತ್ತು ಲಾಜಾಹೋಮಾದಿ ಕರ್ಮಗಳನ್ನು ಮಾಡಿ ಉಳಿದ ಶೇಷ ಕಾರ್ಯಗಳನ್ನು ಮುಗಿಸಬೇಕು ॥

ದರ್ಭೇಣ್ವಮ್(ದರ್ಭೆಯ ಶಿಂಬಿಯ ಲಕ್ಷಣ) –

ವಲಯಂ ಪಂಚಭಿಃ ದರ್ಭೈಃ ವಿಂಶತಿ ಆವೇಷ್ಟನಂ ತಥಾ ।
ಅಂತರ್ದಶಾಂಗುಲಂ ಪ್ರೋಕ್ತಂ ದರ್ಭೇಣ್ವಮ್ ಇತಿ ನೀಯತೇ ॥

೫ ದರ್ಭೆಗಳಿಂದ ವೃತ್ತಾಕಾರವನ್ನು ಮಾಡಿ ಅದನ್ನು ೨೦ ದರ್ಭೆಗಳಿಂದ ಸುತ್ತಿ ಅದರ ಮಧ್ಯದ ವ್ಯಾಸ (ಅಂತರ) ೧೦ ಅಂಗುಲಗಳಿರುವಂತೆ ಇರುವ ದರ್ಭೆಯ ಶಿಂಬಿಗೆ ದರ್ಭೇಣ್ವ ಎಂದು ಹೆಸರು ॥

ಅನಂತರದ ಕೆಲಸ –

ತಿಸೃಭಿಃ ತುಭ್ಯಮಿತ್ಯಗ್ನಿಂ ಕುರ್ಯಾತಾಂ ಚ ಪ್ರದಕ್ಷಿಣಂ ।
ತ್ರಿಂಶಸ್ಯಾತ್ ಸ್ಥಾಪನಂ ಹೋಮಃ ಪರಿಕ್ರಮಣಚೇತತಃ ॥
ಗೃಹಾನ್ ಭದ್ರಾನ್ ಇತಿ ವಧೂ ವಾಚಯೇತ್ ಪ್ರಾಪಯೇತ್ ಗೃಹಾನ್ ।
ದೇಹಲೀಂ ನಾಭಿತಿಷ್ಠೇತ ದಕ್ಷಿಣೇನ ಪದಾದಿಶೇತ್ ॥
ಪುಂಸ್ವಾಸ್ತು ಜೀವಪುತ್ರಾಯಾಃ ಪತಿಪತ್ನ್ಯಸ್ತತಸ್ತತಃ ।
ಫಲಾನ್ಯಸ್ಮೈ ಕುಮಾರಾಯ ದದ್ಯಾತ್ ಪ್ರಸ್ವಸ್ಥ ಆದಿತೇ ॥

ನಂತರ ತುಭ್ಯಮಗ್ನೇ ಎಂಬ ೩ ಮಂತ್ರಗಳಿಂದ ಅಗ್ನಿಪ್ರದಕ್ಷಿಣೆ ಮಾಡಬೇಕು । ಗೃಹಾನ್ ಭದ್ರಾನ್ ಮಂತ್ರವನ್ನು ವಧುವಿಗೆ ಹೇಳಿಸಬೇಕು, ನಂತರ ಮನೆಗೆ ಕರೆದುಕೊಂಡು ಹೋಗಬೇಕು । ಅಲ್ಲಿ ಹೊಸ್ತಿಲನ್ನು ತುಳಿಯದೇ ವಧುವು ಬಲಗಾಲನ್ನು ಮುಂದಿಡುತ್ತಾ ಪ್ರವೇಶಮಾಡಬೇಕು ॥

ನಂತರ, ಜೀವಂತವಾಗಿರುವ ಗಂಡುಮಕ್ಕಳನ್ನೇ ಹೆತ್ತಿರುವ ಪತಿಪತ್ನಿಯರ ಮಗನನ್ನು । ತನ್ನ ತೊಡೆಯಮೇಲೆ ವಧುವು ಕೂರಿಸಿಕೊಂಡು ಆ ಕುಮಾರನಿಗೆ ಹಣ್ಣುಗಳನ್ನು ಕೊಡಬೇಕು ॥

ವಿವಾಹ ನಿಯಮಗಳು –

ಯಸ್ಯಾಂ ಔಪಾಸನಾರಂಭಃ ತದಾರಭ್ಯ ದಿನತ್ರಯಂ ।
ಬ್ರಹ್ಮಚರ್ಯಾದಿ ನಿಯಮಂ ಚತುರ್ಥ್ಯಂತು ಸಮಾಪಯೇತ್ ॥

ಯಾವ ಅಗ್ನಿಯಲ್ಲಿ ಔಪಾಸನವನ್ನು ಆರಂಭ ಮಾಡುತ್ತಾನೋ ಅಲ್ಲಿಂದ ೩ ದಿನ । ಬ್ರಹ್ಮಚರ್ಯ ನಿಯಮ ವರನಿಗೆ ೪ ನೇ ದಿನ ಮಧ್ಯರಾತ್ರಿಯಲ್ಲಿ ಬ್ರಹ್ಮಚರ್ಯವನ್ನು ಸಮಾಪ್ತಿಗೊಳಿಸಬೇಕು ॥

ಶೇಷ ಹೋಮವು(೪ ನೇ ದಿನದ್ದು) –

ಚತುರ್ಥೀ ಹೋಮ ಮಧ್ಯೇತು ಯದ್ಯಮಾ ವಾ ಚತುರ್ದಶೀ ।
ದಿನ ದ್ವಯಂ ಪರಿತ್ಯಜ್ಯ ಶೇಷಹೋಮಂ ಸಮಾಪಯೇತ್ ॥
ಭೂತದರ್ಶಾಹ ಮಧ್ಯೇ ವಾ ವರ್ತತೇ ಶೇಷಹೋಮಕಂ ।
ಯತ್ತದೇವಾ ಚತುರ್ಹೋತಾ ವ್ಯಾಹೃತೀ ರಥಪೂರ್ವಕಮ್ ॥
ಚತುರ್ಥೀ ಹೋಮ ಮಧ್ಯೇ ತು ಪ್ರಾಪ್ಯತೇ ಯದಿ ಪೂರ್ಣಿಮಾ ।
ಪ್ರಕ್ರಮ್ಯ ಯಾಗಂ ಕರ್ತವ್ಯಂ ಅನ್ವಾಧಾನ ಪುರಸ್ಸರಮ್ ॥

೪ ದಿವಸದ ಮದುವೆಯಲ್ಲಿ ೪ ನೇ ದಿನ ಅಮಾವಾಸ್ಯೆ ಅಥವಾ ಚತುರ್ದಶಿಯಾದರೆ । ೨ ದಿನ ಬಿಟ್ಟು ನಂತರ ಶೇಷಹೋಮ ಮಾಡಬೇಕು ॥

೪ ದಿನಗಳ ಮಧ್ಯೆ ಅಮಾವಾಸ್ಯೆ ಬಂದರೆ । ಆಗ ಚತುರ್ಹೋತೃ ಮಂತ್ರ ಮತ್ತು ವ್ಯಾಹೃತಿಗಳನ್ನು ಹೋಮಮಾಡಿ ನಂತರ ಶೇಷ ಹೋಮ ಮಾಡಬೇಕು ॥

ಚತುರ್ಥೀ ದಿನದ ಮಧ್ಯೇ ಹುಣ್ಣಿಮೇ ಬಂದರೆ ಆಗ ಅನ್ವಾಧಾನ ಮಾಡಿಕೊಂಡು ಸ್ಥಾಲೀಪಾಕ ಮಾಡಬೇಕು ॥

ಅನ್ವಾಧಾನ ನಿಯಮಾಃ –

ಸಕೃತ್ ಪರ್ವಣಿ ಸರ್ಪಿಷ್ಮತೀಹ ದಿಶ್ಯನ್ ಫಲ ಭೋಜನಂ ।
ನ ಸಾಯಾಹ್ನೋಪವಾಸಶ್ಚ ಸ್ಯಾತ್ ತೈಲಾಮಿಷ ವರ್ಜಿತಮ್ ॥

ಪೂರ್ಣಿಮೆ, ಅಮಾವಾಸ್ಯೆಗಳಲ್ಲಿ(ಪರ್ವಕಾಲ) ೧ ಹೊತ್ತು ಊಟ ನಂತರ ಬೇರೆ ಹೊತ್ತಿನಲ್ಲಿ ಫಲಾಹಾರ । ಸಂಜೆ ಉಪವಾಸವಿಲ್ಲ ಆದರೆ ತೈಲ ಮಿಶ್ರಿತ ಆಹಾರವನ್ನು ಬಿಟ್ಟು ಫಲಾಹಾರವನ್ನು ತಿನ್ನಬಹುದು ॥

ನಿಶೀಥ ಶಯನಂ ಯಾ ದಂಪತೀ ಮೈಥುನಂ ತಥಾ ।
ತೂರ್ಯಕಂ ಕಲಹಂ ರೂಪವಸ್ತ್ರಕಂ ಚ ನ ಧಾರಯೇತ್ ॥

ರಾತ್ರಿಯಲ್ಲಿ ದಂಪತಿಗಳು ಮಲಗಬೇಕು । ಆದರೆ ಮೈಥುನವಿಲ್ಲ ಹತ್ತಿಯ ವಸ್ತ್ರವನ್ನು ಬಿಟ್ಟು ಇನ್ಯಾವುದೇ ವಸ್ತ್ರವನ್ನು ಉಡಬಾರದು ॥

ಕಂಧಾರವಾಂಶ್ಚ ಶುದ್ಧಾಂಶ್ಚ ಪ್ರಹರಂ ದಂತಧಾವನಂ ।
ಅನೃತಂ ಬಹುವಾದಂ ಚ ವಿಕ್ರಯಂ ಕ್ರಯಮೇವ ಚ ॥

ತಿಲಕಾದಿ ಧಾರಣೆ, ದಂತಧಾವನ, ಬಟ್ಟೆ ಒಗೆಯುವುದಾಗಲಿ ಮಾಡಬಾರದು । ಹಾಗೆಯೇ ಸುಳ್ಳುಹೇಳುವುದು, ತುಂಬ ಮಾತನಾಡುವುದು, ಮಾರುವುದು, ಕೊಳ್ಳುವುದು ಇವುಗಳು ನಿಷಿದ್ಧ ॥

ಮಧುರಾನ್ ಲವಣಾನ್ ಕ್ಷಾರಾನ್ ಚಣಕಾನ್ ಕೋಶದೂಷಿತಾನ್ ।
ಮಾಷಾನ್ ಮಧು ಪರಾನ್ನಂ ಚ ವರ್ಜಯೇತ್ ಪರ್ವಣಿ ದ್ವಿಜಃ ॥
ಕೋಶಧಾನ್ಯಾನಿ ಸರ್ವಾಣಿ ವರ್ಜಯೇತ್ ಚ ತಿಲಾನ್ವಿನಾ ॥

ಹಾಗೆಯೇ ಸಿಹಿ, ಉಪ್ಪು, ಖಾರ, ಕಾಳುಗಳನ್ನು, ಫ್ರಿಡ್ಜ್‌ಗಳಲ್ಲಿಟ್ಟ ಪದಾರ್ಥ, ಉದ್ದು, ಜೇನುತುಪ್ಪ, ಪರಾನ್ನ ಭೋಜನ ಈ ಯಾವುದೂ ಕೂಡ ಪರ್ವಕಾಲದಲ್ಲಿ ನಿಷಿದ್ಧ ॥

ತಿಲಧಾನ್ಯಕ್ಕೆ ನಿಷೇಧ ಇಲ್ಲ । ಆದರೆ ಎಲ್ಲಾ ಕೋಶಧಾನ್ಯಗಳನ್ನೂ ಕೂಡ ಬಿಡಬೇಕು ಎಂದು ಕೆಲವರು ಹೇಳುತ್ತಾರೆ ॥

ಅನ್ವಾಧಾನಂ –

ಮೂಢೇಭ್ಯಕಾರೌ ಗ್ರಹಣೇಂದುಭಾನೌ । ಪ್ರಾರಂಭಣೇ ಇಷ್ಟಿರನಂತರಾತ್ । ಕವಿಜ್ಯ ಮೂಢೇ ಗ್ರಹಣೇ ರವಿಂದ್ವೋಃ । ಪೌಷೇ ಚ ಮಾಸೇ ಚ ಜಗೌ ಪ್ರಸುಪ್ತೇ ॥
ಆರಂಭಣೇಯೇಷ್ಟಿರನಂತರಾ ಚೇತ್ ಕಾರ್ಯೇಷು ಗಾರ್ಗ್ಯ ಪ್ರಮುಖಾ ವದಂತಿ ॥

ಅನ್ವಾರಂಭಣೀಯ ಸ್ಥಾಲೀಪಾಕ ಮಾಡುವಾಗ ಗುರು ಅಸ್ತವಾದಾಗ, ಸೂರ್ಯ ಚಂದ್ರರ ಗ್ರಹಣವಾದಾಗ ಇಷ್ಟಿಯನ್ನು(ಸ್ಥಾಲೀಪಾಕವನ್ನು) ಮಾಡಬಾರದು, ನಂತರ ಮಾಡಬೇಕು। ಶುಕ್ರ ಮತ್ತು ಗುರು ಅಸ್ತವಾದಾಗ, ಗ್ರಹಣವಾದಾಗ, ಪುಷ್ಯಮಾಸದಲ್ಲಿ, ವಿಷ್ಣು ಶಯನೋತ್ಸವದಲ್ಲಿ ಈ ಎಲ್ಲಾ ಸಂದರ್ಭಗಳಲ್ಲಿ ಅನ್ವಾರಂಭಣೀಯ ಸ್ಥಾಲೀಪಾಕ(ಇಷ್ಟಿ) ಮಾಡಬಾರದು ಅನಂತರ ಮಾಡಬೇಕು ಹೀಗೆ ಅನ್ವಾರಂಭಣೀಯ ಸ್ಥಾಲೀಪಾಕದ ವಿಷಯದಲ್ಲಿ ಗಾರ್ಗ್ಯ ಮುಂತಾದ ಋಷಿಗಳ ಅಭಿಪ್ರಾಯವು ॥

ಮಧ್ಯೇ ಗ್ರಹಣೇ ಪ್ರಾಯಶ್ಚಿತ್ತಮ್ –

ಅನ್ವಾಧಾನೇಷ್ಟಿ ಮಧ್ಯೇ ತು ಸೋಮಸ್ಯ ಗ್ರಹಣಂ ಯದಿ ।
ಸೋವೋಧೇನುಂ, ಅಪಾಂ ತತ್ವಂ ಇಮಾ ಓಷಧಯಸ್ತ್ರಯಃ ॥
ಅನ್ವಾಧಾನೇಷ್ಟಿ ಮಧ್ಯೇತು ಸೂರ್ಯಸ್ಯ ಗ್ರಹಣೇ ಯದಿ ।
ಉದುತ್ಯಂ, ಉದ್ವಯಂ, ಚಿತ್ರಂ ಸ್ರುವೇಣ ಜುಹುಯಾತ್ ಇಮಾಮ್ ॥

ಅನ್ವಾಧಾನ ಇಷ್ಟಿಯ ಮಧ್ಯದಲ್ಲಿ ಗ್ರಹಣ ಬಂದರೆ – ಇದರ ಅರ್ಥ ಅನ್ವಾಧಾನವಾಗಿದ್ದು ಇಷ್ಟಿಯನ್ನು ಮಾಡುವ, ಈ ಮಧ್ಯದ ಅವಧಿಯಲ್ಲಿ ಗ್ರಹಣವಾದಾಗ ಗ್ರಹಣದ ನಂತರ ಇಷ್ಟಿಯನ್ನು ಮಾಡುವ ಮೊದಲು ಸೋಮೋಧೇನುಂ, ಅಪಾಂ ತತ್ವಮಸಿ, ಇಮಾ ಓಷಧಯಃ ಎಂಬ ಮಂತ್ರಗಳಿಂದ ಸ್ರುವದಲ್ಲಿ ಪ್ರಾಯಶ್ಚಿತ್ತ ಹೋಮ ಮಾಡಿ ಇಷ್ಟಿಯನ್ನು ಮಾಡಬೇಕು ॥ ಹೀಗೆಯೇ ಸೂರ್ಯಗ್ರಹಣವಾದಾಗ ಉದುತ್ಯಂ, ಉದ್ವಯಂ, ಚಿತ್ರಂ ದೇವಾನಾಂ ಮಂತ್ರಗಳಿಂದ ಸ್ರುವದಲ್ಲಿ ಪ್ರಾಯಶ್ಚಿತ್ತ ಹೋಮ ಮಾಡಿ ಇಷ್ಟಿಯನ್ನು ಮಾಡಬೇಕು ॥

ಅನ್ವಾರಂಭ ಆರಂಭ ನಿಷಿದ್ಧಕಾಲಃ –

ಉಪರಾಗ್ಯಧಿಮಾಸೋ ವಾ ಯದಿ ಪ್ರಥಮ ಪರ್ವಣಿ ।
ನ ತು ಪ್ರಾರಂಭಣಂ ಕುರ್ಯಾತ್ ಮೌಢ್ಯೇ ವಾ ಗುರುಶುಕ್ರಯೋಃ ॥

ವಿವಾಹವಾಗಿ ಪ್ರಥಮ ಪರ್ವದಲ್ಲಿ ಗ್ರಹಣ, ಕ್ಷಯಮಾಸ, ಗುರು ಶುಕ್ರರು ಅಸ್ತವಾಗಿದ್ದಲ್ಲಿ । ಅನ್ವಾರಂಭಣ ಸ್ಥಾಲೀಪಾಕವನ್ನು ಮಾಡಬಾರದು ॥

ನತದಾರಭತೇ ಕರ್ಮ ಪರತೋ ನೂತನಂ ನ ತು ।
ಅನಂತರಸ್ಯ ನಿತ್ಯತ್ವಾತ್ ಅನ್ವಾರಂಭಣಮಿಷ್ಯತೇ ॥

ಹೊಸದಾಗಿ ಪ್ರಾರಂಭಿಸುತ್ತಿರುವುದರಿಂದ ಮಾಡಬಾರದು । ಆದರೆ ಅನಂತರ ಕಾಲಗಳಲ್ಲಿ ಮಾಡಿದ ಇಷ್ಟಿಗಳು ನಿತ್ಯವಾಗಿರುವುದರಿಂದ ಈ ನಿಷೇಧವು ಅನ್ವಾರಂಭಣ ಸ್ಥಾಲೀಪಾಕಕ್ಕೆ ಮಾತ್ರ ॥

ಗುರುಭಾರ್ಗವಯೋರ್ಮೂಢೇ ಗ್ರಹಣೇ ಚಂದ್ರಸೂರ್ಯಯೋಃ ।
ಸ್ವಾಪೇಮಲಿಂ ಮ್ಲುಚೇ ಚೈವ ನಾನ್ವಾರಂಭಣಮಿಷ್ಯತೇ ॥

ಚಂದ್ರ ಸೂರ್ಯ ಗ್ರಹಣದಲ್ಲಿ, ಗುರು ಶುಕ್ರಾಸ್ತಗಳಲ್ಲಿ ವಿಷ್ಣುಶಯನೋತ್ಸವಗಳಲ್ಲಿ ವಿವಾಹದ ಮೊದಲ ಸ್ಥಾಲೀಪಾಕ ಮಾಡಬಾರದು ॥

ಅತೀತ ಪ್ರಾಯಶ್ಚಿತ್ತಮ್ –

ಏವಮಾದಿ ನಿಮಿತ್ತೇ ಸತಿ ಯದಿ ಪ್ರಥಮ ಪರ್ವಣಿ ।
ಅತೀತ ಪ್ರಾಯಶ್ಚಿತ್ತಾರ್ಥಂ ಬಿಭ್ರಷ್ಟೇಷ್ಟ್ಯಾ ಯಕ್ಷ್ಯೇ ಇತಿ ಕುರ್ಯಾತ್ ॥

ಈ ರೀತಿಯ ನಿಮಿತ್ತದಿಂದ ಒಂದುವೇಳೆ ವಿವಾಹವಾದ ಮೊದಲ ಪರ್ವದಲ್ಲಿ । ಅನ್ವಾರಂಭಣೀಯ ಸ್ಥಾಲೀಪಾಕವು ಅತೀತವಾದರೆ ಬಿಭ್ರಷ್ಟೇಷ್ಟ್ಯಾ ಯಕ್ಷ್ಯೇ ಎಂದು ಸಂಕಲ್ಪಿಸಬೇಕು ॥

ಅಗ್ನಯೇ ಚ ತಥೇಂದ್ರಾಯ ಸೋಮಾಯ ಸ್ವಿಷ್ಟಕೃತ್ ಪುನಃ ।
ಜುಹುಯಾತ್ ಇಧ್ಮತಂತ್ರೇಣ ಬಿಭ್ರಷ್ಟೇಷ್ಟಿಂ ಜಯಾದಿಕಮ್ ॥

ಈ ಬಿಭ್ರಷ್ಟೇಷ್ಟಿಗೆ ಅಗ್ನಿ, ಇಂದ್ರ, ಸೋಮ ನಂತರ ಸ್ವಿಷ್ಟಕೃತ್ ಇವು ದೇವತೆಗಳು । ಇಧ್ಮ ತಂತ್ರದಿಂದ (ಷಟ್ ಪಾತ್ರ) ಇವುಗಳಿಗೆ ಹೋಮಿಸಿ ನಂತರ ಜಯಾದಿ ಮುಂತಾದ ಪ್ರಯೋಗವನ್ನು ಮಾಡಬೇಕು ॥

ಅಗ್ನಿಸ್ತಥಾಗ್ನೌ ಸಹಿತಶ್ಚ ವಿಷ್ಣುಃ ಸರಸ್ವತೀ ಚೈಕತರಾಸರಸ್ವಾನ್ ।
ಅಗ್ನಿರ್ಭಗಃ ಸ್ವಿಷ್ಟಕೃತಾಗ್ನಿರೇತೈಃ ಕ್ರಮೇಣ ದೇವಾಶ್ಚ ತತೋ ಜಯಾದೀನ್ ॥

ಈಗ ಅನ್ವಾರಂಭಣೀ ಸ್ಥಾಲೀಪಾಕದ ದೇವತೆಗಳು ಅಗ್ನಿ, ಅಗ್ನಾವಿಷ್ಣೂ, ಸರಸ್ವತೀ, ಸರಸ್ವಾನ್ । ಅಗ್ನಿರ್ಭಗೀ, ಸ್ವಿಷ್ಟಕೃತ್ ಇವು ಪ್ರಧಾನ ದೇವತೆಗಳು ಇವುಗಳಿಗೆ ಹೋಮಿಸಿ ಜಯಾದಿ ಮುಂತಾದ ಪ್ರಯೋಗ(ಷಟ್ ಪಾತ್ರ)ವನ್ನು ಮಾಡಬೇಕು ॥

ಚತುರ್ಥಮಧ್ಯಾಗ್ನಿ ನಷ್ಟಪ್ರಾಯಶ್ಚಿತ್ತಂ –

ಸ್ಥಾಲೀಪಾಕ ದಿನಾರಭ್ಯ ಚತುರ್ಥ್ಯಂ ತಾಗ್ನಿಧಾರಣಮ್ ।
ಯದಿ ಮಧ್ಯೇ ಸಮಾರೋಪ್ಯ ಪ್ರಾಯಶ್ಚಿತ್ತಂ ಕಥಾಭವೇತ್ ॥
ಅಯಾಶ್ಚಾಗ್ನೇರ್ಮನೋಜ್ಯೋತಿಃ ಮಹಾವ್ಯಾಹೃತಿಭಿಸ್ತಥಾ ।
ಚತುರ್ಗೃಹೀತಂ ಜುಹುಯಾತ್ ನಿತ್ಯಹೋಮಂ ಸಮಾಚರೇತ್ ॥
ಬ್ರಹ್ಮಚಾರೀ ವ್ರತಂ ಕುರ್ಯಾತ್ ಗೃಹ್ಯಾಗ್ನೌ ಚ ಯಥಾ ವಿಧಿ ॥

ಸ್ಥಾಲೀಪಾಕದ ದಿನದಿಂದ ಆರಂಭಿಸಿ(ಆಗ್ನೇಯ ಸ್ಥಾಲೀಪಾಕ) ೪ ದಿನ ಅಗ್ನಿಧಾರಣೆ ಮಾಡಬೇಕು । ಒಂದುವೇಳೆ ಈ ಮಧ್ಯದ ದಿನಗಳಲ್ಲಿ ಅಗ್ನಿ ನಷ್ಟವಾದರೆ ಪ್ರಾಯಶ್ಚಿತ್ತವು ಹೇಗಾಗುತ್ತದೆಂದರೆ ॥

ಅಯಾಶ್ಚಾಗ್ನೇ, ಮನೋ ಜ್ಯೋತಿಃ, ಮಹಾ ವ್ಯಾಹೃತಿಗಳು । ಹೀಗೆ ಪ್ರಾಯಶ್ಚಿತ್ತ ಹೋಮ ಚತುರ್ಗೃಹೀತದಿಂದ ಮಾಡಿ ॥

ಬ್ರಹ್ಮಚರ್ಯವ್ರತ ಮಾಡಿ ಗೃಹ್ಯಾಗ್ನಿಯಲ್ಲಿ(ಔಪಾಸನಾಗ್ನಿಯಲ್ಲಿ) ಯಥಾ ವಿಧಿಯಾಗಿ ಹೋಮಿಸಬೇಕು ॥

ಸ್ಥಾಲೀಪಾಕಮ್ –

ಸ್ಥಾಲೀಪಾಕಾಹುತಿಶ್ಚೈವ ಚರೋರ್ದ್ವೇ ಆಹುತೀ ತಥಾ ।
ಪ್ರಜಾಪತೇಶ್ಚ ವ್ಯಾಹೃತಿಭಿಃ ಸ್ವಿಷ್ಟಕೃತ್ ತದನಂತರಮ್ ॥
ಬರ್ಹಿಸ್ಸಮಂಜನಂ ಕುರ್ಯಾತ್ ಪ್ರಾಯಶ್ಚಿತ್ತಾಹುತಿಸ್ತಥಾ ।
ಔಪಾಕರ್ಮ ವಿಧಿಂ ಚೈವ ನ ಸಂದೇಹಃ ಕಪರ್ದಿನಾ ॥

ಸ್ಥಾಲೀಪಾಕಾಹುತಿಯು ಚರುವಿನಲ್ಲಿ ೨ ಆಹುತಿ ರೂಪದಲ್ಲಿ ಇರುತ್ತದೆ । ಮೊದಲನೆಯದು ಪ್ರಜಾಪತಿ ದೇವತಾಕವಾದ ವ್ಯಾಹೃತಿಗಳಿಂದ, ೨ ನೇಯದು ಸ್ವಿಷ್ಟಕೃತ್ ಹೋಮ ॥

ನಂತರ ಬರ್ಹಿಸ್ಸಮಂಜನ ಮಾಡಬೇಕು, ಪ್ರಾಯಶ್ಚಿತ್ತಾಹುತಿಗಳನ್ನು ಮಾಡಬೇಕು । ಸ್ಥಾಲೀಪಾಕದ ದಿನವೂ ಔಪಾಸನವು ಉಂಟು ಇದರಲ್ಲಿ ಕಪರ್ದಿಗಳಿಗೆ ಯಾವುದೇ ಸಂದೇಹವಿಲ್ಲ ॥

ಗಂಧರ್ವ ಸಮಿಧ ನಿರ್ಣಯಃ –

ಪ್ರವೇಶಹೋಮ ಕರ್ಮಾಂತೇ ಪಾಲಾಶ ಸಮಿಧಾಪಿ ವಾ ।
ಗಂಧರ್ವಮಿತಿ ಯಜುಷಾ ತಯೋಃ ಮಧ್ಯೇ ನಿಧಿಪೇತ್ ॥
ಷೋಡಶಾಂಗುಲಮಾನಂ ತು ಸುಮಂಗಲೀತಿ ಮಂತ್ರತಃ ।
ಚತುರ್ವಿಂಶತ್ಯಂಗುಲೇನ ಪ್ರಸೂನಾಂ ಸೂತ್ರವೇಷ್ಟಣಮ್ ॥

ಪ್ರವಿಶ್ಯ ಹೋಮವಾದ ಮೇಲೆ ಪಲಾಶ ಸಮಿತ್ತಿನಿಂದ । ಗಂಧರ್ವಂ ಎಂಬ ಮಂತ್ರದಿಂದ ಆ ವಧೂ ವರರು ಮಲಗುವ ಜಾಗದಲ್ಲಿ ಅವರಿಬ್ಬರ ಮಧ್ಯದಲ್ಲಿ ಆ ಸಮಿತ್ತನ್ನು ಇಡಬೇಕು ॥

ಆ ಸಮಿತ್ತು ೧೬ ಅಂಗುಲವಿರಬೇಕು ಅದನ್ನು ಸುಮಂಗಲೀ ಮಂತ್ರದಿಂದ ಇಡಬೇಕು । ೨೪ ಅಂಗುಲ ಉದ್ದವಿರುವ ದಾರದಿಂದ ಅದನ್ನು ಸುತ್ತಬೇಕು ॥

ಪ್ರವೇಶಹೋಮ ಕಾಲ ನಿರ್ಣಯಃ –

ಮಧ್ಯರಾತ್ರೇ ವ್ಯತೀತೇಷು ಪರೇದ್ಯುಃ ಸಾಯುಮೇವ ವಾ ।
ಪ್ರವೇಶಹೋಮ ಕಾಲಸ್ಯಾತ್ ಇತಿ ವೇದವಿದೋ ವಿದುಃ ॥

ಮಧ್ಯರಾತ್ರಿಯು ಕಳೆದಮೇಲೆ ಅಥವಾ ಮಾರನೇ ದಿನ ಸಂಜೆ ಪ್ರವೇಶಕಾಲದ ಹೋಮವನ್ನು ಮಾಡಬೇಕೆಂದು ವೇದವಿದರು ಹೇಳುತ್ತಾರೆ ॥

ಕನ್ಯಾದಾತೃ–ವರಾಣಾಂ ಭೋಜನ ನಿಷೇಧಃ –

ಪೂರ್ವರಾತ್ರೇ ವಿವಾಹಸ್ಯಾತ್ ತದಹರ್ಭೋಜನಂ ತ್ಯಜೇತ್ ।
ಕನ್ಯಾಕರ್ತಾ ವರಶ್ಚೈವಾ ಅತ ಊರ್ಧ್ವಂ ನ ವರ್ಜಯೇತ್ ॥

ಯಾವ ರಾತ್ರಿಯಲ್ಲಿ ವಿವಾಹವು ಇರುತ್ತದೋ ಆ ಹಗಲು ಕನ್ಯಾಕರ್ತಾ ಹಾಗೂ ವರನಿಗೆ ಉಪವಾಸವು । ಅಲ್ಲಿಂದ ಮುಂದೆ ಉಪವಾಸವಿಲ್ಲ ॥

ನೂತನ ವಧೂಪ್ರವೇಶ ಕಾಲಃ –

ಷಷ್ಠೇಷ್ವಮೇ ವಾ ದಶಮೇ ದಿನೇ ವಾ ವಿವಾಹಮಾರಭ್ಯ ವಧೂ ಪ್ರವೇಶಃ ।
ಪಂಚಾಂಗ ಶುದ್ಧಂ ಚ ದಿನಂ ವಿನಾಪಿ ತಿಥೌ ನ ಸದ್ಯೋಚರ ಕೇಪಿ ಕಾರ್ಯಃ ॥

ವಿವಾಹ ದಿನದಿಂದ ಆರಂಭಿಸಿ ೬, ೮, ೧೦ ನೇ ದಿನ ವಧೂ ಪ್ರವೇಶ ಮಾಡಬೇಕು । ಈ ದಿನಗಳಲ್ಲಿ ಮಾಡುವಾಗ ಪಂಚಾಗ ಶುದ್ಧದಿನವಲ್ಲದಿದ್ದರೂ, ತಿಥಿ ಉತ್ತಮವಲ್ಲದಿದ್ದರೂ ವಧೂ ಪ್ರವೇಶ ಮಾಡಬಹುದು ॥

ವಿವಾಹಮಾರಭ್ಯ ವಧೂಪ್ರವೇಶೌ ಯುಗ್ಮೇ ದಿನೇ ಷೋಡಷವಾಸರಾಂತೇ ।
ತದೂರ್ಧ್ವಮಬ್ದೇ ಅಯುಜಿ ಪಂಚಮೇ ವಾ ಶಸ್ತಸ್ತದೂರ್ಧ್ವಂ ವಿಷಮೇ ಸಮೇ ವಾ ॥

ವಿವಾಹದಿನದಿಂದ ಆರಂಭಿಸಿ ವಧೂ ಪ್ರವೇಶವನ್ನು ಸಮಸಂಖ್ಯೆಯ ದಿನಗಳಲ್ಲಿ ೧೬ ವಾರಗಳ ಅವಧಿಯ ಕೊನೆಯವರೆಗೆ ಮಾಡಬಹುದು । ಅಲ್ಲಿಂದ ಮುಂದೆ ವರ್ಷದವರೆಗೆ ಬೆಸ ಸಂಖ್ಯೆಯಲ್ಲಿ ವಧೂ ಪ್ರವೇಶ ಮಾಡಬಹುದು, ೧ ವರ್ಷದ ನಂತರ ಸಮ–ವಿಷಮ ದಿನಗಳಲ್ಲಿ ಯಾವಾಗಲಾದರೂ ಮಾಡಬಹುದು ॥

ವಧೂಪ್ರವೇಶಂ ಪ್ರಥಮೇ ಚ ವರ್ಷೇ ತೃತೀಯೆ ವರ್ಷೇಪಿ ಶುಭಂ ವದಂತಿ ।
ವರ್ಷೇ ದ್ವಿತೀಯೇಪ್ಯಥವಾ ಚತುರ್ಥೇ ವಧೂ ಪ್ರವೇಶೇಪರ್ಯಥ ಭರ್ತೃ ಹಾನಿಃ ॥

ವಧೂ ಪ್ರವೇಶವನ್ನು ಮೊದಲ ವರ್ಷ ಮತ್ತು ೩ ನೇ ವರ್ಷವಾದರೆ ಶುಭಪ್ರದವೆನ್ನುತ್ತಾರೆ । ೨ ನೇ ಅಥವಾ ೪ ನೇ ವರ್ಷದಲ್ಲಾದರೆ ಗಂಡನಿಗೆ ಆಪತ್ತೆನ್ನುತ್ತಾರೆ ॥

ಆಷಾಢಸ್ಯಾಪಿ ಸಿತೇ ಪಕ್ಷೇ ಷಷ್ಠಿಮಾರಭ್ಯ ಬುದ್ಧಿಮಾನ್ ।
ಪ್ರವೇಶೇ ನೂತನಂ ವಧೂಂ ವರ್ಜಯೇದಿತಿ ಶೌನಕಃ ॥

ಆಷಾಢಮಾಸದ ಶುಕ್ಲ ಪಕ್ಷದಲ್ಲಿ ಷಷ್ಠಿಯಿಂದ ಮುಂದಿನ ತಿಥಿಗಳನ್ನು (ದಿನಗಳನ್ನು) ಬುದ್ಧಿವಂತನಾದ । ಮನುಷ್ಯನು ವಧೂಪ್ರವೇಶಕ್ಕೆ ವರ್ಜಿಸಬೇಕು ಎಂದು ಶೌನಕರು ಹೇಳುತ್ತಾರೆ ॥

ಶುಚಿಮಾಸೇ ನವೋಢಯಾಃ ಪ್ರವೇಶಂ ಶ್ವಶ್ರು ಮಂದಿರಮ್ ।
ವರ್ಜಯೇತ್ ಮತಿಮಾನ್ ತತ್ರ ಮುನಯೋಪಿ ವದಂತಿ ಹಿ ॥

ಗ್ರೀಷ್ಮಋತುವಿನಲ್ಲಿ ಹೊಸದಾಗಿ ವಿವಾಹವಾದಂತಹ ವಧೂಪ್ರವೇಶವನ್ನು ಬುದ್ಧಿವಂತನಾದ ಮನುಷ್ಯನು ಬಿಡಬೇಕೆಂದು ಮುನಿಗಳು ಹೇಳುತ್ತಾರೆ ॥

ಚಾತುರ್ಮಾಸ್ಯೇ ನ ದೂಷ್ಯಸ್ಯಾತ್ ಗಂಧರ್ವಾಖ್ಯ ಕರಗ್ರಹಃ ।
ಮಾಸಪ್ರಾಧಾನ್ಯ ಕರ್ಮಾಣಿ ಕರ್ತವ್ಯಾಮನೀಷಿಭಿಃ ॥

೪ – ೪ ತಿಂಗಳುಗಳಿಗೆ ಮಾಡುವ ಚಾತುರ್ಮಾಸ್ಯ ರೂಪವಾದ ಮಾಸ ಪ್ರಧಾನವಾದ ಶ್ರೌತ ಕರ್ಮಕ್ಕೆ ಗಂಧರ್ವ ಮುಂತಾದ ಕರ ಗ್ರಹ(ತಿಥಿದೋಷ) ದೋಷಗಳನ್ನು । ಗಣನೆಗೆ ತೆಗೆದುಕೊಳ್ಳಬಾರದೆಂದು ಜ್ಞಾನಿಗಳು ಹೇಳುತ್ತಾರೆ ॥

ಪ್ರತಿಶುಕ್ರ ದೋಷಾಪವಾದಃ –

ಸ್ವಭವನ ಪುರಪ್ರವೇಶೇ ದೇಶಾನಾಂ ವಿಭ್ರಮೇ ತಥೋದ್ವಾಹೇ ।
ನೂತನ ವಧ್ವಾಗಮನೇ ಪ್ರತಿಶುಕ್ರ ವಿಚಾರಣಾ ನಾಸ್ತಿ ॥

ತನ್ನ ನೂತನ ಮನೆಯು(ಹೊಸದಾಗಿ ಕಟ್ಟಿದ) ಪ್ರವೇಶ, ದೇಶಾಚಾರದ ಕ್ರೀಡೆಗಳಲ್ಲಿ(ವಿಭ್ರಮಗಳಲ್ಲಿ), ವಿವಾಹದಲ್ಲಿ । ನೂತನ ವಧೂಪ್ರವೇಶದಲ್ಲಿ ಪ್ರತಿಶುಕ್ರ ದೋಷದ ವಿಚಾರಣೆ ಇಲ್ಲ ॥

ಮೂಢೇ ಶುಕ್ರೇ ಕಾರ್ಯಹಾನಿಃ ಪ್ರತಿಶುಕ್ರೇ ಪರಾಜಯಃ ।
ಪ್ರತೀಂದುಜ ಕೃತೋ ದೋಷೋ ಹಂತಿ ಪ್ರತ್ಯರ ಏವ ಚ ॥

ಶುಕ್ರಾಸ್ತದಲ್ಲಿ ಯಾವುದಾದರೂ ಕಾರ್ಯಕ್ಕೆ ತೊಡಗಿದರೆ ಹಾನಿಯಾಗುತ್ತದೆ ಹಾಗೆಯೇ ಪ್ರಯಾಣಕಾಲದಲ್ಲಿ ಎದುರಿಗೆ ಶುಕ್ರಗ್ರಹವು ಕಂಡುಬಂದರೆ(ಪ್ರತಿಶುಕ್ರ) ಆಗ ತೊಂದರೆಗಳಾಗುತ್ತವೆ । ಎದುರಿಗೆ ಬುಧನ ದರ್ಶನವಾದಾಗ ಉಂಟಾಗುವ ದೋಷವನ್ನು, ಅದೇವೇಳೆಯಲ್ಲಿ ಎದುರಿಗೆ ಕುಜನಿದ್ದರೆ ಬುಧನಿಂದ ಉಂಟಾಗುವ ದೋಷವನ್ನು ಹೋಗಲಾಡಿಸುತ್ತಾನೆ ॥

ಏಕ ಗ್ರಾಮೇ ಚತುಶ್ಶಾಲೇ ವಿವಾಹೇ ಯಜ್ಞಕರ್ಮಣಿ ।
ದುರ್ಭಿಕ್ಷ ರಾಜಕಲಹೇ ಪ್ರತಿಶುಕ್ರಂ ನ ವಿದ್ಯತೇ ॥

ಒಂದೇ ಗ್ರಾಮದಲ್ಲಿ, ಚತುಶ್ಶಾಲೆಯಲ್ಲಿ, ವಿವಾಹದಲ್ಲಿ, ಯಜ್ಞಕರ್ಮದಲ್ಲಿ। ದುರ್ಭಿಕ್ಷದಲ್ಲಿ, ರಾಜಕಲಹದಲ್ಲಿ, ಪ್ರತಿಶುಕ್ರದೋಷವು ಇಲ್ಲ ॥

ಕಾಶ್ಯಪೇಷು ವಸಿಷ್ಠೇಷು ಭೃಗುಷು ಆಂಗಿರಸೇಷು ಚ ।
ಭರದ್ವಾಜೇಷು ವಚನಂ ಪ್ರತಿಶುಕ್ರೋ ನ ವಿದ್ಯತೇ ॥

ಕಾಶ್ಯಪ, ವಸಿಷ್ಠ, ಭೃಗು, ಆಂಗಿರ, ಭರದ್ವಾಜ ಇವರ ಅಭಿಪ್ರಾಯದಲ್ಲಿ, ಪ್ರತಿಶುಕ್ರ ದೋಷವಿಲ್ಲವೆಂದು ವಚನವಿದೆ ॥

ಮೌಢ್ಯ (ಅಸ್ತ) ದೋಷಃ –

ವಾಪೀಕೂಪ ತಟಾಕ ಯಾಗ ಗಮನ ಕ್ಷೌರ ಪ್ರತಿಷ್ಠಾವ್ರತಂ ।
ವಿದ್ಯಾಮಂದಿರ ಕರ್ಣವೇಧನ ಮಹಾದಾನಂ ವನಸ್ಥಾಪನಮ್ ॥

ಕೆರೆ, ಬಾವಿ, ಸರೋವರ, ಯಾಗಶಾಲೆಗೆ ಗಮನ, ಚೂಡಾಕರ್ಮ, ಉಪನಯನ, ಪ್ರತಿಷ್ಠಾವ್ರತ। ವಿದ್ಯಾರ್ಥಿಯಾಗಿ ಹೋಗುವಿಕೆ, ಮಂದಿರ ನಿರ್ಮಾಣ, ಕರ್ಣವೇಧನ, ಮಹಾದಾನ, ವನಸ್ಥಾಪನ ॥

ತೀರ್ಥೋದ್ವಾಹ ಜಪಾಭಿಷೇಕಮಖಿಲಾನ್ ದೋಷಪ್ರಯುಕ್ತೇತರಾನ್ ।
ದೂರೇನೈವ ಜಿಜೀವಿಷುಃ ಪರಿಹರೇತ್ ಆರ್ಯೋಸ್ತಗೇವಾಸಿತೇ ॥

ತೀರ್ಥಯಾತ್ರೆ, ವಿವಾಹ, ಜಪಾಭಿಷೇಕ ಇವೆಲ್ಲವೂ ಅಸ್ತದೋಷವುಳ್ಳದ್ದು ಹಾಗೂ ಇನ್ನೂ ಬೇರೆಯವೂ ಇವೆ। ಇವುಗಳನ್ನು ಕರ್ಮಸಮೃದ್ಧಿಗೋಸ್ಕರವಾಗಿ ಗುರು ಅಸ್ತದೋಷದಿಂದ ಕೂಡಿದಾಗ ಅದನ್ನು ಶಾಂತಿಯಿಂದ ಪರಿಹಾರ ಮಾಡಿಕೊಳ್ಳಬೇಕು ॥

ಭುಜಂಗಮೂಲ ಗ್ರಹ ರೋಗ ಶಾಂತಿಷು ಅಲಭ್ಯ ಯೋಗೇ ಗ್ರಹಣಾದಿಷ್ವೇಕೇ ।
ದೋಷಪ್ರಯುಕ್ತೇಷ್ವಖಿಲ ವ್ರತೇಷು ಚೋತ್ಪಾತಶಾಂತೌ ನ ಚ ಮೌಢ್ಯ ದೋಷಃ ॥

ಆಶ್ಲೇಷಾ, ಮೂಲಾ, ಬಾಲಗ್ರಹ, ರೋಗ ಇವುಗಳ ಶಾಂತಿಕರ್ಮದಲ್ಲಿ ಮತ್ತು ಯೋಗವು ಇಲ್ಲದಿದ್ದಾಗ ಯೋಗಬರುವುದಕ್ಕಾಗಿ ಮಾಡುವ ಶಾಂತಿಕರ್ಮಗಳಲ್ಲಿ, ಗ್ರಹಣಾದಿಗಳಲ್ಲಿ। ಮತ್ತು ದೋಷಪ್ರಯುಕ್ತವಾದ ಎಲ್ಲಾ ವ್ರತಗಳಲ್ಲಿ ಹಾಗೂ ಸಿಡಿಲು ಬಿದ್ದಾಗ ಮಾಡುವ ಶಾಂತಿಯಲ್ಲಿ ಅಸ್ತದೋಷವಿರುವುದಿಲ್ಲ ॥

ಪಟ್ಟಾಭಿಷೇಕ ಕುಲದೈವ ಮಹೋತ್ಸವೇಷು ಗೋದಾವರೀ ಇನ ಶಶಿ ಗ್ರಹಣೇ ಗಯಾಯಾಮ್ । ಸೀಮಂತ ವೈಷ್ಣ ವ್ರತಶಾಂತಿಕ ವೈಷ್ಣಮುದ್ರಾ ಏಭಿರ್ವ್ರತೇಷು ಗುರು ಶುಕ್ರ ನ ಮೂಢದೋಷಃ ॥

ಪಟ್ಟಾಭಿಷೇಕದಲ್ಲಿ, ಕುಲದೇವತೆ ಮಹೋತ್ಸವದಲ್ಲಿ ಗೋದಾವರೀ ಪ್ರದಕ್ಷಿಣೆಯಲ್ಲಿ ಚಂದ್ರ ಸೂರ್ಯಗ್ರಹಣಗಳಲ್ಲಿ, ಗಯೆಯಲ್ಲಿ । ಸೀಮಂತ, ವೈಷ್ಣವ್ರತ, ಶಾಂತಿ, ವೈಷ್ಣವ ಮುದ್ರೆಗಳಲ್ಲಿ ಮುಂತಾದ ವ್ರತಗಳಲ್ಲಿ ಗುರುಶುಕ್ರಾಸ್ತ ದೋಷಗಳಿಲ್ಲ ॥

ಗ್ರಹಣೇ ವ್ರತಸೀಮಂತೇ ಪ್ರಾಯಶ್ಚಿತ್ತೇ ಚ ಶಾಂತಿಕೇ ।
ಜಾತಕೇ ಗ್ರಹಯಜ್ಞೇ ಚ ಮೂಢದೋಷೋ ನ ವಿದ್ಯತೇ ॥

ಗ್ರಹಣ, ವ್ರತ, ಸೀಮಂತ, ಪ್ರಾಯಶ್ಚಿತ್ತ, ಶಾಂತಿಗಳಲ್ಲಿ । ಜಾತಕರ್ಮ, ಗ್ರಹಯಜ್ಞಗಳಲ್ಲಿ ಅಸ್ತದೋಷವಿಲ್ಲ ॥

ವಿವಾಹ ಮಧ್ಯೇ ಮಾತಾ ಪಿತೃ ಮರಣೇ ವಿಚಾರಃ –

ಜ್ಯೇಷ್ಠ ಪುತ್ರ ವಿವಾಹೇ ತು ಚತುರ್ಥ್ಯಂತೇ ತು ಮಧ್ಯಮೇ ।
ಮಾತಾ ಪಿತೃ ಸಮಕ್ಷಂ ಚ ಮಂತ್ರಾಗ್ನೀತಿ ವಿಧೀಯತೇ ॥

ದೊಡ್ಡಮಗನ ವಿವಾಹದ ೪ ನೇ ದಿನ ಅಥವಾ ಮಧ್ಯದಲ್ಲಿ ತಂದೆತಾಯಿಯರ ಮರಣ ಪ್ರಾಪ್ತವಾದರೆ । ಆ ವಿವಾಹಾಗ್ನಿಯು ಕೇವಲ ಮಂತ್ರಾಗ್ನಿಯೆಂದೇ ಹೇಳಲ್ಪಟ್ಟಿದೆ ॥

ಸಚೇಲಂ ಸ್ನಾನಂ ಆಚಮ್ಯ ವಪನಂ ಚ ತಿಲೋದಕಂ ।
ದ್ವಾದಶಾಹೇ ವ್ಯತೀತೇಷು ಪುಣ್ಯಾಹಂ ವಾಚಯೇತ್ ತತಃ ॥

ಆದ್ದರಿಂದ ಆಗ ಸಚೇಲ ಸ್ನಾನ ಮಾಡಿ ಆಚಮನ ಮಾಡಿ ವಪನ(ಕ್ಷೌರ) ಮಾಡಿಸಿ, ತಿಲೋದಕ ಬಿಡಬೇಕು । ನಂತರ ೧೨ ದಿನಗಳ ಕರ್ಮವಾದಮೇಲೆ ಪುಣ್ಯಾಹ ಮಾಡಿ ॥

ವಿವಾಹಾಗ್ನಿ ವಿಧಿಂ ಕೃತ್ವಾ ಔಪಾಸನಮನುಕ್ರಮಾತ್ ।
ದ್ವಿತೀಯೇ ಪುತ್ರ ವೈವಾಹೇ ಬಹುಪುತ್ರ ವಿವಾಹಕೇ ।
ಮಧ್ಯೇ ಮಾತಾಪಿತ್ರೋಃ ಮೃತ್ಯುಃ ವಪನಂ ಪರಿವರ್ಜಯೇತ್ ॥

ನಂತರ ಆ ವಿವಾಹಾಗ್ನಿಯಲ್ಲಿ ಮುಂದಿನ ವಿಧಿಯನ್ನು ಮಾಡಿ ಔಪಾಸನವನ್ನು ಮಾಡಬೇಕು ।

೨ ನೇ ಮಗನ ವಿವಾಹದಲ್ಲಿ ಅಥವಾ ಇನ್ನುಳಿದ ಮಕ್ಕಳ ವಿವಾಹದಲ್ಲಿ । ಮಧ್ಯದಲ್ಲಿ ತಂದೆ ತಾಯಿಯರು ಮರಣ ಹೊಂದಿದರೆ ವಪನವನ್ನು ಬಿಟ್ಟು ಇನ್ನುಳಿದ ಎಲ್ಲಕರ್ಮಗಳನ್ನು ಮಾಡಬೇಕು ॥

ವಿವಾಹ ಮಧ್ಯೇ ಆಶೌಚ ಪ್ರಾಪ್ತೌ ವಿಚಾರಃ –

ವಿವಾಹಾದಿ ಚತುರ್ಥ್ಯಂತಂ ಸೂತದೋಷೋ ನ ವಿದ್ಯತೇ ।
ಆರಬ್ಧೇ ಸೂತಕಂ ನ ಸ್ಯಾತ್ ಅನಾರಬ್ಧೇ ತು ಸೂತಕಂ ॥
ಪ್ರಾರಂಭೋ ವರಣಂಯಜ್ಞೇ ಸಂಕಲ್ಪೋ ವ್ರತ ಸತ್ರಯೋಃ ।
ನಾಂದೀಮುಖೋ ವಿವಾಹಾದೌ ಶ್ರಾದ್ಧೇ ಪಾಕಪರಿಕ್ರಿಯಾ ॥

ವಿವಾಹದಿಂದ ೪ ದಿನಗಳವರೆಗೆ ಜಾತಾಶೌಚ ಇರುವುದಿಲ್ಲ । ವಿವಾಹ ಆರಂಭವಾಗಿದ್ದರೆ ಸೂತಕವಿರುವುದಿಲ್ಲ, ಇಲ್ಲದಿದ್ದರೆ ಸೂತಕವಿದೆ ॥

ಯಜ್ಞದಲ್ಲಿ ಋತ್ವಿಗ್ವರಣವಾದರೆ ಹಾಗೂ ವ್ರತ ಸತ್ರಗಳಲ್ಲಿ ಸಂಕಲ್ಪವಾದರೆ । ವಿವಾಹದಲ್ಲಿ ನಾಂದೀ ಶ್ರಾದ್ಧವಾದರೇ ಮತ್ತು ಶ್ರಾದ್ಧದಲ್ಲಿ ಶ್ರಾದ್ಧಪಾಕ ಪ್ರಾರಂಭವಾಗಿದ್ದರೆ ಸೂತಕವಿಲ್ಲ (ಈ ಮೇಲಿನ ಎಲ್ಲಾ ಲಕ್ಷಣಗಳನ್ನು ಆಯಾಯಾ ಕರ್ಮದ ಪ್ರಾರಂಭವೆನ್ನುತ್ತಾರೆ)॥

ಉದ್ವಾಹೌಪಾಸನಾತ್ ಪೂರ್ವಂ ಮೃತಾಸ್ತ್ರೀ ಯದಿ ವಾ ಪುಮಾನ್ ।
ಸ್ಥಾಲೀಪಾಕಂ ತತಃ ಕೃತ್ವಾ ಪ್ರೇತ ಕಾರ್ಯಂ ಪರೇಹನಿ ॥
ಯದಿ ವಿವಾಹ ಮಧ್ಯೇತು ಮಾತಾ ಪಿತಾ ಮೃತೋ ಯದಿ ।
ತತ್ರ ಶೇಷಂ ಪ್ರಕುರ್ವೀತ ಪಶ್ಚಾತ್ ಪೈತೃಕಮಾಚರೇತ್ ॥

ವಿವಾಹದಲ್ಲಿ ಔಪಾಸನಕ್ಕಿಂತ ಮುಂಚೆ ವಧೂ ಮತ್ತು ವರರು ಮರಣ ಹೊಂದಿದರೆ । ಆಗ್ನೇಯಸ್ಥಾಲೀಪಾಕ ಮಾಡಿ ಮರುದಿನ ಪ್ರೇತ ಕಾರ್ಯ ಮಾಡಬೇಕು ॥

ಒಂದುವೇಳೆ ವಿವಾಹ ಮಧ್ಯದಲ್ಲಿಯೇ(ಲಾಜಹೋಮಕ್ಕಿಂತ ಮುಂಚೆ) ತಂದೆತಾಯಿಯರು ಮರಣ ಹೊಂದಿದರೆ । ಶೇಷಕಾರ್ಯಗಳನ್ನು (ಸಪ್ತಪದೀ, ಪ್ರಧಾನಹವನ, ಲಾಜಹೋಮ) ಮುಗಿಸಿಕೊಂಡು ನಂತರ ಪಿತೃಸಂಬಂಧಿ ಕಾರ್ಯಗಳನ್ನು ಮಾಡಬೇಕು ॥

ಅರ್ಧರಾತ್ರಾದತೀತೇತು ಮುಹೂರ್ತಂ ಪೂರ್ವಸಂಯುತು ।
ಉತ್ತರೇತು ಪ್ರಭಾತೇತು ವಿವಾಹ ಮೃತುಬಂಧುಷು ॥

ರಾತ್ರೌ ಯಾಮದ್ವಯಾ ದರ್ವಾಕ್ ಸಾ ತಿಥಿಃ ಪೂರ್ವಕಾಲಿಕಾ ।
ಪರಾಪರೇಯಂ ವಿಜ್ಞೇಯ ವಿವಾಹ ಮೃತ ಜನ್ಮಸು ॥
ನಿಶಾಭಾಗ ತ್ರಯಂ ಕೃತ್ವಾ ದ್ವೌಭಾಗೌ ಪೂರ್ವವಾಸರೇ ।
ಶೇಷಂ ಪರದಿನಂ ಕುರ್ಯಾತ್ ಜನ್ಮ ಋತು ಮರಣೇಷು ಚ ॥

ಅರ್ಧರಾತ್ರಿಯು ಕಳೆದ ಮುಹೂರ್ತವೂ ಕೂಡ ಹಿಂದಿನ ದಿನಕ್ಕೆ ಸೇರುತ್ತದೆ। ಮುಂದಿನ ಬೆಳಗಿನವರೆಗಿನ ಮುಹೂರ್ತವು(ವಿವಾಹ, ಋತುಮತಿ) ಮರುದಿನಕ್ಕೆ ಸೇರುತ್ತದೆ ॥

ಅಥವಾ ರಾತ್ರಿಯ ಯಾಮದ್ವಯದ ಒಳಗಿನ ತಿಥಿಯು ಹಿಂದಿನ ದಿನಕ್ಕೆ ಸೇರುತ್ತದೆ । ಅದಕ್ಕಿಂತ ಮುಂದಿನ ತಿಥಿಯು ಮುಂದಿನ ದಿನಕ್ಕೆ ಸೇರುತ್ತದೆ ಎಂದು ವಿವಾಹ, ಮೃತ, ಜಾತ ಆಶೌಚಗಳಲ್ಲಿ ತಿಳಿಯಬೇಕು ॥

ಅಥವಾ ರಾತ್ರಿಯನ್ನು ೩ ಭಾಗ ಮಾಡಿ ೨ ಭಾಗವು ಹಿಂದಿನ ದಿನಕ್ಕೆ ಸೇರುತ್ತದೆ । ಉಳಿದಭಾಗವು ಮುಂದಿನದಿನಕ್ಕೆ ಸೇರುತ್ತದೆಂದು ಜಾತ, ಮೃತ, ಋತುಮತಿ ಆಶೌಚಗಳಲ್ಲಿ ತಿಳಿಯಬೇಕು ॥

ದೇವತಾ ಪ್ರಾರ್ಥನೆ–

ವರಃ ಪ್ರಾಣಾನಾಯಮ್ಯ ಸಂಕಲ್ಪ್ಯ ನಿರ್ವಿಘ್ನೇ ಸುಲಗ್ನಕೇ ।
ಕನ್ಯಾ ವಿವಾಹ ಸಿದ್ಧ್ಯರ್ಥಂ ಪೂಜಯೇದಿಷ್ಟ ದೇವತಾಃ ॥
ಗೌರೀ ವಿನಾಯಕಂ ವಾಣೀಂ ಅರುಂಧತ್ಯಾ ಶಚೀಂ ರಮಾಂ ।
ತತ್ತನ್ಮಂತ್ರೈಶ್ಚ ಸಂಪೂಜ್ಯ ಪ್ರಾರ್ಥ್ಯ ಕನ್ಯಾಮಲಂಕೃತಾಂ ॥
ಯಶೋದೇಹಿ ಶ್ರಿಯಂ ದೇಹಿ ಸುರೂಪಂ ಸುಭಗಂ ಹಿಮೇ ।
ಅವೈಧವ್ಯಂ ತಥಾರೋಗ್ಯಂ ದೀರ್ಘಮಾಯುಸ್ಸುತಂ ದದಃ ॥
ಅರುಂಧತೀ ಮಹಾಲಕ್ಷ್ಮೀ ಶಚೀಗೌರೀ ಸರಸ್ವತೀ ।
ಇತಿ ಮಂತ್ರಂ ಸಮುಚ್ಚಾರ್ಯ ಕುಮಾರೀಂ ವಾರಯೇತ್ ತತಃ ॥

ವರನು ನಮಸ್ಕರಿಸಿ ಸಂಕಲ್ಪ ಮಾಡಿ ನಿರ್ವಿಘ್ನವಾಗಿ ಒಳ್ಳೆಯ ಲಗ್ನದಲ್ಲಿ। ಕನ್ಯಾ ವಿವಾಹಸಿದ್ಧಿಗಾಗಿ ಇಷ್ಟದೇವತೆಯನ್ನು ಪೂಜಿಸಬೇಕು ॥

ಗೌರಿಯನ್ನು, ವಿನಾಯಕನನ್ನು, ವಾಣೀ, ಅರುಂಧತೀ ಸಹಿತವಾದ ಶಚಿಯನ್ನು ಅಥವಾ ರಮೆಯನ್ನು। ಈ ಎಲ್ಲಾ ದೇವತೆಗಳನ್ನು ಆಯಾಯಾ ಮಂತ್ರಗಳಿಂದ ಪೂಜಿಸಿ ಪ್ರಾರ್ಥಿಸಿ

ಅಲಂಕೃತಳಾದಂತಹ ಕನ್ಯೆಯನ್ನು ಯಶಸ್ಸನ್ನು ಕೊಡು, ಸಂಪತ್ತನ್ನು ಕೊಡು, ರೂಪ ಸುಖಗಳನ್ನು ಕೊಡು। ಅವೈಧವ್ಯವನ್ನು, ಆರೋಗ್ಯವನ್ನು ಹಾಗೂ ದೀರ್ಘಾಯುಷ್ಮಂತರಾದ ಮಕ್ಕಳನ್ನು ಕೊಡು ಎಂದು ಅರುಂಧತೀ ಮಹಾಲಕ್ಷ್ಮೀ ಶಚೀ ಗೌರೀ ಸರಸ್ವತೀ ಮಂತ್ರಗಳನ್ನು ಉಚ್ಚರಿಸಿ ನಂತರ ಕುಮಾರಿಯನ್ನು ವರಿಸಬೇಕು ॥

ನಿಶ್ಚಯತಾಂಬೂಲಂ –

ಯಾಃ ಫಲಿನೀರಿತಿ ದ್ವಾಭ್ಯಾಂ ಫಲತಾಂಬೂಲಮಕ್ಷತಾನ್ ।
ಕನ್ಯಾಯಾ ಅಂಜಲೌ ಕ್ಷಿಪ್ತ್ವಾ ಗೋತ್ರ ಪ್ರವರ ಪೂರ್ವಕಮ್ ॥
ವರಾಯ ಬಾಢಂ ದಾಸ್ಯಾಮಿ ಇತಿ ಕನ್ಯಾ ಪಿತಾ ವದೇತ್ ।
ಸಭಾಂ ಪೂಜಾಂ ತತಃ ಕೃತ್ವಾ ಆಶಿಶೋ ವಾಚಯೇತ್ ತತಃ ॥

ಯಾಃ ಫಲಿನೀ ಎಂಬ ೨ ಮಂತ್ರಗಳಿಂದ ಫಲತಾಂಬೂಲ ಅಕ್ಷತೆಗಳನ್ನು। ಕನ್ಯೆಯ ಕೈಗೆ ಗೋತ್ರಪ್ರವರ ಪೂರ್ವಕವಾಗಿ ಹಾಕಿ ॥

ವರನಿಗೆ ಬಾಢಂ (ಒಪ್ಪಿಗೆಕೊಡುತ್ತೇನೆ) ಎಂದು ಕನ್ಯಾಪಿತೃವು ಹೇಳಬೇಕು। ನಂತರ ಸಭಾಪೂಜೆ ಮಾಡಿ ಆಶೀರ್ವಚನವನ್ನು ಮಾಡಿಸಬೇಕು ॥

ತತ್ರ ಕನ್ಯಾದಾತೃ ಪ್ರಮಾಣಂ–ವಧೂಪಿತಾ ಪ್ರಮಾಣಂ –

ವಾಚಾದತ್ತಾ ಮಯಾಕನ್ಯಾ ವರಾರ್ಥಃ ಸ್ವೀಕೃತಾ ತ್ವಯಾ ।
ಕನ್ಯಾವಲೋಕನ ವಿಧೌ ನಿಶ್ಚಿತಸ್ತ್ವಂ ಸುಖೀಭವ ॥
ಇತಿ ಪಠಿತ್ವಾ ತಾಂಬೂಲಂ ದದ್ಯಾತ್ ॥

ನಾನು ಕನ್ಯೆಯನ್ನು ವರನಿಗೋಸ್ಕರವಾಗಿ ಮಾತುಕೊಟ್ಟಿದ್ದೇನೆ ನೀನು ಆ ಮಾತನ್ನು ವರನಿಗಾಗಿ ಸ್ವೀಕರಿಸಿದ್ದೀಯ। ಕನ್ಯೆಯನ್ನು ನೋಡುವುದರಲ್ಲಿ ನಿಶ್ಚಯವುಳ್ಳ ಮನಸ್ಸಿನವನಾದ ನೀನು ಸುಖಿವಾಗಿರು ॥

ಹೀಗೆ ಹೇಳಿ ತಾಂಬೂಲವನ್ನು ಕನ್ಯಾ ಪಿತೃವು ವರನ ತಂದೆಗೆ ಕೊಡಬೇಕು ॥

ವರಸ್ಯ ಪಿತಾ ಪ್ರಮಾಣಮ್ –

ವಾಚಾದತ್ತಾ ತ್ವಯಾಕನ್ಯಾ ವರಾರ್ಥಂ ಸ್ವೀಕೃತಾ ಮಯಾ ।
ವರಾವಲೋಕನ ವಿಧೌ ನಿಶ್ಚಿತಸ್ತ್ವಂ ಸುಖೀಭವ ॥
ಇತಿ ಪಠಿತ್ವಾ ತಾಂಬೂಲಂ ದದ್ಯಾತ್ ॥

ನೀನು ಮಾತಿನಿಂದ ಕನ್ಯೆಯನ್ನು ಕೊಟ್ಟಿದ್ದೀಯ, ವರನಿಗಾಗಿ ನಾನು ಸ್ವೀಕರಿಸಿದ್ದೇನೆ । ವರನನ್ನು ನೋಡುವ ವಿಷಯದಲ್ಲಿ ನಿಶ್ಚಯ ಮನಸ್ಸುಳ್ಳ ನೀನು ಸುಖವಾಗಿರು ॥ ಹೀಗೆ ಹೇಳಿ ತಾಂಬೂಲವನ್ನು ವರನ ಪಿತೃವು ವಧುವಿನ ತಂದೆಗೆ ಕೊಡಬೇಕು ॥

ಯುಕ್ತಂ ತು ಪಾಣಿಗ್ರಹಣಂ ಸರ್ವ ವರ್ಣೇಷು ಸರ್ವಶಃ ।
ಜಲ ಪೂರ್ವಂತು ವಿಪ್ರಾಣಾಂ ಅನ್ಯೇಷಾಂ ಅಪಿ ಕಾಮ್ಯಯಾ ॥

ಎಲ್ಲಾ ವರ್ಣಗಳಲ್ಲಿಯೂ ಪಾಣಿಗ್ರಹಣವು ಎಲ್ಲರಿಗೂ ಉಂಟು । ನೀರನ್ನು ಬಿಡುವುದರ ಮೂಲಕ ಬ್ರಾಹ್ಮಣರ ಪಾಣಿಗ್ರಹಣವಾಗುತ್ತದೆ ಬೇರೆ ವರ್ಣದವರಿಗೂ ಕಾಮ್ಯದಿಂದ ಉಂಟು ॥

ಔಪಾಸನ ಫಲಮ್ –

ಯಾವೇರು ಕಾಂಚನಂ ದದ್ಯಾತ್ ಪೃಥಿವೀಂ ಸಾಗರಾಣಿ ಚ ।
ಗವಾಂ ಕೋಟಿಪ್ರದಾನೇನ ಪ್ರಾತರಾಹುತಿ ತತ್ಫಲಮ್ ॥
ಔಪಾಸನಂ ಅಕುರ್ವಾಣಃ ಸ್ವ ಸ್ತ್ರಿಯಂ ಯೋsಧಿಗಚ್ಛತಿ ।
ಸ್ವಮಾತೃ ಗಮನಸ್ಥಾನಂ ಸ್ವಯಂಭೂ ಮನುರಬ್ರವೀತ್ ॥

ಮೇರುಶಿಖರದಷ್ಟು ಚಿನ್ನದಾನ ಕೊಟ್ಟರೆ ಹಾಗೂ ಇಡೀ ಭೂ ಮಂಡಲ, ಸಾಗರಗಳನ್ನು ದಾನವಾಗಿ ಕೊಟ್ಟರೆ । ಹಾಗೂ ೧ ಕೋಟಿ ಗೋವುಗಳನ್ನು ದಾನವಾಗಿ ಕೊಟ್ಟರೆ ಯಾವ ಫಲ ಬರುತ್ತದೋ ಅದು ಔಪಾಸನದ ಬೆಳಗಿನ ಆಹುತಿಯ ಫಲಕ್ಕೆ ಸಮ ॥

ಔಪಾಸನವನ್ನು ಮಾಡದೇ ಯಾರು ತನ್ನ ಹೆಂಡತಿಯೊಡನೆ ಸಂಭೋಗ ಮಾಡಿದರೆ ಅದು ತನ್ನ ತಾಯಿಯ ಬಳಿಗೆ ಹೋದಷ್ಟು ಮಹಾಪಾತಕವುಳ್ಳ ದೋಷವಾಗುತ್ತದೆಂದು ಸ್ವಯಂಭೂ ಮನು ಹೇಳಿದ್ದಾನೆ ॥

ದ್ವಿಭಾರ್ಯಾಗ್ನಿ ದ್ವಯ ಸಂಸರ್ಗಃ –

ರಾಗಾತ್ ಗೃಹಸ್ಥಸ್ಯ ವಿವಾಹಭೂತೇ। ಪತ್ನೀ ಭವೇತಾಂ ಯದಿ ತಂತ್ರವತ್ಸ್ಯಾತ್।

ವಕ್ಷ್ಯಾಮಿ ಸಂಸರ್ಗ ಉಪಕ್ರಮೇಣ ಗ್ರಾಹ್ಯಂ ಭವೇತ್ ಸ್ವತಂತ್ರಸ್ಯ ಸಕೃತ್ ಪ್ರಸುದ್ಧೆ ದ್ವಿತೀಯ ವಹ್ನಿಂ ವಿಧಿನಾ ಸಮಿಂಧೇ ॥

ಕಾಮದಿಂದ ಗೃಹಸ್ಥನು ೨ ನೇ ಮದುವೆಯನ್ನು ಮೊದಲ ಹೆಂಡತಿ ಇದ್ದಾಗಲೇ ಮಾಡಿಕೊಂಡಾಗ ಆಗ ಆ ೨ ನೇ ಪತ್ನಿಯು ಇವನಿಗೆ ಪತ್ನಿಯೇ ಆಗುತ್ತಾಳಾದ್ದರಿಂದ। ಅವರಿಬ್ಬರ ಅಗ್ನಿಸಂಸರ್ಗವನ್ನು ಆರಂಭಿಸುತ್ತಾ ಮೊದಲನೇ ಪತ್ನಿಯ ಅಗ್ನಿಯು ತಾನೇ ಸಿದ್ಧವಾಗುವುದರಿಂದ ೨ ನೇ ಅಗ್ನಿಯನ್ನು ನಾವು ಹೇಳಿದ ವಿಧಿಯಂತೆ ಸಮಿಂಧನ ಮಾಡಿಕೊಳ್ಳಬೇಕು ॥

ದ್ವಿತೀಯ ಪತ್ನೀಂ ಅವಿರಿಂಚಿತಾಯಾಂ ಸಮಸ್ತ ಆರಂಭ ತತಃ ಪರಸ್ತಾತ್ । ಬ್ರಹ್ಮಾಸಿ ವೇದ ಸ್ಥಿತಿ ಮಂತ್ರ ಕ್ರಮೇಣ ಚತುರ್ಗೃಹೀತಂ ಜುಹುಯಾತ್ ತದಗ್ನೌ ॥ ಅಯಾಸ್ಯ ಮಂತ್ರೇಣ ಸಮಿದ್ಧ್ಯ ವಾಗ್ನಿಂ ಆರೋಪ್ಯ ವಹ್ನಿಂ ವಿಧಿನಾ ಸಮಿಂಧೇ । ಏತತ್ ವೈರುಪದರ್ಶಿತ ಏವ ಭಕ್ತೋ ಽಸೋಬ್ರಹ್ಮಸೂಕ್ತೇನ ಚತುರ್ ಗೃಹೀತ್ಯಾ ॥

೨ ನೇ ಪತ್ನಿಯನ್ನು ಬಿಟ್ಟಿರದಿದ್ದರೆ ಸಮಸ್ತ ಎಂಬ ಮಂತ್ರದಿಂದ ಆರಂಭ ಮಾಡಬೇಕು। ಬ್ರಹ್ಮಾಪಿ ವೇದಸ್ಥಿತಿ ಎಂಬ ಮಂತ್ರದಿಂದ ಚತುರ್‌ಗೃಹೀತ ಆಜ್ಯವನ್ನು ಹೋಮಿಸಬೇಕು ॥

ಅಥವಾ ಅಯಾಸ್ಯ ಮಂತ್ರದಿಂದ ಅಗ್ನಿಯನ್ನು ಆಧಾನ ಮಾಡಿಕೊಂಡು ವಿಧಿವತ್ತಾಗಿ ಸಮಿಂಧನ ಮಾಡಿಕೊಳ್ಳಬೇಕು ।

ಇದನ್ನೇ ನಾವು ತೋರಿಸಿದ್ದೀವಿ ಈ ವಿಷಯದಲ್ಲಿ ತುಂಬಾ ಗೌರವವುಳ್ಳವರಾಗಿ, ಬ್ರಹ್ಮ ಸೂಕ್ತದಿಂದ ಚತುರ್ಗೃಹೀತಾಜ್ಯವನ್ನು ॥

ಪರಿಸ್ತೃತೋಽಗ್ನೌ ಜುಹುಯಾತ್ ಸಚೈವ ಸಮೀತಮಿತ್ಯಾದಿ ಪುರೋನುವಾಕ್ಯಾಮ್ । ಅನೂಚ್ಯ ಪಶ್ಚಾತ್ ಚರುಣಾ ಜುಹೋತಿ ಸವಾಧಿತಂತ್ರೇಣ ಪುರೋನುವಾಕ್ಯಾಮ್ ॥

ಅನೂಚ್ಯ ಮಂತ್ರೇಣ ಪರೇಣ ಹೋಮಃ । ಪುರಿಪರಭ್ಯ ತತ್ತ್ವೇನುವಾಕ್ಯೇನ ಶೇಷಾಭಿಮೃಗ್ಭಿ ಜುಹುಯಾತ್ ತದಗ್ನೌ ॥

ಪರಿಸ್ತರಣ ಮಾಡಿದ ಅಗ್ನಿಗೆ ಹೋಮಿಸಬೇಕು । ನಂತರ ಸಮೀತ ಮುಂತಾದ ಪುರೋನುವಾಕ್ಯೆಯನ್ನು ಉಚ್ಚಾರಣ ಮಾಡಿ ನಂತರ ಚರುವಿನಿಂದ ಹೋಮಿಸಬೇಕು । ಈ ಸಮವಾದ ತಂತ್ರದಿಂದಲೇ ಪುರೋನು ವಾಕ್ಯೆಯನ್ನು ಉಚ್ಚಾರಣೆ ಮಾಡಿ, ಮುಂದಿನ ಹೋಮವನ್ನು ಪುರಿ ಪರಭ್ಯ ತತ್ತ್ವ ಎಂಬ ಅನುವಾಕದಲ್ಲಿ ಸಂಪೂರ್ಣ ಋಕ್‌ಗಳಿಂದ ಹೋಮಿಸಬೇಕು ॥

....*********....

ವಿವಾಹಃ – ಆಪಸ್ತಂಬ ಗೃಹ್ಯಸೂತ್ರಂ

ವಿವಾಹವನ್ನು ಯಾವಾಗ ಮಾಡಬೇಕು/ಮಾಡಬಾರದು ? –

೧. ಸರ್ವಋತವೋ ವಿವಾಹಸ್ಯ ಶೈಶಿರೌಮಾಸೌ ಪರಿಹಾಪ್ಯ ಉತ್ತಮಂ ಚ ನೈದಾಘಮ್ ॥

ಎಲ್ಲಾ ಋತುಗಳಲ್ಲಿಯೂ ಮದುವೆ ಮಾಡಬಹುದು, ಆದರೆ ಶಿಶಿರ ಋತುವಿನಲ್ಲಿ ಮಾಡಬಾರದು, ಹಾಗೆಯೇ ಆಷಾಢ ಕೃಷ್ಣದಲ್ಲೂ ಮಾಡಬಾರದು ॥

೨. ಸರ್ವಾಣಿ ಪುಣ್ಯೋಕ್ತಾನಿ ನಕ್ಷತ್ರಾಣಿ ॥

ಜ್ಯೋತಿಷ್ಯದಲ್ಲಿ ತಿಳಿಸಿರುವ ಎಲ್ಲಾ ಪುಣ್ಯ ನಕ್ಷತ್ರಗಳಲ್ಲೂ ಮದುವೆ ಮಾಡಬಹುದು ॥

ವಿವಾಹದ ಸ್ವರೂಪ ಹೇಗಿರಬೇಕು ? –

೩. ತಥಾ ಮಂಗಲಾನಿ ॥

ಹಾಗೆಯೇ ಶಂಖ, ದುಂದುಭಿಯೇ ಮೊದಲಾದ ವಾದ್ಯಗಳೂ, ಕುಲಗೀತೆಗಳೂ, ಸುಗಂಧದ್ರವ್ಯಗಳು, ವಸ್ತ್ರ, ಶಿಷ್ಟಾಚಾರಗಳು ಇವೆಲ್ಲವೂ ಮದುವೆಯಲ್ಲಿ ಇರಬೇಕು ॥

೪. ಆವೃತಶ್ಚಾಸ್ತ್ರೀಭ್ಯಃ ಪ್ರತೀಯೇರನ್ ॥

ಮಂತ್ರ ಸಹಿತವಾದ ಹಾಗೂ ಮಂತ್ರ ರಹಿತವಾದ ಎಲ್ಲಾ ಕ್ರಿಯೆಗಳನ್ನೂ ಮಾಡಬೇಕು ॥

ವಿವಾಹದಲ್ಲಿ ನಕ್ಷತ್ರಗಳ ವಿಶೇಷತೆ –

೫. ಇನ್ವಕಾಭಿಃ ಪ್ರಸೃಜ್ಯಂತೇ ತೇ ವರಾಃ ಪ್ರತಿನಂದಿತಾಃ ॥

ವಧುವನ್ನು ಹುಡುಕಲು ವರನು ಮೃಗಶಿರಾ ನಕ್ಷತ್ರದಲ್ಲಿ ಬ್ರಾಹ್ಮಣರನ್ನು ಕಳುಹಿಸಬೇಕು ॥

೬. ಮಘಾಭಿರ್ಗಾವೋ ಗೃಹ್ಯಂತೇ ॥

ಮಖಾನಕ್ಷತ್ರದಲ್ಲಿ ಹಸುಗಳನ್ನು ತೆಗೆದುಕೊಳ್ಳಬೇಕು ಹೆಣ್ಣುಳ್ಳವರು, ಆರ್ಷವಿವಾಹ ಮಖಾನಕ್ಷತ್ರದಲ್ಲಾಗಬೇಕು ॥

೭. ಫಲ್ಗುನೀಭ್ಯಾಂ ವ್ಯೂದ್ಯತೇ(ವ್ಯೂಹ್ಯತೇ) ॥

ಫಲ್ಗುನೀನಕ್ಷತ್ರದಲ್ಲಿ ವಧುವನ್ನು ಮದುವೆನಂತರ ತನ್ನ ತಾಯಿ ಮನೆಯಿಂದ ಗಂಡನಮನೆಗೆ ಕರೆದುಕೊಂಡು ಹೋಗಬೇಕು ॥

೮. 'ಯಾಂ ಕಾಮಯೇತ ದುಹಿತರಂ ಪ್ರಿಯಾಸ್ಯಾದಿತಿ ತಾಂ ನಿಷ್ಟ್ಯಾಯಾಂ ದದ್ಯಾತ್ ಪ್ರಿಯೈವ ಭವತಿ ನೇವತು ಪುನರಾಗಚ್ಛತಿ' ಇತಿ ಬ್ರಾಹ್ಮಣಾವೇಕ್ಷೋ ವಿಧಿಃ ॥

ಯಾವನು, ತನ್ನ ಮಗಳು ಅವಳ ಗಂಡನಿಗೆ ಹಾಗೂ ಅವರ ಮನೆಯವರಿಗೆ ಅತ್ಯಂತ ಪ್ರಿಯಳಾಗಿರಬೇಕೆಂದು ಇಷ್ಟಪಡುತ್ತಾನೋ ಅವನು ತನ್ನ ಮಗಳನ್ನು ಸ್ವಾತೀನಕ್ಷತ್ರದಲ್ಲಿ ಮದುವೆ ಮಾಡಿಕೊಡಬೇಕು ಆಗ ಅವಳು ಅತ್ಯಂತ ಪ್ರಿಯಳಾಗಿರುತ್ತಾಳೆ, ಇದು ಬ್ರಾಹ್ಮಣದಲ್ಲಿ ಹೇಳಿರುವ ವಿಧಿ ॥

೯. ಇನ್ವಕಾ ಶಬ್ದೋ ಮೃಗಶಿರಸಿ ॥

'ಇನ್ವಕಾ' ಎಂಬುದು ಮೃಗಶಿರಾನಕ್ಷತ್ರಕ್ಕೆ ಹೆಸರು ॥

೧೦. ನಿಷ್ಟ್ಯಾ ಶಬ್ದಸ್ವಾತೌ ॥

'ನಿಷ್ಟ್ಯಾ' ಎಂಬುದು ಸ್ವಾತೀ ನಕ್ಷತ್ರಕ್ಕೆ ಹೆಸರು ॥

ವಿವಾಹದಲ್ಲಿ ಹಸುವಿನ ಅಗತ್ಯತೆ –

೧೧. ವಿವಾಹೇ ಗೌಃ ॥

ವಿವಾಹ ಸ್ಥಾನದಲ್ಲಿ ಹಸುವನ್ನು ಇರಿಸಬೇಕು ॥

೧೨. ಗೃಹೇಷು ಗೌಃ ॥

ಹಾಗೆಯೇ, ಮನೆಯ ಗೋಶಾಲೆಯಲ್ಲಿಯೂ ಬೇರೆ ಹಸುಗಳನ್ನು ಕಟ್ಟಿರಬೇಕು ॥

೧೩. ತಯಾ ವರಮತಿಥಿವದರ್ಹಯೇತ್ ॥

ಏಕೆಂದರೆ, ವಿವಾಹದ ಸ್ಥಾನದಲ್ಲಿರುವ ಗೋವಿನಿಂದ ವರನನ್ನು ಅಥಿತಿಯಂತೆ ಪೂಜಿಸಬೇಕು ॥

೧೪. ಯೋಸ್ಯಾ ಪಚಿತಸ್ತಮಿತರಯಾ ॥

ಯಾವ ಈ ವರನ ತಂದೆ ಸಂಬಂಧಿಗಳಿದ್ದಾರೋ, ವಿದ್ಯೆಯಿಂದ [illegible] ವತ್ತು ವರನಿಗ ಪೂಜ್ಯರೋ ಅವರಿಗೆ ಮನೆಯಲ್ಲಿರುವ ಗೋವಿನಿಂದ ಅತಿಥಿಗಳಂತೆ [illegible] ॥

೧೫. ಏತಾವತ್ ಗೋರಾಲಂಭಸ್ಥಾನಮತಿಥಿಃ ಪಿತರೋ ವಿವಾಹಶ್ಚ ॥

ಗೋವನ್ನು ಊಟಕ್ಕಾಗಿ ವಿಧಿಸುವ ಕರ್ಮಗಳೆಂದರೆ, ಶ್ರೋತ್ರಿಯನಾದ ಅತಿಥಿ ಬಂದಾಗ ಮತ್ತು ಪಿತೃಕಾರ್ಯದಲ್ಲಿ(ಶ್ರಾದ್ಧದಲ್ಲಿ) ಹಾಗೂ ವಿವಾಹದಲ್ಲಿ ॥

ಎಂತಹ ಕನ್ಯೆಯನ್ನು ವಿವಾಹ ಮಾಡಿಕೊಳ್ಳಬಾರದು ಹಾಗೂ ಮಾಡಿಕೊಳ್ಳಬೇಕು ? –

೧೬. ಸುಪ್ತಾಂ ರುದಂತೀಂ ನಿಷ್ಕ್ರಾಂತಾಂ ವರಣೇ ಪರಿವರ್ಜಯೇತ್ ॥

ವರನಿಗೆ ಹೆಣ್ಣನ್ನು ಹುಡುಕಲು ಹೋದಾಗ ಯಾವಳು ಮಲಗಿರುತ್ತಾಳೋ, ಅಳುತ್ತಿರುತ್ತಾಳೋ, ಅಥವಾ ಮನೆಯಿಂದ ಹೊರಗೆ ಹೋಗಿರುತ್ತಾಳೋ ಅಂತಹವಳನ್ನು ಮದುವೆಯಾಗಬಾರದು ॥

೧೭. ದತ್ತಾಂ ಗುಪ್ತಾಂ ದ್ಯೋತಾಮೃಷಭಾಂ ಶರಭಾಂ ವಿನತಾಂ ವಿಕಟಾಂ ಮುಂಡಾಂ ಮಂಡಾಶಿಫಾಂ ಸಾಂಕಾರಿಕಾಂ ರಾತಾಂ ಪಲೀಂ ಮಿತ್ರಾಂ ಸ್ವನುಜಾಂ ವರ್ಷಕಾರೀಂ ಚ ವರ್ಜಯೇತ್ ॥

ಬೇರೆಯವರಿಗೆ ಮಾತುಕೊಟ್ಟ ಹೆಣ್ಣನ್ನು, ಯಾರೂ ನೋಡಬಾರದೆಂದು ಬೇಡಿ ಅಥವಾ ಮುಸುಕುಗಳಿಂದ ಕಟ್ಟಲ್ಪಟ್ಟಿರುವ ಹೆಣ್ಣನ್ನು ಮತ್ತು ದುಶ್ಶೀಲತೆಯಿದೆ ಎಂದು ಅವರ ಪೋಷಕರು ಪ್ರಯತ್ನಪೂರ್ವಕವಾಗಿ ರಕ್ಷಿಸಲ್ಪಡುತ್ತಿರುವವಳನ್ನು ಹಾಗೆಯೇ ಬಹಳ ಪುರುಷ ಸ್ವಭಾವವನ್ನು ಹೊಂದಿರುವವಳನ್ನು ಹಾಗೂ ಕಳಾಹೀನಳಾದವಳನ್ನು, ಕುಬ್ಜೆಯನ್ನು(ಅತ್ಯಂತ ಕುಳ್ಳಗಿರುವವಳನ್ನು), ವಿಸ್ತಾರವಾದ ಜಂಘಾಪ್ರದೇಶವನ್ನು(ತೊಡೆ) ಹೊಂದಿರುವವಳನ್ನು, ಹಾಗೆಯೇ ಕೂದಲನ್ನು ತೆಗಸಿರುವವಳನ್ನು ಮತ್ತು ಅತ್ಯಂತ ಅಲ್ಪ ದೇಹವುಳ್ಳವಳನ್ನು ಹಾಗೂ ಹಳದಿ ದಂತವುಳ್ಳವಳನ್ನು ಹಾಗೆಯೇ ಯಾವಳು ಗರ್ಭದಲ್ಲಿದ್ದಾಗ (ಯಾವ ಹುಡುಗಿ ತನ್ನ ಗರ್ಭಾವಸ್ಥೆಯಲ್ಲಿ ತಂದೆಯನ್ನು ಕಳೆದುಕೊಂಡಿರುತ್ತಾಳೋ) ಅವಳ ತಾಯಿಯು

ತನ್ನ ಗಂಡನಿಗೆ ಅಸ್ಥಿಸಂಚಯನ ಕ್ರಿಯೆಗಳನ್ನು ಮಾಡಿದ್ದಾಳೋ ಅವಳನ್ನು ಹಾಗೂ ಬೇರೆ ಕುಲಕ್ಕೆ ಮಗಳಾಗಿ ಹೋದವಳನ್ನು ಹಾಗೆಯೇ ಯಾವಾಗಲೂ ರಸಿಕತೆಯನ್ನು ತೋರುವವಳನ್ನು ಮತ್ತು ಕರುಗಳು, ಗದ್ದೆ ಮುಂತಾದವುಗಳನ್ನು ಕಾಯುವವಳನ್ನು ಮತ್ತೆಯೇ ತುಂಬಾ ಜನರಿಗೆ ಸ್ನೇಹಿತಳಾಗಿರುವವಳನ್ನು ಮತ್ತು ತುಂಬಾ ಸುಂದರವಾದ ತಂಗಿಯುಳ್ಳವಳನ್ನು, ಹಾಗೂ ವರನಿಗಿಂತ ದೇಹದಲ್ಲಿ ಹಾಗೂ ವಯಸ್ಸಿನಲ್ಲಿ ದೊಡ್ಡವಳಾದವಳನ್ನು ಇಷ್ಟೂ ಲಕ್ಷಣಗಳು ಹಾಗು ಸಂದರ್ಭಗಳುಳ್ಳ ವಧುವನ್ನು ವಿವಾಹವಾಗುವುದು ಯಾವುದೇ ರೀತಿಯಲ್ಲೂ ಶ್ರೇಯಸ್ಕರವಲ್ಲ ॥

೧೮. ನಕ್ಷತ್ರನಾಮಾ, ನದೀನಾಮಾ, ವೃಕ್ಷನಾಮಾಶ್ಚ ಗರ್ಹಿತಾ ॥

ನಕ್ಷತ್ರದ ಹೆಸರು, ನದೀ ಹೆಸರು, ಮರದ ಹೆಸರುಗಳುಳ್ಳ ಹೆಣ್ಣನ್ನು ಮದುವೆಯಾಗಬಾರದು ॥

೧೯. ಸರ್ವಾಶ್ಚ ರೇಫ ಲಕಾರೋಪಾಂತಾ ವರಣೇ ಪರಿವರ್ಜಯೇತ್ ॥

ರೇಫ, ಲಕಾರಗಳು ಹೆಸರಿನ ಕೊನೇ ಅಕ್ಷರದ ಹಿಂದಿದ್ದರೆ ಅಂತಹವಳನ್ನು ಮದುವೆಯಾಗಬಾರದು ॥

೨೦. ಶಕ್ತಿ ವಿಷಯೇ ದ್ರವ್ಯಾಣಿ ಪ್ರತಿಚ್ಛನ್ನಾನ್ಯುಪನಿಧಾಯ ಬ್ರೂಯಾತ್ ಉಪಸ್ಪೃಶೇತಿ॥

ಹೆಣ್ಣಿನ ಅಭಿವೃದ್ಧಿಯ ಸಾಮರ್ಥ್ಯದ ವಿಷಯದಲ್ಲಿ ಮುಂದೆ ಹೇಳುವ ವಸ್ತುಗಳನ್ನು ೧ ಮಡಿಕೆ(ಪಾತ್ರೆಯಲ್ಲಿ) ಕಾಣದಂತೆ ಇಟ್ಟು ಆ ಹುಡುಗಿಯ ಹತ್ತಿರ ತಂದು, ಈ ಪಾತ್ರೆಯಲ್ಲಿರುವ ವಸ್ತುಗಳಲ್ಲಿ ಒಂದನ್ನು ತೆಗಿ ಎಂದು ಹೇಳಬೇಕು ॥

೨೧. ನಾನಾ ಬೀಜಾನಿ ಸಂಸೃಷ್ಟಾನಿ ವೇದ್ಯಾಪಾಂಸೂನ್ ಕ್ಷೇತ್ರಾಲ್ಲೋಷ್ಟಂಶಕೃಷ್ಮಶಾನ ಲೋಷ್ಟಮಿತಿ ॥

ಆ ವಸ್ತುಗಳು ಯಾವುವೆಂದರೆ – ಭತ್ತ, ಗೋಧಿ ಮುಂತಾದ ಬೀಜಗಳು, ಸೋಮಯಾಗದ ವೇದಿಯ ಧೂಳು, ಗದ್ದೆಯ ಮಣ್ಣು, ಸಗಣಿ ಉಂಡೆ, ಸ್ಮಶಾನದ ಮಣ್ಣು ಇವುಗಳು ॥

೨೨. ಪೂರ್ವೇಷಾಂ ಉಪಸ್ಪರ್ಶನೇ ಯಥಾ ಲಿಂಗವೃದ್ಧಿಃ ॥

ಮೊದಲ ೪ ವಸ್ತುಗಳನ್ನು ಮುಟ್ಟಿದರೆ ಯಥಾಕ್ರಮವಾಗಿ ಪ್ರಜೆಗಳ ಸಮೃದ್ಧಿ, ಯಜ್ಞಸಮೃದ್ಧಿ, ಸಸ್ಯಸಮೃದ್ಧಿ ಮತ್ತು ಪಶುಗಳ ಸಮೃದ್ಧಿ ಉಂಟಾಗುತ್ತದೆ ಆದ್ದರಿಂದ ವಿವಾಹ ಆಗಬಹುದು ॥

೨೩. ಉತ್ತಮೇ ಪರಿಚಕ್ಷತೇ ॥

ಕೊನೆಯ, ಅಂದರೆ ಸ್ಮಶಾನದ ಮಣ್ಣನ್ನು ಮುಟ್ಟಿದರೆ ವಿವಾಹ ಆಗುವುದು ಶ್ರೇಯಸ್ಕರವಲ್ಲ ॥

೨೪. ಬಂಧುಶೀಲ ಲಕ್ಷಣ ಸಂಪನ್ನಾಮರೋಗಾಮುಪಯಚ್ಛೇತ ॥

ಉತ್ತಮ ಗುಣಗಳುಳ್ಳ, ಬಂಧುಗಳುಳ್ಳ, ಶೀಲ–ನಡುವಳಿಕೆಗಳಿಂದ ಕೂಡಿದ, ಉತ್ತಮ ಸ್ತ್ರೀ ಲಕ್ಷಣಗಳಿಂದ ಕೂಡಿರುವವಳನ್ನೇ ಹಾಗೂ ಯಾವುದೇ ದೊಡ್ಡ ಖಾಯಿಲೆಗಳಿಲ್ಲದವಳನ್ನು ವಿವಾಹ ಆಗಬೇಕು ॥

ಎಂತಹ ವರನನ್ನು ಮದುವೆ ಆಗಬೇಕು ? –

೨೫. ಬಂಧುಶೀಲ ಲಕ್ಷಣ ಸಂಪನ್ನಶ್ಶ್ರುತವಾನ್ ಅರೋಗ ಇತಿ ವರಸಂಪತ್ ॥

ಉತ್ತಮ ಗುಣಗಳುಳ್ಳ– ಬಂಧುಗಳುಳ್ಳ– ಶೀಲವಂತನಾದ– ಸಾತ್ವಿಕ ನಡವಳಿಕೆಗಳುಳ್ಳ– ಪುರುಷಲಕ್ಷಣಗಳಿಂದ ಕೂಡಿದ– ವೇದಾಧ್ಯಯನ, ಷಡಂಗ, ಧರ್ಮಶಾಸ್ತ್ರಾದಿಗಳನ್ನು ಅಧ್ಯಯನ ಮಾಡಿದ– ರೋಗಿಷ್ಠನಲ್ಲದ ವರನಿಗೇ ಕನ್ಯೆಯನ್ನು ಕೊಡಬೇಕು ॥

ಧರ್ಮಸೂಕ್ಷ್ಮದ ವಿಶೇಷತೆ –

೨೬. ಯಸ್ಯಾಂ ಮನಶ್ಚಕ್ಷುಷೋರ್ನಿಬಂಧಸ್ತಸ್ಯಾಮೃದ್ಧಿರ್ನೇತರದಾದ್ರಿಯೇತೇ ಇತ್ಯೇಕೇ ॥

ಇನ್ನು ಯಾವ ಕನ್ಯೆಯಲ್ಲಿ ವರನ ಮನಸ್ಸು ಮತ್ತು ಕಣ್ಣುಗಳು ಪ್ರಾಮಾಣಿಕವಾಗಿ ಬಂಧಿಸಲ್ಪಡುತ್ತವೆಯೋ (ತುಂಬಾ ಅನುರಕ್ತವಾಗುತ್ತದೆಯೋ) ಅವಳನ್ನು ವಿವಾಹವಾದರೆ ಧರ್ಮಾದಿಗಳ ಸಮೃದ್ಧಿಯೂ, ಕುಟುಂಬ ಸಮೃದ್ಧಿಯೂ ಉಂಟಾಗುತ್ತವೆ, ಇನ್ನು ಬೇರೆ ಯಾವ ವಿಷಯಗಳನ್ನೂ ಪರಿಗಣಿಸಬೇಕಿಲ್ಲ ಎಂದು ಕೆಲವರ ಅಭಿಪ್ರಾಯವಾಗಿದೆ ॥

ವಧೂನ್ವೇಷಣೆಯ ಕ್ರಮ –

೨೭. ಸುಹೃದಸ್ಸಮವೇತಾನ್ ಮಂತ್ರವತೋ ವರಾನ್ ಪ್ರಹಿಣುಯಾತ್ ॥

ತನ್ನ ಮಿತ್ರನನ್ನು ಅಥವಾ ತನ್ನ ಜೊತೆ ಸ್ನೇಹ ಹೊಂದಿದ ಆತ್ಮೀಯ ಶ್ರೋತ್ರಿಯರಾದ ಬ್ರಾಹ್ಮಣರನ್ನು, ವರನು ಕನ್ಯೆಯನ್ನು ಬೇಡಲು ಕಳುಹಿಸಬೇಕು, ಇದನ್ನು ಕೆಲವರು ಸಮಸಂಖ್ಯೆಯಲ್ಲಿ ಬ್ರಾಹ್ಮಣರನ್ನು ಕಳುಹಿಸಬೇಕೆಂದು ಹೇಳುತ್ತಾರೆ ॥

೨೮. ತಾನಾದಿತೋ ದ್ವಾಭ್ಯಾಮಭಿಮಂತ್ರಯೀತ ॥

ಆ ಕನ್ಯೆಯನ್ನು ಕೇಳಲು ಹೊರಟಂತಹ ಬ್ರಾಹ್ಮಣರನ್ನು ಪ್ರಸುಗ್ಮಂತಾ...., ಎಂಬ ೨ ಮಂತ್ರಗಳಿಂದ ಅಭಿಮಂತ್ರಣೆ ಮಾಡಬೇಕು, ಪ್ರಾಣಾಯಾಮ ಮಾಡಿ, 'ವರಾನ್ ಪ್ರೇಷಯಿಷ್ಯೇ' (ವರನನ್ನು ಇವರ ಮುಖಾಂತರ ಕಳುಹಿಸುತ್ತಿದ್ದೇನೆ) ಎಂದು ಸಂಕಲ್ಪಿಸಿ ಪ್ರಸುಗ್ಮಂತಾ...., ಎಂಬ ೨ ಮಂತ್ರಗಳಿಂದ ಬೇಡುವವರನ್ನು ಅಭಿಮಂತ್ರಿಸಿ, ಯೂಯಂ ಅಮುಷ್ಮಾತ್ ಕುಲಾತ್ ಮಹ್ಯಂ ಕನ್ಯಾಂ ವೃಣೀಧ್ವಂ ಅಂದರೆ ನೀವು ಇಂತಹ ಕುಲದಿಂದ ನನಗೆ ಕನ್ಯೆಯನ್ನು ಯಾಚಿಸಿರಿ ಎಂದು ಪ್ರಾರ್ಥಿಸಿ ಕಳುಹಿಸಬೇಕು, ನಂತರ ಅವರು ಕನ್ಯೆ ಇರುವ ಮನೆಗೆ ಹೋಗಿ, ದತ್ತು – ಸಗೋತ್ರವೇ ಮುಂತಾದ ಯಾವುದೇ ಅಡೆತಡೆಗಳೂ ಇಲ್ಲದಿರುವುದನ್ನು ತಿಳಿದುಕೊಂಡು, ಅವಳ ಬಂಧುಗಳು ಉತ್ತಮ ಗುಣಗಳಿಂದ ಕೂಡಿದವರೆಂಬುದನ್ನು ತಿಳಿದುಕೊಂಡು ಇಂತಹ ಗೋತ್ರದ ಇಂತಹವನಿಗೆ ನಿನ್ನ ಕನ್ಯೆಯನ್ನು ಪ್ರಜೋತ್ಪತ್ತಿಯ ಕರ್ಮಕ್ಕಾಗಿ ಯಾಚಿಸುತ್ತೇವೆ ಎನ್ನಬೇಕು, ನಂತರ ಕನ್ಯೆಯ ಪೋಷಕರು ಕೊಡುವ ಮನಸ್ಸಿದ್ದಲ್ಲಿ 'ದಾಸ್ಯಾಮಿ' (ಕೊಡುತ್ತೇವೆ) ಎನ್ನುತಾರೆ ॥

ನಂತರ ಆ ಬ್ರಾಹ್ಮಣರು ಹಿಂತಿರುಗಿ ಬಂದು ನಾವು ಕಾರ್ಯದಲ್ಲಿ ಸಫಲರಾಗಿದ್ದೇವೆ ಎಂದು ವರನಿಗೆ ಹೇಳಬೇಕು, ಈ ವರ ಪ್ರೇಷಣೆಯು 'ಆಸುರಾ ಮತ್ತು ಆರ್ಷ' ವಿವಾಹಗಳಲ್ಲಿ ಮಾತ್ರ, ನಂತರ ಯಾವ ಹಗಲಿನಲ್ಲಿ ವಿವಾಹವು ಅದಕ್ಕಿಂತ ಮೊದಲಿನ ೫ ಅಥವಾ ೩ ನೇ ದಿನ ಅಂಕುರಾರೋಪಣವನ್ನು ಮಾಡಬೇಕು ॥

ವಧೂ–ವರರು ಪರಸ್ಪರ ನೋಡುವುದು –

೨೯. ಸ್ವಯಂ ದೃಷ್ಟ್ವಾ ತೃತೀಯಾಂ ಜಪೇತ್ ॥

ವರನು ತಾನು ಸ್ವತಃ ಕನ್ಯೆಯನ್ನು ನೋಡಿ ಅಭ್ರಾತೃಘ್ನೀಂ.., ಎಂಬ ೩ ನೇ ಋಕ್ಕನ್ನು ಹೇಳಬೇಕು ॥

೩೦. ಚತುರ್ಥ್ಯಾ ಸಮೀಕ್ಷೇತ ॥

೪ ನೆಯ ಅಘೋರ ಚಕ್ಷುಃ....., ಮಂತ್ರದಿಂದ ವಧುವಿನ ದೃಷ್ಟಿಯಲ್ಲಿ ತನ್ನದೃಷ್ಟಿಯನ್ನು ಇಡಬೇಕು, ಇಲ್ಲಿ ಕೆಲವರು ಈ ಮಂತ್ರದಿಂದ ವಧುವನ್ನು ಅವಳ ಅಂಗಾಂಗ ಸಹಿತವಾಗಿ ನೋಡಬೇಕು ಎನ್ನುತ್ತಾರೆ, ವಧೂ ವರರಿಬ್ಬರೂ ದರ್ಭಾಸನದಲ್ಲಿ ಕುಳಿತು ದರ್ಭೆಯನ್ನು ಹಿಡಿದು ಪ್ರಾಣಾಯಾಮ ಮಾಡಿ ನಾವಿಬ್ಬರೂ ಶ್ರುತ್ಯುಕ್ತ ಶ್ರೌತ ಸ್ಮಾರ್ತ ಕರ್ಮಗಳನ್ನು ಮಾಡಬೇಕು ಮತ್ತು ಪ್ರಜೋತ್ಪತ್ತಿಯನ್ನು ಮಾಡಬೇಕು ಎಂದು ಸಂಕಲ್ಪಿಸಬೇಕು ॥

ಮುಂದುವರೆದ ಹಂತಗಳು –

೩೧. ಅಗುಷ್ಠೇನೋಪಮಧ್ಯಮಯಾ ಚಾಂಗುಲ್ಯಾ ದರ್ಭಂ ಸಂಗೃಹ್ಯೋತ್ತರೇಣ ಯಜುಷಾ ತಸ್ಯಾ ಭ್ರುವೋರಂತರಂ ಸಂಮೃಜ್ಯ ಪ್ರತೀಚೀನಮ್ ನಿರಸ್ಯೇತ್ ॥

ಅಂಗುಷ್ಠ ಮತ್ತು ಅನಾಮಿಕೆಯಿಂದ ದರ್ಭೆಯನ್ನು ಹಿಡಿದು ಇದಮಹಂ ಯಾ....., ಮಂತ್ರದಿಂದ ಆ ಕನ್ಯೆಯ ಹುಬ್ಬುಗಳ ನಡುವೆ ತಿಕ್ಕಿ ಪಶ್ಚಿಮಕ್ಕೆ ದರ್ಭೆಯನ್ನು ಎಸೆದು ಕೈ ತೊಳೆದುಕೊಳ್ಳಬೇಕು ॥

೩೨. ಪ್ರಾಪ್ತೇ ನಿಮಿತ್ತ ಉತ್ತರಾಂ ಜಪೇತ್ ॥

ಕನ್ಯೆಯು ತನ್ನ ತವರುಮನೆಯ ವಿಯೋಗದಿಂದ ಅಳುತ್ತಿರಲಾಗಿ ಜೀವಾಗ್ಂ ರುದಂತಿ....., ಮಂತ್ರವನ್ನು ಜಪಿಸಬೇಕು ॥

೩೩. ಯುಗ್ಮಾಸ್ಸಮವೇತಾನ್ಮಂತ್ರವತ ಉತ್ತರಯಾದ್ಭ್ಯಃ ಪ್ರಹಿಣುಯಾತ್ ॥

ಸಮಸಂಖ್ಯೆಯಲ್ಲಿ ಮಂತ್ರಜ್ಞರಾದ ಬ್ರಾಹ್ಮಣರನ್ನು ವ್ಯುಕ್ಷತ್ ಕ್ರೂರಂ....., ಮಂತ್ರದಿಂದ ವಧುವಿನ ಸ್ನಾನಕ್ಕಾಗಿ ನೀರುತರಲು ಕಳುಹಿಸಬೇಕು, ಆ ಬ್ರಾಹ್ಮಣರು, ಯಾವ ನೀರಿನಲ್ಲಿ ಮನುಷ್ಯರು ಮುಳುಗಿ ಸತ್ತಿಲ್ಲವೋ ಆ ನೀರನ್ನು ಹುಲ್ಲು ಕಸಾದಿಗಳನ್ನು ಪಕ್ಕಕ್ಕೆ ಸರಿಸಿ ನೀರನ್ನು ತರುತ್ತಾರೆ ॥

೩೪. ಉತ್ತರೇಣ ಯಜುಷಾ ತಸ್ಯಾಶ್ಶಿರಸಿ ದರ್ಭೇಣ್ವಂ ನಿಧಾಯು ॥

ಮುಂದಿನ ಆರ್ಯವ್ಣೋ ಅಗ್ನಿಂ....., ಮಂತ್ರದಿಂದ ದರ್ಭೆಯ ಶಿಂಬಿಯನ್ನು ವಧುವಿನ ತಲೆಯ ಮೇಲಿಟ್ಟು ॥

೩೫. ತಸ್ಮಿನ್ನುತ್ತರಯಾ ದಕ್ಷಿಣಂ ಯುಗಚ್ಛಿದ್ರಂ ಪ್ರತಿಷ್ಠಾಪ್ಯಚ್ಛಿದ್ರೇ ಸುವರ್ಣಮುತ್ತರಯಾ ಅಂತರ್ಧಾಯೋತ್ತರಾಭಿಃ ಪಂಚಭಿಸ್ನಾಪಯಿತ್ವಾ ಉತ್ತರಯಾऽಹತೇನ ವಾಸಸಾऽಚ್ಛಾದ್ಯೋತ್ತರಯಾ ಯೋಕ್ತ್ರೇಣ ಸನ್ನಹ್ಯತಿ ॥

ಆ ಶಿಂಬಿಯಲ್ಲಿ ವರನು ಖೇನಸಃ....., ಮಂತ್ರದಿಂದ ಗಾಡಿಯ ದಕ್ಷಿಣ ನೊಗದಲ್ಲಿರುವ ರಂಧ್ರವನ್ನು ಅವಳ ತಲೆಯಮೇಲಿಟ್ಟು ಆ ರಂಧ್ರದಲ್ಲಿ ಶಂತೇ ಹಿರಣ್ಯಂ....., ಮಂತ್ರದಿಂದ ಚಿನ್ನದ ಉಂಗುರವನ್ನು ಒಳಗಿಟ್ಟು ಹಿರಣ್ಯವರ್ಣಾ....., ಪ್ರಚಕ್ರಮುರ್ ಹಿತ್ವಾ....., ಈ ೫ ಮಂತ್ರಗಳಿಂದ ವಧುವಿಗೆ ಸ್ನಾನ ಮಾಡಿಸಬೇಕು ॥

೩೬. ಅಥೈನಾಮುತ್ತರಯಾ ದಕ್ಷಿಣೇ ಹಸ್ತೇ ಗೃಹೀತ್ವಾऽಗ್ನಿ ಮಭ್ಯಾನೀಯು ಅಪರೇಣಾಗ್ನಿಮುದಗಗ್ರಂ ಕಟಮಾಸ್ತೀರ್ಯ ತಸ್ಮಿನ್ ಉಪವಿಶತ ಉತ್ತರೋ ವರಃ ॥

ಈ ವಧುವನ್ನು ಬಲಕೈಯಲ್ಲಿ ಹಿಡಿದು ಮುಂದಿನ ಪೂಷಾತ್ವೇತೋ....., ಮಂತ್ರದಿಂದ ಅಗ್ನಿಯ ಬಳಿಗೆ ಅಭಿಮುಖವಾಗಿ ಕರೆತಂದು ಅಗ್ನಿಯ ಬಳಿಯಲ್ಲಿ ಪಶ್ಚಿಮಕ್ಕೆ ಉದಗಗ್ರವಾಗಿ ಚಾಪೆಹಾಕಿ ಅದರಲ್ಲಿ ವಧೂವರರು ಒಟ್ಟಿಗೆ ಕುಳಿತುಕೊಳ್ಳಬೇಕು ಉತ್ತರದಲ್ಲಿ ವರ ದಕ್ಷಿಣದಲ್ಲಿ ವಧೂ ॥

ವಿವಾಹದ ಅಗ್ನಿಪ್ರತಿಷ್ಠೆ –

೩೭. ಅಗ್ನೇಃ ಉಪಸಮಾಧಾನಾದಿ ಆಜ್ಯಭಾಗಾಂತೇऽಥೈನಾಮಾದಿತೋ ದ್ವಾಭ್ಯಾಂ ಅಭಿಮಂತ್ರಯೇತ ॥

ಅಗ್ನಿಯನ್ನು ಪ್ರತಿಷ್ಠಾಪಿಸಿ ಆಜ್ಯಭಾಗಾಂತದ ವರೆಗೆ ಪ್ರಯೋಗ ಮಾಡಿ ನಂತರ ಈ ವಧುವನ್ನು ಅನುವಾಕದ ಮೊದಲಾದ ಸೋಮಃ ಪ್ರಥಮಃ ....., ೨ ಮಂತ್ರಗಳಿಂದ ಮುಟ್ಟಬೇಕು ॥

೩೮. ಅಥಾಸ್ಯೈ ದಕ್ಷಿಣೇನ ನೀಚಾ ಹಸ್ತೇನ ದಕ್ಷಿಣಮುತ್ತಾನಂ ಹಸ್ತಂ ಗೃಹ್ಣೀಯಾತ್ ॥

ಈ ವಧುವಿನ ಮೇಲ್ಮುಖವಾದ ಬಲಗೈಯನ್ನು ವರನು ತನ್ನ ಕೆಳಮುಖವಾದ ಬಲಗೈಯಿಂದ ಹಿಡಿದುಕೊಳ್ಳಬೇಕು ॥

೩೯. ಯದಿ ಕಾಮಯೇತ ಸ್ತ್ರೀರೇವ ಜನಯೇಯಮಿತ್ಯಂಗುಲೀರೇವ ಗೃಹ್ಣೀಯಾತ್ ॥

ಒಂದುವೇಳೆ ಬರೀ ಹೆಣ್ಣುಮಕ್ಕಳಾಗಲೆಂಬ ಅಪೇಕ್ಷೆ ಇದ್ದರೆ ಕೇವಲ ಅವಳ ಬೆರಳುಗಳನ್ನೇ ಹಿಡಿದುಕೊಳ್ಳಬೇಕು ॥

೪೦. ಯದಿ ಕಾಮಯೇತ ಪುಂಸ ಏವ ಜನಯೇಯಮಿತ್ಯಂಗುಷ್ಠಮೇವ ಸೋಭೀವಂಗುಷ್ಠಮಭೀವ ಲೋಮಾನಿ ಗೃಹ್ಣಾತಿ ॥

ಇಲ್ಲವೇ ಕೇವಲ ಗಂಡು ಮಕ್ಕಳ ಅಪೇಕ್ಷೆಯಿದ್ದಲ್ಲಿ ಕೇವಲ ಅವಳ ಹೆಬ್ಬೆರೆಳನ್ನು ಮಾತ್ರ ವರನು ತನ್ನ ಅಂಗುಷ್ಠ ಲೋಮಗಳು ಮೇಲ್ಭಾಗದಲ್ಲಿರುವಂತೆ ಹಿಡಿಯಬೇಕು ॥

೪೧. ಗೃಭ್ಣಾಮಿ ತ ಇತ್ಯೇತಾಭಿಶ್ಚತಸೃಭಿಃ ॥

ಗೃಭ್ಣಾಮಿತೇ....., ಎಂಬ ೪ ಮಂತ್ರಗಳಿಂದ ವರನು ವಧುವಿನ ಕೈಯನ್ನು ಹಿಡಿಯಬೇಕು ॥

ಸಪ್ತಪದೀ –

೪೨. ಅಥೈನಾಮುತ್ತರೇಣಾಗ್ನಿಂ ದಕ್ಷಿಣೇನ ಪದಾ ಪ್ರಾಚೀಮುದೀಚೀಂ ವಾ ದಿಶಮಭಿಪ್ರಕ್ರಮಯತ್ಯೇಕಮಿಷ ಇತಿ ॥

ನಂತರ ಅಗ್ನಿಯ ಬಳಿಯಲ್ಲಿ ವಧುವನ್ನು ಬಲಗಾಲಿಂದ ಪೂರ್ವ ಅಥವಾ ಉತ್ತರಕ್ಕೋ ೭ ಹೆಜ್ಜೆಗಳನ್ನು ಇರಿಸುತ್ತಾರೆ, ಕೈ ಹಿಡಿದುಕೊಂಡೇ ಪ್ರತಿಯೊಂದು ಹೆಜ್ಜೆಗೂ ಏಕಮಿಷೇ....., ಮುಂತಾದ ಕ್ರಮಪ್ರಾಪ್ತವಾದ ೭ ಮಂತ್ರಗಳಿಂದ ॥

೪೩. ಸಖೇತಿ ಸಪ್ತಮೇಪದೇ ಜಪತಿ ॥

೭ನೇ ಹೆಜ್ಜೆ ಇಟ್ಟಮೇಲೆ ವರನು ಸಖಾ ಸಪ್ತಪದಾ....., ಮಂತ್ರವನ್ನು ಯೇ ಹಿ ಸೂನೃತೇ ಎಂಬುವವರೆಗೆ ಜಪಿಸಬೇಕು ॥

ಪ್ರಧಾನ ಹೋಮಃ –

೪೪. ಪ್ರಾಘ್ನೋಮಾತ್ ಪ್ರದಕ್ಷಿಣಮಗ್ನಿಂ ಕೃತ್ವಾ ಯಥಾಸ್ಥಾನಮುಪವಿಶ್ಯ ಅನ್ವಾರಬ್ಧಾಯಾಮುತ್ತರಾ ಆಹುತೀರ್ಜುಹೋತಿ ಸೋಮಾಯ ಜನಿವಿದೇ ಸ್ವಾಹೇತ್ಯೇತೈಃ ಪ್ರತಿಮಂತ್ರಮ್ ॥

ಪ್ರಧಾನ ಹೋಮದ ಮೊದಲು ಅಗ್ನಿಯನ್ನು ಪ್ರದಕ್ಷಿಣೆ ಮಾಡಿ ಅಗ್ನಿಯ ಪಶ್ಚಿಮದಲ್ಲಿ ಪೂರ್ವವನ್ನು ನೋಡುವ ರೀತಿ ತನ್ನ ಜಾಗದಲ್ಲಿ ಉತ್ತರದಲ್ಲಿ(ಎಡ) ತಾನು ಮತ್ತು ತನ್ನ ದಕ್ಷಿಣದಲ್ಲಿ(ಬಲ) ಪತ್ನಿಯನ್ನು ಕೂರಿಸಿಕೊಂಡು ಆಹುತಿಗಳನ್ನು ಕೊಡಬೇಕು, ಸೋಮಾಯ ಜನಿವಿದೇ ಸ್ವಾಹಾ....., ಎಂದು ೧೬ ಮಂತ್ರಗಳಲ್ಲಿ ಪ್ರತಿ ಮಂತ್ರಕ್ಕೂ ಹೋಮಿಸಬೇಕು ॥ ಅಲ್ಲಿ ಮೊದಲಿನ ೪ ಮಂತ್ರಗಳು ಯಜುರ್ಮಂತ್ರಗಳು, ಉಳಿದ ೧೨ ಮಂತ್ರಗಳು ಋಙ್ಮಂತ್ರಗಳು ॥

ಲಾಜಾಹೋಮಃ –

೪೫. ಅಥೈನಾಮುತ್ತರೇಣಾಗ್ನಿಂ ದಕ್ಷಿಣೇನ ಪದಾಶ್ಮಾನಮಾಸ್ಥಾಪಯತ್ಯಾತಿಷ್ಠೇತಿ ॥

ನಂತರ ಅಗ್ನಿಯ ಉತ್ತರದ ಕಡೆಗೆ ಬಲಗಾಲಿನಲ್ಲಿ ಕಲ್ಲಿನಮೇಲೆ ಪತ್ನಿಯ ಬಲಗಾಲನ್ನು ಇಡಿಸುತ್ತಾನೆ ಆತಿಷ್ಠೇಮಂ....., ಮಂತ್ರದಿಂದ ॥

೪೬. ಅಥಾಸ್ಯಾ ಅಂಜಲಾವುಪಸ್ತೀರ್ಯ ದ್ವಿರ್ಲಾಜಾನೋಽಪ್ಯಾಭಿಘಾರಯತಿ ॥

ಆ ವಧುವಿನ ಅಂಜಲಿಯನ್ನು ಆಜ್ಯದಿಂದ ಒಮ್ಮೆ ಉಪಸ್ತರಣ ಮಾಡಿ ೨ ಸಲ ಅರಳನ್ನು ಹಾಕಿ, ಪುನಃ ೧ ಸಲ ಆಜ್ಯವನ್ನು ಅಭಿಘಾರ ಮಾಡುತ್ತಾನೆ ॥

೪೭. ತಸ್ಯಾಸ್ಸೋದರ್ಯೋ ಲಾಜಾನಾ ವಪತೀತ್ಯೇಕೇ ॥

ಕೆಲವರು ಅವಳ ಸಹೋದರರು ಅರಳನ್ನು ಅವಳ ಕೈಗೆ ಹಾಕಬೇಕೆನ್ನುತ್ತಾರೆ ॥

೪೮. ಜುಹೋತೀಯಂನಾರೀತಿ ॥

ಇಯಂ ನಾರೀ....., ಎಂಬ ಋಙ್ಮಂತ್ರದಿಂದ ದೇವ ತೀರ್ಥದಲ್ಲಿ (ಬೆರಳುಗಳ ಮುಖಾಂತರ) ಅರಳನ್ನು ಹೋಮಿಸಬೇಕು, ಪತ್ನಿಯ ಕೈಯನ್ನು ತಾನೂ ಹಿಡಿದುಕೊಂಡು ಒಟ್ಟಿಗೆ ಹೋಮಿಸಬೇಕು ॥

೪೯. ಉತ್ತರಾಭಿಸ್ತಿಸೃಭಿಃ ಪ್ರದಕ್ಷಿಣಮಗ್ನಿಂ ಕೃತ್ವಾಽಶ್ಮಾನಮಾಸ್ಥಾಪಯತಿ ಯಥಾ ಪುರಸ್ತಾತ್ ॥

ಮುಂದಿನ ತುಭ್ಯಮಗ್ನೇ....., ಮುಂತಾದ ಮಂತ್ರಗಳಿಂದ ಅಗ್ನಿಯನ್ನು ಇಬ್ಬರೂ ಪ್ರದಕ್ಷಿಣೇ

ಮಾಡಿ ಹಿಂದೆ ಹೇಳಿದಂತೆ ಕಲ್ಲಿನ ಮೇಲೆ ಆತಿಷ್ಠೇಮಂ....., ಮಂತ್ರದಿಂದ ಪತ್ನಿಯ ಬಲಗಾಲನ್ನು ಇಡಿಸಬೇಕು ॥

೫೦. ಹೋಮಶೊ್ಚೀತ್ತರಂಯಾ ॥

ನಂತರ ಆರ್ಯಮಣಂ ನು ದೇವಂ....., ಮಂತ್ರದಿಂದ ಅರಳಿನ ಹೋಮವನ್ನು ಹಿಂದೆ ಹೇಳಿದ ರೀತಿಯಲ್ಲಿಯೇ ಮಾಡಿಸಬೇಕು ॥

೫೧. ಪುನಃ ಪರಿಕ್ರಮಣಮ್ ॥

ಮತ್ತೆ ಅಗ್ನಿ ಪ್ರದಕ್ಷಿಣೆಯನ್ನು ಹಿಂದಿನಂತೆ ಆಯಾಯ ಮಂತ್ರಗಳಿಂದ ಮಾಡಬೇಕು ॥

೫೨. ಆಸ್ಥಾಪನಮ್ ॥

ಹಾಗೆಯೇ ಪುನಃ ಕಲ್ಲಿನ ಮೇಲೆ ಬಲಗಾಲನ್ನು ಇಡಿಸಬೇಕು ॥

೫೩. ಹೋಮಶೊ್ಚೀತ್ತರಂಯಾ ॥

ಪುನಃ ತ್ವಮರ್ಯಮಾ....., ಮಂತ್ರದಿಂದ ಅರಳಿನ ಹೋಮವನ್ನು ಯಥಾರೀತಿಯಲ್ಲಿ ಮಾಡಬೇಕು ॥

೫೪. ಪುನಃ ಪರಿಕ್ರಮಣಮ್ ॥

ಮತ್ತೆ ಅಗ್ನಿಪ್ರದಕ್ಷಿಣೆಯನ್ನು ಹಿಂದಿನಂತೆಯೇ ಮಾಡಬೇಕು ॥

೫೫. ಜಂಯಾದಿ ಪ್ರತಿಪದ್ಯತೇ ॥

ಜಯಾದಿ ಹೋಮವು ಆಚರಿಸಲ್ಪಡುತ್ತದೆ, ಈ ಸೂತ್ರವು(ಸೂಚನೆಯು) ಎಲ್ಲಿ ಸೂತ್ರದಲ್ಲಿ ಜಯಾದಿಯನ್ನು ಹೇಳುತ್ತದೋ ಅಲ್ಲಿ ಮಾತ್ರವೇ, ಬೇರೆಕಡೆ(ಅನ್ವಾರಂಭಾದಿ)ಗಳಲ್ಲಿ ಇಲ್ಲ॥

೫೬. ಪರಿಷೇಚನಾಂತಂ ಕೃತ್ವೋತ್ತರಾಭ್ಯಾಂ ಯೋಕ್ತ್ರಂ ವಿಮುಚ್ಯ ತಾಂ ತತಃ ಪ್ರವಾವಾಹ ಯೇತ್ಪ್ರವಾಹಾರಂಯೇತ್ ॥

ಪರಿಷೇಚನಾಂತದವರೆಗೆ ಪ್ರಯೋಗ ಮಾಡಿ ಶಮ್ಯೆಯನ್ನು(ಪರಿಧಿ) ನಿರಸನಮಾಡಿ, ಪ್ರಣೀತಾಮೋಕ್ಷಣ, ಬ್ರಹ್ಮೋದ್ವಾಸನೆಗಳನ್ನು ಮಾಡಿ, ಪ್ರತ್ವಾಮುಂಚಾಮಿ.....,

೨ ಋಜ್ಮಂತ್ರಗಳಿಂದ ಯೋಕ್ತ್ರ ವಿಮೋಕ ಮಾಡಬೇಕು (ಸೊಂಟಕ್ಕೆ ಈ ಹಿಂದೆ ಕಟ್ಟಿದ್ದ ದರ್ಭೆಯ ದಾರ), ನಂತರ ವಧುವನ್ನು ಕುದುರೆ ಮೇಲೋ, ಆನೆಯಮೇಲೋ, ಶಿಬಿಕೆಯಲ್ಲೋ ಅಥವಾ ರಥದಲ್ಲೋ ಸುಮುಹೂರ್ತದಲ್ಲಿ ತನ್ನ ಮನೆಗೆ ಕರೆದು ಕೊಂಡು ಹೋಗಬೇಕು ॥

ಅಗ್ನಿಯ ಜೊತೆ ವಧುವನ್ನು ವರನು ತನ್ನ ಮನೆಗೆ ಕರೆದುಕೊಂಡು ಹೋಗುವಿಕೆ –

೫೭. ಸಮೋಪ್ಯೈತಮಗ್ನಿಮನುಹರಂತಿ ॥

ಈ ವಿವಾಹಾಗ್ನಿಯನ್ನು ಮಡಿಕೆಯಲ್ಲಿ ಇಟ್ಟುಕೊಂಡು ವಧುವಿನ ಹತ್ತಿರದಲ್ಲಿ ಪರಿಕರ್ಮಿಗಳು ವರನ ಮನೆಗೆ ಜೊತೆಯಲ್ಲಿ ಕೊಂಡೊಯ್ಯುತ್ತಾರೆ, ಅಗ್ನಿಯ ಮತ್ತು ವಧುವಿನ ಮಧ್ಯೆ ಬೇರೆಯವರು ಇರಕೂಡದು ॥

೫೮. ನಿತ್ಯಃ ॥

ಪಾಣಿಗ್ರಹಣದಿಂದ ಆರಂಭಿಸಿ ಎಲ್ಲಾ ಆಚಾರ ಲಕ್ಷಣವಾದ ವೈದಿಕ ಕರ್ಮಕ್ಕೆ ಈ ಅಗ್ನಿಯನ್ನು ಯಾವಜ್ಜೀವ ನಿತ್ಯಧಾರಣೆ ಮಾಡಬೇಕು, ಪಾಣಿಗ್ರಹಣವಾದ ನಂತರ ಇಟ್ಟುಕೊಂಡ ಈ ಅಗ್ನಿಯು 'ಔಪಾಸನಾ' ಎಂದು ಹೇಳಲ್ಪಡುತ್ತದೆ, ಇದರಲ್ಲಿ ಗೃಹ್ಯಕರ್ಮಗಳು ನಡೆಯುತ್ತವೆ ಆದ್ದರಿಂದ ವಿವಾಹ ಕರ್ಮವು ಸಮಾಪ್ತಿಯಾಗಲಾಗಿ 'ಅಪವೃತ್ತೇ ಕರ್ಮಣಿ ಲೌಕಿಕಸ್ಸಂಪದ್ಯತೇ' ಎಂಬ ಸೂತ್ರದಂತೆ ಲೌಕಿಕಾಗ್ನಿಯಾಗುವುದಿಲ್ಲ ॥ ನಿತ್ಯವಾಗಿ, ಅಜಸ್ರವಾಗಿ ಧಾರಣೆಮಾಡಬೇಕು ಈ ಅಗ್ನಿಯನ್ನು ॥

೫೯. ಧಾರ್ಯಃ ॥

ಹಾಗೂ 'ನಿತ್ಯಃ' ಎಂಬ ಸೂತ್ರ ಮಾಡಿದಮೇಲೆ ಮತ್ತೆ 'ಧಾರ್ಯಃ' ಎಂಬ ಸೂತ್ರವನ್ನು ಮಾಡಿರುವುದರಿಂದ ಈ ಔಪಾಸನಾಗ್ನಿಯನ್ನು ಸಮಿತ್ಸಮಾರೋಪವಾಗಲೀ, ಆತ್ಮ ಸಮಾರೋಪವಾಗಲೀ ಅಥವಾ ಅರಣಿಯ ಸಮಾರೋಪವಾಗಲೀ ಹಾಗೂ ಬೇರೆಗೃಹ್ಯಸೂತ್ರಗಳನ್ನಾಧರಿಸಿ ವಿಕಲ್ಪದಿಂದಲೂ ಸಹ ಮಾಡಲು ಬರುವುದಿಲ್ಲ ॥

೬೦. ಅನುಗತೋ ಮಂಥ್ಯಃ ॥

ಈ ಔಪಾಸನಾಗ್ನಿಯು ಅನುಗತವಾಗಲಾಗಿ(ನಷ್ಟವಾಗಲಾಗಿ) ಅಥವಾ ಅಪಹೃತವಾಗಿ ಪುನಃ

ಸಿಕ್ಕಿದರೆ, ಆ ಉಳಿದ ಚಕ್ಕೆಯಿಂದಲೇ ಮಂಥನ ಮಾಡಿ ಮತ್ತೆ ಇಟ್ಟುಕೊಳ್ಳುವುದು, ಒಂದುವೇಳೆ ಮಂಥನ ಮಾಡಿದರೂ ಅಗ್ನಿಯು ಉತ್ಪತ್ತಿಯಾಗುತ್ತಿಲ್ಲವೆಂದಾದರೆ ಆ ಔಪಾಸನಾಗ್ನಿಯ ಭಸ್ಮವನ್ನು ಅರಣಿಗೆ ಸ್ಪರ್ಶಿಸಿ ಮಂಥಿಸಬೇಕು ॥

೬೧. ಶ್ರೋತ್ರಿಯಾಗಾರಾದ್ವಾಹಾರ್ಯಃ ॥

ಅಥವಾ ವೇದ ಶಾಸ್ತ್ರಗಳನ್ನು ಅಧ್ಯಯನ ಮಾಡಿದ ಶ್ರೋತ್ರಿಯನ ಮನೆಯಿಂದ ಅಗ್ನಿಯನ್ನು ತರಬಹುದು ॥

ಅಗ್ನಿನಷ್ಟವಾದರೆ ಪ್ರಾಯಶ್ಚಿತ್ತವು –

೬೨. ಉಪವಾಸಶ್ಚಾನ್ಯತರಸ್ಯ ಭಾರ್ಯಾಯಾಃ ಪತ್ಯುರ್ವಾ ॥

ಅಗ್ನಿನಷ್ಟ ಮತ್ತು ಉತ್ಪತ್ತಿ ಪ್ರಾಯಶ್ಚಿತ್ತವಾಗಿ ಹಗಲು ಅಥವಾ ರಾತ್ರಿ ೧ ಹೊತ್ತು ಹೆಂಡತಿ ಅಥವ ಯಜಮಾನನಿಗೆ ಉಪವಾಸವು ॥

೬೩. ಅನುಗತೇಽಪಿವೋತ್ತರಯಾ ಜುಹುಯಾನ್ನೋಪವಸೇತ್ ॥

ಅಥವಾ ಅಗ್ನಿಯು ನಷ್ಟವಾಗಲಾಗಿ ಅಯಾಶ್ಚಾಗ್ನೇ....., ಮಂತ್ರದಿಂದ ಆಜ್ಯ ಹೋಮವನ್ನು ಪ್ರಾಯಶ್ಚಿತ್ತವಾಗಿ ಮಾಡಬೇಕು, ಉಪವಾಸವಿಲ್ಲ ॥

ವಧೂವರರು ಹೋಗುವಂತಹ ವಾಹನದ ಲಕ್ಷಣ –

೬೪. ಉತ್ತರಾ ರಥಸ್ಯೋತ್ತಂಭನೀ ॥

ಸತ್ಯೇನೋತ್ತಭಿತಾ....., ಎಂಬ ಮಂತ್ರವು ರಥವನ್ನು ಸಿದ್ಧಗೊಳಿಸುವಾಗ ಹೇಳುವ ಮಂತ್ರ ॥

೬೫. ವಾಹಾವುತ್ತರಾಭ್ಯಾಂ ಯುನಕ್ತಿ ದಕ್ಷಿಣಮಗ್ರೇ ॥

ಆ ರಥಕ್ಕೆ ಯುಂಜಂತಿ ಬ್ರಧ್ನಂ, ಯೋಗೇಯೋಗೇ....., ಎಂಬ ೨ ಮಂತ್ರಗಳಿಂದ ಕುದುರೆ ಅಥವಾ ಗಾಡಿಯಾದರೆ ಎತ್ತುಗಳನ್ನು ಕಟ್ಟಬೇಕು ॥

೬೬. ಆರೋಹತೀಮುತ್ತರಾಭಿರಭಿಮಂತ್ರಯತೇ ॥

ರಥವನ್ನು ಹತ್ತುತ್ತಿರುವ ವಧುವನ್ನು ಸುಕಿಗ್ಂ ಶುಕಗ್ಂ ಶಲ್ಮಲಿಂ....., ಎಂಬ ೪ ಮಂತ್ರಗಳಿಂದ

ವರನು ಅಭಿಮಂತ್ರಿಸಬೇಕು, ಕೆಲವರು ರಥವನ್ನು ಹತ್ತಬೇಕಾದರೆ ಮಾತ್ರ ಈ ೧ ಮಂತ್ರವನ್ನು ಹೇಳಬೇಕೆನ್ನುತ್ತಾರೆ, ಕಾರಣ – ೧ ನೇ ಮಂತ್ರ ಕುದುರೆ ಹತ್ತುವಾಗ ಇಲ್ಲ ಏಕೆಂದರೆ 'ಸುಚಕ್ರಂ' ಎಂಬ ಲಿಂಗ ಇರುವುದರಿಂದ ಕೇವಲ ೩ ಮಂತ್ರಗಳು ಇರುತ್ತವೆ ॥

೬೭. ಸೂತ್ರೇ ವರ್ತ್ಮನೋಃ ವ್ಯವಸ್ತೃಣಾತ್ಯುತ್ತರಯಾ ನೀಲಂ ದಕ್ಷಿಣಸ್ಯಾಂ ॥

ರಥದ ೨ ಚಕ್ರಗಳಲ್ಲಿ ಮೊದಲು ಬಲ ಚಕ್ರದ ದಾರಿಗೆ ನೀಲಿ ಅಥವಾ ಕಪ್ಪು ಬಣ್ಣದ ದಾರವನ್ನು ಅಡ್ಡಲಾಗಿ ಇಡುವುದು ನೀಲಲೋಹಿತೇ....., ಎಂಬ ಮಂತ್ರದಿಂದ ॥

೬೮. ಲೋಹಿತಮುತ್ತರಸ್ಯಾಮ್ ॥

ಹಾಗೆಯೇ ಕೆಂಪು ಬಣ್ಣದ ದಾರವನ್ನು ಎಡ ಚಕ್ರದ ದಾರಿಗೆ ಇಡಬೇಕು ನೀಲಲೋಹಿತೇ....., ಎಂಬ ಮಂತ್ರದಿಂದ ॥

೬೯. ತೇ ಉತ್ತರಾಭಿರಭಿಯಾತಿ ॥

ಯೇ ವಧ್ವಃ ಚಂದ್ರಂ...., ಮಾ ವಿದನ್ಪರಿ....., ಸುಗಂ ಪಂಥಾನಂ....., ಎಂಬ ೩ ಮಂತ್ರಗಳಿಂದ ಅಡ್ಡಲಾಗಿ ಇಟ್ಟ ಆ ದಾರದ ಮೇಲೆ ರಥವನ್ನು ಎಳೆಯಬೇಕು (ಹೋಗಿಸಬೇಕು) ॥

ದಾರಿಯು ಮಧ್ಯದಲ್ಲಿ ಈ ಕೆಳಗಿನ ಲಕ್ಷಣಗಳು ಕಂಡಾಗ ಅನುಸರಿಸಬೇಕಾದ ಸಾರ್ವತ್ರಿಕ ಸಾಮಾನ್ಯ ನಿಯಮಗಳು –

೭೦. ತೀರ್ಥಸ್ಥಾಣು ಚತುಷ್ಪಥವ್ಯತಿಕ್ರಮೇ ಚೋತ್ತರಾಂ ಜಪೇತ್ ॥

ವಧುವಿನ ಜೊತೆ ವರನು ರಥ ಅಥವಾ ಗಾಡಿಯಲ್ಲಿ ಹೋಗುತ್ತಿರುವಾಗ ಮಾರ್ಗದಲ್ಲಿ ಪುಣ್ಯನದಿಗಳು ಅಥವಾ ಹಸು ಮುಂತಾದ ಪ್ರಾಣಿಗಳು ಕೆರೆದುಕೊಳ್ಳುವುದಕ್ಕೆ ಮಾಡಿದ ಕಂಬಗಳು ಅಥವಾ ಚತುಷ್ಪಥ ಮಾರ್ಗವು ಇವುಗಳಲ್ಲಿ ಯಾವುದಾದರೂ ಸಿಕ್ಕಿ ಅದನ್ನು ದಾಟಿ ಹೋಗಬೇಕಾದರೂ ತಾಮಂದಸಾನೌ....., ಎಂಬ ಮಂತ್ರವನ್ನು ಜಪಿಸಬೇಕು ॥

೭೧. ನಾವಮುತ್ತರಯಾನುಮಂತ್ರಯತೇ ॥

ಒಂದುವೇಳೆ ದಾರಿಯಲ್ಲಿ ನದಿಯನ್ನು ದೋಣಿಯಿಂದ ದಾಟಬೇಕಾದರೆ ಆಗ ವರನು ಅಯಂ ನೋ ಮಹ್ಯಾಃ....., ಮಂತ್ರದಿಂದ ದೋಣಿಯನ್ನು ಅನುಮಂತ್ರಿಸಬೇಕು

(ಮುಟ್ಟಬೇಕು) ನಂತರ ಅಗ್ನಿ ಸಮೇತರಾಗಿ ಇಬ್ಬರೂ ಹತ್ತಬೇಕು ॥

೭೨. ನ ಚ ನಾವ್ಯಾಂ ಸ್ತರತೀ ವಧೂಃ ಪಶ್ಯೇತ್ ॥

ನದೀ ದಾಟುವ ಸಮಯದಲ್ಲಿ ವಧುವು ನಾವಿಕನನ್ನು ನೋಡಬಾರದು ಮತ್ತು ನದೀ ದಾಟುವುದನ್ನು (ನೀರನ್ನು) ನೋಡಬಾರದು ॥

೭೩. ತೀತ್ವೋರ್ತ್ತರಾಂ ಜಪೇತ್ ॥

ನದಿಯನ್ನು ದಾಟಿದ ಮೇಲೆ ಅಸ್ಯ ಪಾರೇ....., ಮಂತ್ರವನ್ನು ವರನು ಜಪಿಸಬೇಕು ॥

೭೪. ಶ್ಮಶಾನಾದಿ ವ್ಯತಿಕ್ರಮೇ ಭಾಂಡೇ ರಥೇ ವಾ ರಿಷ್ಟೇsಗ್ನೇಃ ಉಪಸಮಾಧಾನಾದ್ಯಾಜ್ಯ ಭಾಗಾಂತೇsನ್ವಾರಬ್ಧಾಯಾಮುತ್ತರಾ ಆಹುತೀರ್ಹುತ್ವಾ ಜಯಾದಿಪ್ರತಿಪದ್ಯತೇ ಪರಿಷೇಚನಾಂತಂ ಕರೋತಿ ॥

ದಾರಿಯಲ್ಲಿ ಸ್ಮಶಾನ ಭೂಮಿ ಮುಂತಾದವುಗಳನ್ನು ದಾಟಿದರೆ ಅಥವಾ ವಧುವಿನ ಅಲಂಕಾರಗಳು, ಪಾತ್ರೆಗಳು ಅಥವಾ ರಥವು ನಷ್ಟವಾದರೆ ಅಗ್ನಿಯ ಉಪಸಮಾಧಾನ (ಅಗ್ನಿ ಇಟ್ಟುಕೊಂಡು) ಮಾಡಿ ಪರಿಷೇಚನಾಂತದವರೆಗೆ ಪ್ರಯೋಗ ಮಾಡಬೇಕು, ಆಜ್ಯಭಾಗಾಂತದವರೆಗೆ (ಚಕ್ಷುಷೀ ಹೋಮ) ಮಾಡಿ ಪತ್ನಿಯೊಡನೆ ಮುಂದಿನ ಯದೃತೇ ಚಿತ್....., ಎಂಬ ೭ ಕರಣಿಕಾಹುತಿಗಳನ್ನು (ಹೊಸದಾಗಿ ಪುನಃ ಅಗ್ನಿಯನ್ನು ಇಟ್ಟು ಕೊಂಡಾಗ ಆ ಅಗ್ನಿಗೆ ನಿತ್ಯ ಔಪಾಸನಾಗ್ನಿಯ ಶಕ್ತಿಯನ್ನು ಕೊಡಲು ಮಾಡುವಂತಹ ಹೋಮಗಳಿಗೆ ಕರಣಿಕಾಹುತಿಗಳೆನ್ನುತ್ತಾರೆ) ಹೋಮಮಾಡಿ ಜಯಾದಿ ಮಾಡಿ ಪರಿಷೇಚನಾಂತ ಪ್ರಯೋಗ ಮಾಡಬೇಕು ॥

೭೫. ಕ್ಷೀರಿಣಾಮನ್ಯೇಷಾಂ ವಾ ಲಕ್ಷ್ಮಣ್ಯಾನಾಂ ವೃಕ್ಷಾಣಾಂ ನದೀನಾಂ ಧನ್ವನಾಂ ಚ ವ್ಯತಿಕ್ರಮ ಉತ್ತರೇ ಯಥಾಲಿಂಗಂ ಜಪೇತ್ ॥

ಹಾಲು ಇರುವಂತಹ ನ್ಯಗ್ರೋಧ(ಆಲ) ಮುಂತಾದ ಮರಗಳನ್ನು ದಾರಿಯಲ್ಲಿ ದಾಟಿದಾಗ ಅಥವಾ ಊರಿನ ಗಡಿ ಚಿಹ್ನೆಯಾದ ಕದಂಬ ಮುಂತಾದ ವೃಕ್ಷಗಳನ್ನು ದಾಟಿದಾಗ, ನದಿಗಳನ್ನು, ದೀರ್ಘವಾದ ಅರಣ್ಯಗಳನ್ನು(ಯಾವ ಅರಣ್ಯದಲ್ಲಿ ಗ್ರಾಮ್ಯಪಶುಗಳು ವಾಸವಾಗಿರುವಿದಿಲ್ಲವೋ) ದಾಟಿದಾಗ, ಕ್ರಮವಾಗಿ ಯೇ ಗಂಧರ್ವಾಃ....., ಎಂಬ

ಮಂತ್ರವನ್ನು ವೃಕ್ಷಗಳನ್ನು ಕುರಿತು, ಯಾ ಓಷಧಯಃ....., ಮಂತ್ರವನ್ನು ನದಿ, ಅರಣ್ಯಗಳನ್ನು ಕುರಿತು ಜಪಿಸಬೇಕು ॥

ವರನ ಮನೆಗೆ ವಧುವಿನ ಪ್ರವೇಶ ಮತ್ತು ಹೋಮ –

೭೬. ಗೃಹಾನುತ್ತರಯಾ ಸಂಕಾಶಯತಿ ॥

ವರನು ತನ್ನ ಮನೆಯನ್ನು ವಧುವಿಗೆ ಸಂಕಾಶಯಾಮಿ...., ಋಕ್‌ನಿಂದ ತೋರಿಸಬೇಕು ॥

೭೭. ವಾಹಾವುತ್ತರಾಭ್ಯಾಂ ವಿಮುಂಚತಿ ದಕ್ಷಿಣಮಗ್ರೇ ॥

ರಥಕ್ಕೆ ಅಥವಾ ಗಾಡಿಗೆ ಕಟ್ಟಿದ ೨ ಕುದುರೆ ಅಥವಾ ಎತ್ತುಗಳನ್ನು ಆವಾಮಗನ್....., ಎಂಬ ೨ ಮಂತ್ರಗಳಿಂದ ರಥದ ನೊಗದಿಂದ ಬಿಡಿಸಬೇಕು ಒಂದೊಂದಾಗಿ, ಮೊದಲು ಬಲದ್ದು (ದಕ್ಷಿಣದ್ದು) ॥

೭೮. ಲೋಹಿತಂ ಚರ್ಮಾನಡುಹಂ ಪ್ರಾಚೀನಗ್ರೀವಮುತ್ತರಲೋಮ ಮಧ್ಯೇsಗಾರ ಸ್ಯೋತ್ತರಯಾssಸ್ತೀರ್ಯ ಗೃಹಾನ್ಪ್ರಪಾದಯನ್ನುತ್ತರಾಂ ವಾಚಯತಿ ದಕ್ಷಿಣೇನ ಪದಾ ॥

ವರನು ಮೊದಲು ತನ್ನ ಮನೆಯನ್ನು ಪ್ರವೇಶಮಾಡಿ ಶರ್ಮ ವರ್ಮೇದಂ....., ಮಂತ್ರದಿಂದ ಚರ್ಮಾಸನವನ್ನು ಹಾಕಿ ನಂತರ ವಧುವನ್ನು ಬಲಗಾಲಿಂದ ಒಳಕ್ಕೆ ಪ್ರವೇಶ ಮಾಡಿಸುತ್ತಾ ಗೃಹಾನ್ ಭದ್ರಾನ್....., ಮಂತ್ರವನ್ನು ವಧುವಿಗೆ ಹೇಳಿಸಬೇಕು ॥

೭೯. ನ ಚ ದೇಹಲೀಮಭಿತಿಷ್ಠತಿ ॥

ಆ ವಧುವು ವರನ ಮನೆಯನ್ನು ಪ್ರವೇಶಿಸುತ್ತಾ ಹೊಸ್ತಿಲನ್ನು ತುಳಿಯುವಿಲ್ಲ, ಕೆಲವರ ಮತದಲ್ಲಿ ವರನೂ ಸಹ ಹೊಸ್ತಿಲನ್ನು ತುಳಿಯಬಾರದು ॥

೮೦. ಉತ್ತರಪೂರ್ವದೇಶೇ ಅಗಾರಸ್ಯಾಗ್ನೇರುಪ ಸಮಾಧಾನಾದಿ ಆಜ್ಯ ಭಾಗಾಂತೇ ಅನ್ವಾರಬ್ಧಾಯಾಂ ಉತ್ತರಾ ಆಹುತೀರ್ಹುತ್ವಾ ಜಯಾದಿ ಪ್ರತಿಪದ್ಯತೇ ಪರಿಷೇಚನಾಂತಂ ಕೃತ್ವಾ ಉತ್ತರಯಾ ಚರ್ಮಣ್ಯುಪವಿಶತ ಉತ್ತರೋ ವರಃ ॥

ಮನೆಯ ಉತ್ತರಪೂರ್ವ (ಈಶಾನ್ಯ) ಜಾಗದಲ್ಲಿ ಅಗ್ನಿಯ ಉಪಸಮಾಧಾನದಿಂದ (ಉರಿಸುವುಕೆಯಿಂದ) ಆಜ್ಯಭಾಗಾಂತದವರೆಗೆ ಪ್ರಯೋಗ ಮಾಡಿ ಪತ್ನಿಯೊಡನೆ ಆಗನ್ ಗೆ ೀಷ್ಮಂ....., ಮುಂತಾದ ಆಹುತಿಗಳನ್ನು ಹೋಮಿಸಿ ಜಂಗಾಗಿರುವನ್ನು, ಪರಿಷೇಚನಾಂತದವರೆಗೆ ಪ್ರಯೋಗವನ್ನೂ ಮಾಡಿ ಮುಂದಿನ ಇಹ ಗಾವಃ....., ಎಂಬ ಮಂತ್ರದಿಂದ ಮೊದಲು ಹರಡಿದಂತಹ ಚರ್ಮಾಸನದಲ್ಲಿ ವಧುವರರಿಬ್ಬರೂ ಕೂರುವುದು ಹಿಂದಿನಂತೆ ಉತ್ತರದಲ್ಲಿ ವರ, ದಕ್ಷಿಣದಲ್ಲಿ ವಧು ॥

೮೧. ಅಥಾಸ್ಯಾಃ ಪುಂಸೋಜೀರ್ಣವ ಪುತ್ರಾಂಯಾಃ ಪುತ್ರವುಂಕ ಉತ್ತರಯೋಪವೇಶ್ಯ ತಸ್ಮೈ ಫಲಾನ್ಯುತ್ತರೇಣ ಯಜುಷಾ ಪ್ರದಾಯೋತ್ತರೇ ಜಪಿತ್ವಾ ವಾಚಂ ಯಚ್ಛತ್ಯಾನಕ್ಷತ್ರೇಭ್ಯಃ ॥

ಯಾವ ಸ್ತ್ರೀಯು ಗಂಡುಮಗುವನ್ನೇ ಹೆತ್ತಿದ್ದಾಳೋ ಮತ್ತು ಜೀವಂತ ಮಕ್ಕಳನ್ನೇ ಹೆತ್ತಿದ್ದಾಳೋ ಅಂತಹ ಸ್ತ್ರೀಯ ಮಗುವನ್ನು ಸೋಮೇನಾದಿತ್ಯಾ....., ಮಂತ್ರದಿಂದ ವಧುವಿನ ತೊಡೆಯಮೇಲೆ ಕೂರಿಸಿ ಪ್ರಸ್ವಸ್ಥಃ....., ಎಂಬ ಮಂತ್ರದಿಂದ ಆ ಮಗುವಿಗೆ ಹಣ್ಣುಗಳನ್ನು ತಿನ್ನಿಸಿ ಇಹ ಪ್ರಿಯಂ....., ಎಂಬ ೨ ಋಙ್ಮಂತ್ರಗಳನ್ನು ವರನು ಜಪಿಸಿ ಇಬ್ಬರೂ ನಕ್ಷತ್ರ ಕಾಣುವವರೆಗೆ ಮೌನವಾಗಿರುತ್ತಾರೆ ॥

ಧ್ರುವಾದಿ ನಕ್ಷತ್ರಗಳ ದರ್ಶನ –

೮೨. ಉದಿತೇಷು ನಕ್ಷತ್ರೇಷು ಪ್ರಾಚೀಮುದೀಚೀಂ ವಾ ದಿಶಮುಪ ನಿಷ್ಕ್ರಮ್ಯ ಉತ್ತರಾಭ್ಯಾಂ ಯಥಾಲಿಂಗಂ ಧ್ರುವಮರುಂಧತೀಂ ಚ ದರ್ಶಯತಿ ॥

ನಕ್ಷತ್ರ ಉದಯವಾದ ಮೇಲೆ ಪೂರ್ವ ಅಥವಾ ಉತ್ತರಕ್ಕೆ ಸ್ವಲ್ಪದೂರ ಹೋಗಿ ವಧೂವರರು ಧ್ರುವಕ್ಷಿತಿಃ....., ಮಂತ್ರದಿಂದ ಧ್ರುವ ನಕ್ಷತ್ರವನ್ನು, ಮುಂದಿನ ಸಪ್ತಋಷಯಃ....., ಮಂತ್ರದಿಂದ ಸಪ್ತಋಷಿ ಮಂಡಲ – ಕೃತ್ತಿಕಾ ನಕ್ಷತ್ರ ಗುಂಪಿನಲ್ಲಿರುವ ಅರುಂಧತಿ ನಕ್ಷತ್ರವನ್ನು ವರನು ವಧುವಿಗೆ ತೋರಿಸಬೇಕು ॥

ಆಗ್ನೇಯ ಸ್ಥಾಲೀಪಾಕ ಹೋಮ –

೮೩. ಅಥೈನಾಮಾಗ್ನೇಯೇನ ಸ್ಥಾಲೀಪಾಕೇನ ಯಾಜಯತಿ ॥

ನಂತರ ಈ ವಧುವಿನೊಂದಿಗೆ ಆಗ್ನೇಯ ಸ್ಥಾಲೀಪಾಕದಿಂದ ಹೋಮಿಸಬೇಕು ॥

೮೪. ಪತ್ನ್ಯವಹಂತಿ ॥

ಆ ಸ್ಥಾಲೀಪಾಕಕ್ಕೋಸ್ಕರ ಆ ವಧುವು ಭತ್ತ ಮುಂತಾದವುಗಳನ್ನು ಕುಟ್ಟಬೇಕು ॥

೮೫. ಶ್ರಪಯಿತ್ವಾ ಅಭಿಘಾರ್ಯ ಪ್ರಾಚೀನಮುದೀಚೀನಂ ವೋದ್ವಾಸ್ಯ ಪ್ರತಿಷ್ಠಿತವ್ ಅಭಿಘಾರ್ಯ ಅಗ್ನೇಃ ಉಪಸಮಾಧಾನಾದಿ ಆಜ್ಯಭಾಗಾಂತೇ ಅನ್ವಾರಬ್ಧಾಯಾಂ ಸ್ಥಾಲೀಪಾಕಾಜ್ಜುಹೋತಿ ॥

ವರನು ಆ ಭತ್ತಾದಿಗಳಿಂದ ಲಭಿಸಿದ ಧಾನ್ಯವನ್ನು ಔಪಸನಾಗ್ನಿಯಲ್ಲಿ ಬೇಯಿಸಿ ಅಭಿಘಾರ ಮಾಡಿ (ಆಜ್ಯವನ್ನು ಹಾಕಿ) ಪೂರ್ವ ಅಥವಾ ಉತ್ತರಕ್ಕೋ ಉದ್ವಾಸನೆ ಮಾಡಿ(ತೆಗೆದು) ನಂತರ ಉದ್ವಾಸನೆ ಮಾಡಿ ಇಟ್ಟಂತಹ ಹವಿಸ್ಸಿಗೆ ಅಭಿಗಾರ ಮಾಡಿ ಅಗ್ನಿಯು ಉರಿಸುವಿಕೆಯಿಂದ ಆಜ್ಯಭಾಗಾಂತದವರೆಗೆ ಪ್ರಯೋಗ ಮಾಡಿ ಪತ್ನಿಯೊಂದಿಗೆ ಆ ಸ್ಥಾಲೀಪಾಕದಿಂದ(ಹವಿಸ್ಸು) ಹೋಮಿಸುತ್ತಾನೆ ॥

ಹೋಮದ್ರವ್ಯವನ್ನು ಹೋಮಕ್ಕಾಗಿ ತೆಗೆದುಕೊಳ್ಳುವ ಕ್ರಮ –

೮೬. ಸಕೃದುಪಸ್ತರಣಾಭಿಘಾರಣೇ ದ್ವಿರವದಾನವ್ ॥

ಹೋಮದ ದರ್ವಿಗೆ (ಸ್ರುಕ್) ಸ್ರುವದಿಂದ ೧ ಸಲ ಉಪಸ್ತರಣ ಮಾಡಿ (ಆಜ್ಯ ಹಾಕಿಕೊಂಡು), ಹೋಮದ್ರವ್ಯವನ್ನು ೨ ಸಲ ಹಾಕಿ, ಪುನಃ ೧ ಸಲ ಆಜ್ಯವನ್ನು ಅಭಿಘರಣ ಮಾಡಬೇಕು ॥

೮೭. ಅಗ್ನಿರ್ದೇವತಾ ಸ್ವಾಹಾಕಾರ ಪ್ರಧಾನಃ ॥

ಈ ಆಗ್ನೇಯ ಸ್ಥಾಲೀಪಾಕಕ್ಕೆ ಅಗ್ನಿಯು ದೇವತೆಯು (ಸ್ವಾಹಾಕಾರಕ್ಕೆ ಯೋಗ್ಯನಾದ ಅಗ್ನಿಯು) ॥

೮೮. ಅಪಿ ವಾ ಸಕೃದುಪಹತ್ಯ ಜುಹುಯಾತ್ ॥

ಅಥವಾ ದರ್ವಿಯಲ್ಲಿ ೧ ಸಲ ಸ್ಥಾಲೀಪಾಕದ ಹವಿಸ್ಸನ್ನು ತೆಗೆದುಕೊಂಡೂ ಹೋಮಮಾಡಬಹುದು ಅಥವಾ ಹಿಂದಿನಂತೆ ಚತುರವತ್ತ (೪ ಸಲ) ವಾಗಿಯೂ ಮಾಡಬಹುದು ॥

೮೯. ಅಗ್ನಿಸ್ವಿಷ್ಟಕೃದ್ದ್ವಿತೀಯಃ ॥

ಉಪದೇಶ ಮಾಡಿದ ಪ್ರಧಾನ ಆಹುತಿಯನ್ನು ಹೋಮಿಸಿದ ನಂತರ ಅಗ್ನಿಸ್ವಿಷ್ಟಕೃತ್ ೨ ನೇ ದೇವತೆಯಾಗಿ ಹೋಮ ಮಾಡಬೇಕು ॥

೯೦. ಸಕೃದುಪಸ್ತರಣಾವದಾನೇ ದ್ವಿರಭಿಘಾರಣವ್ ॥

ಈ ಸ್ವಿಷ್ಟಕೃತ್ ದೇವತೆಗೆ ೧ ಸಲ ಉಪಸ್ತರಣ, ೧ ಸಲ ಅವದಾನ, ೨ ಸಲ ಅಭಿಘರಣ ಮಾಡಬೇಕು ॥

೯೧. ಮಧ್ಯಾತ್ ಪೂರ್ವಸ್ಯಾವದಾನವ್ ॥

ಪ್ರಧಾನ ದೇವತೆಗಳಿಗೆ ಹವಿಸ್ಸಿನ ಮಧ್ಯದಿಂದ ಪೂರ್ವಭಾಗದಲ್ಲಿ ಅವದಾನ ಮಾಡಬೇಕು, ಇದು ಮುಖಾಂತ ಹೋಮದಲ್ಲಿ ಮತ್ತು ಶ್ರೌತ ಕರ್ಮಗಳಲ್ಲಿ ಪ್ರಧಾನ ಆಹುತಿಗಳಲ್ಲಿ ಅವದಾನದ ಕ್ರಮ ॥

೯೨. ಮಧ್ಯೇ ಹೋಮಃ ॥

ಪ್ರಧಾನ ಆಹುತಿಗಳನ್ನು ಅಗ್ನಿಯ ಮಧ್ಯದಲ್ಲಿಯೇ ಹೋಮಿಸಬೇಕು ॥

೯೩. ಉತ್ತರಾರ್ಧಾದುತ್ತರಸ್ಯ ॥

ಸ್ವಿಷ್ಟಕೃದ್ದೇವತೆಗಳಿಗೆ ಹವಿಸ್ಸಿನ ಉತ್ತರಾರ್ಧದಲ್ಲಿ ಅವದಾನ ಮಾಡಬೇಕು ॥

೯೪. ಉತ್ತರಾರ್ಧ ಪೂರ್ವಾರ್ಧೇ ಹೋಮಃ ॥

ಈ ಸ್ವಿಷ್ಟಕೃದ್ದೇವತೆಯ ಹೋಮವನ್ನು ಅಗ್ನಿಯ ಈಶಾನ್ಯದಲ್ಲಿ ಮಾಡಬೇಕು, ಬೇರೆ ಪ್ರಧಾನ ಆಹುತಿಗಳ ಜೊತೆ ಈ ಸ್ವಿಷ್ಟಕೃತ್ ಆಹುತಿ ಸೇರಿಸಬಾರದು ॥

೯೫. ಲೇಪಂಯೋಃ ಪ್ರಸ್ತರವತ್ ತೂಷ್ಣೀಂ ಬರ್ಹಿರಂಕ್ತ್ವಾಗ್ನೌ ಪ್ರಹರತಿ ॥

ಲೇಪಕಾರ್ಯವನ್ನು ಪ್ರಸ್ತರದಂತೆ ತೂಷ್ಣೀಂ (ಅಮಂತ್ರಕವಾಗಿ) ಆಗಿ ದರ್ಭೆಗೆ ಲೇಪಿಸಿ ಪ್ರಸ್ತರದಂತೆಯೇ ಅಗ್ನಿಯಲ್ಲಿ ಹಾಕಬೇಕು, ದರ್ವಿಯಲ್ಲಿ ದರ್ಭೆಯ ಅಗ್ರಭಾಗವನ್ನು ಅದ್ದಬೇಕು, ಸ್ರುವದಲ್ಲಿ ದರ್ಭೆಯ ಮಧ್ಯಭಾಗವನ್ನು ಅದ್ದಬೇಕು, ಆಜ್ಯ ಪಾತ್ರೆಯಲ್ಲಿ ದರ್ಭೆಯ ಬುಡವನ್ನು ಅದ್ದಬೇಕು, ಹೀಗೆ ೨ ಸಲ ಅಥವಾ ೩ ಸಲ ಮಾಡಬೇಕು ॥

೯೬. ಸಿದ್ಧಮುತ್ತರಂ ಪರಿಷೇಚನಂ ॥

ನಂತರ ಪ್ರಣೀತಾಮೋಕ್ಷಣ, ಬ್ರಹ್ಮೋದ್ವಾಸನೆಗಳನ್ನು ಮಾಡಿ ಪರಿಷೇಚನ ಮಾಡಬೇಕು ॥

ಶ್ರೀಹರದತ್ತರ ಭಾಷ್ಯ –

ಉತ್ತರಂ ತಂತ್ರಂ ಜಯಾದಿ ಯಥಾಸಿದ್ಧಂ ಅತ್ರಾಪಿ ಕರ್ತವ್ಯಂ ಇತ್ಯರ್ಥಃ । ಕಥಂ ಚ ಸಿದ್ಧಂ ? । ಉಪಜುಹೋತಿ ಇತಿ ವಚನಾತ್ । ಅತ್ರ ಕೃತ್ವಾ ಇತಿ ಅಧ್ಯಾಹರ್ತವ್ಯಂ । ಪರಿಷೇಚನಂ ಕೃತ್ವಾ, ಪರಿಷೇಚನಾಂತಂ ಕೃತ್ವಾ ಇತ್ಯರ್ಥಃ । ಕಿಮರ್ಥಮಿದಂ ?, ಪರಿಷೇಚನಾಂತೇ ಬ್ರಾಹ್ಮಣಭೋಜನಾದ್ಯೇವ ಕರ್ಮ ಪ್ರತಿಪಾದ್ಯೇತ ನಾನ್ಯದಿತಿ ಏವಮರ್ಥಂ । ಅನ್ಯೇ ತು ಸಿದ್ಧಮುತ್ತರಂ ಪರಿಷೇಚನಂ ಇತಿ ಏಕಮೇವ ಯೋಗಂ ಪಠಂತಃ ವ್ಯಾಚಕ್ಷತೇ । ತೇ ನ ಇಹ ಸ್ಥಾಲೀಪಾಕೇ ಪ್ರಧಾನಹೋಮಾನಂತರಂ ತಂತ್ರಶೇಷಸ್ಯ ಪ್ರಾಪ್ತಸ್ಯ ಪರಿಷೇಚನಮೇವ ಸಿದ್ಧಂ, ಅನ್ಯತ್ ಅಸಿದ್ಧಂ ಇತಿ । ತೇನ ಉಪಹೋಮಾನಮಿಹ ಲೋಪಃ ಚೋದ್ಯತೇ ಇತಿ । ತೇಷಾಂ ಉತ್ತರಮಿತಿ ವ್ಯರ್ಥಮ್ ॥

ಪ್ರಧಾನ ಹೋಮವಾದ ಮೇಲೆ, ಉತ್ತರತಂತ್ರವಾದ ಜಯಾದಿಯನ್ನು ಕರ್ತವ್ಯವಾಗಿ ಇಲ್ಲಿ ಮಾಡಬೇಕು । ಇದು ಹೇಗೆ ಸಾಧುವಾಗುತ್ತದೆಂದರೆ ? । "ಉಪಜುಹೋತಿ" ಎಂಬ ವಚನವಿರುವುದರಿಂದ । ಇಲ್ಲಿ, "ಕೃತ್ವಾ" ಎಂಬ ಪದವನ್ನು ಅಧ್ಯಾಹಾರ ಮಾಡಿಕೊಳ್ಳಬೇಕು । ಹೇಗೆಂದರೆ – ಪರಿಷೇಚನಂ ಕೃತ್ವಾ, ಪರಿಷೇಚನವನ್ನು ಮಾಡಿ ಎಂದರ್ಥ । ಏತಕ್ಕಾಗಿ ಅಧ್ಯಾಹಾರವನ್ನು ಮಾಡಿಕೊಳ್ಳಬೇಕೆಂದರೆ, ಬ್ರಾಹ್ಮಣ ಭೋಜನಾದಿ ಮುಂದಿನ ಕರ್ಮಗಳನ್ನು ಇಲ್ಲಿ ವಿಧಿಸುತ್ತಿದೆ, ಬೇರೆ ಯಾವುದನ್ನೂ ವಿಧಿಸುತ್ತಿಲ್ಲ ಎಂಬುದನ್ನು ತೋರಿಸುವುದಕ್ಕಾಗಿ । ಆದರೆ ಕೆಲವರು, ಸಿದ್ಧಮುತ್ತರಂ ಪರಿಷೇಚನಂ ಎಂದು ಒಂದೇ ವಾಕ್ಯವಾಗಿ ಪಠಿಸುತ್ತಾ, ಕೆಳಗೆ ಹೇಳುವಂತೆ ವ್ಯಾಖ್ಯಾನಿಸುತ್ತಾರೆ । ಹೇಗೆಂದರೆ – ಸ್ಥಾಲೀಪಾಕದಲ್ಲಿ ಪ್ರಧಾನಹೋಮವಾದಮೇಲೆ ಉಳಿದ ತಂತ್ರಕ್ಕಾಗಿ ಪರಿಷೇಚನವನ್ನೇ ಮಾಡಬೇಕು, ಜಯಾದಿಗಳನ್ನು ಮಾಡಬೇಕಾಗಿಲ್ಲ ಎಂಬುದಕ್ಕಾಗಿ ಒಂದು ವಾಕ್ಯದಿಂದ ವಿಧಿಸಿದೆ ಎಂದು ವ್ಯಾಖ್ಯಾನಮಾಡುತ್ತಾರೆ । ಇದರಿಂದ ಇಲ್ಲಿ ಜಯಾದಿಗಳು ಇಲ್ಲ ಎಂಬುದು ಹೇಳಲ್ಪಟ್ಟಿದೆ ಎಂದು ವ್ಯಾಖ್ಯಾನಿಸುತ್ತಾರೆ । ಅವರ ಮತಾನುಸಾರ ಅರ್ಥವನ್ನು ಮಾಡಿದರೆ,

"ಉತ್ತರಂ" ಎಂಬ ಪದವು ಅರ್ಥವಿಲ್ಲದ್ದಾಗುತ್ತದೆ । ಆದ್ದರಿಂದ ಇಲ್ಲಿ ಪ್ರಧಾನಹೋಮವಾದ ಮೇಲೆ ಜಯಾದಿಗಳನ್ನು ಮಾಡಿ ನಂತರ ಬರ್ಹಿಸ್ಸಿನ ಪ್ರಹರಣವನ್ನು ಮಾಡಬೇಕು ॥

ಶ್ರೀಸುದರ್ಶನಾಚಾರ್ಯರ ಭಾಷ್ಯ –

ಅತ್ರ ವಚನ ಅಭಾವಾತ್ ಜಯಾದಿ ನಿವೃತ್ತೌ ಸತ್ಯಾಂ ತದ್ಬದ್ಧಕ್ರಮಂ ಅಪಿ ಪರಿಷೇಚನಂ ನ ನಿವರ್ತತೇ ಅಗ್ನಿ ಅಂಗತ್ವಾತ್ ಇತ್ಯತ್ರ ಆಹ ।

ಇಲ್ಲಿ, ಸೂತ್ರದಲ್ಲಿ ಹೇಳದೇ ಇರುವುದರಿಂದ ಜಯಾದಿಗಳು ಇಲ್ಲ. ಆದರೆ ಆ ಜಯಾದಿಕ್ರಮದಿಂದ ಬಂದಂತಹ ಪರಿಷೇಚನವು ಉಂಟು. ಏಕೆಂದರೆ, ಪರಿಷೇಚನವು ಅಗ್ನಿಗೆ ಅಂಗವಾಗಿ ಇರುವುದರಿಂದ। ಅದಕ್ಕಾಗಿ ಮೇಲಿನ ಸಿದ್ಧಮುತ್ತರಂ ಎಂಬ ಸೂತ್ರವನ್ನು ಹೇಳಿದೆ ॥

ಕೇಚಿತ್,

ಸಿದ್ಧಮುತ್ತರಂ ಇತಿ, ಪದದ್ವಯಂ ಏಕವಾಕ್ಯಂ । ಸಿದ್ಧಂ ಅವಿಕೃತಂ । ಉತ್ತರಂ ತಂತ್ರಶೇಷಂ ಜಯಾದಿ । ಏತಚ್ಚ ಇಹ ಉತ್ಕೃಷ್ಯ ಪಠಿತಮಪಿ ಯಥೋಪದೇಶಂ ಪ್ರಧಾನ ಆಹುತೀಃ ಹುತ್ವಾ ಜಯ ಅಭ್ಯಾತಾನಾನ್ (ಆ. ಗೃ. ಸೂ. ೨–೭), ಇತಿ ಶ್ರೌತಕ್ರಮಸ್ಯ ಬಲೀಯಸ್ತ್ವಾತ್ ಪ್ರಧಾನತುಲ್ಯಧರ್ಮಕ ಸ್ವಿಷ್ಟಕೃತಃ ಅನಂತರಮೇವ । ತಥಾ ಪರಿಷೇಚನಂ ಇತ್ಯಪಿ ಅನಂತರ್ಯಂ ವಿದ್ಧ್ಯರ್ಥಂ । ಪರಿಷೇಚನಾಂತಂ ಕೃತ್ವಾ ಬ್ರಾಹ್ಮಣಭೋಜನಂ ಏವೇತಿ ॥

ಕೆಲವರು, ಸಿದ್ಧಮುತ್ತರಂ ಎಂಬ ಎರಡುಪದವು ಒಂದು ವಾಕ್ಯವು । ಪರಿಷೇಚನಂ ಎಂಬುದು ಬೇರೇ ವಾಕ್ಯವು । ಹೇಗೆಂದರೆ, ಸಿದ್ಧಂ ಎಂಬ ಪದದಿಂದ ಸಾಮಾನ್ಯವಾದ ಕರ್ಮಗಳಾದ ಉತ್ತರಶೇಷಕರ್ಮವಾದ ಜಯಾದಿಗಳನ್ನು ಹೇಳುತ್ತಿದೆ। ಈ ಜಯಾದಿಗಳನ್ನು ಇಲ್ಲಿ ಬಿಟ್ಟು ಹೇಳಿದ್ದರೂ ಕೂಡ, ಸಾಮಾನ್ಯಸೂತ್ರಗಳಲ್ಲಿ ಉಪದಿಷ್ಟವಾದ ಪ್ರಧಾನಾಹುತಿಗಳನ್ನು ಮಾಡಿ, ಜಯ – ಅಭ್ಯಾತಾನಗಳನ್ನು ಮಾಡಿ, ಎಂದು ಶ್ರೌತಕ್ರಮವನ್ನು ವಿಧಿಸಿರುವುದರಿಂದ ಅದೇ ಬಲವತ್ತಾಗಿರುವುದರಿಂದ, ಪ್ರಧಾನ ಆಹುತಿಗಳಿಗೆ ಸಮಾನವಾದ ಧರ್ಮವನ್ನುಳ್ಳ ಸ್ವಿಷ್ಟಕೃತ್ ಆಹುತಿಯ ನಂತರ ಈ ಜಯಾದಿಗಳನ್ನು ಮಾಡಿ ಎಂದು ಅರ್ಥವು ತೋರಿಬರುತ್ತದೆ। ಹಾಗೆಯೇ ಪರಿಷೇಚನಂ ಎಂಬ ಪದವು ಈ ಜಯಾದಿಗಳನ್ನು

ಮಾಡಿದಮೇಲೆ ಪರಿಷೇಚನವನ್ನು ಮತ್ತು ಅದರನಂತರ ಬ್ರಾಹ್ಮಣಭೋಜನವನ್ನು ವಿಧಿಸುವುದಕ್ಕೆ ಬಂದಿದೆ । ಪರಿಷೇಚನಾಂತದವರೆಗೆ ಮಾಡಿ, ಬ್ರಾಹ್ಮಣಭೋಜನವನ್ನು ಮಾಡಿಸಬೇಕೆಂದು ಅರ್ಥ । ಹೀಗೆಂದು ಕೆಲವರು ಅರ್ಥಮಾಡುತ್ತಾರೆ ॥

ತನ್ನ,

ಸಿದ್ಧಮುತ್ತರಂ ಪರಿಷೇಚನಂ ಇತಿ ಪ್ರತೀತ ಅಭ್ಯರ್ಹಿತಸಾಮಾನ್ಯಾಧಿಕರಣ್ಯ ಅನ್ವಯಬಾಧೇನ ಮಹಾದೋಷ ವಾಕ್ಯಭೇದ ಕಲ್ಪನಾಪೇಕ್ಷತ್ವಾತ್ । ತಥಾ ವಚನಾಭಾವಾತ್ ಇಹ ಜಯಾದ್ಯೇವ ನಾಸ್ತಿ, ದೂರೇ ಕ್ರಮಬಲಾಬಲಕಥಾ । ತಥಾ ಪರಿಷೇಚನಂ ಇತಿ ಅಸ್ಯಾಪಿ ಸಿದ್ಧಮುತ್ತರಂ ಇತ್ಯೇತತ್ ಅನ್ವಯನಿರಾಕಾಂಕ್ಷತ್ವಾತ್ ಕೃತ್ವೇತಿ ಅಧ್ಯಾಹಾರಃ ನಿರ್ಬೀಜಃ । ಆನಂತರ್ಯಂ ತು ಪಾಠಪ್ರಾಪ್ತಂ ನ ವಿಧೇಯಮೇವ । ತಸ್ಮಾತ್ ವರಂ ಯಥೋಕ್ತ ಶಂಕಾನಿವೃತ್ಯರ್ಥಂ ಏವ ಇದಂ ಸೂತ್ರಮಿತಿ ।

ಆದರೆ ಈ ಅಭಿಪ್ರಾಯವು ಸರಿಯಲ್ಲ । ಪರಿಷೇಚನಂ ಎಂಬ ಪದವು, ಹಿಂದೆ ತಿಳಿದುಬರುತ್ತಿರುವ, ಎಲ್ಲರಿಗೂ ಸರಿಯೆಂದು ತೋರುವ ಸಮಾನವಾದ ಲಿಂಗವಚನಗಳಿಂದ ಕೂಡಿದ, ಸಿದ್ಧಂ ಉತ್ತರಂ ಎಂಬ ಪದಗಳಿಗೆ ನೀವು ಹೇಳಿದರೀತಿಯಲ್ಲಿ ಅರ್ಥಮಾಡಿದರೆ ಅನ್ವಯವಾಗುವುದಿಲ್ಲ । ಇದರಿಂದ ವಾಕ್ಯಭೇದ ಉಂಟಾಗಿ ಮಹಾದೋಷಯುಕ್ತವಾದ ಕಲ್ಪನೆಗೆ ಕಾರಣವಾಗುತ್ತದೆ। ಆದ್ದರಿಂದ ಇಲ್ಲಿ ಜಯ ಮುಂತಾದವುಗಳನ್ನು ಮಾಡಬೇಕೆಂಬ ವಚನ ಇಲ್ಲದಿರುವುದರಿಂದ, ಜಯಾದಿಗಳು ನಿಶ್ಚಯವಾಗಿಯೂ ಇಲ್ಲ । ಕ್ರಮದ ಬಲಾಬಲದ ವಿಷಯವು ಇಲ್ಲಿಗೆ ಅನ್ವಯವಾಗುವುದಿಲ್ಲ(ಸಂಬಂಧಿಸುವುದಿಲ್ಲ) । ಹಾಗೂ ಪರಿಷೇಚನಂ ಎಂಬ ಪದಕ್ಕೆ ಸಿದ್ಧಂ – ಉತ್ತರಂ ಎಂಬ ಈ ಎರಡುಪದಗಳು ಸಂಬಂಧಿಸುವುದಕ್ಕೆ ಬೇರೇಪದಗಳ ಅಗತ್ಯವಿಲ್ಲ । ಆದ್ದರಿಂದ ಇಲ್ಲಿ ಕೃತ್ವಾ ಎಂದು ಅಧ್ಯಾಹಾರ ಮಾಡುವುದಕ್ಕೆ ಕಾರಣವಿಲ್ಲ । ಆನಂತರ ಮಾಡುವುದು ಎಂಬುದು, ಪಾಠದಿಂದಲೇ ಪ್ರಾಪ್ತವಾಗಿದೆಯಾದ್ದರಿಂದ ಅದನ್ನು ಪ್ರತ್ಯೇಕವಾಗಿ ವಿಧಿಸಬೇಕಾಗಿಲ್ಲ । ಆದ್ದರಿಂದ ಹಿಂದೆ ಹೇಳಿದ ಸಂಶಯವನ್ನು ಪರಿಹರಿಸುವುದಕ್ಕಾಗಿಯೇ (ಪರಿಷೇಚನವು ಉಂಟೇ ಇಲ್ಲವೇ ಎಂಬ ಸಂಶಯವನ್ನು ಪರಿಹರಿಸಲು) ಈ ಸೂತ್ರವನ್ನು ವಿಧಿಸಿದ್ದಾರೆ ॥

೯೭. ತೇನ ಸರ್ಪಿಷ್ಮತಾ ಬ್ರಾಹ್ಮಣಂ ಭೋಜಯೇತ್ ॥

ನಂತರ ಆ ಉಳಿದ ಆಜ್ಯಯುಕ್ತ ಹವಿಸ್ಸಿನಿಂದ ಬ್ರಹ್ಮನನ್ನು ಊಟಮಾಡಿಸಬೇಕು ॥

೯೮. ಯೋಸ್ಯಾವಚಿತಸ್ತಸ್ಮಾ ಋಷಭಂ ದದಾತಿ ॥

ಈ ವರನಿಗೆ ಯಾರು ಶ್ರೋತ್ರಿಯರೋ ಅವರಿಗೆ ೧ ವೃಷಭವನ್ನು ದಾನ ಮಾಡಬೇಕು ॥

೯೯. ಏವಮತ ಊರ್ಧ್ವಂ ದಕ್ಷಿಣಾವರ್ಜಮುಪೋಷಿತಾಭ್ಯಾಂ ಪರ್ವಸು ಕಾರ್ಯಃ ॥

ಹೀಗೆಯೇ ಇಲ್ಲಿಂದ ಮುಂದೆ ಪ್ರತೀಸ್ಥಾಲೀಪಾಕದಲ್ಲೂ ಈ ಆಗ್ನೇಯ ಸ್ಥಾಲೀಪಾಕದಲ್ಲಿ ಹೇಳಿದ ರೀತಿಯೇ ಸ್ಥಾಲೀಪಾಕದ ಹಿಂದಿನ ದಿನ ಇಬ್ಬರೂ ಉಪವಾಸವಿದ್ದು, ಸ್ಥಾಲೀಪಾಕವನ್ನು ಮಾಡಬೇಕು, ವೃಷಭದಕ್ಷಿಣೆಯನ್ನು ಮಾತ್ರ ಬಿಟ್ಟು ॥

ೌಪಾಸನ ಹೋಮ –

೧೦೦. ಪೂರ್ಣಪಾತ್ರಸ್ತು ದಕ್ಷಿಣೇತ್ಯೇಕೇ ॥

ಕೆಲವರು ಪ್ರತಿಪರ್ವಸ್ಥಾಲೀಪಾಕದಲ್ಲೂ ಧಾನ್ಯತುಂಬಿದ ಪೂರ್ಣಪಾತ್ರೆಯನ್ನು ದಾನ ಮಾಡಬೇಕು ಎನ್ನುತ್ತಾರೆ, ಪೂರ್ಣಪಾತ್ರೆ ಎಂದರೆ– ೮ ಮುಷ್ಟಿಗೆ 'ಕಿಂಚಿತ್' ಎಂದೂ ೩೨ ಮುಷ್ಟಿಗೆ 'ಪುಷ್ಕಲ' ಎಂದೂ ೧೨೮ ಮುಷ್ಟಿಗೆ ಅಥವಾ ತುಂಬುವವರೆಗೆ 'ಪೂರ್ಣ ಪಾತ್ರೆ' ಎಂದೂ ಹೆಸರು ॥

೧೦೧. ಸಾಯಂ ಪ್ರಾತರತ ಊರ್ಧ್ವಂ ಹಸ್ತೇನೈತೇ ಆಹುತೀ ತಂಡುಲೈಃ ಯುವೈವಾ ಜುಹುಯಾತ್ ॥

ಇಲ್ಲಿಂದ ಮುಂದೆ ಪ್ರತಿದಿನ ಬೆಳಿಗ್ಗೆ ಮತ್ತು ಸಂಜೆ ಕೈಯಿಂದ ಈ ೨ ಆಹುತಿಗಳನ್ನು ಅಕ್ಕಿಯಿಂದಲೋ, ಗೋಧಿಯಿಂದಲೋ ಅಗ್ನಿಗೆ ಹೋಮಿಸಬೇಕು ॥

೧೦೨. ಸ್ಥಾಲೀಪಾಕವದ್ದೈವತಮ್ ॥

ಈ ಆಹುತಿಗಳಿಗೆ ಸ್ಥಾಲೀಪಾಕದಂತೆ ದೇವತೆಗಳು ॥

೧೦೩. ಸೌರೀ ಪೂರ್ವಾಹುತಿಃ ಪ್ರಾತರಿತ್ಯೇಕೇ ॥

ಕೆಲವರು ಬೆಳಗಿನ ಮೊದಲ ಆಹುತಿ ಸೂರ್ಯದೇವತಾಕವಾದುದು ಎನ್ನುತ್ತಾರೆ ॥

೧೦೪. ಉಭಯತಃ ಪರಿಷೇಚನಂ ಯಥಾಪುರಸ್ತಾತ್ ॥

ಈ ೨ ಆಹುತಿಗಳ ಹೋಮದ ಮೊದಲು ಮತ್ತು ನಂತರ ಅಗ್ನಿಪರಿಷೇಚನವು ಹಿಂದಿನಂತೆಯೇ ಇರುತ್ತದೆ ॥

೧೦೫. ಪಾರ್ವಣೇನಾತೋಽನ್ಯಾನಿ ಕರ್ಮಾಣಿ ವ್ಯಾಖ್ಯಾತಾನ್ಯಾಚಾರಾದ್ಯಾನಿ ಗೃಹ್ಯಂತೇ ॥

ವೈವಾಹಿಕ ಸ್ಥಾಲೀಪಾಕದಿಂದ ಬೇರೆ ಸರ್ಪಬಲಿ ಮುಂತಾದ ಆಚಾರದಿಂದ ಬಂದ ಕರ್ಮಗಳೂ ಕೂಡ ಹೇಳಿದಂತೆ ಆಯಿತು, ಎಂದರೆ ಈ ಸ್ಥಾಲೀಪಾಕದ ಧರ್ಮವನ್ನು ಅಲ್ಲಿಯೂ ಸೇರಿಸಿಕೊಳ್ಳಬೇಕು ॥

೧೦೬. ಯಥೋಪದೇಶಂ ದೇವತಾಃ ॥

ಹೇಗೆ ಶಾಸ್ತ್ರದಲ್ಲಿ ವಿಧಿಸಿದೆಯೋ ಹಾಗೆಯೇ ಪ್ರಧಾನ ದೇವತೆಗಳು, ಸರ್ಪಬಲಿ ಮುಂತಾದ ಕರ್ಮಗಳಲ್ಲಿ ॥ ಆಯಾಯಾ ಕರ್ಮಕ್ಕೆ ಉಪದೇಶಿಸಲ್ಪಟ್ಟ ದೇವತೆಗಳೇ ಪ್ರಧಾನರು, ಅವರಿಗೇ ಆಹುತಿಗಳನ್ನು ಕೊಡುವುದು ॥

೧೦೭. ಅಗ್ನಿಂ ಸ್ವಿಷ್ಟಕೃತಂ ಚಾಂತರೇಣ ॥

ಅಗ್ನಿ ಸ್ವಿಷ್ಟಕೃತ್ತನ್ನು ಬಿಟ್ಟು ಬೇರೆ ಪ್ರಧಾನ ದೇವತೆಗಳು ಆ ಕರ್ಮಗಳಲ್ಲಿ ಉಪದೇಶ ಮಾಡಿರುವಂತೆ ॥

೧೦೮. ಅವಿಕೃತಮಾತಿಥ್ಯಮ್ ॥

ಅತಿಥಿಯ ಧರ್ಮ ಎನ್ನುವುದು ಹಿಂದೆ ಹೇಳಿದಂತೆ ॥

೧೦೯. ವೈಶ್ವದೇವೇ ವಿಶ್ವೇದೇವಾಃ ॥

ವೈಶ್ವದೇವದಲ್ಲಿ ವಿಶ್ವೇದೇವತೆಗಳೇ ದೇವತೆಗಳು ॥

೧೧೦. ಪೌರ್ಣಮಾಸ್ಯಾಂ ಪೌರ್ಣಮಾಸೀ ಯಸ್ಯಾಂ ಕ್ರಿಯತೇ ॥

ಯಾವ ಶ್ರಾವಣ ಅಥವಾ ಮಾರ್ಗಶಿರ ಪೌರ್ಣಮಾಸಿಯಲ್ಲಿ ಸ್ಥಾಲೀಪಾಕಕ್ಕೆ ಪೌರ್ಣಮಾಸಿ ದೇವತೆಯೋ ಅದೇ ಪ್ರತೀ ಪೌರ್ಣಮಾಸೀ ಸ್ಥಾಲೀಪಾಕಕ್ಕೂ ದೇವತೆಯೂ ॥

೧೧೧. ಸರ್ವತ್ರ ಸ್ವಯಂ ಪ್ರಜ್ವಲಿತೇಽಗ್ನಾ ಉತ್ತರಾಭ್ಯಾಂ ಸಮಿಧಾ ವಾ ದಧ್ಯಾತ್॥

ಎಲ್ಲಾಕರ್ಮಗಳಲ್ಲೂ ಅಗ್ನಿಯು ತಾನೇ ಪ್ರಜ್ವಲಿಸಿದರೆ ಅಂತಹಾ ಅಗ್ನಿಯಲ್ಲಿ ಮುಂದೆಹೇಳುವಂತಹ ಉದ್ದೀಪ್ಯಸ್ವ....., ಮಂತ್ರಗಳಿಂದ ಸಮಿತ್ತನ್ನು ಆಧಾನ ಮಾಡಬೇಕು ಪ್ರಸ್ತರ ಪ್ರಹರಣದಲ್ಲಿ ಮತ್ತು ಆದಧಾತಿ ಪ್ರಹರತಿ ಎಂಬ ಜಾಗದಲ್ಲಿ ಸ್ವಾಹಾಕಾರವಿಲ್ಲ ॥

೧೧೨. ಆಪನ್ಮಾಶ್ರೀಃ ಶ್ರೀರ್ಮಾಗಾದಿತಿ ವಾ ॥

ಉದ್ದೀಪ್ಯಸ್ವ....., ಮಂತ್ರದಲ್ಲಿ ಆಪನ್ಮಾ ಎಂಬ ಯಜುರ್ವ್ಯಯವನ್ನು ವಿಕಲ್ಪವಾಗಿ ವಿಧಿಸಿದೆ ॥

೧೧೩. ಏತದಹರ್ವಿಜಾನೀಯಾತ್ ಯದಹರ್ಭಾರ್ಯಾಮಾವಹತೇ ॥

ಯಾವ ಹಗಲಿನಲ್ಲಿ ಗೃಹಪ್ರವೇಶದಿಂದ ಹಿಡಿದು ಸ್ಥಾಲೀಪಾಕಾಂತದವರೆಗೆ ಕರ್ಮವನ್ನು ಮಾಡುತ್ತಾನೋ ಆ ಹಗಲನ್ನು ಗಡಿಯಾಗಿಟ್ಟುಕೊಂಡು ॥

ಬ್ರಹ್ಮಚರ್ಯ ಮತ್ತು ಆಹಾರ ನಿಯಮ –

೧೧೪. ತ್ರಿರಾತ್ರ ಮುಭಯೋರಧಶ್ಶಯ್ಯಾ ಬ್ರಹ್ಮಚರ್ಯಂ ಕ್ಷಾರ ಲವಣ ವರ್ಜನಂ ಚ ॥

ಮುಂದಿನ ತ್ರಿರಾತ್ರಿಯಲ್ಲಿ ಬ್ರಹ್ಮಚರ್ಯವನ್ನು ಮಾಡಬೇಕು, ನೆಲದಮೇಲೆ ಮಲಗಬೇಕು, ಹಾಗೂ ಉಪ್ಪುಖಾರಗಳನ್ನು ಬಿಡಬೇಕು ॥

೧೧೫. ತಯೋಃ ಶಯ್ಯಾಮಂತರೇಣ ದಂಡೋ ಗಂಧಲಿಪ್ತೋ ವಾಸಸಾ ಸೂತ್ರೇಣ ವಾ ಪರಿವೀತಸ್ತಿಷ್ಠತಿ ॥

ಅವರಿಬ್ಬರ ನಡುವೆ ಗಂಧಲಿಪ್ತವಾಡ ದಾರ ಅಥವಾ ವಸ್ತ್ರದಿಂದ ಸುತ್ತಲ್ಪಟ್ಟಂತಹ ದಂಡ ಇರುತ್ತದೆ ॥

ಶೇಷಹೋಮ ಮತ್ತು ಪ್ರಸ್ಥ –

೧೧೬. ತಂ ಚತುರ್ಥ್ಯಾಪರ ರಾತ್ರ ಉತ್ತರಾಭ್ಯಾಂ ಉತ್ಥಾಪ್ಯ ಪ್ರಕ್ಷಾಳ್ಯ ನಿಧಾಯ ।

ಅಗ್ನೇಃ ಉಪಸಮಾಧಾನಾದಿ ಆಜ್ಯಭಾಗಾಂತೇ ಅನ್ವಾರಬ್ಧಾಂಯಾವುತ್ತರಾ ಆಹುತೀರ್ಹುತ್ವಾ । ಜಯಾದಿ ಪ್ರತಿಪದ್ಯತೇ ಪರಿಷೇಚನಾಂತಂ ಕೃತ್ವಾ ।

ಅಪರೇಣಾಗ್ನಿಂ ಪ್ರಾಚೀಂ ಉಪವೇಶ್ಯ ತಸ್ಯಾಶ್ಶಿರಸ್ಯಾಜ್ಯ ಶೇಷಾದ್ವ್ಯಾಹೃತೀಭಿಃ ಓಂಕಾರ ಚತುರ್ಥಾಭಿಃ ಆನೀಯ ಉತ್ತರಾಭ್ಯಾಂ ಯಥಾಲಿಂಗಂ ಮಿಥಸ್ಸಮೀಕ್ಷ್ಯ ।

ಉತ್ತರಯಾssಜ್ಯಶೇಷೇಣ ಹೃದಯ ದೇಶೌ ಸಂಮೃಜ್ಯ । ಉತ್ತರಾಸ್ತಿಸ್ರೋ ಜಪಿತ್ವಾ । ಶೇಷಂ ಸಮಾವೇಶನೇ ಜಪೇತ್ ॥

ಆ ವಿಶ್ವಾವಸು ದಂಡವನ್ನು ೪ ನೇದಿನ ಅರ್ಧರಾತ್ರಿಯಲ್ಲಿ ಮುಂದಿನ ಉದೀಷ್ವರ್ತ....., ೨ ಮಂತ್ರಗಳಿಂದ ಮೇಲಕ್ಕೆತ್ತಿ ತೊಳೆದು ಹಾಸಿಗೆಯಿಂದ ಬೇರೆಕಡೆ ಹಾಕಬೇಕು । ಅಗ್ನಿಪ್ರತಿಷ್ಠೆಯೇ ಮೊದಲಾದ ಪ್ರಯೋಗವನ್ನು ಆರಂಭಿಸಿ ಆಜ್ಯಭಾಗಾಂತದವರೆಗೆ ಮಾಡಿ ವಧುವಿನ ಜೊತೆ ಮುಂದಿನ ಅಗ್ನೇ....., ೭ ಮಂತ್ರಗಳಿಂದ ೭ ಆಹುತಿಗಳನ್ನು ಕೊಟ್ಟು । ಜಯಾದಿಯನ್ನು ಮಾಡಿ ಪ್ರಣೀತಾಮೋಕ್ಷಣಾಂತವಾಗಿ ಮಾಡಿ ।

ಅಗ್ನಿಯ ಪಶ್ಚಿಮದಲ್ಲಿ ವಧುವನ್ನು ಪೂರ್ವಾಭಿಮುಖವಾಗಿ ಕೂರಿಸಿ ಹೋಮಶೇಷದ ಆಜ್ಯವನ್ನು ತೆಗೆದುಕೊಂಡು ವಧುವಿನ ತಲೆಯಮೇಲೆ ಆ ಆಜ್ಯಶೇಷವನ್ನು ವ್ಯಾಹೃತಿಗಳಿಂದ ಓಂಕಾರ ೪ ನೆಯದಾಗಿವುಳ್ಳ ಸ್ವಾಹಾಕಾರಾಂತವಾಗಿ, ಕೊನೆಗೆ ೧ ಸಲ ಹಾಕಬೇಕು ನಂತರ ಮುಂದಿನ ಅಪಶ್ಯಂತ್ವಾ....., ೨ ಮಂತ್ರಗಳಿಂದ ಕ್ರಮವಾಗಿ ವಧೂ ವರರು ಒಟ್ಟಿಗೇ ವೀಕ್ಷಣೆ ಮಾಡಿಕೊಂಡು ।

ಮುಂದಿನ ಸಮಂಜಂತು....., ಮಂತ್ರದಿಂದ ಇಬ್ಬರ ಹೃದಯ ದೇಶವನ್ನು ಅಂಗುಷ್ಠ ಅನಾಮಿಕ ಬೆರಳುಗಳಿಂದ ವರನು ಮುಟ್ಟಬೇಕು । ಮುಂದಿನ ಪ್ರಜಾಪತೇ ತನ್ವಂ....., ೩ ಮಂತ್ರಗಳನ್ನು ಜಪಿಸಿ । ಆರೋಹೋರುಂ....., ಮುಂತಾದ ಮಂತ್ರಗಳನ್ನು ಸಮಾವೇಶನದಲ್ಲಿ ಜಪಿಸಬೇಕು ॥

....*********....

ವಿವಾಹಃ – ಪ್ರಯೋಗಃ

ಶಾಸ್ತ್ರೀಯ ವಿವಾಹದ ಹಂತಗಳು – ವಿಮರ್ಶೆ–

೧. ವ್ರತೋಪಕ್ರಮ, ವ್ರತೋತ್ಸರ್ಜನಗಳನ್ನು ವಿವಾಹದ ಹಿಂದಿನ ದಿನವೇ ಮಾಡಿಕೊಳ್ಳಬೇಕೆಂಬ ನಿಯಮವಿಲ್ಲ, ವಿವಾಹಕ್ಕೆ ಮೊದಲು, ಯಾವಾಗ ಬೇಕಾದರೂ ಮಾಡಿಕೊಳ್ಳಬಹುದು ಎಂಬುದು ಗೃಹ್ಯಸೂತ್ರಗಳನ್ನು ತಿಳಿದವರಿಗೆ ಗೊತ್ತಿರುತ್ತದೆ.

೨. ಹಾಗೂ ವೇದವೇ ಗೊತ್ತಿಲ್ಲ, ಅಧ್ಯಯನ ಇಲ್ಲವೇಇಲ್ಲ, ಎಂಬ ಇಂದಿನ ಬಹುಪಾಲು ಯುವಕರಿಗೂ ಈ ಕರ್ಮಗಳು ಅಗತ್ಯವೇ? ಎಂಬುದು ಚರ್ಚಾರ್ಹ ವಿಷಯವಾಗಿದೆ.

೩. ಉಪನಯನದಲ್ಲಿ ೧ ನೇ – ಸಮಾವರ್ತನೆಯಲ್ಲಿ ೨ ನೇ – ತಂದೆ ಹಾಗೂ ಅಣ್ಣ ಇಬ್ಬರಲ್ಲಿ ಒಬ್ಬರು ಇಲ್ಲದಿದ್ದರೆ, ಅಂತಹವರಿಗೆ ವಿವಾಹವಾದ ನಂತರದ ಉಪಾಕರ್ಮದಲ್ಲಿ, ೩ ನೇ ಯಜ್ಞೋಪವೀತಿ(ಜನಿವಾರ)ಎಂಬುದು ಶಾಸ್ತ್ರದ (ಧರ್ಮಸಿಂಧು) ನಿರ್ದೇಶನ.

೪. ಸಮಾವರ್ತನೆಯಲ್ಲಿ, ವರನಿಗೆ ಬೇಕಾದ, ಪೇಟ–ಛತ್ರಿ–ಕೋಲು–ಚಪ್ಪಲಿ–ವಸ್ತ್ರ–ಕಾಡಿಗೆ ಇವುಗಳನ್ನೆಲ್ಲಾ ವರನ ತಂದೆತಾಯಿಗಳೇ ಹೊಂದಿಸಿಕೊಳ್ಳಬೇಕೇ ಹೊರತು, ಹೆಣ್ಣಿನ ಕಡೆಯವರಲ್ಲ!!. ಏಕೆಂದರೆ ಈ ಕರ್ಮವು, ಸಂಪೂರ್ಣವಾಗಿ ವರನ ಮುಂತ್ರೋಕ್ತ ಮತ್ತು ಸೂತ್ರೋಕ್ತ ಕರ್ತವ್ಯವಾಗಿರುತ್ತದೆಯೇ ಹೊರತು ವಿವಾಹದ ಅಂಗವಲ್ಲದ್ದಾಗಿರುವುದರಿಂದ!!.

೫. ಮಧುಪರ್ಕವೆಂಬ ಕರ್ಮವು, ಮುಂತ್ರೋಕ್ತವಾದ, ಸೂತ್ರೋಕ್ತ ಕರ್ಮವೇ ಹೊರತು, ವರನಿಗೆ ಬೆಳ್ಳಿ–ಚಿನ್ನ–ವಾಚು–ಬೂಟು–ಸರ ಮುಂತಾದವುಗಳನ್ನು ಕೊಡುವ ಫ್ಯಾಶನ್ ಅಲ್ಲ. ಹಾಗೂ ಮದುವೆಯದಿನವೇ ಮಾಡುವ ವಿಷಯವೂ ಅಲ್ಲ. ಸ್ನಾತಕನಾದ(ಸಮಾವರ್ತನೆಯಾದ) ವ್ಯಕ್ತಿ ಯಾವಾಗ ಮೊದಲಬಾರಿ ಮನೆಗೆ ಬರುತ್ತಾನೋ(ಯಾರಮನೆಗೇ ಆಗಲೀ) ಆಗ ಅವನಿಗೆ ತೋರಿಸುವ ಮುಂತ್ರೋಕ್ತವಾದ ಗೌರವದ ಒಂದುಕ್ರಮ.

೬. ಕಾಶೀಯಾತ್ರೆ ಎಂಬುದೂ ಕೂಡ, ವರನ ವೈಯಕ್ತಿಕವೇ ಹೊರತು ಹೆಣ್ಣಿನವರಿಗೆ ಸಂಬಂಧಿಸಿಲ್ಲ. ಹಾಗಾಗಿ ಕಾಶೀಯಾತ್ರೆ ಸಾಮಾನುಗಳನ್ನೂ ಹೆಣ್ಣಿನವರಿಗೇ ಹೊರೆಸುವುದು ಸಭ್ಯತೆಯು ನಡವಳಿಕೆಗಳಲ್ಲ.

೭. ಇಂದು ಜರಗುತ್ತಿರುವ ಬಹುತೇಕ ವಿವಾಹಗಳು ಶಾಸ್ತ್ರೀಯದೃಷ್ಟಿಯಲ್ಲಿ ವಿವಾಹಗಳೇ ಅಲ್ಲ. ಹಾಗಾಗಿ ಆ ಹುಡುಗ–ಹುಡುಗಿ, ಗಂಡಹೆಂಡತಿಯರಾಗಿರುವುದೇ ಇಲ್ಲ!, ಹಾಗಾಗಿಯೇ ಹನಿಮೂನಿಗೆ ಹೋಗುವಾಗ, 'ನೀನಿಲ್ಲದೆ ನಾನಿಲ್ಲ!' ಎನ್ನುವ ಸಂಗಾತಿಗಳು, ಅಲ್ಲಿಂದ ವಾಪಸ್ಸು ಬರುವಾಗ 'ಒಂದು ನೀನಿರಬೇಕು, ಇಲ್ಲ ನಾನಿರಬೇಕು!' ಎಂದು ಡಿವೋರ್ಸ್ ಪೇಪರ್ ಹಿಡಿಯುವ ಸಂಗತಿ ಸರ್ವೇಸಾಮಾನ್ಯವಾಗಿವೆ. ಇದಕ್ಕೆಲ್ಲ ನಾವು ಶಾಸ್ತ್ರೀಯ ವಿಚಾರಗಳಲ್ಲಿ ನಡೆದುಕೊಳ್ಳುತ್ತಿರುವ ಧೋರಣೆಯೇ ಅಥವಾ ಉದಾಸೀನವೇ ನಿಜವಾದ ಒಳಕಾರಣವಾಗಿದೆ.

೮. ಶಾಸ್ತ್ರೀಯವಿವಾಹದ ಹಂತಗಳು

* ಕಾಶೀಯಾತ್ರೆ * ಮಧುಪರ್ಕ * ನಿರೀಕ್ಷೆ * ಪ್ರವರ * ಮಾಲಿಕಾಧಾರಣೆ * ಸಂಕಲ್ಪ, ಕನ್ಯಾದಾನ * ರಕ್ಷಾಬಂಧನ * ಮಾಂಗಲ್ಯ ಧಾರಣೆ * ಅಕ್ಷತಾರೋಪಣೆ * ಪಾಣಿಗ್ರಹಣ(ಕೈಹಿಡಿಯುವಿಕೆ) * ಸಪ್ತಪದೀ * ಪ್ರಧಾನಹೋಮ * ಲಾಜಾಹೋಮ * ಅಗ್ನಿಧಾರಣೆ

ಅದೇದಿನ ಸಂಜೆ ಅಥವಾ ಮರುದಿನ ಸಂಜೆ –

* ಪ್ರವಿಶ್ಯಹೋಮ(ವಧೂ, ವರನ ಮನೆಗೆ ಬರುವಿಕೆ) * ಧ್ರುವ–ಅರುಂಧತೀ–ಕೃತ್ತಿಕಾದಿ ನಕ್ಷತ್ರಗಳು, ಸಪ್ತಋಷಿಗಳ ದರ್ಶನ * ಆಗ್ನೇಯ ಸ್ಥಾಲೀಪಾಕ * ಸಾಯಂಪೌಪಾಸನ * ಇಲ್ಲಿಂದ ಮುಂದೆ ಒಟ್ಟು ೩ ರಾತ್ರಿಗಳು ಗಂಧರ್ವಸಮಿತ್ತಿನೊಂದಿಗೆ ಬ್ರಹ್ಮಚರ್ಯ ಹಾಗೂ ಆ ದಿನಗಳಲ್ಲಿ ಬೆಳಿಗ್ಗೆ ಹಾಗೂ ಸಂಜೆ ಔಪಾಸನ * ೪ ನೇ ದಿನ ಮಧ್ಯರಾತ್ರಿಯಲ್ಲಿ, ಗಂಧರ್ವಸಮಿತ್ತಿನ ವಿಸರ್ಜನೆ – ಶೇಷಹೋಮ * ಗರ್ಭಾಧಾನ(ಪ್ರಸ್ಥ).

೯. ಖಂಡಿತವಾಗಿಯೂ, ವರಪೂಜೆ/ರಿಸಪ್ಷನ್ ಹೆಸರಿನಲ್ಲಿ ನಡೆಯುವ ಆ ಅಟಾಟೋಪಗಳನ್ನು ಆಹಾರಗಳ ಚೆಲ್ಲಾಟವನ್ನು ಬುದ್ಧಿವಂತ ಮನುಷ್ಯರಾದ

ನಾವು ಬುದ್ದುಗಳಾಗಿ, ವಿವೇಚನೆಯೇ ಇಲ್ಲದೆ, ಪ್ರಾಣಿಗಳಿಗಿಂತ ಕಡೆ ಎಂಬಂತೆ ನಡೆದುಕೊಳ್ಳುತ್ತಿದ್ದೇವೆ, ಇದು ಬೇಕಾ ? ಇದರಲ್ಲಿ ಯಾವ ಶಾಸ್ತ್ರವೂ ಇಲ್ಲ.

೧೦. ಶ್ರೀರಾಮನು, ಜನನೀ ಜನ್ಮಭೂಮಿ ಇವೆರಡೂ ವಿಷಯು ಪ್ರತಿಮನುಷ್ಯನಿಗೂ ಕರ್ತವ್ಯದ ವಿಷಯುವಾಗಿದೆ. ಜನನೀ ಎಂದರೆ ತನ್ನ ಕುಟುಂಬ ಹಾಗೂ ಜನ್ಮಭೂಮಿ ಎಂದರೆ ಸಮಾಜ. ಇವೆರಡೆರ ಅಭಿವೃದ್ಧಿ / ರಕ್ಷಣೆ / ಪಾಲನೆ ಪ್ರತಿಯೊಬ್ಬನ ಕರ್ತವ್ಯ ಎಂದು ಉಪದೇಶಿಸಿದ್ದಾನೆ. ಆದರೆ ಇಂದು ಸಮಾಜದಲ್ಲಿ ಇವೆರಡನ್ನೂ ಮರೆತಿದ್ದೇವೆ, ಹಾಗಾಗಿ ಬೌದ್ಧಿಕ ಅಧೋಗತಿಗೆ ತಲುಪುತ್ತಿದ್ದೇವೆ. ಒಂದು ತುತ್ತಿಗೂ ಪರದಾಡುವ ಸಾವಿರಾರು ಮಂದಿ ಇರುವಾಗ, ಅನ್ನವನ್ನೇ ಕಾಣದೇ ನಮ್ಮಲ್ಲಿಗೆ ಬಂದಿದ್ದಾರೆ ಎನ್ನುವರೀತಿ, ನಾಲ್ಕು ಇಂಚು ನಾಲಿಗೆಯ ಕ್ಷಣಿಕ ತೃಪ್ತಿಗಾಗಿ, ಆಹಾರಗಳ ವೈವಿಧ್ಯತೆ / ಚೆಲ್ಲುವಿಕೆ / ಗುಣಮಟ್ಟ? / ಆಡಂಬರ / ದುಬಾರಿಬೆಲೆ, ಇವುಗಳು ಬೇಕೇ?? ಅನಿವಾರ್ಯವೇ??.

೧೧. ಬಂದವರೊಂದಿಗೆ, ಳ ಒಳ್ಳೆಯಮಾತು ಹಾಗೂ ಸರಳನಡವಳಿಕೆಗಳಿಂದ ನಮ್ಮ ಪ್ರತಿಷ್ಠೆ, ಗೌರವಗಳನ್ನು ಹೆಚ್ಚಿಸಿಕೊಳ್ಳಬೇಕೇ ಹೊರತು ಆಡಂಬರಗಳಿಂದ ಅಲ್ಲ. ವಿವಾಹ ಸಂಸ್ಕಾರದ ಹೆಸರಿನಲ್ಲಿ ನಮ್ಮನಮ್ಮ ಅತಿರೇಕಗಳನ್ನು ಪ್ರದರ್ಶಿಸುವುದು ಬೇಡ. ಅದಕ್ಕೆ ಬಳಸುವ ಲಕ್ಷಾಂತರ ಹಣವನ್ನು ನಿಮ್ಮ ಭವಿಷ್ಯಕ್ಕೋ – ನಿಮ್ಮ ಹೆಂಡತಿ ಅಥವ ಮಗಳ/ಮಗನ ಅಥವಾ ಅಳಿಯನ ಹೆಸರಿಗೋ ಬರೆದಿಡಿ. ಅದುಬಿಟ್ಟು ಆ ದುಬಾರಿ ಛತ್ರಕ್ಕೆ, ಎಸೆಯುವ ಅಲಂಕಾರಕ್ಕೆ, ರೋಗವನ್ನು ಉಡುಗೊರೆಯಾಗಿ ಕೊಡುವ ಆ ದುಬಾರಿ ಆಹಾರಕ್ಕೆ ದಯುಮಾಡಿ ವಿನಿಯೋಗಿಸಬೇಡಿರಿ.

೧೨. ವಿವಾಹದಲ್ಲಿ, ಲಗ್ನವನ್ನು ಒಂದೊಂದುರೀತಿಯುಲ್ಲಿ(ಉದಾ – ನಿರೀಕ್ಷೆ(ಜೀರಿಗೆಬೆಲ್ಲ), ಕನ್ಯಾದಾನ, ಮಾಂಗಲ್ಯಧಾರಣೆ, ಸಪ್ತಪದೀ..) ಇಡುವವರಿದ್ದಾರೆ. ಆದರೆ ಶಾಸ್ತ್ರೀಯವಾಗಿ ಸಪ್ತಪದೀ/ಪ್ರಧಾನಹೋಮಕ್ಕೆ ಇಡುವುದೇ ಸರಿ. ಏಕೆಂದರೆ ನಿರೀಕ್ಷೆ ಮಾಡಿದ ತಕ್ಷಣವಾಗಲೀ, ಕನ್ಯಾದಾನವನ್ನು ಸ್ವೀಕರಿಸಿದ ತಕ್ಷಣಕ್ಕಾಗಲೀ ಅವರು ಗಂಡ–ಹೆಂಡತಿ ಆಗುವುದಿಲ್ಲ.

೧೩. ಅಲ್ಲದೇ ದಾನಪ್ರಕರಣದಲ್ಲಿ ದಾನವನ್ನು ಕೊಡುವಾಗ ಶುದ್ಧ ಮನಸ್ಸಿನಿಂದ, ಆ ದಾನವನ್ನು ತೆಗೆದುಕೊಳ್ಳಲು ಯೋಗ್ಯರಾದವರಿಗೆ ಕೊಡು ಎನ್ನುತ್ತದೆಯೇ ಹೊರತು, ಯಾವುದೇ ದಾನವನ್ನು ಮಾಡುವಾಗಲೂ ಸಹ ಅದಕ್ಕೆ ಲಗ್ನ, ಮುಹೂರ್ತವನ್ನು ನೋಡುವ ಅಗತ್ಯವನ್ನು ಹೇಳುವುದಿಲ್ಲ. ಹೀಗಿರುವಾಗ ದಾನದ ರೂಪದಲ್ಲಿ ತೆಗೆದುಕೊಂಡ (ಸ್ವೀಕರಿಸಿದ) ಲಕ್ಷ್ಮೀಸ್ವರೂಪಳಾದ ಆ ಕನ್ಯೆಯನ್ನು ತನ್ನ ಹೆಂಡತಿಯನ್ನಾಗಿ ಪರಿವರ್ತನೆ ಮಾಡಿಕೊಳ್ಳುವ ಮಂತ್ರೋಕ್ತ ಕ್ರಿಯೆಗಳಾದ ಪಾಣಿಗ್ರಹಣ – ಸಪ್ತಪದೀ – ಪ್ರಧಾನಹೋಮ ಇವುಗಳು ಆದಾಗಮಾತ್ರ ಇವರಿಬ್ಬರ ಸಂಬಂಧ 'ಪತಿಪತ್ನೀ' ಎನಿಸಿಕೊಳ್ಳುತ್ತದೆ. ಇಂತಹ ಸಂಬಂಧವನ್ನು ಮಂತ್ರೋಕ್ತವಾಗಿ ಪಡೆಯುವ ಸಮಯವು ಒಳ್ಳೆಯದಾಗಿರಬೇಕು. ಹಾಗಾಗಿ ಈ ಕ್ರಿಯೆಗಳಿಗೇ ಲಗ್ನವನ್ನು ಇಡಬೇಕು.

೧೪. ಹಾಗೆಯೇ ಕನ್ಯಾದಾನವನ್ನು ಮಾಡುವಾಗ, ತಂದೆತಾಯಿಗಳು ಮಾತ್ರ ವಧುವಿನ ಕೈಯನ್ನು ವರನಕೈಯಲ್ಲಿಇಟ್ಟು, ತುಳಸಿಯೊಂದಿಗೆ ನೀರನ್ನು ವಿಧಿವತ್ತಾಗಿ ಹಾಕಬೇಕು ಅಷ್ಟೇ. ಅದುಬಿಟ್ಟು ನಾವುಗಳು ಈಗ ಕೆಲವೆಡೆ ನೋಡುತ್ತಿರುವ ಹಾಗೆ ಮದುವೆಗೆ ಬಂದಿರುವ ಎಲ್ಲಾ ಹೆಂಗಸರೂ, ವಧುವಿನತಂದೆ ಹಿಡಿದಿರುವ ವಧುವಿನ ಕೈಗೆ ನೀರನ್ನು ಹಾಕುವುದು ಅತ್ಯಂತ ಅವಿವೇಕದ ನಡೆಯಾಗಿದೆ. ಏಕೆಂದರೆ 'ದಾನಕೊಡುವ ವಸ್ತು/ವ್ಯಕ್ತಿ', ದಾನಕೊಡುವವನ ಸ್ವಂತದ್ದಾಗಿರಬೇಕು ಹಾಗೂ ನ್ಯಾಯಾಯುತ ಸಂಪಾದನೆಯಾಗಿರಬೇಕು. ಅಲ್ಲದೇ ಒಂದುವಸ್ತುವನ್ನು 'ಒಬ್ಬರು ಒಂದುಸಲ – ಒಬ್ಬರಿಗೆ' ಮಾತ್ರ ದಾನಕೊಡಬಹುದೇ ಹೊರತು, ಈ ವಧುವಿನ ತಂದೆತಾಯಿಗಳಿಗೆ ಸಂಬಂಧಪಟ್ಟ ಆ ವಧುವನ್ನು 'ಊರಿನ ಹೆಂಗಸರೆಲ್ಲಾ' ದಾನಕೊಡುವುದು ಎಂದರೆ ಅರ್ಥ ಏನಾಗುತ್ತದೆ ಎಂದು ಎಲ್ಲರೂ ಊಹಿಸಬಹುದು!!.

ಅಲ್ಲದೇ 'ದಾನ' ಎಂಬುದು, ವಿಧಿಗೊಳಪಟ್ಟ ಒಂದು ಆಚರಣೆ, ಅದನ್ನು ಅದರ ಕ್ರಮದಲ್ಲೇ ಮಾಡಬೇಕು. ಬಂದಂತಹ ಬಂಧುಗಳು–ಹೆಂಗಸರು, ಆ ವಧುವರರಿಗೆ 'ಮಾನಸಿಕವಾಗೇ ಆಶೀರ್ವಾದ – ಹಾರೈಕೆಗಳನ್ನು ಮಾಡಬಹುದು, ಇಲ್ಲವಾದರೆ ಅಕ್ಷತೆಯನ್ನು ಕೊಟ್ಟು(ಎರಚದೇ...)

ಹಾರೈಸಬೇಕೇ ಹೊರತು, ಬೇರೇ ಗಂಡಸಿಗೆ ಪ್ರಾಪ್ತವಾಗಿರುವ, ತನ್ನದಲ್ಲದ ಆ ಲಕ್ಷ್ಮೀಸ್ವರೂಪಳಾದ ಕನ್ಯೆಯನ್ನು, ನೆರೆದಿರುವ ಎಲ್ಲಾ ಹೆಂಗಸರೂ, 'ಮಡಿ–ಕರ್ಮದಬದ್ಧತೆ – ಹಿನ್ನಲೆ', ಇವೇನನ್ನೂ ಗಮನಿಸದೇ ಮಾಡುವ ನಡವಳಿಕೆ ಬಹಳ ದೋಷದ್ದಾಗಿರುತ್ತದೆ.

೧೫. ಅಲ್ಲದೇ ಈಗ ಎಲ್ಲರೂ(ತಿಳಿದವರೂ ಸಹ) ಯಾವುದೇ ಸಂಸ್ಕಾರಗಳಿಗೆ ಲಗ್ನವನ್ನು ಮಾತ್ರ ನೋಡುತ್ತಾರೆಯೇ ವಿನಃ ಮುಹೂರ್ತವನ್ನು ಗಮನಿಸುವುದೇ ಇಲ್ಲದಿರುವುದು ಸೋಜಿಗವೇ ಸರಿ!. ದಿನಕ್ಕೆ ೧೨ ಲಗ್ನಗಳೂ, ೩೦ ಮುಹೂರ್ತಗಳೂ ಇರುತ್ತವೆ. ಸುಲಗ್ನ ಮತ್ತು ಸುಮುಹೂರ್ತ ಇವೆರಡೂ ಜ್ಯೋತಿಷ್ಯದ ಪ್ರಕಾರ ಅಗತ್ಯವೇ.

೧೬. ಈಗ ನಾವುಗಳು ಬಹುತೇಕ ವಿವಾಹಗಳಲ್ಲಿ ನೋಡುವಂತೆ, ವಿವಾಹಮಂಟಪದಲ್ಲೇ ಪ್ರಧಾನಹೋಮ – ಲಾಜಾಹೋಮಗಳ ನಂತರ ಪ್ರವಿಶ್ಯಹೋಮ – ಸ್ಥಾಲೀಪಾಕ ಔಪಾಸನ – ಶೇಷಹೋಮ, ಇವಿಷ್ಟನ್ನೂ ಒಟ್ಟಿಗೇ ಮಾಡಿ ಮುಗಿಸುತ್ತಿದ್ದೇವೆ ಹಾಗೂ ವಿವಾಹಕರ್ಮವು ಸಂಪೂರ್ಣವಾಯಿತೆಂದು ಭಾವಿಸುತ್ತಿದ್ದೇವೆ. ಆದರೆ ಬಹುದೊಡ್ಡ ಲೋಪವನ್ನು ಗಳಿಸುತ್ತಿದ್ದೇವೆಂಬ ಕಲ್ಪನೆಯೇ ನಮಗೆ ಬರುತ್ತಿಲ್ಲ !.

ಏಕೆಂದರೆ, ಪ್ರವಿಶ್ಯಹೋಮ – ಸ್ಥಾಲೀಪಾಕ – ಔಪಾಸನ – ಶೇಷಹೋಮ, ಈ ಎಲ್ಲಾ ವಿಧಿಗಳೂ ಸೂತ್ರ(ಶಾಸ್ತ್ರ)ಗಳಲ್ಲಿ ಹೇಳಿರುವ ಮಂತ್ರೋಕ್ತವಾದ ಹಾಗೆಯೇ ಗೃಹಸ್ಥಾಶ್ರಮದ ಕರ್ತವ್ಯಗಳನ್ನು ನಿಭಾಯಿಸಲು ಮುನ್ನುಡಿಯಾಗಿರುವ ವ್ಯವಸ್ಥೆಯಾಗಿದೆ. ಹಾಗಾಗಿಯೇ ಇವೆಲ್ಲವೂ ಅತ್ಯಂತ ಅವಶ್ಯಕವಾಗಿರುವ ಪ್ರಮುಖ ಘಟ್ಟಗಳಾಗಿವೆ. ಹಾಗಾಗಿ ಈ ಎಲ್ಲಾ ವಿಧಿಗಳೂ ಪ್ರತ್ಯೇಕ ಕಾಲ(ಸಮಯದ) ನಿಯಮವನ್ನೂ – ಪ್ರತ್ಯೇಕ ಮಂತ್ರವನ್ನೂ ಹೊಂದಿವೆ. ಹಾಗಿರುವಾಗ ಆಯಾಯಾ ವಿಧಿಗಳಿಗೆ ತಿಳಿಸಿರುವ ಸಮಯದಲ್ಲೇ ಅವುಗಳನ್ನು ಆಚರಿಸುವುದರಲ್ಲೇ ಅವುಗಳ ಯಶಸ್ಸು ಇರುವುದಾಗಿದೆ. ಹೀಗಿರುವಾಗ ಈ ಎಲ್ಲಾ ಕರ್ಮಗಳನ್ನೂ ಒಂದೇ ಸಲ, ಒಂದೇ ಅಗ್ನಿಮುಖ ಪ್ರಯೋಗದಲ್ಲಿ, ಹಗಲಿನಲ್ಲಿ, ಮಾಡುವುದೆಂದರೆ – ಅದರ ದೋಷ ಎಷ್ಟು ಹೆಚ್ಚಿರುತ್ತದೆ ಎಂದು ಕಲ್ಪಿಸಿಕೊಂಡರೆ ಭಯವಾಗುತ್ತದೆ. ಹಾಗಾಗಿ ಈ ವಿಷಯದಲ್ಲಿ ಪುರೋಹಿತರು ಕರ್ತೃಗಳಿಗೆ ಅವರ ಮುಂದಿನ ಒಳ್ಳೆಯ

ದಿನಗಳಿಗಾಗಿ ಮದುವೆಯ ನಂತರದ ನಾಲ್ಕುದಿನಗಳಲ್ಲೇ ಈ ವಿಧಿಗಳನ್ನು ಆಚರಿಸುವಂತೆ ಇದರ ಬಗ್ಗೆ ಸರಿಯಾದ ಮಾರ್ಗದರ್ಶನವನ್ನು ಮಾಡುವುದು, ಕರ್ತವ್ಯವೇ ಆಗಿದೆ.

೧೭. ನಾಲ್ಕು ಆಶ್ರಮಗಳಲ್ಲೇ ಅತೀ ಜವಾಬ್ದಾರಿ ಇರುವ ಗೃಹಸ್ಥಾಶ್ರಮವನ್ನು ಹೊಂದುವ, ಅದ್ಭುತ ಅರ್ಥಗಳುಳ್ಳ ಮಂತ್ರಗಳಿಂದ ಸಂಸ್ಕಾರಗೊಳ್ಳಬೇಕಾದ ವಿವಾಹವೆಂಬ ಇಡೀ ಪ್ರಕ್ರಿಯೆಯೇ ಭೇದವೇ ಇಲ್ಲದೆ, ಸಮಾಜದ ಎಲ್ಲಾ ವರ್ಗಗಳಲ್ಲೂ ಸಂಪೂರ್ಣ ಕಲುಷಿತವಾಗಿದೆ ಎಂಬುದು ದೌರ್ಭಾಗ್ಯ. ಸಂಸ್ಕಾರಕ್ಕೆ, ಅದರ ವಿಧಿವಿಧಾನಗಳಿಗೆ ಪೂರಕವಾಗಿ ಉಳಿದ ವ್ಯವಸ್ಥೆಗಳು(ಉದಾ ಅಡುಗೆ ಆಲಂಕಾರ – ಫೋಟೋ ಉಡುಗೊರೆ – ಬಂಧುಗಳ ನಡವಳಿಕೆ...) ಕಾರ್ಯನಿರ್ವಹಿಸಬೇಕು. ಆದರೆ ಇಂದಿನ ವಿವಾಹಗಳು, ಮೇಲೆ ತಿಳಿಸಿದ ಉಳಿದ ವ್ಯವಸ್ಥೆಗಳ ಅತಿವಿಜೃಂಭಣೆ ಹಾಗೂ ಶಾಸ್ತ್ರದ ಬಗ್ಗೆ ಅಷ್ಟೇ ಅಸಡ್ಡೆ ಮತ್ತೂ ಶಾಸ್ತ್ರಕ್ಕಿಂತ ಸಂಪ್ರದಾಯದ ಹೆಸರಿನಲ್ಲಿ ನಡೆಯುವ ಪ್ರತಿಷ್ಠೆ, ಅಸಹ್ಯ ಮೇಲಾಟಗಳಿಂದ ಈ ಸಂಸ್ಕಾರದ ಎಲ್ಲಾ ಗಂಭೀರತೆ – ಬದ್ಧತೆಗಳನ್ನು ನುಚ್ಚುನೂರಾಗಿಸಿದ್ದೇವೆ, ಅತಿಬುದ್ಧಿವಂತ – ನಾಗರಿಕಶ್ರೇಷ್ಠರಾದ ನಾವುಗಳು. ಈ ವಿಷಯುದಲ್ಲಿ ನಿಮ್ಮ ಮನಸ್ಸು ಏನನ್ನುತ್ತದೆ ? ೧ ನಿಮಿಷ ಏಕಾಂತದಲ್ಲಿ ಮನಸ್ಸನ್ನು ಸಹಜವಾಗಿ ಕೇಳಿಕೊಳ್ಳಿ!, ಇಂತಹ ರೀತಿಯಲ್ಲಿ ನಿಮ್ಮ / ನಿಮ್ಮ ಮನೆಯ ವಿವಾಹ ಆಗಬೇಕೇ!!!???.

ಮೊದಲನೇ ದಿನದ ವಿಧಿಗಳು

ಮಂಗಳಸ್ನಾನಂ, ನಿತ್ಯಾನುಷ್ಠಾನಂ ಕೃತ್ವಾ । ಆಸನವಿಧಿಂ, ಆಚಮನಂ, ಪವಿತ್ರಧಾರಣಂ, ಪ್ರಾಣಾಯಾಮಂ, ದೀಪಪೂಜಾಂ, ಚ ಕೃತ್ವಾ ॥

ಕರ್ತೃವು, ಮಂಗಳಸ್ನಾನ – ಸಂಧ್ಯಾವಂದನೆ – ಔಪಾಸನ – ಬ್ರಹ್ಮಯಜ್ಞ, ಇತ್ಯಾದಿ ನಿತ್ಯಕರ್ಮಗಳನ್ನು ಮಾಡಿ । ವೇದಜ್ಞರಾದ ಸಾತ್ವಿಕಬ್ರಾಹ್ಮಣರ ಒಪ್ಪಿಗೆಯನ್ನು ದಂಪತೀಸಹಿತರಾಗಿ ಪಡೆದು, ಕುಳಿತು ಆಸನವಿಧಿ, ಆಚಮನ, ಪವಿತ್ರಧಾರಣೆ, ಪ್ರಾಣಾಯಾಮ, ದೀಪಪೂಜೆಗಳನ್ನು ಮಾಡಿ ॥

ಬ್ರಾಹ್ಮಣರಲ್ಲಿ ಅನುಜ್ಞೆಯು (ಪ್ರಾರ್ಥನೆಯು) –

ಅಶೇಷೇ ಹೇ ಪರಿಷತ್, ಭವತ್ಪಾದಮೂಲೇ ಮಯಾ ಸಮರ್ಪ್ಯಮಾಣಂ ಇದಂ ಅಲ್ಪೀಯಸೀಂ ಸೌವರ್ಣೀಂ ಸ್ವೀಕೃತ್ಯ, ...ಗೋತ್ರೇ, ...ನಕ್ಷತ್ರೇ, ...ರಾಶೌ ಜಾತಸ್ಯ, ...ಶರ್ಮಾ ನಾಮಧೇಯಸ್ಯ, ತಥಾ .....ನಕ್ಷತ್ರೇ, ...ರಾಶೌ ಜಾತಾಯಾಃ, ...ನಾಮ್ನ್ಯಾಃ ಮಮ ಧರ್ಮಕಾಂತಾಯಾಃ, ತಥಾ ಚ .....ಗೋತ್ರೇ, ...ನಕ್ಷತ್ರೇ, ...ರಾಶೌ ಜಾತಸ್ಯ (ಜಾತಾಯಾಃ), ... (ನಾಮ್ನ್ಯಾಃ) ಶರ್ಮಾ ನಾಮಧೇಯಸ್ಯ, ಆವಯೋಃ (ಮಮ) ಕುಮಾರಸ್ಯ (ಕುಮಾರ್ಯಾಃ) ಅಂಗಸಹಿತ ವಿವಾಹ(ಉದ್ವಾಹ) ಸಂಸ್ಕಾರ ಕರ್ಮಕರ್ತುಂ ಯೋಗ್ಯತಾಸಿದ್ಧಿಂ ಮಾಂ ಅನುಗೃಹಾಣ ॥

ಇಲ್ಲಿ ಉಪಸ್ಥಿತರಿರುವ ಹೇ ಸಭ್ಯ ವಿದ್ವಾಂಸರೇ, ತಮ್ಮಲ್ಲಿ ಸಮರ್ಪಿಸುತ್ತಿರುವ ಈ ಅಲ್ಪವಾದ ದಕ್ಷಿಣೆಯನ್ನು ತಾವುಗಳು ಉದಾರತೆಯಿಂದ ಸ್ವೀಕರಿಸಿ, ನನ್ನ ಮತ್ತು ನನ್ನ ಪತ್ನಿಯಿಂದ ಜನಿಸಿರುವ ನಮ್ಮಿಬ್ಬರ ಮಗನನ್ನು(ಮಗಳನ್ನು) ಆಚಾರ್ಯರ ಮಾರ್ಗದರ್ಶನದಂತೆ, ನಾಳೆ ಅಥವಾ ಇಂದು ಅಂಗಸಹಿತವಾಗಿ ವಿವಾಹವೆಂಬ ಕರ್ಮದಿಂದ ಸಂಸ್ಕಾರಗೊಳಿಸಲು ತಮ್ಮಲ್ಲಿ ಒಪ್ಪಿಗೆಯನ್ನು ಕೇಳುತ್ತಿದ್ದೇನೆ, ತಾವೆಲ್ಲರೂ ನನ್ನಲ್ಲಿ ಕೃಪೆಯಿಟ್ಟು ಒಪ್ಪಿಗೆಯನ್ನು ಕೊಡಿರಿ ॥

ವಿವಾಹದ ಸಂಕಲ್ಪವು –

ಶುಭೇ ಶೋಭನೇ ಮುಹೂರ್ತೇ.....ಶ್ರೀ ಪರಮೇಶ್ವರ ಪ್ರೀತ್ಯರ್ಥಂ, ...ಗೋತ್ರೇ, ...ನಕ್ಷತ್ರೇ, ...ರಾಶೌ ಜಾತಸ್ಯ, ...ಶರ್ಮಾ ನಾಮಧೇಯಸ್ಯ, ತಥಾ .....ನಕ್ಷತ್ರೇ, ...ರಾಶೌ ಜಾತಾಯಾಃ, ...ನಾಮ್ನ್ಯಾಃ ಮಮ ಧರ್ಮಕಾಂತಾಯಾಃ, ತಥಾ ಚ .....ಗೋತ್ರೇ, ...ನಕ್ಷತ್ರೇ, ...ರಾಶೌ ಜಾತಂ(ಜಾತಾಂ), ಆವಯೋಃ(ಮಮ) ಕುಮಾರಂ (ಕುಮಾರೀಂ) ವಿವಾಹ (ಉದ್ವಾಹ) ಸಂಸ್ಕಾರ ಕರ್ಮಣಾ ಆಚಾರ್ಯಮುಖೇನ ಶ್ವಃ(ಅದ್ಯ) ಸಂಸ್ಕರಿಷ್ಯೇ ॥

ತಿಥಿ ವಾರಾದಿಗಳನ್ನು ಹೇಳಿಕೊಂಡು, ಈ ಮೇಲಿನಂತೆ ನನ್ನ ಮತ್ತು ನನ್ನ ಪತ್ನಿಯ ಹಾಗೂ ನಮ್ಮಿಬ್ಬರ ಮಗನ(ಮಗಳ) ಗೋತ್ರ–ನಕ್ಷತ್ರ–ರಾಶಿಗಳನ್ನು ಹೇಳಿಕೊಂಡು, ಇಂತಹ ಹೆಸರಿನ ನಮ್ಮಿಬ್ಬರ ಮಗನನ್ನು(ಮಗಳನ್ನು) ಆಚಾರ್ಯರ ಮಾರ್ಗದರ್ಶನದಂತೆ, ನಾನೇ ಆಗಬೇಕಾದ ಇಂದು ವಿವಾಹವೆಂಬ ಕರ್ಮದಿಂದ ಸಂಸ್ಕಾರಗೊಳಿಸುತ್ತೇನೆ ॥ ಹಾಗೆಯೇ

ವರನ ಪ್ರಾಯಶ್ಚಿತ್ತ ಕ್ರಮವು –

ಪ್ರಾಣಾನಾಂಯಮ್ಯ ಶುಭೇ ಶೋಭನೇ ಮುಹೂರ್ತೇ.....ಶ್ರೀ ಪರಮೇಶ್ವರ ಪ್ರೀತ್ಯರ್ಥಂ, ...ಗೋತ್ರೇ, ...ನಕ್ಷತ್ರೇ, ...ರಾಶೌ ಜಾತಸ್ಯ, ...ಶರ್ಮಾ ನಾಮಧೇಯಸ್ಯ ಮಮ ಉಪನಯನ ಶುಭಲಗ್ನಪ್ರಭೃತಿ ಏತತ್ ವಿವಾಹ ಶುಭಲಗ್ನಪರ್ಯಂತಂ ಮಮ ಉಪೇಕ್ಷಯಾ ಶೌಚಾಚಾರ, ಸ್ನಾನ, ಸಂಧ್ಯಾವಂದನ, ಭಿಕ್ಷಾನ್ನ, ಅಗ್ನಿಕಾರ್ಯ ರಾಹಿತ್ಯ, ಶೂದ್ರಾದಿ ಸ್ಪರ್ಶನ, ಕೌಪೀನ, ಕಟಿಸೂತ್ರ, ಯಜ್ಞೋಪವೀತ, ತಿಲಕ, ಮೌಂಜಿಲಾಜಿನ, ದಂಡತ್ಯಾಗ, ದಿವಾಸ್ವಾಪ, ಛತ್ರಧಾರಣ, ಪಾದುಕಾರೋಹಣ ಮಾಲಾಧಾರಣ,

ಉದ್ವರ್ತನಾನುಲೇಪನ, ಅಂಜನಾಭ್ಯಂಜನ, ತಾಂಬೂಲಚರ್ವಣ, ಜಲಕ್ರೀಡಾ, ದ್ಯೂತ, ನೃತ್ಯ, ಗೀತವಾದ್ಯಾಭಿರತಿ, ಪಾಷಂಡಾದಿ ಸಂಭಾಷಣ, ಪರ್ಯುಷಿತಾನ್ನ ಭೋಜನಾದಿ ಸಮಸ್ತ ಬ್ರಹ್ಮಚರ್ಯ ವ್ರತ ಲೋಪದೋಷ ಪ್ರಾಯಶ್ಚಿತ್ತಾರ್ಥಂ, ವ್ರತೋಪಕ್ರಮ – ವ್ರತೋತ್ಸರ್ಜನ – ಸಮಾವರ್ತನ ಸಂಸ್ಕಾರ ಯೋಗ್ಯತಾ ಪ್ರಾಪ್ತ್ಯರ್ಥಂ, ವಿವಾಹಸಂಸ್ಕಾರ ಯೋಗ್ಯತಾ ಸಿದ್ಧ್ಯರ್ಥಂ, ಮಮ ಶರೀರ ಶುದ್ಧ್ಯರ್ಥಂ, ಲಕ್ಷ್ಮೀನಾರಾಯಣ ಪ್ರೀತ್ಯರ್ಥಂ, ಚಾಂದ್ರಾಯಣ ಕೃಚ್ಛ್ರಾಚರಣಂ ಕರಿಷ್ಯೇ॥

(ಅಶಕ್ತಶ್ಚೇತ್ – ತತ್ಪ್ರತಿನಿಧಿ ಯಥಾಶಕ್ತಿ ಬ್ರಾಹ್ಮಣಪೂಜಾ ಪುರಸ್ಸರಂ ಹಿರಣ್ಯದಾನಂ ಕರಿಷ್ಯೇ) ಇತಿ ಸಂಕಲ್ಪ್ಯ ॥

ಈ ಗೋತ್ರ–ನಕ್ಷತ್ರ–ರಾಶಿ–ಹೆಸರಿನವನಾದ ನಾನು, ನನ್ನ ಉಪನಯನದಿಂದ ಈಗ ಆಗಬೇಕಿರುವ ನನ್ನ ವಿವಾಹಸಂಸ್ಕಾರದ ಕೊನೆಯವರೆಗೂ ನನ್ನಿಂದ ಅಶ್ರದ್ಧೆಯಿಂದ ಬಿಡಲ್ಪಟ್ಟಿರುವ ನನ್ನ ಕರ್ತವ್ಯಗಳಾದ, ಸ್ನಾನ – ಸ್ವಚ್ಛತೆ – ಸಂಧ್ಯಾವಂದನೆ – ಭಿಕ್ಷಾಟನೆ – ಅಗ್ನಿಕಾರ್ಯ – ಕೌಪೀನ ಧಾರಣೆ – ಕಟಿಸೂತ್ರ ಧಾರಣೆ – ಯಜ್ಞೋಪವೀತಧಾರಣೆ

– ವೇದಾಧ್ಯಯನ – ತಿಲಕಧಾರಣೆ, ಇವುಗಳನ್ನು ಮಾಡದಿರುವಿಕೆ ಹಾಗೂ ಮಾಡಬಾರದ ಕೆಲಸಗಳಾದ, ಹಗಲಲ್ಲಿ ಮಲಗುವಿಕೆ – ಸುಖ ಹಾಗೂ ಶೃಂಗಾರಪೂರ್ಣ ಜೀವನಶೈಲಿಯನ್ನು ಅನುಸರಿಸುವಿಕೆ – ಅಸ್ವಚ್ಛತೆಯ ಹಾಗೂ ಕೆಟ್ಟ ವ್ಯಾಪಾರ ವ್ಯಕ್ತಿ ಸಹವಾಸವೇ ಮೊದಲಾದವುಗಳನ್ನು ಮಾಡಿರುವಿಕೆ, ಇಂತಹಾ ಲೋಪಗಳಿಂದ ಉಂಟಾಗಿರುವ ಎಲ್ಲಾ ರೀತಿಯ ಪಾಪಗಳ ಪರಿಹಾರಕ್ಕಾಗಿ ಹಾಗೂ ಶರೀರಶುದ್ಧಿಗಾಗೀ ಹಾಗೂ ವ್ರತೋಪಕ್ರಮ, ವ್ರತೋತ್ಸರ್ಜನ, ವಿವಾಹ ಸಂಸ್ಕಾರಗಳನ್ನು ಪಡೆಯುವ ಯೋಗ್ಯತೆಯ ಸಂಪಾದನೆಗಾಗಿ, ಪ್ರಾಯಶ್ಚಿತ್ತ ಸ್ವರೂಪವಾದ ಚಾಂದ್ರಾಯಣವೆಂಬ ಕೃಚ್ಛ್ರಾಚರಣೆಯನ್ನು ಮಾಡುತ್ತೇನೆ.

(ಅದರ ಆಚರಣೆ ಅಸಾಧ್ಯವಾದರೆ, ಅದರ ಬದಲಿಗೆ ಹಿರಣ್ಯವನ್ನು ಸಾತ್ವಿಕ ವಿದ್ವಾಂಸರಾದ ಬ್ರಾಹ್ಮಣರಿಗೆ ದಾನ ಮಾಡುತ್ತೇನೆ) ಎಂದು ಸಂಕಲ್ಪಿಸಬೇಕು ॥

ನಮೋಸ್ತ್ವನಂತಾಯ । ಸಹಸ್ರಮೂರ್ತಯೇ । ಸಹಸ್ರಪಾದಾಕ್ಷಿ ।
ಶಿರೋರು ಬಾಹವೇ ॥
ಸಹಸ್ರನಾಮ್ನೇ । ಪುರುಷಾಯ । ಶಾಸತೇ । ಸಹಸ್ರಕೋಟಿ ।
ಯುಗಧಾರಿಣೇ ನಮಃ ॥

ಸರ್ವೇಭ್ಯಃ । ಬ್ರಾಹ್ಮಣೇಭ್ಯಃ । ನಮಃ । ಗಂಧಾದಿ । ಸಕಲಾರಾಧನೈಃ । ಸ್ವರ್ಚಿತಂ ॥

ಹಿರಣ್ಯಗರ್ಭ । ಗರ್ಭಸ್ಥಂ । ಹೇಮಬೀಜಂ । ವಿಭಾವಸೋಃ ॥
ಅನಂತಪುಣ್ಯ । ಫಲದಂ । ಅತಶ್ಶಾಂತಿಂ । ಪ್ರಯಚ್ಛ ಮೇ ॥

ಪೂರ್ವೋಕ್ತ ಸಮಸ್ತ ದೋಷ ಪ್ರಾಯಶ್ಚಿತ್ತಾರ್ಥಂ, ಪೂರ್ವೋಕ್ತ ಸಂಸ್ಕಾರಗ್ರಹಣ ಯೋಗ್ಯತಾ ಸಿದ್ಧ್ಯರ್ಥಂ, ಇದಂ ಕೃಚ್ಛ್ರಪ್ರತಿನಿಧಿ ಹಿರಣ್ಯಂ ನಾನಾ ನಾಮ ಗೋತ್ರೇಭ್ಯಃ ಬ್ರಾಹ್ಮಣೇಭ್ಯಃ ತೇಭ್ಯಃ ತೇಭ್ಯಃ ಸಂಪ್ರದದೇ ನಮಮ ನಮಮ ॥

ಮೇಲಿನ ಶ್ಲೋಕವನ್ನು ಹೇಳಿ, ಬ್ರಾಹ್ಮಣರಿಗೆ ಪೂಜಿಸಿ । ನಂತರ ಮೇಲಿರುವ ಇನ್ನೊಂದು ಶ್ಲೋಕವನ್ನು ಮತ್ತು ವಾಕ್ಯಗಳನ್ನು ಹೇಳಿ, ಅಲ್ಲಿರುವ ವಿದ್ವಾಂಸರಾದ ಸಾತ್ವಿಕ ಬ್ರಾಹ್ಮಣರಿಗೆ ಕೃಚ್ಛ್ರಪ್ರತಿನಿಧಿಯಾದ ಹಣವನ್ನು ದಾನವಾಗಿ ಕೊಡಬೇಕು ॥ ಮತ್ತೂ

ಇದಂ ಸ್ವೀಕೃತ್ಯ, ಮಂಯಾ ಪೂರ್ವೋಕ್ತ ಬ್ರಹ್ಮಚಂರ್ಯಾಶ್ರವೋಕ್ತ ನಿತ್ಯಕರ್ಮಾನುಷ್ಠಾನ ಅಕರಣೀನ ಂಯೋ ಂಯೋ ದೋಷಸ್ಸಮುಜನಿ ತತ್ತದ್ದೋಷ ಪರಿಹಾರೋಸ್ತ್ವಿತಿ, ಪೂರ್ವೋಕ್ತ ಸಂಸ್ಕಾರಗ್ರಹಣ ಯೋಗ್ಯತಾ ಸಿದ್ಧಿರಸ್ತ್ವಿತಿ ಭವಂತಃ ಅನುಗ್ರಹ್ಣಂತು ॥ ಇತಿ ಪ್ರಾರ್ಥ್ಯ ॥

ಈ ಪ್ರಾಯಶ್ಚಿತ್ತದಿಂದ, ಮೇಲೆ ತಿಳಿಸಿದ ಎಲ್ಲಾ ದೋಷಗಳೂ ಪರಿಹಾರವಾಗಲಿ ಹಾಗೂ ಸಂಕಲ್ಪಿಸಿರುವ ಸಂಸ್ಕಾರಗಳನ್ನು ಪಡೆಯಲು ಯೋಗ್ಯತೆಯೂ ಸಿಗಲೆಂದು ಬ್ರಾಹ್ಮಣರು ಅನುಗ್ರಹಿಸಿರಿ ಎಂಬ ಅರ್ಥವಿರುವ ಮೇಲಿನ ವಾಕ್ಯಗಳಿಂದ ಅವರಲ್ಲಿ ಪ್ರಾರ್ಥನೆ ಮಾಡಬೇಕು ॥

ಪೂರ್ವೋಕ್ತ ಸಮಸ್ತ ದೋಷ ಪರಿಹಾರೋಸ್ತು – ಪೂರ್ವೋಕ್ತ ಸಮಸ್ತ ಸಂಸ್ಕಾರಗ್ರಹಣ ಯೋಗ್ಯತಾ ಸಿದ್ಧಿರಸ್ತು – ಇತಿ ಪ್ರತಿವಚನಂ ॥

ಬ್ರಾಹ್ಮಣರು, ಮೇಲಿನ ವಾಕ್ಯದಂತೆ ಅನುಗ್ರಹ ಮಾಡಬೇಕು ॥

ವಧುವಿನ ಪರವಾಗಿ ಅವಳ ತಂದೆಯು ಮಾಡುವ ಪ್ರಾಯಶ್ಚಿತ್ತವು –

ಶುಭೇ ಶೋಭನೇ ಮುಹೂರ್ತೇ.....ಶ್ರೀ ಪರಮೇಶ್ವರ ಪ್ರೀತ್ಯರ್ಥಂ, ...ಗೋತ್ರೇ, ...ನಕ್ಷತ್ರೇ, ...ರಾಶೌ, ಜಾತಸ್ಯ .....ಶರ್ಮಾ ನಾಮಧೇಯಸ್ಯ ತಥಾ .....ನಕ್ಷತ್ರೇ, ...ರಾಶೌ, ಜಾತಾಯಾಃ .....ನಾಮ್ನ್ಯಃ ಮಮ ಧರ್ಮಕಾಂತಾಯಾಃ ತಥಾ ಆವಯೋಃ ಕುಮಾರ್ಯಾಃ .....ನಕ್ಷತ್ರೇ, ...ರಾಶೌ, ಜಾತಾಯಾಃ .....ನಾಮ್ನ್ಯಃ ಕನ್ಯಾತ್ವ ಸಿದ್ಧ್ಯರ್ಥಂ, ಆವಯೋಃ ಕನ್ಯಾದಾನ ಸಂಪೂರ್ಣ ಫಲ ಸಿದ್ಧ್ಯರ್ಥಂ, ಕುಮಾರ್ಯಾಃ ಉಪೇಕ್ಷಣಯಾ ಜನ್ಮಪ್ರಭೃತಿ ಏತತ್ ವಿವಾಹ ಶುಭಲಗ್ನಪರ್ಯಂತಂ ಶೌಚಾಚಾರ, ಸ್ನಾನ, ಶೂದ್ರಾದಿ ಸ್ಪರ್ಶನ, ದಿವಾಸ್ವಾಪ, ಛತ್ರಧಾರಣ, ಪಾದುಕಾರೋಹಣ, ತಾಂಬೂಲಚರ್ವಣ, ಜಲಕ್ರೀಡಾ, ದ್ಯೂತ, ಪಾಷಂಡಾದಿ ಸಂಭಾಷಣ, ಅನ್ಯಜನ ಸಂಸರ್ಗ, ಪರ್ಯುಷಿತಾನ್ನ ಭೋಜನಾದಿ ಸಮಸ್ತ ಬ್ರಹ್ಮಚರ್ಯ ವ್ರತ ಲೋಪದೋಷ ಪ್ರಾಯಶ್ಚಿತ್ತಾರ್ಥಂ ಋತುಮತೀ ವಿವಾಹದೋಷ

ಪರಿಹಾರಾರ್ಥಂ, ಶರೀರಶುದ್ಧ್ಯರ್ಥಂ, ವಿವಾಹಸಂಸ್ಕಾರಗ್ರಹಣ ಯೋಗ್ಯತಾ ಸಿದ್ಧ್ಯರ್ಥಂ, ಋತುಸಂಖ್ಯಾಕ ಗೋದಾನಂ ಕರಿಷ್ಯೇ (ಅಶಕ್ತತ್ವಾತ್ – ಗೋ ಪ್ರತಿನಿಧಿ ಯಥಾಶಕ್ತಿ ಬ್ರಾಹ್ಮಣ ಪೂಜಾಪುರಸ್ಸರಂ ಹಿರಣ್ಯದಾನಂ ಕರಿಷ್ಯೇ) ॥

ಈ ಗೋತ್ರ–ನಕ್ಷತ್ರ–ರಾಶಿ–ಹೆಸರಿನವನಾದ ನಾನು ಮತ್ತು ನನ್ನ ಹೆಂಡತಿ ಹಾಗೂ ನಮ್ಮಿಬ್ಬರ ಮಗಳಾದ ಇವಳು ಹುಟ್ಟಿದಾರಭ್ಯ ವಿವಾಹಸಂಸ್ಕಾರದ ಕೊನೆಯವರೆಗೂ ಅಶ್ರದ್ಧೆಯಿಂದ ಬಿಟ್ಟಿರುವ ಅಥವಾ ಬಿಡಬಹುದಾದ ಇವಳ ಕರ್ತವ್ಯಗಳಾದ, ಸ್ನಾನ – ಸ್ವಚ್ಛತೆ, ಇವುಗಳನ್ನು ಮಾಡದಿರುವಿಕೆ ಹಾಗೂ ಮಾಡಬಾರದ ಕೆಲಸಗಳಾದ, ಹಗಲಲ್ಲಿ ಮಲಗುವಿಕೆ – ಸುಖ ಹಾಗೂ ಶೃಂಗಾರಪೂರ್ಣ ಜೀವನಶೈಲಿಯನ್ನು ಅನುಸರಿಸುವಿಕೆ – ಅಸ್ವಚ್ಛತೆಯ ಹಾಗೂ ಕೆಟ್ಟ ಮಾತು ಮತ್ತು ಸಹವಾಸವೇ ಮೊದಲಾದವುಗಳನ್ನು ಮಾಡಿರುವಿಕೆ,

ಇಂತಹಾ ಲೋಪಗಳಿಂದ ಉಂಟಾಗಿರುವ ಎಲ್ಲಾ ರೀತಿಯ ಪಾಪಗಳ ಪರಿಹಾರಕ್ಕಾಗಿ ಹಾಗೂ ಋತುಮತೀ ವಿವಾಹದ ದೋಷ ಪರಿಹಾರಕ್ಕಾಗಿ, ಶರೀರಶುದ್ಧಿಗಾಗಿ ಹಾಗೂ ವಿವಾಹ ಸಂಸ್ಕಾರಗಳನ್ನು ಪಡೆಯುವ ಯೋಗ್ಯತೆಯ ಸಂಪಾದನೆಗಾಗಿ, ಆಗಿರುವ ಋತುಸಂಖ್ಯೆಗೆ ಅನುಗುಣವಾಗಿ ಪ್ರಾಯಶ್ಚಿತ್ತ ಸ್ವರೂಪವಾದ ಗೋದಾನವನ್ನು ಮಾಡುತ್ತೇನೆ. (ಅದರ ಆಚರಣೆ ಅಸಾಧ್ಯವಾದರೆ, ಅದರ ಬದಲಿಗೆ ಹಿರಣ್ಯವನ್ನು ಸಾತ್ವಿಕ ವಿದ್ವಾಂಸರಾದ ಬ್ರಾಹ್ಮಣರಿಗೆ ದಾನ ಮಾಡುತ್ತೇನೆ) ಎಂದು ಸಂಕಲ್ಪಿಸಬೇಕು ॥

ನಮೋಸ್ತ್ವನಂತಾಯ ಸಹಸ್ರಮೂರ್ತಯೇ ಸಹಸ್ರಪಾದಾಕ್ಷಿ ಶಿರೋರು ಬಾಹವೇ।
ಸಹಸ್ರನಾಮ್ನೇ ಪುರುಷಾಯಶಾಸತೇ ಸಹಸ್ರಕೋಟಿ ಯುಗಧಾರಿಣೇ ನಮಃ ॥
ಸರ್ವೇಭ್ಯೋ ಬ್ರಾಹ್ಮಣೇಭ್ಯೋನಮಃ ಗಂಧಾದಿ ಸಕಲಾರಾಧನೈಃ ಸ್ವರ್ಚಿತಂ ।
ಹಿರಣ್ಯಗರ್ಭ ಗರ್ಭಸ್ಥಂ ಹೇಮಬೀಜಂ ವಿಭಾವಸೋಃ ।
ಅನಂತಪುಣ್ಯ ಫಲದಂ ಅತಶ್ಶಾಂತಿಂ ಪ್ರಯಚ್ಛ ಮೇ ॥

ಪೂರ್ವೋಕ್ತ ಸರ್ವಸ್ತ ದೋಷ ಪ್ರಾಯಶ್ಚಿತ್ತಾರ್ಥಂ, ಪೂರ್ವೋಕ್ತ ಸಂಸ್ಕಾರಗ್ರಹಣ ಯೋಗ್ಯತಾ ಸಿದ್ಧ್ಯರ್ಥಂ, ಇದಂ ಗೋದಾನ ಪ್ರತಿನಿಧಿ ಹಿರಣ್ಯಂ ನಾನಾ ನಾಮ ಗೋತ್ರೇಭ್ಯಃ ಬ್ರಾಹ್ಮಣೇಭ್ಯಃ ತೇಭ್ಯಃ ತೇಭ್ಯಃ ಸಂಪ್ರದದೇ ನಮಮ ನಮಮ ॥

ಮೇಲಿನ ಶ್ಲೋಕವನ್ನು ಹೇಳಿ, ಬ್ರಾಹ್ಮಣರಿಗೆ ಪೂಜಿಸಿ । ನಂತರ ಮೇಲಿರುವ ಇನ್ನೊಂದು ಶ್ಲೋಕವನ್ನು ಮತ್ತು ವಾಕ್ಯಗಳನ್ನು ಹೇಳಿ, ಅಲ್ಲಿರುವ ವಿದ್ವಾಂಸರಾದ ಸಾತ್ವಿಕ ಬ್ರಾಹ್ಮಣರಿಗೆ ಗೋದಾನ ಪ್ರತಿನಿಧಿಯಾದ ಹಣವನ್ನು ದಾನವಾಗಿ ಕೊಡಬೇಕು ॥ ಮತ್ತೂ

ಇದಂ ಸ್ವೀಕೃತ್ಯ, ಮಯಾ ಪೂರ್ವೋಕ್ತ ಯೋ ಯೋ ದೋಷಸ್ತಮಜನಿ ತತ್ತದ್ದೋಷ ಪರಿಹಾರೋಸ್ತ್ವಿತಿ, ಪೂರ್ವೋಕ್ತ ಸಂಸ್ಕಾರಗ್ರಹಣ ಯೋಗ್ಯತಾ ಸಿದ್ಧಿರಸ್ತ್ವಿತಿ ಭವಂತಃ ಅನುಗೃಹ್ಣಂತು ॥ ಇತಿ ಪ್ರಾರ್ಥ್ಯ ॥

ಈ ಪ್ರಾಯಶ್ಚಿತ್ತದಿಂದ, ಮೇಲೆ ತಿಳಿಸಿದ ಎಲ್ಲಾ ದೋಷಗಳೂ ಪರಿಹಾರವಾಗಲಿ ಹಾಗೂ ಸಂಕಲ್ಪಿಸಿರುವ ಸಂಸ್ಕಾರಗಳನ್ನು ಪಡೆಯಲು ಯೋಗ್ಯತೆಯೂ ಸಿಗಲೆಂದು ಬ್ರಾಹ್ಮಣರು ಅನುಗ್ರಹಿಸಿರಿ ಎಂಬ ಅರ್ಥವಿರುವ ಮೇಲಿನ ವಾಕ್ಯಗಳಿಂದ ಅವರಲ್ಲಿ ಪ್ರಾರ್ಥನೆ ಮಾಡಬೇಕು ॥

ಪೂರ್ವೋಕ್ತ ಸಮಸ್ತ ದೋಷ ಪರಿಹಾರೋಸ್ತು – ಪೂರ್ವೋಕ್ತ ಸಮಸ್ತ ಸಂಸ್ಕಾರಗ್ರಹಣ ಯೋಗ್ಯತಾ ಸಿದ್ಧಿರಸ್ತು – ಇತಿ ಪ್ರತಿವಚನಂ ॥

ಬ್ರಾಹ್ಮಣರು, ಮೇಲಿನ ವಾಕ್ಯದಂತೆ ಅನುಗ್ರಹ ಮಾಡಬೇಕು ॥

ಪುಣ್ಯಾಹ – ನಾಂದೀ – ನವಗ್ರಹಾದಿ ಆರಾಧನೆ –

ಅನಂತರಂ ಪ್ರಾಣಾನಾಯಮ್ಯ, ಶುಭೇ ಶೋಭನೇ ಮುಹೂರ್ತೇ... ಶ್ರೀ ಪರಮೇಶ್ವರ ಪ್ರೀತ್ಯರ್ಥಂ ಉದ್ವಾಹಾಂಗಂ, ಕಲಶಪೂಜಾಂ/ ಗುರುಗಣೇಶ ಪೂಜಾಂ/ಪುಣ್ಯಾಹವಾಚನಂ/ ಮಾತೃಕಾಪೂಜಾಂ/ ನಾಂದೀ ಸಮಾರಾಧನಂ/ ಅಂಕುರಾರೋಪಣಂ ನವಗ್ರಹಾದಿಶಾಂತಿಂ / ಅನ್ನದಾನಂ ಚ ಕರಿಷ್ಯೇ ಇತಿ ಸಂಕಲ್ಪ್ಯ– ಕೃತ್ವಾ ॥

ಅನಂತರ ಕಲಶಪೂಜೆ, ಗುರುಗಣೇಶ ಪೂಜೆ, ಪುಣ್ಯಾಹವಾಚನ, ಮಾತೃಕಾಪೂಜೆ, ನಾಂದೀಸಮಾರಾಧನೆ, ಅಂಕುರಾರೋಪಣ, ನವಗ್ರಹಾದಿ ದೇವತಾಶಾಂತಿ, ಅನ್ನದಾನಗಳನ್ನು ಮಾಡುತ್ತೇನೆಂದು ವಧೂ ವರರ ತಂದೆ ತಾಯಿಗಳು ಸಂಕಲ್ಪಿಸಿ, ಮಾಡುವುದು ॥

ತಥಾ ಚ – ವ್ರತೋಪಕ್ರಮಂ, ವ್ರತೋತ್ಸರ್ಜನಂ, ಸಮಾವರ್ತನಂ, ಚ ಕುರ್ಯಾತ್(ಕುರ್ಯುಃ) ॥

ಹಾಗೆಯೇ (ಹುಡುಗನಿಗೆ – ವ್ರತೋಪಕ್ರಮ, ವ್ರತೋತ್ಸರ್ಜನೆ, ಸಮಾವರ್ತನೆ) ಇವೆಲ್ಲವನ್ನೂ ಕ್ರಮವಾಗಿ ಮಾಡಬೇಕು ॥

ವಿವಾಹದ ದಿನ

ವಿವಾಹದ ಹಂತಗಳು–

೧. ವಧುವಿಗೆ ಗೌರೀಪೂಜೆ

(ವಿವಾಹದ ರೀತಿ–ನೀತಿ–ನಿಯಮಗಳನ್ನು ಹೇಳುವ ಗೃಹ್ಯಸೂತ್ರಾದಿಗಳಲ್ಲಿ ಇದು ಇಲ್ಲ, ಹಾಗಾಗಿ ಕಡ್ಡಾಯವಲ್ಲ)

೨. ವರನಿಗೆ ಯಾತ್ರೆ

(ಗ್ರಂಥಗಳ ಅಧ್ಯಯನ ಮಾಡಿ, ವ್ರತೋಪಕ್ರಮ, ವ್ರತೋತ್ಸರ್ಜನ ಸಂಸ್ಕಾರಗಳನ್ನು ಪಡೆದ ವರನು ಲೋಕಾನುಭವಕ್ಕಾಗಿ ಒಳ್ಳೆಯ ಕ್ಷೇತ್ರಗಳ ದರ್ಶನಕ್ಕಾಗಿ ಹೋಗುವಿಕೆ, ಈ ಸಮಯದಲ್ಲಿ ವಧುವಿನ ಪೋಷಕರು ಇವನಿಗೆ ಕನ್ಯೆಯನ್ನು ಕೊಡುವ ಸಲುವಾಗಿ, ತಮ್ಮ ಮನೆಗೆ ಬರುವಂತೆ ಕೇಳುತ್ತಾರೆ, ಇದು ಗೃಹ್ಯಸೂತ್ರದಲ್ಲಿ ಹೇಳಿರುವ ನಿಯಮವಾಗಿದೆ)

೩. ಮಧುಪರ್ಕ

(ಸಮಾವರ್ತನೆಯೆಂಬ ಸಂಸ್ಕಾರವನ್ನು ಪಡೆದ ಹುಡುಗನು ಯಾರ ಮನೆಗೇ ಆಗಲಿ ಮೊದಲಬಾರಿ ಬಂದಾಗ ಆ ಮನೆಯವರು ಅವನಿಗೆ ಸತ್ಕರಿಸುವ ಕ್ರಮ, ಹಾಗಾಗಿ ತಮ್ಮ ಮನವಿಯನ್ನು ಒಪ್ಪಿ ವಧುವಿನ ಮನೆಗೆ ಬಂದಿರುವ, ಸಮಾವರ್ತನ –ಸ್ನಾತಕ ಸಂಸ್ಕಾರವನ್ನು ಪಡೆದಿರುವ ಇವನಿಗೆ ಮಧುಪರ್ಕಕ್ರಮದಿಂದ ಸತ್ಕರಿಸಬೇಕು, ಇದೂ ಸಹಾ ಗೃಹ್ಯಸೂತ್ರದಲ್ಲಿ ಹೇಳಿರುವ ನಿಯಮವಾಗಿದೆ. ಹಾಗೆಯೇ ವರನ ಕಾಲು ತೊಳೆಯಬೇಕಾದರೆ ಮಧುಪರ್ಕ ಪ್ರಾಶನದಲ್ಲಿ, ವರನು ಪಶ್ಚಿಮಾಭಿಮುಖವಾಗಿಯೇ ಇರಬೇಕು)

೪. ಪ್ರವರ

(ಮಧುಪರ್ಕ ಸತ್ಕಾರವಾದಮೇಲೆ, ಹುಡುಗಿಯನ್ನು ನೋಡಿ, ಅವಳ ಗೋತ್ರ–ಪ್ರವರಗಳ ಭಿನ್ನತೆಯನ್ನು ಖಚಿತಪಡಿಸಿಕೊಳ್ಳಲು, ಮಂತ್ರಜ್ಞರಾದ ತನ್ನ ಮಿತ್ರರನ್ನು ವರನು ವಧುವಿನ ಪೋಷಕರ ಬಳಿ ಕಳುಹಿಸುತ್ತಾನೆ. ಅದರಂತೆ

ಆ ಮಿತ್ರರು ಪೋಷಕರಬಳಿ ಬಂದು ವರನ ಗೋತ್ರ–ಪ್ರವರಗಳನ್ನು ಹೇಳಿ, ವಧುವಿನ ಗೋತ್ರವನ್ನೂ ತಿಳಿದುಕೊಂಡು, ತಮ್ಮ ಮಿತ್ರನಿಗೆ ವಧುವನ್ನು ಕೊಡುವಂತೆ ಇವರೂ ಪೊಷಕರಲ್ಲಿ ವಿನಂತಿಸುತ್ತಾರೆ. ಆಗ ಆ ಪೋಷಕರು 'ದಾಸ್ಯಾಮಿ (ಒಪ್ಪಿಗೆ)' ಎಂದು ತಿಳಿಸುತ್ತಾರೆ, ಇದೂ ಸಹಾ ಗೃಹ್ಯಸೂತ್ರದಲ್ಲಿ ಹೇಳಿರುವ ನಿಯಮವಾಗಿದೆ)

೫. ನಿರೀಕ್ಷೆ

(ಹೀಗೆ ಗೋತ್ರ–ಪ್ರವರಗಳ ಭಿನ್ನತೆ ಇತ್ಯಾದಿಗಳನ್ನು ತನ್ನ ಮಿತ್ರರಿಂದ ಖಚಿತಪಡಿಸಿಕೊಂಡ ವರನು ತಾನೂ ವಧುವನ್ನು ನೋಡಲು ಮುಂದಾಗುತ್ತಾನೆ, ಇದೂ ಸಹಾ ಗೃಹ್ಯಸೂತ್ರದಲ್ಲಿ ಹೇಳಿರುವ ನಿಯಮವಾಗಿದೆ)

೬. ಸಂಬಂಧಮಾಲಿಕೆ

(ಹೀಗೆ ವಧೂವರರು ಪರಸ್ಪರ ಮುಂತ್ರೋಕ್ತವಾಗಿ ನೋಡಿಕೊಂಡ ನಂತರ ಸಂಗಾತಿಗಳಾಗುವ ಸಲುವಾಗಿ ಪರಸ್ಪರ ಒಪ್ಪಿಗೆಯಿಂದ ಹಾರವನ್ನು ಹಾಕಿಕೊಳ್ಳುತ್ತಾರೆ, ಇದೂ ಸಹಾ ಗೃಹ್ಯಸೂತ್ರದಲ್ಲಿ ಹೇಳಿರುವ ನಿಯಮವಾಗಿದೆ)

೭. ಸಂಕಲ್ಪ – ಕನ್ಯಾದಾನ

(ಸಂಕಲ್ಪಪೂರ್ವಕವಾಗಿ ತಂದೆತಾಯಿಯರು ಮಾತ್ರವೇ ವಧುವನ್ನು ವರನಿಗೆ ದಾನ ಕೊಡಬೇಕು, ಇದೂ ಸಹಾ ಗೃಹ್ಯಸೂತ್ರದಲ್ಲಿ ಹೇಳಿರುವ ನಿಯಮವಾಗಿದೆ)

೮. ಅಕ್ಷತಾರೋಪಣ

(ಈ ವಿಧಿಯು ಗೃಹ್ಯಸೂತ್ರದಲ್ಲಿ ಇಲ್ಲ, ಆದರೆ ಕಾರಿಕೆಯಲ್ಲಿ ಈ ವಿಧಿಯನ್ನು ಹೇಳಲಾಗಿದೆ)

೯. ಮಾಂಗಲ್ಯಧಾರಣೆ

(ಈ ವಿಧಿಯು ಗೃಹ್ಯಸೂತ್ರದಲ್ಲಿ ಇಲ್ಲ, ಆದರೆ ಕಾರಿಕೆಯಲ್ಲಿ ಈ ವಿಧಿಯನ್ನು ಹೇಳಲಾಗಿದೆ. ಆದರೆ ಕೇವಲ ಪತ್ನಿಗೆ ಪತಿಯು ಮಾತ್ರವೇ ಕಟ್ಟುವ ನಿರ್ದಿಷ್ಟವಾದ ಸರಕ್ಕೇ, ಮಾಂಗಲ್ಯಸರ ವೆಂದು ಕರೆಯಲ್ಪಡುವುದಾದಾಗ, 'ತವರುಮನೆಯು ಮಾಂಗಲ್ಯವೆಂದು' ವಧುವಿನ ತಾಯಿಯು ವಧುವಿಗೆ ಇನ್ನೊಂದು ಮಾಂಗಲ್ಯವನ್ನು ಕಟ್ಟುವುದು ಹಾಸ್ಯಾಸ್ಪದವಷ್ಟೇ ಅಲ್ಲ ದೋಷವೂ ಕೂಡ)

೮. ಸಪ್ತಪದಿ

(ಈ ವಿಧಿಯು ಗೃಹ್ಯಸೂತ್ರದಲ್ಲಿ ಇದೆ, ಅದರಂತೆ ಮಾಡಬೇಕು)

೯. ಪ್ರಧಾನಹೋಮ

(ಈ ವಿಧಿಯು ಗೃಹ್ಯಸೂತ್ರದಲ್ಲಿ ಇದೆ, ಅದರಂತೆ ಮಾಡಬೇಕು)

೧೦. ಲಾಜಾಹೋಮ

(ಈ ವಿಧಿಯು ಗೃಹ್ಯಸೂತ್ರದಲ್ಲಿ ಇದೆ, ಅದರಂತೆ ಮಾಡಬೇಕು)

ಇಲ್ಲಿಗೆ ವಿವಾಹ ಮಂಟಪದಲ್ಲಿ ನಡೆಯುವ ವಿವಾಹಕ್ರಿಯೆಗಳು ಮುಗಿಯಿತು. ನಂತರದ ಈ ಕೆಳಗಿನ ವಿಧಿಗಳನ್ನು ಸೂತ್ರ–ಕಾರಿಕೆ ಮುಂತಾದ ಪ್ರಮಾಣ ಗ್ರಂಥಗಳಲ್ಲಿ ತಿಳಿಸಿರುವಂತೆ ವರನ ಮನೆಯಲ್ಲಿ ಮಾಡಬೇಕು.

೧೧. ವಧೂ–ವರರು, ವರನ ಮನೆಗೆ ಅಗ್ನಿ ಸಮೇತವಾಗಿ ಹೊರಡುವುದು

೧೨. ಪ್ರವಿಶ್ಯ ಹೋಮ

೧೩. ನಕ್ಷತ್ರಗಳ ದರ್ಶನ

೧೪. ಆಗ್ನೇಯಸ್ಥಾಲೀಪಾಕ ಹೋಮ

೧೫. ಔಪಾಸನ ಹೋಮ

೧೬. ಮೂರು ರಾತ್ರಿ ಬ್ರಹ್ಮಚರ್ಯ

೧೭. ನಾಲ್ಕನೇ ದಿನ ರಾತ್ರಿ, ಶೇಷಹೋಮ ಮತ್ತು ಗರ್ಭಾಧಾನ(ಪ್ರಸ್ಥ)

೧೮. ವಧೂ ವರರು, ಪೂರ್ವ–ಪಶ್ಚಿಮವಾಗಿ ಕೂರಬೇಕಾದ ಸಂದರ್ಭಗಳು

ಪಾದ ತೊಳೆಯುವಾಗ – ಮಧುಪರ್ಕದ ಪ್ರಾಶನದಲ್ಲಿ – ಕನ್ಯಾದಾನ ಸ್ವೀಕರಿಸುವಾಗ – ಅಲಂಕಾರ ಮಾಡಿಕೊಳ್ಳುವಾಗ – ವಧುವಿನ ಹುಬ್ಬುಗಳನ್ನು ದರ್ಭೆಯಿಂದ ತಿಕ್ಕುವಿಕೆ – ದರ್ಭೆಯ ಶಿಂಭಿಯನ್ನು ಮತ್ತು ನೊಗವನ್ನು ವಧುವಿನ ತಲೆಯಮೇಲೆ ಇಡುವಿಕೆ – ವಧುವಿಗೆ ಸ್ನಾನ – ಮಾಂಗಲ್ಯ ಧಾರಣೆ – ಅಕ್ಷತಾರೋಪಣೆ – ಸರಬಂಧನ – ಯೋಕ್ತ್ರ ಬಂಧನ....., ಇವಿಷ್ಟೂ ವಿಧಿಗಳನ್ನು ಆಚರಿಸುವಾಗ ವಧೂ ಪೂರ್ವಾಭಿಮುಖವಾಗಿ ಹಾಗೂ ವರ ಪಶ್ಚಿಮಾಭಿಮುಖವಾಗಿಯೇ ಇರಬೇಕು.. (ಕಾರಿಕೆಯಲ್ಲಿ ಈ ವಿಧಿಯನ್ನು ಹೇಳಲಾಗಿದೆ)

ಪಾಡಪ್ರಕ್ಷಾಲನೇ ಚೈವ ಮಧುಪರ್ಕಸ್ಯ ಪ್ರಾಶನೇ ।
ಕನ್ಯಾಸ್ವೀಕೃತಿಕಾಲೇ ತು ಶೋಭನದ್ರವ್ಯ ಧಾರಣೇ ॥
ಭ್ರುವೋರ್ಮಾರ್ಜನಕಾಲೇ ಚ ಕನ್ಯಾಮೂರ್ಧ್ನ್ಯಭಿಷೇಚನೇ ।
ಯೋಕ್ತ್ರಸ್ಯಾವೇಷ್ಟನೇಕಾಲೇ ಮಾಂಗಲ್ಯಸ್ಯ ಚ ಧಾರಣೇ ॥
ವಧ್ವಾಸ್ತಂಡುಲಸಂಪ್ರಾಪ್ತೌ ವರೋ ವಾರುಣದಿಙ್ಮುಖಃ ॥

೧೯. ವರನ (ಪತಿಯು) ಎಡಭಾಗದಲ್ಲಿ, ವಧು(ಪತ್ನಿ)ವು ಕೂರಬೇಕಾದ ಸಂದರ್ಭಗಳು

ಪುಣ್ಯಾಹ, ಸಂಕಲ್ಪ, ಆಶೀರ್ವಾದ ಪಡೆಯುವಾಗ, ಔಪಾಸನ, ರಕ್ಷಾಬಂಧನ, ಪತ್ನಿಯ ಯೋಕ್ತ್ರವಿಮೋಚನ, ಈ ಸಂದರ್ಭಗಳಲ್ಲಿ ಪತಿಯ ಎಡಭಾಗದಲ್ಲಿ ಪತ್ನಿಯು ಇರಬೇಕು ॥

ಪುಣ್ಯಾಹವಾಚನೇ ಚೈವ ಸಂಕಲ್ಪೇಷು ತಥೈವ ಚ ।
ಆಶೀರ್ವಚನಕಾಲೇ ಚ ನಿತ್ಯೌಪಾಸನ ಕರ್ಮಣಿ ।
ರಕ್ಷಾಬಂಧನಕಾಲೇ ಚ ಪತ್ನೀ ಯೋಕ್ತ್ರವಿಮೋಚನೇ ।
ಏತೇಷೂತ್ತರತಸ್ತಿಷ್ಠೇತ್ ವಧೂರನ್ಯತ್ರ ದಕ್ಷಿಣೇ ॥

ಔಪಾಸನ, ಪುಣ್ಯಾಹ, ಸಂಕಲ್ಪ, ಸ್ಥಾಲೀಪಾಕ,???? ಆಗ್ರಯಣ ಇಷ್ಟಿ??, ಯೋಕ್ತ್ರವಿಮೋಚನ, ಅಗ್ನಿಪುನಸ್ಸಂಧಾನ, ಮಲಗುವಾಗ, ??????, ಬ್ರಾಹ್ಮಣರ ಆಶೀರ್ವಾದ ಪಡೆಯುವಾಗ, ರಕ್ಷೆಯನ್ನು ಧರಿಸುವಾಗ, ಇವಿಷ್ಟು ಸಂದರ್ಭಗಳಲ್ಲಿಯೂ ಪತಿಯ ಎಡಭಾಗದಲ್ಲಿ ಪತ್ನಿಯು ಇರಬೇಕು ॥

ಆವಾಂಕರ್ಮಣಿ ನಿತ್ಯಹೋಮಸಮಂಯೇ ಪುಣ್ಯಾಹ ಸಂಕಲ್ಪಂಯೋಃ ।
ಸ್ಥಾಲ್ಯಾಗ್ರೇಣ??? ಚ ಯೋಕ್ತ್ರಮೋಚನೇ ಪುನಸ್ಸಂಧಾನ ಶಯ್ಯೋತ್ಸವೇ ।
ಏತೇಷು ಆದ್ಯಚರೌ??? ಚ ವಿಪ್ರಪಡಿತಾಸು ಆಶೀಕ್ಷುರಕ್ಷಾಧೃತೌ ।
ತಿಷ್ಠೇದುತ್ತರತೋ ವಧೂಃ ಸ್ಮೃತಿವಶಾತ್ ಅನ್ಯತ್ತು ತದ್ದಕ್ಷಿಣೇ ॥

....*********....

೧. ವಧುವು ಮಾಡುವ ಗೌರೀಪೂಜೆಯು

** ವಿವಾಹದ ದಿನ ಪ್ರಾತಃಕಾಲದಲ್ಲಿ ಬೇಗನೇ ಎದ್ದು, ಸ್ನಾನ ಮತ್ತು ಅವರವರಿಗೆ ಸಂಬಂಧಿಸಿದ ನಿತ್ಯಕರ್ಮಗಳನ್ನು ಕಡ್ಡಾಯವಾಗಿ ಮಾಡಿ। ನಂತರ ವಧುವು ಗೌರೀಪೂಜೆ ಮಾಡಬೇಕು ಹಾಗೂ ವರನು ಕಾಶೀಯಾತ್ರೆಗೆ ಸಿದ್ಧನಾಗಬೇಕು ॥ ನಂತರ.....,

೨. ವರನು ದೇಶ(ಕಾಶೀ)ಯಾತ್ರೆಗೆ ಹೊರಡುವುದು

** ಅಲ್ಲಿಯವರೆಗೆ ತಾನು ಸಂಪಾದಿಸಿದ ಜ್ಞಾನದ ವೃದ್ಧಿಗೆ(ಕೋಶ ಓದು!) ಮತ್ತು ಎಲ್ಲರೀತಿಯ ಅನುಭವವನ್ನು(ದೇಶ ಸುತ್ತು!) ಪಡೆಯಲು ಒಳ್ಳೆಯ ಇತಿಹಾಸವುಳ್ಳ ಸ್ಥಳಗಳಿಗೆ ಹೋಗಲು ವರನು, ತಂದೆ,ತಾಯಿ ಹಾಗೂ ಬ್ರಾಹ್ಮಣರ ಒಪ್ಪಿಗೆಯನ್ನು ಪಡೆದು, ವೇದಘೋಷ, ಮಂಗಳವಾದ್ಯಗಳೊಂದಿಗೆ ಬೀಳ್ಕೊಟ್ಟಪನಾಗಿ, ಪೂರ್ವ ಅಥವಾ ಉತ್ತರದಿಕ್ಕಿಗೆ ಹೋಗುತ್ತಿರಲಾಗಿ। ಮಾರ್ಗಮಧ್ಯದಲ್ಲಿ ವಧುವಿನ ಬಂಧುಗಳು, ತಂದೆ, ತಾಯಿಯರ ಭೇಟಿಯಾಗಿ, ಅವರಿಂದ ವರನು ಪುರಸ್ಕಾರಗೊಳ್ಳುತ್ತಾನೆ ॥ ಆಗ.....,

ಬ್ರಾಹ್ಮಣಾನುಜ್ಞೆಯಾ, ವೇದಘೋಷ ಘಂಟಾನಾದ ಮಂಗಳವಾದ್ಯ ಪುರಸ್ಸರಂ, ಪ್ರಾಚೀಮುದೀಚೀಂ ವಾ ಕಾಶೀಯಾತ್ರಾರ್ಥಂ ದಿಶಮುಪನಿಷ್ಕ್ರಮ್ಯ । ಮಾರ್ಗಮಧ್ಯೇ ವಧೂ ಬಂಧುಭಿಃ ಪುರಸ್ಕೃತಃ ॥

ಅಥ ವರಃ ಪ್ರಾರ್ಥ್ಯ

** ವರನು ವಧುವಿನ ಕಡೆಯವರನ್ನು ಕುರಿತು ಈ ರೀತಿ ಹೇಳುತ್ತಾನೆ 'ಬ್ರಹ್ಮಚರ್ಯವನ್ನು ಮಾಡಿದ್ದೇನೆ, ವ್ರತಚತುಷ್ಟಯಗಳನ್ನು ಮಾಡಿದ್ದೇನೆ, ದೇಶ(ಕಾಶ)ಯಾತ್ರೆಗೆ ಹೋಗುತ್ತೇನೆ ಒಳ್ಳೆಯ ರೀತಿಯಲ್ಲಿ ಒಪ್ಪಿಗೆಯನ್ನು ಕೊಡಿರಿ' ಎಂದು ॥

ಚರಿತ । ಬ್ರಹ್ಮಚರ್ಯೋಽಹಂ । ಕೃತ । ವ್ರತಚತುಷ್ಟಯಃ ॥
ಕಾಶೀ ಯಾತ್ರಾಂ । ಗಮಿಷ್ಯಾಮಿ । ಅನುಜ್ಞಾಂ । ದೇಹಿ ಮೇ । ಶುಭಾಮ್ ॥

ವಧೂ ಪಿತುಃ–

** ವಧುವಿನ ತಂದೆಯು ಈ ರೀತಿಯಾಗಿ ವರನಿಗೆ ಹೇಳುತ್ತಾರೆ, 'ಒಳ್ಳೆಯ ರೀತಿ ಅಲಂಕೃತಳಾದ ನನ್ನ ಮಗಳನ್ನು ನಿನಗೆ ಕೊಡುತ್ತೇನೆ ಕೈಯನ್ನು ಹಿಡಿದು ಅಗ್ನಿಸಮೇತವಾಗಿ ಹೋಗು, ಈಗ ನಮ್ಮ ಮನೆಗೆ ಅದಕ್ಕಾಗಿ ಬಾ' ಎಂದು ಪ್ರಾರ್ಥಿಸುತ್ತಾನೆ ॥

ಸಾಲಂಕಾರಾಂ । ಮಮಸುತಾಂ । ಕನ್ಯಾಂ । ದಾಸ್ಯಾಮಿ ತೇ । ದ್ವಿಜ ॥
ಪಾಣಿಂ । ಗೃಹೀತ್ವಾ । ಸಾಗ್ನಿಸ್ತ್ವಂ । ಗಚ್ಛಸ್ವ । ಆಗಚ್ಛ । ಮದ್ಗೃಹಮ್ ॥

** ಹೀಗೆ ಕನ್ಯಾಪಿತೃವು ಹೇಳಲಾಗಿ ಅವರ ಮಾತನ್ನು ಒಪ್ಪಿಕೊಂಡು ಅವರಿಗೆ ನಮಸ್ಕರಿಸಿ । ನಂತರ ಮಾಲೆಯನ್ನು ಧರಿಸಿಕೊಂಡು ಬ್ರಾಹ್ಮಣರು ಸುವಾಸಿನಿಯರು ಲಾಜಾಕ್ಷತೆಗಳೊಂದಿಗೆ ವೇದ ಪಾರಾಯಣ ಘಂಟಾನಾದ ಮಂಗಳವಾದ್ಯ ಪುರಸ್ಸರವಾಗಿ ಅವರೊಡನೆ ವರನು ಅವರ ಮನೆಯನ್ನು ಪ್ರವೇಶಿಸುತ್ತಾನೆ ॥

ಕನ್ಯಾ ಪಿತುಃ ಇತ್ಯುಕ್ತೇ, ತೇಷಾಂ ವಾಕ್ಯಂ ಅಂಗೀಕೃತ್ಯ ನಮಸ್ಕೃತ್ಯ । ಅನಂತರಂ ಧೃತ ಮಾಲಃ ಸಾಕ್ಷತ ಲಾಜಾ ಹಸ್ತೈಃ ಬ್ರಾಹ್ಮಣ ಸುವಾಸಿನೀಭಿಃ ಮಂಗಳದ್ರವ್ಯಯುತೈಃ ವೇದಘೋಷ ಘಂಟಾನಾದ ಮಂಗಳವಾದ್ಯ ಪೂರ್ವಕಂ ತೈಃ ಸಹ ವರೋಗೃಹಂ ಪ್ರವಿಶೇತ್ ॥

೩. ಸಮಾವರ್ತನೆಯಾದ ಯಾವ ಪುರುಷನು ಯಾರ ಮನೆಗೇ ಮೊದಲಬಾರಿಗೆ ಬಂದರೂ ಅವನಿಗೆ ಆ ಮನೆಯವರು ಸತ್ಕರಿಸುವ ಶಾಸ್ತ್ರೀಯ ರೀತಿಯೇ ಮಧುಪರ್ಕವೆಂಬ ವಿಧಿಯು

** ಕರ್ತೃವು, ಪ್ರಾಣಾಯಾಮ ಮಾಡಿ, ಪರಮೇಶ್ವರನ ಪ್ರೀತ್ಯರ್ಥವಾಗಿ, ನಮ್ಮಲ್ಲಿಗೆ ಬಂದಿರುವ ಈ ಸ್ನಾತಕನಾದವನಿಗೆ ಮಧುಪರ್ಕವೆಂಬ ಕರ್ಮದಿಂದ ಪೂಜಿಸುತ್ತೇನೆ ಎಂದು ಸಂಕಲ್ಪ ಮಾಡಬೇಕು ॥

ಸ ಘೃತೇನ ಚರುಶೇಷೇಣ ಬ್ರಾಹ್ಮಣಂ ದಕ್ಷಿಣತೋ ದರ್ಭೇಷು ನಿಷಣ್ಣಂ ಭೋಜಯೇತ್ । ಆಗ್ನೇಯಂ ಸ್ಥಾಲೀಪಾಕ ಸಾಂಗತಾ ಫಲ ಸಿದ್ಧ್ಯರ್ಥಂ ಋಷಭಂ ದದಾಮಿ ಇತಿ ಸಂಕಲ್ಪ್ಯ, ದತ್ವಾ (ಅಭಾವೇ – ಋಷಭದಕ್ಷಿಣಾ ಪ್ರತ್ಯಾವ್ಮಾಯತ್ವೇನ ಯತ್ಕಿಂಚಿತ್ ಹಿರಣ್ಯಂ ಆಚಾರ್ಯಾಯ ದದ್ಯಾತ್) । ಏವಮೇವ ಪ್ರತಿಪರ್ವಸ್ಥಾಲೀಪಾಕಃ । ಪರಂತು, ಮುಖಾಂತೋ ವಿಶೇಷಃ । ಋಷಭದಕ್ಷಿಣಾ ವರ್ಜ್ಯಂ ॥

೧೭. ಔಪಾಸನ ಹೋಮವು –

** ಆಚಮನ, ಆಸನ ವಿಧಿ, ಪ್ರಾಣಾಯಾಮ ಮಾಡಿ ಶುಭೇ ಪರಮೇಶ್ವರ ಪ್ರೀತ್ಯರ್ಥವಾಗಿ, ಈ ಹೊಸದಾಗಿ ಮದುವೆ ಮಾಡಿಕೊಂಡಿರುವ ಈ ವಧುವಿನೊಡನೆ ಔಪಾಸನವನ್ನು

ಆರಂಭ ಮಾಡುತ್ತೇನೆ । ಯಾವಜ್ಜೀವ ಪರ್ಯಂತವಾಗಿ ಮಾಡುತ್ತೇನೆ ಎಂದು ಸಂಕಲ್ಪಿಸಿ । ಅಗ್ನ್ಯಾಧಾನದ ವರೆವಿಗಾದರೂ ಮಾಡುತ್ತೇನೆ ಯಾವ ಯಾವ ಕಾಲದಲ್ಲಿ ಯಾವ ಯಾವ ಪ್ರಾಂತ್ಯದಲ್ಲಿ ಲಭ್ಯವಿರುವ ಆಹಾರ ದ್ರವ್ಯದಿಂದ ಹೋಮಿಸುತ್ತೇನೆ ॥

ಆಚಮ್ಯ, ಆಸನವಿಧಿಃ, ಪ್ರಾಣಾನಾಯಮ್ಯ ಶುಭೇ.....ಪ್ರೀತ್ಯರ್ಥಂ, ಅನಯಾ ನವೋಢಯಾ ವಧ್ವಾ ಸಹ, ಔಪಾಸನಮಾರಪ್ಸ್ಯೇ ಇತಿ ಸಂಕಲ್ಪ್ಯ । ತೇನ ಯಾವಜ್ಜೀವಂ ಯಾವದಾಧಾನಂ ವಾ ಯಥೋಪಪನ್ನಕಾಲೇ ಯಥೋಪಪನ್ನೇನ ದ್ರವ್ಯೇಣ ಹೋಷ್ಯಾಮೀತ್ಯಾರಂಭ ಸಂಕಲ್ಪಃ ॥

ಸಾಯುವೌಪಾಸನ ಹೋಮ

** ಆಚಮನ, ಅಸನ ವಿಧಿ, ಪ್ರಾಣಾಯಾಮ ಮಾಡಿ ಶುಭೇ ಪರಮೇಶ್ವರ ಪ್ರೀತ್ಯರ್ಥವಾಗಿ, ಈ ಹೊಸದಾಗಿ ಮದುವೆ ಮಾಡಿಕೊಂಡಿರುವ ಈ ವಧುವಿನೊಡನೆ ಸಾಯಂ ಕಾಲದ ಔಪಾಸನವನ್ನು ಅಕ್ಕಿಯಿಂದ ಹೋಮಿಸುತ್ತೇನೆ ಎಂದು ಸಂಕಲ್ಪಿಸಿ ॥

ಅನಯಾ ನವೋಢಯಾ ವಧ್ವಾ ಸಹ ಸಾಯಂ(ಪ್ರಾತಃ) ಔಪಾಸನಂ ತಂಡುಲ್ಯೈಃ ಹೋಷ್ಯಾಮಿ ಇತಿ ಸಂಕಲ್ಪ್ಯ ।

** ಅಗ್ನೇನಯ, ಮಂತ್ರದಿಂದ ಅಗ್ನಿಯನ್ನು ಪ್ರಾರ್ಥಿಸಿ ।

ಅಗ್ನೇನಯು ಇತ್ಯಗ್ನಿಂ ಪ್ರಾರ್ಥ್ಯ,

ಅಗ್ನೇನಯ । ಸುಪಥಾ ರಾಯೇ । ಅಸ್ಮಾನ್ । ವಿಶ್ವಾನಿ ದೇವ । ವಯುನಾನಿ ವಿದ್ವಾನ್ ॥ ಯುಯೋಧ್ಯಸ್ಮತ್ । ಜುಹುರಾಣಂ । ಏನಃ । ಭೂಯಿಷ್ಠಾಂತೇ । ನಮ ಉಕ್ತಿಂ । ವಿಧೇಮ ॥

** ಪರಿಷೇಚನವನ್ನು ಮಾಡಿ । ಅಲಂಕರಿಸಿ । ತೊಳೆದ ಅಕ್ಕಿಯನ್ನು ತೆಗೆದುಕೊಂಡು । ತುಪ್ಪವನ್ನು ಹಾಕಿ । ಕೈಯಲ್ಲಿರುವ ಅಕ್ಕಿಯನ್ನು ೨ ಭಾಗಗಳನ್ನಾಗಿ ವಿಂಗಡಿಸಿ ।

ಪರಿಷಿಚ್ಯ । ಅಲಂಕೃತ್ಯ । ತಂಡುಲಮಾದಾಯ । ಅಭಿಘಾರ್ಯ । ದ್ವೇಧಾವಿಭಜ್ಯ ।

** ಅಗ್ನಯೇ, ಸ್ವಾಹಾ ಎಂದು ಮಧ್ಯದಲ್ಲಿ ಹೋಮಿಸಬೇಕು ಅಗ್ನಯ, ಇದಂ ನಮಮ ಹೇಳಬೇಕು। ಸಂಜೆಯ ಹೋಮದಲ್ಲಿ, ಅಗ್ನಯೇಸ್ವಾಹಾ ಹಾಗೂ ಬೆಳಗಿನ ಹೋಮದಲ್ಲಿ ಸೂರ್ಯಾಯಸ್ವಾಹಾ, ಎಂಬುದು ಮಂತ್ರಗಳು ॥

ಓಂ ಅಗ್ನಯೇ ಸ್ವಾ॒ಹಾ ॥ ಅಗ್ನಯ ಇದಂ ನಮಮ ॥

(ಪ್ರಾತಃ – ಓಂ ಸೂರ್ಯಾ॒ಯ ಸ್ವಾ॒ಹಾ – ಸೂರ್ಯಾಯ ಇದಂ ನಮಮ) ॥

** ಅಗ್ನಯೇ ಸ್ವಿಷ್ಟಕೃತೇ ಸ್ವಾಹಾ ಎಂದು ಈಶಾನ್ಯದಲ್ಲಿ ೨ ನೇ ಆಹುತಿ ಹೋಮಿಸಬೇಕು ॥

ಓಂ ಅಗ್ನ॒ಯೇ॒ ಸ್ವಿ॒ಷ್ಟಕೃ॒ತೇ॒ ಸ್ವಾ॒ಹಾ ॥ ಅಗ್ನಯೇ ಸ್ವಿಷ್ಟಕೃತ ಇದಂ ನಮಮ ॥

** ಉತ್ತರ ಪರಿಷೇಚನವನ್ನು ಮಾಡಿ। ಆಗ್ನೇನಯ, ಮಂತ್ರದಿಂದ ಅಗ್ನಿಯನ್ನು ಉಪಸ್ಥಾನ ಮಾಡಿ। ಸ್ವಸ್ತಿ ಶ್ರದ್ಧಾಂ, ಎಂದು ಪ್ರಾರ್ಥಿಸಿ ಅಭಿವಾದಯೇ(ನಮಸ್ಕಾರ) ಮಾಡಬೇಕು।

ಉತ್ತರ ಪರಿಷೇಚನಂ ಕೃತ್ವಾ । ಆಗ್ನೇನಯ..., ಇತ್ಯಗ್ನಿಂ ವಧೂವರೌ ಪ್ರದಕ್ಷಿಣೇ ಕೃತ್ಯ । ಸ್ವಸ್ತಿಶ್ರದ್ಧಾಂ..., ಇತಿ ಪ್ರಾರ್ಥ್ಯ, ನಮಸ್ಕೃತ್ಯ ।

ಆಗ್ನೇನ॑ಯ । ಸು॒ಪ॒ಥಾ ರಾ॒ಯೇ । ಅ॒ಸ್ಮಾ॒ನ್ । ವಿ॒ಶ್ವಾ॒ನಿ ದೇ॒ವ । ವ॒ಯು॒ನಾ॒ನಿ ವಿ॒ದ್ವಾ॒ನ್ ॥ ಯು॒ಯೋ॒ಧ್ಯ॒ಸ್ಮ॒ತ್ । ಜು॒ಹು॒ರಾ॒ಣಂ । ಏ॒ನಃ । ಭೂ॒ಯಿ॒ಷ್ಠಾಂ॒ತೇ । ನ॒ಮ॒ ಉ॒ಕ್ತಿಂ । ವಿ॒ಧೇ॒ಮ॒ ॥

ಓಂ ಸ್ವಸ್ತಿಶ್ರದ್ಧಾಂ ಮೇಧಾಂ ಯಶಃ ಪ್ರಜ್ಞಾಂ ವಿದ್ಯಾಂ ಬುದ್ಧಿಂ ಶ್ರಿಯಂ ಬಲಮ್ । ಆಯುಷ್ಯಂ ತೇಜಮಾರೋಗ್ಯಂ ದೇಹಿ ಮೇ ಹವ್ಯವಾಹನ ॥

** ಕುಳಿತುಕೊಂಡು, ಬೃಹತ್ ಸಾಮ, ಮಂತ್ರದಿಂದ ರಕ್ಷೆಯನ್ನು ತೆಗೆದುಕೊಂಡು ಮೇಧಾವೀ, ಮುಂತಾದ ವಾಕ್ಯಗಳಿಂದ ರಕ್ಷೆಯನ್ನು ಹಾಕಿಕೊಂಡು ॥

ಉಪವಿಶ್ಯ, ಮೇಧಾವೀ ಭೂಯಾಸಂ ಇತಿ ರಕ್ಷಾಂ ಧೃತ್ವಾ ॥

ಓಂ ಮೇಧಾವೀ ಭೂಯಾಸಂ । ತೇಜಸ್ವೀ ಭೂಯಾಸಂ । ವರ್ಚಸ್ವೀ ಭೂಯಾಸಂ । ಬ್ರಹ್ಮವರ್ಚಸೀ ಭೂಯಾಸಂ । ಆಯುಷ್ಮಾನ್ ಭೂಯಾಸಂ । ಅನ್ನಾದೋ ಭೂಯಾಸಂ । ಸರ್ವಸಮೃದ್ಧೋ ಭೂಯಾಸಮ್ ॥

** ನಂತರ ಈ ಕೆಳಗಿನಂತೆ ಹೇಳಿ, ಮಾಡಿರುವ ಎಲ್ಲ ಕರ್ಮಗಳನ್ನೂ ಭಗವಂತನಿಗೆ ಅರ್ಪಿಸುವುದು ॥

ಯಸ್ಯಸ್ಮೃತ್ಯಾ ಚ ನಾಮೋಕ್ತ್ಯಾ ತಪಃ ಕರ್ಮ ಕ್ರಿಯಾದಿಷು । ನ್ಯೂನಂ ಸಂಪೂರ್ಣತಾಂ ಯಾತು ಸದ್ಯೋ ವಂದೇ ತಮಚ್ಯುತಂ । ಮಂತ್ರಹೀನಂ ಕ್ರಿಯಾಹೀನಂ ಭಕ್ತಿಹೀನಂ ಜನಾರ್ದನ । ಯತ್ಕೃತಂ ತು ಮಯಾ ದೇವ ಪರಿಪೂರ್ಣಂ ತದಸ್ತು ಮೇ । ಅನೇನ ಮಯಾ ಆಚರಿತ ಕರ್ಮಣಾ ಭಗವಾನ್ ಸರ್ವಾತ್ಮಕಃ ವಾಸುದೇವಃ ಪ್ರೀಯತಾಂ ।

ಮಧ್ಯೇ ಮಂತ್ರ ತಂತ್ರ ಸ್ವರ ವರ್ಣ ನ್ಯೂನ ಅತಿರಿಕ್ತ ಲೋಪ ದೋಷ ಪ್ರಾಯಶ್ಚಿತ್ತಾರ್ಥಂ ಮಹಾಮಂತ್ರ ಜಪಂ ಕರಿಷ್ಯೇ । ಅಚ್ಯುತಾಯ ನಮಃ । ಅನಂತಾಯ ನಮಃ । ಗೋವಿಂದಾಯ ನಮಃ ॥

** ಆಚಮನವನ್ನು ಮಾಡಿ, ಆಸನವಿಧಿಯನ್ನೂ ಸಹಾ ಕೆಳಗಿನಂತೆ ಮಾಡುವುದು ॥

ಆಚಮ್ಯ, ಆಸನವಿಧಿಂ ಚ ಕುರ್ಯಾತ್ ।

ಓಂ ಆದ್ಯಾನೋ ದೇವ । ಸವಿತಃ । ಪ್ರಜಾವತ್ಸಾವೀಃ । ಸೌಭಗಂ ॥ ಪರಾ । ದುಷ್ವಪ್ನಿಯಂ । ಸುವ ॥ ವಿಶ್ವಾನಿ ದೇವ । ಸವಿತಃ । ದುರಿತಾನಿ । ಪರಾಸುವ ॥ ಯದ್ಭದ್ರಂ । ತನ್ನ ಆಸುವ ॥ ಮಯಿ ಮಹಃ । ಮಯಿ ಯಶಃ । ಮಯೀಂದ್ರಿಯಂ । ವೀರ್ಯಮ್ ॥

** ಅಗ್ನಿ ಮತ್ತು ವಧೂವರರಿಗೆ ಆರತಿಯನ್ನು ಮಾಡಬೇಕು ।

ಆರತಿಕಂ ಕುರ್ಯಾತ್ ।

** ಔಪಾಸನಾಗ್ನಿಯು ಸ್ವತಃ ತಾನೇ ಪ್ರಜ್ವಲಿತವಾದರೆ ಅದು ದೋಷವು, ಹಾಗಾಗಿ ಉದ್ದೀಪ್ಯಸ್ವ, ೨ ಮಂತ್ರಗಳಿಂದ ಪ್ರಾಯಶ್ಚಿತ್ತ ರೂಪವಾಗಿ ೨ ಸಮಿತ್ತುಗಳನ್ನು ಹೋಮಿಸಬೇಕು ।

ಔಪಾಸನಾಗ್ನೌ ಸ್ವಯಂ ಪ್ರಜ್ವಲಿತೇ ಉದ್ದೀಪ್ಯಸ್ವ, ಇತಿ ದ್ವಾಭ್ಯಾಂ ದ್ವೇ ಸಮಿಧಾ ವಾ ದಧ್ಯಾತ್,

ಓಂ ಉದ್ದೀಪ್ಯಸ್ವ । ಜಾತವೇದಃ । ಅಪಘ್ನಂ । ನಿರ್ಋತಿಂ । ಮಮ ॥
ಪಶೂಗ್ಂಶ್ಚ । ಮಹ್ಯಮಾವಹ । ಜೀವನಂ ಚ । ದಿಶೋದಿಶ ॥

ಮಾನೋಹಿಗ್ಂಸೀತ್ । ಜಾತವೇದಃ । ಗಾಮಶ್ವಂ । ಪುರುಷಂ ಜಗತ್ ॥
ಅಬಿಭ್ರತ್ । ಅಗ್ನ ಆಗಹಿ । ಶ್ರಿಯಾಮಾ । ಪರಿಪಾತಯ ॥

** ಔಪಾಸನಾ ಹೋಮವಾದನಂತರ ಮಡಿಕೆಯೇ ಮೊದಲಾದ ಪಾತ್ರೆಗಳಿಂದ ಅದನ್ನು ಸಂರಕ್ಷಿಸಬೇಕು ॥

ಅಗ್ನಿಂ ಉಪಾಯಾಂ ಸಮೋಪ್ಯ ॥

೧೮. ಮೂರುರಾತ್ರಿಗಳು ಬ್ರಹ್ಮಚರ್ಯಪಾಲನೆ –

** ಸಾಯಮೌಪಾಸನದ ಆರಂಭದಿಂದ, ೩ ರಾತ್ರಿಗಳು ಇಬ್ಬರೂ ನೆಲದಮೇಲೆ ಮಲಗಬೇಕು ಬ್ರಹ್ಮಚರ್ಯದಲ್ಲಿರಬೇಕು । ಉಪ್ಪುಖಾರದ ಆಹಾರವನ್ನು ಬಿಡಬೇಕು । ಆ ಮಲಗುವ ಜಾಗದ ಮಧ್ಯದಲ್ಲಿ ನೈಯ್ಯಗ್ರೋಧ, ಔದುಂಬರ, ಅಶ್ವತ್ಥ, ಪ್ಲಕ್ಷ ಅಥವಾ ಬೇರೆ ಯಾವುದಾದರೂ, ೧೬ ಅಂಗುಲ ಉದ್ದವಿರುವ ಒಂದು ದಂಡಕ್ಕೆ ಗಂಧವನ್ನು ಹಚ್ಚಿ ಅದರಮೇಲೆ ವಸ್ತ್ರವನ್ನು ಅಥವಾ ೨೪ ಅಂಗುಲ ಉದ್ದವಿರುವ ದಾರವನ್ನು ಸುತ್ತಿ । ಆ ದಂಡದಲ್ಲಿ ವಿಶ್ವಾವಸು ಗಂಧರ್ವರನ್ನು ಆವಾಹಿಸಿ । ಉಪಚಾರಗಳಿಂದ ಪೂಜಿಸಬೇಕು ॥

ತತಸ್ತ್ರಿರಾತ್ರಮುಭಯೋರಧಃ ಶಯ್ಯಾ ಬ್ರಹ್ಮಚರ್ಯಮ್ । ಕ್ಷಾರಲವಣ ವರ್ಜನಂ ಚ । ತಯೋಃ ಶಯ್ಯಾಮಂತರೇಣ ನ್ಯೆಯ್ಯಗ್ರೋಧ, ಔದುಂಬರ, ಆಶ್ವತ್ಥ, ಪ್ಲಾಕ್ಷಾನಾಂ ಅನ್ಯತಮಂ ವಾ ಗಂಧಲಿಪ್ತಂ ವಾಸಸಾ ಸೂತ್ರೇಣ

ವಾ ಪರಿವೀತಮ್ । ವಿಶ್ವಾವಸುಮಾವಾಹ್ಯ । ಧ್ಯಾನಾದಿ ಉಪಚಾರ ಪೂಜಾಂ ಕೃತ್ವಾ, ಸ್ಥಾಪಯೇತ್ ॥

** ಹೇ ವಿಶ್ವಾವಸುವೇ, ಈ ದಂಡದಲ್ಲಿ ೩ ರಾತ್ರಿಗಳು ವಾಸವಾಗಿರು । ನಮ್ಮಿಬ್ಬರಿಗೂ ಪ್ರೀತಿಯನ್ನು ಉಂಟುಮಾಡಿ ರಕ್ಷಿಸು ಎಂದು ಪ್ರಾರ್ಥಿಸಿ ಆ ಸಮಿತ್ತುಗಳನ್ನು ಮಲಗುವ ಜಾಗದಲ್ಲಿ ಅವರಿಬ್ಬರ ಮಧ್ಯದಲ್ಲಿ ಇಡಬೇಕು । ಬ್ರಹ್ಮಚರ್ಯವನ್ನು ಪಾಲಿಸಬೇಕು ॥

ವಿಶ್ವಾವಸೋತ್ರ ಗಂಧರ್ವ ದಂಡೇರಾತ್ರಿತ್ರಯಂ ವಸಾ ।
ಆವಯೋಃ ಪ್ರೀತಿಮುತ್ಪಾದ್ಯ ರಕ್ಷ ನೌ ಸುಫಲಪ್ರದ ॥
ಇತಿ ವಿಶ್ವಾವಸುಂ ಧ್ಯಾಯೇತ್ ।

೧೯. ಶೇಷ ಹೋಮವು –

** ಔಪಾಸನ ಆರಂಭದ ದಿನದಿಂದ, ೪ ನೇ ದಿನ ಅರ್ಧರಾತ್ರಿ (ಎರಡನೇ ಯಾಮ)ಯಲ್ಲಿ । ಆಚಮನ, ಆಸನ ವಿಧಿ, ಪ್ರಾಣಾಯಾಮ ಮಾಡಿ, ಶುಭೇ, ಪರಮೇಶ್ವರ ಪ್ರೀತ್ಯರ್ಥವಾಗಿ ಈ ಹೊಸದಾಗಿ ಮದುವೆ ಮಾಡಿಕೊಂಡಿರುವ ಈ ವಧುವಿನೊಡನೆ ವಿವಾಹದ ಶೇಷಹವನವನ್ನು ಮಾಡುತ್ತೇನೆ ಎಂದು ಸಂಕಲ್ಪಿಸುವುದು ।

ತತಃ ಚತುರ್ಥ್ಯಾಂ ಅಪರರಾತ್ರೇ । ಆಚಮ್ಯ, ಆಸನವಿಧಿಃ, ಪ್ರಾಣಾನಾಯಮ್ಯ, ಅನಯಾ ನವೋಢಯಾ ವಧ್ವಾಸಹ ವಿವಾಹ ಶೇಷಹೋಮಂ ಕರಿಷ್ಯೇ ಇತಿ ಸಂಕಲ್ಪ್ಯ ।

** ವಿವಾಹವಾಗಿ ಶೇಷಹವನಗಳ ಮಧ್ಯದ ದಿನಗಳಲ್ಲಿ ಸಂಭವಿಸಿರಬಹುದಾದ ಉಪ್ಪು ಖಾರ ಆಹಾರಗಳ ಸೇವನೆಯ ದೋಷ ಪರಿಹಾರಕ್ಕಾಗಿ, ಶ್ರೀ ಲಕ್ಷ್ಮೀನಾರಾಯಣ ಪ್ರೀತ್ಯರ್ಥವಾಗಿ ಕೃಚ್ಛ್ರಾಚರಣೆ ಮಾಡುತ್ತೇನೆ ಅಥವಾ ಅದರ ಬದಲಾಗಿ ಯಥಾಶಕ್ತಿ ಹಿರಣ್ಯದಾನ ಮಾಡುತ್ತೇನೆ ಎಂದು ಸಂಕಲ್ಪಿಸಿ ಆಚರಿಸುವುದು ।

ವಿವಾಹ ಶೇಷಹವನೋರ್ಮಧ್ಯೇ ಕ್ಷಾರಲವಣ ಭೋಜನ ಜನಿತ ದೋಷಪರಿಹಾರದ್ವಾರಾ ಶ್ರೀ ಲಕ್ಷ್ಮೀನಾರಾಯಣ ಪ್ರೀತ್ಯರ್ಥಂ ಕೃಚ್ಛ್ರಪ್ರತಿನಿಧಿ ಯಥಾಶಕ್ತಿ ಹಿರಣ್ಯದಾನಂ ಕರಿಷ್ಯೇ ಇತಿ ಸಂಕಲ್ಪ್ಯ, ದತ್ವಾ ।

** ನಂತರ ಗಣಪತಿಪೂಜೆಯನ್ನು, ಪುಣ್ಯಾಹವಾಚನವನ್ನು ಮಾಡುತ್ತೇನೆಂದು ಸಂಕಲ್ಪಿಸುವುದು ಹಾಗೂ ಮಾಡುವುದು ॥

ಗಣಪತಿಪೂಜಾಂ, ಸ್ವಸ್ತಿಪುಣ್ಯಾಹವಾಚನಂ ಚ ಕರಿಷ್ಯೇ ಇತಿ ಸಂಕಲ್ಪ್ಯ – ಕುರ್ಯಾತ್ ॥

ವಿಶ್ವಾವಸು ದಂಡದ (ಬ್ರಹ್ಮಚರ್ಯ)ವಿಸರ್ಜನೆ –

** ಉದೀಷ್ವರ್ತ, ಎಂಬ ೨ ಮಂತ್ರಗಳಿಂದ ಆ ಸಮಿತ್ತುಗಳನ್ನು ತೆಗೆದು । ತೊಳೆದು ಬೇರಕಡೆ ಹಾಕಬೇಕು(ವಿಸರ್ಜಿಸಬೇಕು) ॥

ಉದೀಷ್ವರ್ತ, ಇತಿ ದ್ವಾಭ್ಯಾಂ ದಂಡಮುತ್ಥಾಪ್ಯ, ಪ್ರಕ್ಷಾಳ್ಯ, ಶಯನಾದನ್ಯತ್ರ ನಿದಧಾತಿ ।

ಓಂ ಉದೀಷ್ವರ್ತಃ । ವಿಶ್ವಾವಸೋ । ನಮಸಾ । ಇಡಾಮಹೇ ತ್ವಾ ॥ ಅನ್ಯಾಮಿಚ್ಛ । ಪ್ರಫರ್ವ್ಯಂ । ಸಂಜಾಯಾಂ । ಪತ್ಯಾ ಸೃಜ ॥

ಉದೀಷ್ವರ್ತಃ । ಪತಿವತಿ । ಹ್ಯೇಷಾ । ವಿಶ್ವಾವಸುಂ । ನಮಸಾ । ಗೀರ್ಭಿರೀಟ್ಟೇ ॥ ಅನ್ಯಾಮಿಚ್ಛ । ಪಿತೃಷದಂ । ವ್ಯಕ್ತಾಂ । ಸತೇಭಾಗಃ । ಜನುಷಾ । ತಸ್ಯ ವಿದ್ಧಿ ॥

** ಶ್ಯಂಗಿ ಹೆಸರಿನ ಅಗ್ನಿಯು(ಔಪಾಸನಾಗ್ನಿ) ಉರಿಸುವಿಕೆಯೇ ಮೊದಲಾಗಿ, ಷಟ್ಪಾತ್ರಪ್ರಯೋಗವನ್ನು ಆಜ್ಯಭಾಗಾಂತದವರೆಗೆ (ಮುಖಾಹುತಿಯು ಇಲ್ಲ) ಮಾಡಿ, ಅಗ್ನೇಪ್ರಾಯಶ್ಚಿತ್ತೇ, ಎಂಬ ೭ ಮಂತ್ರಗಳಿಂದ ಆಜ್ಯದಿಂದ ಹೋಮಿಸಬೇಕು ॥

ಶ್ಯಂಗಿನಾಮ ಅಗ್ನೇಃ ಉಪಸಮಾಧಾನಾದಿ(ಷಟ್ಪಾತ್ರ) ಆಜ್ಯಾಭಾಗಾಂತೇ । ಅಗ್ನೇ ಪ್ರಾಯಶ್ಚಿತ್ತ, ಇತಿ ಸಪ್ತಾಜ್ಯಾಹುತೀರ್ಜುಹೋತಿ,

ಓಂ ಅಗ್ನೇ ಪ್ರಾಯಶ್ಚಿತ್ತೇ । ತ್ವಂ ದೇವಾನಾಂ । ಪ್ರಾಯಶ್ಚಿತ್ತಿರಸಿ । ಬ್ರಾಹ್ಮಣಸ್ತ್ವ । ನಾಥಕಾಮಃ । ಪ್ರಪದ್ಯೇ । ಯಾಸ್ಯಾಂ ಪತಿಘ್ನೇ ।

ತನೂಃ ಪ್ರಜಾಫ್ನೀ । ಪಶುಫ್ನೀ । ಲಕ್ಷ್ಮಫ್ನೀ । ಜಾರಫ್ನೀಂ । ಅಸ್ಯೈತಾಂ ।
ಕೃಣೋಮಿ । ಸ್ವಾಹಾ – ಅಗ್ನಯೇ ಪ್ರಾಯಶ್ಚಿತ್ತ ಇದಂ ನಮಮ ।

ಓಂ ವಾಯೋ ಪ್ರಾಯಶ್ಚಿತ್ತೇ । ತ್ವಂ ದೇವಾನಾಂ । ಪ್ರಾಯಶ್ಚಿತ್ತಿರಸಿ ।
ಬ್ರಾಹ್ಮಣಸ್ತ್ವ । ನಾಥಕಾಮಃ । ಪ್ರಪದ್ಯೇ । ಯಾಸ್ಯಾಂ ಪತಿಫ್ನೀ ।
ತನೂಃ ಪ್ರಜಾಫ್ನೀ । ಪಶುಫ್ನೀ । ಲಕ್ಷ್ಮಫ್ನೀ । ಜಾರಫ್ನೀಂ । ಅಸ್ಯೈತಾಂ ।
ಕೃಣೋಮಿ । ಸ್ವಾಹಾ – ವಾಯವೇ ಪ್ರಾಯಶ್ಚಿತ್ತ ಇದಂ ನಮಮ ।

ಓಂ ಆದಿತ್ಯ ಪ್ರಾಯಶ್ಚಿತ್ತೇ । ತ್ವಂ ದೇವಾನಾಂ । ಪ್ರಾಯಶ್ಚಿತ್ತಿರಸಿ ।
ಬ್ರಾಹ್ಮಣಸ್ತ್ವ । ನಾಥಕಾಮಃ । ಪ್ರಪದ್ಯೇ । ಯಾಸ್ಯಾಂ ಪತಿಫ್ನೀ ।
ತನೂಃ ಪ್ರಜಾಫ್ನೀ । ಪಶುಫ್ನೀ । ಲಕ್ಷ್ಮಫ್ನೀ । ಜಾರಫ್ನೀಂ । ಅಸ್ಯೈತಾಂ ।
ಕೃಣೋಮಿ । ಸ್ವಾಹಾ – ಆದಿತ್ಯಾಯ ಪ್ರಾಯಶ್ಚಿತ್ತ ಇದಂ ನಮಮ ।

ಓಂ ಪ್ರಜಾಪತೇ ಪ್ರಾಯಶ್ಚಿತ್ತೇ । ತ್ವಂ ದೇವಾನಾಂ । ಪ್ರಾಯಶ್ಚಿತ್ತಿರಸಿ ।
ಬ್ರಾಹ್ಮಣಸ್ತ್ವ । ನಾಥಕಾಮಃ । ಪ್ರಪದ್ಯೇ । ಯಾಸ್ಯಾಂ ಪತಿಫ್ನೀ ।
ತನೂಃ ಪ್ರಜಾಫ್ನೀ । ಪಶುಫ್ನೀ । ಲಕ್ಷ್ಮಫ್ನೀ । ಜಾರಫ್ನೀಂ । ಅಸ್ಯೈತಾಂ ।
ಕೃಣೋಮಿ । ಸ್ವಾಹಾ – ಪ್ರಜಾಪತಯೇ ಪ್ರಾಯಶ್ಚಿತ್ತ ಇದಂ ನಮಮ ।

ಓಂ ಪ್ರಸವಶ್ಚ । ಉಪಯಾಮಶ್ಚ । ಕಾಟಶ್ಚಾರ್ಣವಶ್ಚ । ಧರ್ಣಸಿಶ್ಚ ।
ದ್ರವಿಣಂ ಚ । ಭಗಶ್ಚ । ಅಂತರಿಕ್ಷಂ ಚ । ಸಿಂಧುಶ್ಚ । ಸಮುದ್ರಶ್ಚ ।
ಸರಸ್ವಾಗ್ಂಶ್ಚ । ವಿಶ್ವವ್ಯಚಾಶ್ಚ । ತೇಯಂ ದ್ವಿಷ್ಮಃ । ಯಶ್ಚನೋ ದ್ವೇಷ್ಟಿ ।

ತಮೇಷಾಂ । ಜಂಭೇದಧ್ಮಃ । ಸ್ವಾ॥ಹಾ – ಪ್ರಸವಾದಿಭ್ಯೋ ದೇವತಾಭ್ಯ ಇದಂ ನಮಮ ।

ಓಂ ಮಧುಶ್ಚ । ಮಾಧವಶ್ಚ । ಶುಕ್ರಶ್ಚ । ಶುಚಿಶ್ಚ । ನಭಶ್ಚ । ನಭಸ್ಯಶ್ಚ । ಇಷಶ್ಚೋರ್ಜಶ್ಚ । ಸಹಶ್ಚ । ಸಹಸ್ಯಶ್ಚ । ತಪಶ್ಚ । ತಪಸ್ಯಶ್ಚ । ತೇಯಂ ದ್ವಿಷ್ಮಃ । ಯಶ್ಚನೋ ದ್ವೇಷ್ಟಿ । ತಮೇಷಾಂ । ಜಂಭೇದಧ್ಮಃ । ಸ್ವಾ॥ಹಾ – ಮಧ್ವಾದಿಭ್ಯೋ ದೇವತಾಭ್ಯ ಇದಂ ನಮಮ ।

ಓಂ ಚಿತ್ತಂ ಚ । ಚಿತ್ತಿಶ್ಚ । ಆಕೂತಂ ಚ । ಆಕೂತಿಶ್ಚ । ಆಧೀತಂ ಚ । ಆಧೀತಿಶ್ಚ । ವಿಜ್ಞಾತಂ ಚ । ವಿಜ್ಞಾನಂ ಚ । ನಾಮ ಚ । ಕ್ರತುಶ್ಚ । ದರ್ಶಶ್ಚ । ಪೂರ್ಣಮಾಸಶ್ಚ । ತೇಯಂ ದ್ವಿಷ್ಮಃ । ಯಶ್ಚನೋ ದ್ವೇಷ್ಟಿ । ತಮೇಷಾಂ । ಜಂಭೇದಧ್ಮಃ । ಸ್ವಾ॥ಹಾ – ಚಿತ್ತಾದಿಭ್ಯೋ ದಶ ದೇವತಾಭ್ಯ ಇದಂ ನಮಮ ।

೨೦. ಹೋಮದ ಉತ್ತರಪ್ರಯೋಗದ ಮುಂದುವರಿಕೆ

ಸ್ವಿಷ್ಟಕೃತ್ –

ಇಲ್ಲ.

ಅನೂಯಾಜಸಮಿತ್ + ಇಧ್ಮಸನ್ನಹನ ಹೋಮ –

ಇದೆ.

ಸಮಿತ್ ಸನ್ನಹನಂ ಕುರ್ಯಾತ್ ಪ್ರಧಾನಾಹುತ್ಯನಂತರಮ್ ।
ಸ ತು ಅನ್ಯಥೇತಿ ನಿಶ್ಚಿತ್ಯ ತತ್ರೈವ ಉಕ್ತಂ ಕಪರ್ದಿನಾ ॥

ಅಗ್ನ್ಯಪಮಂತ್ರಕಂ **"ಸ್ಮಾರ್ತೇ"** ದೇವಮುದ್ದಿಶ್ಯ ಸಂತ್ಯಜೇತ್ ।
ಯತ್ರಯತ್ರ ಇಧ್ಮತಂತ್ರಸ್ಯ ತತ್ರತತ್ರ ಏವಂ ಇಶ್ಯತೇ ॥

ಜಯಾದಿ ಹೋಮ –

ಇದೆ.

ಪರಿಧ್ಯಂಜನ – ಲೇಪಕಾರ್ಯ –

ಇಲ್ಲ.

ಶಮ್ಯೈ = ನಿರಸನ (ಅಗ್ನಿಯ ಹೊರಗೆ ಹಾಕುವಿಕೆ) –

ಇದೆ.

ಪ್ರಧಾನಹೋಮೇ ಯದೃತಾದಿಹೋಮೇ ಪ್ರವಿಷ್ಯಹೋಮೇ ಚ **"ಚತುರ್ಥಿಹೋಮೇ"** ।
ಅಂತ್ಯಶ್ಚ ಸಮ್ಯಕ್ ಹೃದಯಸ್ಯಸರ್ಗ ಇತ್ಯೇಷು **"ಶಮ್ಯಾಃ"** ಪ್ರವದಂತಿ ತಜ್ಞಾಃ ॥
ಚೌಲ ಗೋದಾನ ಸೀಮಂತ ಸ್ನಾನ **"ಉದ್ವಾಹ"** ಉಪನಾದಿಷು ।
ಪ್ರಾಯಶ್ಚಿತ್ತೇ **"ಪ್ರಹರಣಂ ನ"** ಪ್ರಹರಸ್ಸುವನೇ ಭವೇತ್ ॥
॥ **"ಶಮ್ಯಾಃ"** ಪರಿಧ್ಯರ್ಥೇ **"ವಿವಾಹ"** ಉಪನಯನ ಸಮಾವರ್ತನ ಸೀಮಂತ ಚೌಲ ಗೋದಾನ ಪ್ರಾಯಶ್ಚಿತ್ತೇಷು ॥

ಆಘಾರ ಹೋಮ –

ಇದೆ.

ಸಂಸ್ರಾವಹೋಮ –

ಇಲ್ಲ.

ಅನಾಜ್ಞಾತ – ಸರ್ವಪ್ರಾಯಶ್ಚಿತ್ತ ಹೋಮ –

ಇದೆ.

ಪೂರ್ಣಾಹುತಿ –

ಇಲ್ಲ.

೨೧. ಲಲಾಟ(ಹಣೆ) ಹೋಮ –

** ಉಳಿದಿರುವ ಆಜ್ಯವನ್ನು ವರನು ಪ್ರಧಾನ ದರ್ವಿಯಲ್ಲಿ ಹಾಕಿಕೊಂಡು, ನಿಂತುಕೊಂಡು, ಭೂಃ, ಎಂದು ವ್ಯಾಹೃತಿಗಳನ್ನು ಕೆಳಗಿನಂತೆ ಹೇಳಿ, ಕೊನೆಯಲ್ಲಿ ಪತ್ನಿಯ ತಲೆಯಮೇಲೆ ಒಮ್ಮೆ ಹಾಕುವುದು ॥

ತಸ್ಯಾಃ ಶಿರಸಿ ಆಜ್ಯಶೇಷೇಣ ಭೂಃ ಸ್ವಾಹಾ, ಇತಿ ಚತುರ್ಥ್ಯಮಂತೇ ಸಕೃದಾನಮಂತಿ,

ಭೂ ಸ್ವಾ॑ಹಾ । ಭುವ॒ ಸ್ವಾ॑ಹಾ । ಸುವ॒ ಸ್ವಾ॑ಹಾ । ಓಗ್ಂ ಸ್ವಾ॑ಹಾ ॥

೨೨. ಪರಸ್ಪರ ವೀಕ್ಷಣೆ – ಹೃದಯ ಒಂದಾಗುವಿಕೆ(ಸಂಸರ್ಗ)

** ಅಪಶ್ಯಂತ್ವಾ, ಮನಸಾ ಚೇಕಿತಾನಂ ಮಂತ್ರದಿಂದ ವಧುವು ವರನನ್ನು ॥ ಹಾಗೂ

ಅಪಶ್ಯಂತ್ವಾ...., ಇತಿ ವಧೂಃ,

ಓಂ ಅ॑ಪಶ್ಯಂ ತ್ವಾ । ಮ॑ನಸಾ । ಚೇ॑ಕಿತಾನಂ । ತ॑ಪಸೋ ಜಾ॒ತಂ । ತ॑ಪಸಃ । ವಿ॑ಭೂತಂ ॥ ಇ॒ಹ ಪ್ರ॒ಜಾಂ । ಇ॒ಹರ॒ಯಿಂ । ರ॑ರಾ॒ಣಃ । ಪ್ರ॒ಜಾಂಯ॑ಸ್ವ । ಪ್ರ॒ಜ॒ನ॑ಯಾ । ಪ್ರ॒ತ್ರ॒ಕಾ॒ಮ ॥

** ಅಪಶ್ಯಂತ್ವಾ ಮನಸಾ ದೀಧ್ಯಾನಾಂ, ಮಂತ್ರದಿಂದ ವರನು ವಧುವನ್ನು ಪರಸ್ಪರ ನೋಡಿಕೊಳ್ಳುವುದು ॥

ಅಪಶ್ಯಂ ತ್ವಾ ಮನಸಾ ದೀಧ್ಯಾನಾಂ, ಇತಿ ವರೋ ವಧೂಂ ಯುಗಪತ್ ಸಮೀಕ್ಷ್ಯ ಜಪೇತ್,

ಓಂ ಆಪಶ್ಯಂ ತ್ವಾ । ಮನಸಾ । ದೀಧ್ಯಾನಾಂ । ಸ್ವಾಂಯಾಂ ತನೂಂ ।
ಋತಿಂಯೇ । ನಾಥಮಾನಾಂ ॥ ಉಪಯಾಂ । ಉಚ್ಚಾ ಂಯುವತಿಃ ।
ಬಭೂಂಯಾಃ । ಪ್ರಜಾಂಯಸ್ವ । ಪ್ರಜಂಯಾ । ಪುತ್ರಕಾಮೇ ॥

** ವರನು, ಸಮಂಜಂತು, ಮಂತ್ರದಿಂದ, ಬಲಹಸ್ತದ ಅಂಗುಷ್ಠ(ಹೆಬ್ಬೆಟ್ಟು) ಅನಾಮಿಕ(ಉಂಗುರಬೆರಳು) ಬೆರಳುಗಳಿಗೆ ಆಜ್ಯವನ್ನು ಲೇಪಿಸಿಕೊಂಡು, ಕೈಬಳಸಿಕೊಂಡು, ವಧುವಿನ ಹೃದಯಕ್ಕೂ ತನ್ನ ಹೃದಯಕ್ಕೂ ಒಟ್ಟಿಗೆ ಮುಟ್ಟಿಸಿಕೊಳ್ಳಬೇಕು ॥

ಸಮಂಜಂತು, ಇತಿ ಆಜ್ಯಶೇಷೇಣ ಅಂಗುಷ್ಠವಿಸ್ರಂಸಿಕಾಭ್ಯಾಂ ಹೃದಯದೇಶೇ ಯುಗಪತ್ ಸಂಮೃಜ್ಯ,

ಓಂ ಸಮಂಜಂತು । ವಿಶ್ವೇದೇವಾಃ । ಸಮಾಪಃ । ಹೃದಂಯಾನಿ ನೌ ॥
ಸಂಮಾತರಿಶ್ವಾ । ಸಂಧಾತಾ । ಸಮುದೇಷ್ಟ್ರೀ । ದಿದೇಷ್ಟ್ರನೌ ॥

** ಪ್ರಜಾಪತೇ ತನ್ವಂ, ಎಂಬ ೩ ಮಂತ್ರಗಳನ್ನು ಜಪಿಸುವುದು ॥

ಪ್ರಜಾಪತೇ ತನ್ವಂ ಮೇ, ಇತಿ ತಿಸ್ರೋ ಜಪೇತ್,

ಓಂ ಪ್ರಜಾಪತೇ । ತನ್ವಂ ಮೇ । ಜುಷಸ್ವ । ತ್ವಷ್ಟರ್ದೇವೇಭಿಃ ।
ಸಹಸಾಮ ಇಂದ್ರ ॥ ವಿಶ್ವೈರ್ದೇವೈಃ । ರಾತಿಭಿಃ । ಸಗ್ಂ ರರಾಣಃ ।
ಪುಗ್ಂಸಾಂ । ಬಹೂನಾಂ । ಮಾತರಸ್ಯಾಮ ॥

ಓಂ ಆನಃ ಪ್ರಜಾಂ । ಜನಂಯತು । ಪ್ರಜಾಪತಿಃ । ಆಜರಸಾಂಯು ।
ಸಮನಕ್ತು । ಅರ್ಯಮಾ ॥ ಅದುರ್ಮಂಗಲೀಃ । ಪತಿಲೋಕಂ । ಆವಿಶ ।
ಶನ್ನೋಭವ । ದ್ವಿಪದೇ । ಶಂ ಚತುಷ್ಪದೇ ॥

ಓಂ ತಾಂ ಪೂಷನ್ । ಶಿವತಮಾ । ಮೇರಯಸ್ವ । ಯಸ್ಯಾಂ ಬೀಜಂ ।
ಮನುಷ್ಯಾ ವಪಂತಿ ॥ ಯಾನ ಊರೂ । ಉಶತೀ । ವಿಸ್ರಯಾಯೈ ।
ಯಸ್ಯಾ ಮುಶಂತಃ । ಪ್ರಹರೇಮ । ಶೇಫಮ್ ॥

ಉತ್ತರಪರಿಷೇಚನ –

ಇದೆ.

ಪ್ರಣೀತಾ ಮೋಕ್ಷಣ

ಇದೆ.

ಬ್ರಹ್ಮೋದ್ವಾಸನ

ಇದೆ.

೨೩. ಅಗ್ನಿಪ್ರದಕ್ಷಿಣೆ – ನಮಸ್ಕಾರ

** ಅಗ್ನೇನಯ....., ಮಂತ್ರದಿಂದ ಒಟ್ಟಿಗೆ ಅಗ್ನಿಯನ್ನು ಪ್ರದಕ್ಷಿಣೆ ಮಾಡಿ, ಪ್ರಾರ್ಥಿಸಿ, ಪ್ರವರವನ್ನು ಹೇಳಿ ನಮಸ್ಕಾರವನ್ನು ಮಾಡಿ, ಕೂರಬೇಕು ॥

ಅಗ್ನೇನಯ....., ಇತ್ಯಗ್ನಿಪ್ರದಕ್ಷಿಣಂ, ಪ್ರವರಪೂರ್ವಕ ನಮಸ್ಕಾರಾನ್ ಚ ಕುರ್ಯಾತ್ ॥

ಓಂ ಅಗ್ನೇನಯ । ಸುಪಥಾ ರಾಯೇ । ಅಸ್ಮಾನ್ । ವಿಶ್ವಾನಿ ದೇವ ।
ವಯುನಾನಿ । ವಿದ್ವಾನ್ ॥ ಯುಯೋಧಿ । ಅಸ್ಮತ್ । ಜುಹುರಾಣಂ ।
ಏನಃ । ಭೂಯಿಷ್ಠಾಂ ತೇ । ನಮ ಉಕ್ತಿಂ । ವಿಧೇಮ ॥

ಸ್ವಸ್ತಿ ಶ್ರದ್ಧಾಂ ಮೇಧಾಂ ಯಶಃ ಪ್ರಜ್ಞಾಂ ವಿದ್ಯಾಂ ಬುದ್ಧಿಂ ಶ್ರಿಯಂ ಬಲಂ ।

ಆಯುಷ್ಯಂ ತೇಜವಮಾರೋಗ್ಯಂ ದೇಹಿ ಮೇ ಹವ್ಯವಾಹನ ॥

ಅಭಿವಾದಯೇ..... ॥

೨೪. ಕರ್ಮಸಮಾಪನೆ–ಆಚಮನ–ಆಸನವಿಧಿ

** ಕುಳಿತುಕೊಂಡು, ಬೃಹತ್ ಸಾಮ, ಮಂತ್ರದಿಂದ ರಕ್ಷೆಯನ್ನು ತೆಗೆದುಕೊಂಡು ಮೇಧಾವೀ, ಮುಂತಾದ ವಾಕ್ಯಗಳಿಂದ ರಕ್ಷೆಯನ್ನು ಹಾಕಿಕೊಂಡು ॥

ಮೇಧಾವೀ ಭೂಯಾಸಂ ಇತಿ ರಕ್ಷಾಂ ಧೃತ್ವಾ ॥

ಓಂ ಮೇಧಾವೀ ಭೂಯಾಸಂ । ತೇಜಸ್ವೀ ಭೂಯಾಸಂ । ವರ್ಚಸ್ವೀ ಭೂಯಾಸಂ । ಬ್ರಹ್ಮವರ್ಚಸೀ ಭೂಯಾಸಂ । ಆಯುಷ್ಮಾನ್ ಭೂಯಾಸಂ । ಅನ್ನಾದೋ ಭೂಯಾಸಂ । ಸರ್ವಸಮೃದ್ಧೋ ಭೂಯಾಸಮ್ ॥

** ಪೂರ್ವದಿಂದ ಪರಿಸ್ತರಣಗಳನ್ನು ಕ್ರಮವಾಗಿ ತೆಗೆದು, ಅಗ್ನಿಯಹೊರಗೆ, ಉತ್ತರದಲ್ಲಿ ಹಾಕಬೇಕು। ನಂತರ ಈ ಕೆಳಗಿನಂತೆ ಹೇಳಿ, ಮಾಡಿರುವ ಎಲ್ಲ ಕರ್ಮಗಳನ್ನೂ ಭಗವಂತನಿಗೆ ಅರ್ಪಿಸುವುದು ॥

ಪ್ರಾಗಾದಿಪರಿಸ್ತರಣಂ ಉತ್ತರೇ ವಿಸೃಜೇತ್ । ಯಸ್ಯಸ್ಮೃತ್ಯೇತಿ....., ಕರ್ಮ ಸಮಾಪನಂ ಕುರ್ಯಾತ್ ॥

ಯಸ್ಯಸ್ಮೃತ್ಯಾ ಚ ನಾಮೋಕ್ತ್ಯಾ ತಪಃ ಕರ್ಮ ಕ್ರಿಯಾದಿಷು । ನ್ಯೂನಂ ಸಂಪೂರ್ಣತಾಂ ಯಾತು ಸದ್ಯೋ ವಂದೇ ತಮಚ್ಯುತಂ । ಮಂತ್ರಹೀನಂ ಕ್ರಿಯಾಹೀನಂ ಭಕ್ತಿಹೀನಂ ಜನಾರ್ದನ । ಯತ್ಕೃತಂ ತು ಮಯಾ ದೇವ ಪರಿಪೂರ್ಣಂ ತದಸ್ತು ಮೇ । ಅನೇನ ಮಯಾ ಆಚರಿತ ಕರ್ಮಣಾ ಭಗವಾನ್ ಸರ್ವಾತ್ಮಕಃ ವಾಸುದೇವಃ ಪ್ರೀಯತಾಂ ।

ಮಧ್ಯೇ ಮಂತ್ರ ತಂತ್ರ ಸ್ವರ ವರ್ಣ ನ್ಯೂನ ಅತಿರಿಕ್ತ ಲೋಪ ದೋಷ ಪ್ರಾಯಶ್ಚಿತ್ತಾರ್ಥಂ ಮಹಾಮಂತ್ರ ಜಪಂ ಕರಿಷ್ಯೇ । ಅಚ್ಯುತಾಯ ನಮಃ । ಅನಂತಾಯ ನಮಃ । ಗೋವಿಂದಾಯ ನಮಃ ॥

** ಆಚಮನ ಮತ್ತು ಆಸನವಿಧಿಗಳನ್ನು ಮಾಡಬೇಕು ॥

ಆಚಮನಂ, ಆಸನವಿಧಿಂ ಚ ಕುರ್ಯಾತ್ ॥

ಓಂ ಆದ್ಯಾನೋ ದೇವ [illegible]ತಃ । ಪ್ರಜಾವತ್ಸಾವೀಸ್ಸೌಭಗಂ ॥ ಪರಾ ದುಷ್ಪಿಷ್ಣಿಯಗ್ಂ ಸುವ ॥ ವಿಶ್ವಾನಿ ದೇವ ಸವಿತಃ । ದುರಿತಾನಿ ಪರಾಸುವ ॥ ಯದ್ಭದ್ರಂ । ತನ್ನ ಆಸುವ ॥ ಮಯಿ ಮಹೋ ಮಯಿ ಯಶೋ ಮಯೀಂದ್ರಿಯಂ ವೀರ್ಯಂ ॥

....*********....

೬. ಗರ್ಭಾಧಾನಂ – ಕಪರ್ದಿಕಾರಿಕಾ

– ಪ್ರಾಸಂಗಿಕಂ ಪರಿಸಮಾಪ್ಯ ಪ್ರಸ್ತುತಂ ಉಪಕ್ರಮ್ಯತೇ –

– ಪ್ರಾಸಂಗಿಕವಾದ ವಿಚಾರವನ್ನು ಮುಗಿಸಿ ಪ್ರಸ್ತುತವಾದುದ್ದನ್ನು ಹೇಳುತ್ತಿದ್ದೇವೆ –

ಋತುಮತ್ಯಾಂತು ಭಾರ್ಯಾಯಾಂ ತತ್ರ ಸಂಭೋಗಮಾಚರೇತ್ ।
ಅನೃತುಮತ್ಯಾಂ ತು ಭಾರ್ಯಾಯಾಂ ನ ಸಂಗಮಿತಿ ಕೇಚನ ॥೧

ಹೆಂಡತಿಯು ಋತುಮತಿಯಾದ ನಂತರ ಅವಳ ಜೊತೆ ಸಂಭೋಗಮಾಡಬೇಕು ।
ಋತುಮತಿಯಾಗದಿರುವ ಹೆಂಡತಿಯೊಂದಿಗೆ ಸಂಭೋಗ ಮಾಡಬಾರದೆಂದು ಕೆಲವರು ಹೇಳುತ್ತಾರೆ ॥

ಗರ್ಭಾಧಾನಾಂಗಭೂತಂ ಯತ್ಕರ್ಮ ಕುರ್ಯಾದ್ಧಿವ್ಯೈವಹಿ ।
ರಾತ್ರೌ ಕುರ್ಯಾತ್ ವಿಧಾನೇನ ಗರ್ಭಬೀಜನ ರೋಪಣಮ್ ॥೨

ಗರ್ಭಾಧಾನಾಂಗವಾದ ಯಾವ ಕರ್ಮವಿದೆಯೋ ಅದನ್ನು ಹಗಲೇ ಮಾಡಬೇಕು ।
ರಾತ್ರಿಯಲ್ಲಿ ಶಾಸ್ತ್ರ ಹೇಳಿದ ರೀತಿಯಲ್ಲಿ ಗರ್ಭಬೀಜ ಆರೋಪಣ ಮಾಡಬೇಕು ॥

ಮೂತ್ರಾದಿಕಂ ತತಃ ಕೃತ್ವಾ ಯೋನಿಂ ಪ್ರಕ್ಷಾಳಯೇತ್ ದ್ವಿಜ್ಯೈಃ ।
ಪೂರ್ವರಾತ್ರೇ ವ್ಯತೀತೇ ಸಂಗಚ್ಛೇತ್ ರತಿಮಂದಿರಮ್ ॥೩

ಹೆಂಡತಿಯು ಮಲ ಮೂತ್ರಾದಿಗಳನ್ನು ಮಾಡಿ ಯೋನಿಯನ್ನು ಶುದ್ಧಿಗೊಳಿಸಿಕೊಳ್ಳಬೇಕು ।
ಪೂರ್ವರಾತ್ರಿಯು ಕಳೆದಮೇಲೆ ರತಿಕರ್ಮವನ್ನು ಮಾಡುವ ಕೋಣೆಗೆ ಹೋಗಬೇಕು ॥

ಪಾದೌಪ್ರಕ್ಷಾಳಯೇತ್ ಪೂರ್ವಂ ಪಶ್ಚಾತ್ ಶಯ್ಯಾ ಸಮಾವಿಶೇತ್ ।
ಭರ್ತುಃ ಪಾದೌ ನಮಸ್ಕೃತ್ಯ ಭಾರ್ಯಾಂ ಶಯ್ಯಾ ಸಮಾವಿಶೇತ್ ॥೪

ಪಾದ ಪ್ರಕ್ಷಾಳನಾದಿಗಳನ್ನು ಮಾಡಿಕೊಂಡು ನಂತರ ಹಾಸಿಗೆಯಮೇಲೆ ಮಲಗಬೇಕು ।
ಗಂಡನ ಪಾದಗಳಿಗೆ ನಮಸ್ಕರಿಸಿ ಹೆಂಡತಿಯೂ ಹಾಸಿಗೆಯಮೇಲೆ ಮಲಗಬೇಕು ॥

ಸ್ವಪೇಸ್ತ್ರೀ ಪ್ರಾಕ್ಶಿರಃ ಕೃತ್ವಾ ಪ್ರತ್ಯಕ್ ಪಾದೌ ಪ್ರಸಾರಯೇತ್ ।
ತಾಂಬೂಲ ಚರ್ವಣಂ ಕುರ್ಯಾತ್ ಸಕಾಮೋ ಭಾರ್ಯಯಾ ಸಹ ॥೫

** ಆಚಮನ ಮತ್ತು ಆಸನವಿಧಿಗಳನ್ನು ಮಾಡಬೇಕು ॥

ಆಚಮನಂ, ಆಸನವಿಧಿಂ ಚ ಕುರ್ಯಾತ್ ॥

ಓಂ ಆದ್ಯಾನೋ ದೇವ [illegible]ತಃ । ಪ್ರಜಾವತ್ಸಾವೀಸ್ಸೌಭಗಂ ॥ ಪರಾ ದುಷ್ಪಿಯಗ್ಂ ಸುವ ॥ ವಿಶ್ವಾನಿ ದೇವ ಸವಿತಃ । ದುರಿತಾನಿ ಪರಾಸುವ ॥ ಯದ್ಭದ್ರಂ । ತನ್ನ ಆಸುವ ॥ ಮಯಿ ಮಹೋ ಮಯಿ ಯಶೋ ಮಯೀಂದ್ರಿಯಂ ವೀರ್ಯಂ ॥

....*********....

೬. ಗರ್ಭಾಧಾನಂ – ಕಪರ್ದಿಕಾರಿಕಾ

– ಪ್ರಾಸಂಗಿಕಂ ಪರಿಸಮಾಪ್ಯ ಪ್ರಸ್ತುತಂ ಉಪಕ್ರಮ್ಯತೇ –

– ಪ್ರಾಸಂಗಿಕವಾದ ವಿಚಾರವನ್ನು ಮುಗಿಸಿ ಪ್ರಸ್ತುತವಾದುದ್ದನ್ನು ಹೇಳುತ್ತಿದ್ದೇವೆ –

ಋತುಮತ್ಯಾಂತು ಭಾರ್ಯಾಯಾಂ ತತ್ರ ಸಂಭೋಗಮಾಚರೇತ್ ।
ಅನೃತುಮತ್ಯಾಂ ತು ಭಾರ್ಯಾಯಾಂ ನ ಸಂಗಮಿತಿ ಕೇಚನ ॥೧

ಹೆಂಡತಿಯು ಋತುಮತಿಯಾದ ನಂತರ ಅವಳ ಜೊತೆ ಸಂಭೋಗಮಾಡಬೇಕು । ಋತುಮತಿಯಾಗದಿರುವ ಹೆಂಡತಿಯೊಂದಿಗೆ ಸಂಭೋಗ ಮಾಡಬಾರದೆಂದು ಕೆಲವರು ಹೇಳುತ್ತಾರೆ ॥

ಗರ್ಭಾಧಾನಾಂಗಭೂತಂ ಯತ್ಕರ್ಮ ಕುರ್ಯಾದ್ದಿವೈವಹಿ ।
ರಾತ್ರೌ ಕುರ್ಯಾತ್ ವಿಧಾನೇನ ಗರ್ಭಬೀಜನ ರೋಪಣಮ್ ॥೨

ಗರ್ಭಾಧಾನಾಂಗವಾದ ಯಾವ ಕರ್ಮವಿದೆಯೋ ಅದನ್ನು ಹಗಲೇ ಮಾಡಬೇಕು । ರಾತ್ರಿಯಲ್ಲಿ ಶಾಸ್ತ್ರ ಹೇಳಿದ ರೀತಿಯಲ್ಲಿ ಗರ್ಭಬೀಜ ಆರೋಪಣ ಮಾಡಬೇಕು ॥

ಮೂತ್ರಾದಿಕಂ ತತಃ ಕೃತ್ವಾ ಯೋನಿಂ ಪ್ರಕ್ಷಾಯೇತ್ ದ್ವಿಜೈಃ ।
ಪೂರ್ವರಾತ್ರೇ ವ್ಯತೀತೇ ಸಂಗಚ್ಛೇತ್ ರತಿಮಂದಿರಮ್ ॥೩

ಹೆಂಡತಿಯು ಮಲ ಮೂತ್ರಾದಿಗಳನ್ನು ಮಾಡಿ ಯೋನಿಯನ್ನು ಶುದ್ಧಿಗೊಳಿಸಿಕೊಳ್ಳಬೇಕು । ಪೂರ್ವರಾತ್ರಿಯು ಕಳೆದಮೇಲೆ ರತಿಕರ್ಮವನ್ನು ಮಾಡುವ ಕೋಣೆಗೆ ಹೋಗಬೇಕು ॥

ಪಾದೌಪ್ರಕ್ಷಾಳಯೇತ್ ಪೂರ್ವಂ ಪಶ್ಚಾತ್ ಶಯ್ಯಾ ಸಮಾವಿಶೇತ್ ।
ಭರ್ತುಃ ಪಾದೌ ನಮಸ್ಕೃತ್ಯ ಭಾರ್ಯಾಂ ಶಯ್ಯಾ ಸಮಾವಿಶೇತ್ ॥೪

ಪಾದ ಪ್ರಕ್ಷಾಳನಾದಿಗಳನ್ನು ಮಾಡಿಕೊಂಡು ನಂತರ ಹಾಸಿಗೆಯಮೇಲೆ ಮಲಗಬೇಕು । ಗಂಡನ ಪಾದಗಳಿಗೆ ನಮಸ್ಕರಿಸಿ ಹೆಂಡತಿಯೂ ಹಾಸಿಗೆಯಮೇಲೆ ಮಲಗಬೇಕು ॥

ಸ್ವಪೇಸ್ತ್ರೀ ಪ್ರಾಕ್ಶಿರಃ ಕೃತ್ವಾ ಪ್ರತ್ಯಕ್ ಪಾದೌ ಪ್ರಸಾರಯೇತ್ ।
ತಾಂಬೂಲ ಚರ್ವಣಂ ಕುರ್ಯಾತ್ ಸಕಾಮೋ ಭಾರ್ಯಯಾ ಸಹ ॥೫

ಮಲಗುವಕಾಲದಲ್ಲಿ ಹೆಂಡತಿಯು ಪೂರ್ವಕ್ಕೆ ತಲೆ ಮಾಡಿಕೊಂಡು ಪಶ್ಚಿಮಕ್ಕೆ ಕಾಲು ಚಾಚಿಕೊಂಡು ಮಲಗಬೇಕು । ತಾಂಬೂಲವನ್ನು ವರನು ಹೆಂಡತಿಯೊಡನೆ ಪ್ರೀತಿಯುಳ್ಳವನಾಗಿ ಸೇವಿಸಬೇಕು ॥

ಭುಕ್ತ್ವಾಮನುಪ ವಿಷ್ಟಸ್ತು ಶಯ್ಯಾಯಾಂ ಅಭಿಸಮ್ಮುಖಃ ।
ಸಂಸ್ಮೃತ್ಯ ಪರಮಾತ್ಮಾನಂ ಪತ್ನ್ಯಾ ಜಂಘೇ ಪ್ರಸಾರಯೇತ್ ॥೬

ತಿಂದ ನಂತರ ವರನು ಹೆಂಡತಿಗೆ ಅಭಿಮುಖವಾಗಿ ಮಲಗಬೇಕು । ನಂತರ ಭಗವಂತನನ್ನು ಸ್ಮರಿಸಿ ಪತ್ನಿಯ ತೊಡೆಯನ್ನು ಅಗಲಿಸಬೇಕು ॥

ಯೋನಿಂ ಸ್ಪೃಷ್ಟ್ವಾ ಜಪೇತ್ ಸೂಕ್ತಂ ವಿಷ್ಣುಯೋರ್ನಿಂ ಪ್ರಜಾಪತೇಃ ।
ಅಸುನೀತೇ ಪುನರಿತಿ ಜಪೇದಿತ್ಥಂ ಕಪರ್ದಿನಾ ॥೭

ನಂತರ ಪತ್ನಿಯ ಯೋನಿಯನ್ನು ಮುಟ್ಟಿ ವಿಷ್ಣುರ್ಯೋನಿಂ, ಪ್ರಜಾಪತೇಃ ಸೂಕ್ತಮಂತ್ರಗಳನ್ನು ಜಪಿಸಬೇಕು । ಕಪರ್ದಿಮುನಿಗಳು ಅಸುನೀತೇ ಮಂತ್ರವನ್ನೂ ಜಪಿಸಬೇಕೆನ್ನುತ್ತಾರೆ ॥

ಮಾದೃಶಸ್ತು ಭವೇತ್ ಪುತ್ರಃ ಇತಿ ಮತ್ವಾ ಸ್ಮರೇತ್ ಹರಿಮ್ ।
ಸ್ತನೌ ಧೃತ್ವಾ ಪಾಣಿಭ್ಯಾಂ ಅನ್ಯೋನ್ಯಂ ಚುಬುಕೋನ್ಮುಖಮ್ ॥೮

ನನಗೆ ಸಮಾನವಾದಂತಹ ಪುತ್ರನು(ಮಕ್ಕಳು) ಜನಿಸಬೇಕೆಂದು ಮನಸ್ಸಿನಲ್ಲಿ ಶ್ರೀಹರಿಯನ್ನು ಸ್ಮರಿಸುತ್ತಾ । ತನ್ನ ಕೈಗಳಿಂದ ವಧುವಿನ ಸ್ತನಗಳ ಹಿಡಿದುಕೊಂಡು ಪರಸ್ಪರ ಮುಖವನ್ನು ಸೇರಿಸಬೇಕು ॥

ಬಲಂದೇಹೀತಿ ಮಂತ್ರೇಣ ಯೋನ್ಯಾ ಶಿಶ್ನಂ ಪ್ರವೇಶಯೇತ್ ।
ಸ್ಕಂಧೌ ವಾ ಕಟಿಂಧೃತ್ವಾ ಯಥೇಚ್ಛಂ ಮೈಥುನಂ ಚರೇತ್ ॥೯

ನಂತರ ಬಲಂ ದೇಹಿ ಮಂತ್ರದಿಂದ ಪತ್ನಿಯ ಯೋನಿಗೆ ತನ್ನ ಶಿಶ್ನವನ್ನು ಪ್ರವೇಶಿಸಬೇಕು । ನಂತರ ಪತ್ನಿಯ ಭುಜವನ್ನೋ ಸೊಂಟವನ್ನೋ ಹಿಡಿದುಕೊಂಡು ಇಚ್ಛಾನುಸಾರವಾಗಿ ಮೈಥುನವನ್ನು ಮಾಡಬೇಕು ॥

ಇಚ್ಛಾಪೂರ್ತಿಃ ಭವೇತ್ ಯಾವತ್ ಉಭಯೋಃ ಕಾಮವೃತ್ತಯೋಃ ।
ರೇತಸ್ಸಿಂಚೇತ್ ತತೋ ಯೋನ್ಯಾಂ ತಸ್ಮಾತ್ ಗರ್ಭಂ ಬಿಭರ್ತಿ ಸಾ ॥೧೦

ಎಲ್ಲಿಯವರೆಗೆ ಇಬ್ಬರ ಇಷ್ಟವು ಪೂರ್ತಿಯಾಗುವುದಿಲ್ಲವೋ ಅಲ್ಲಿಯವರೆಗೂ ಮೈಥುನವನ್ನು ಆಚರಿಸಬೇಕು । ನಂತರ ತನ್ನ ರೇತಸ್ಸನ್ನು ಒಳಯೋನಿಗೆ ಸಿಂಚನ ಮಾಡಬೇಕು ಅದರಿಂದ ಅವಳು ಗರ್ಭಧರಿಸುತ್ತಾಳೆ ॥

ಅನೇನ ಲಭತೇ ಪುತ್ರಂ ಸಂಸಾರಾರ್ಣವತಾರಕಂ ।
ತಾವುಭಾವ ಶುಚೇ ಸ್ಯಾತಾಂ ದಂಪತೀ ಮೈಥುನಂ ಗತೋ ॥೧೧

ಈ ರೀತಿಯಾಗಿ ಶಾಸ್ತ್ರವಿಧಿಯಂತೆ ಜನಿಸಿದ ಮಗನು(ಮಕ್ಕಳು) ಸಂಸಾರವೆಂಬ ಸಮುದ್ರವನ್ನು ದಾಟಿಸುವ ಮಗನಾಗುತ್ತಾನೆ । ಹೀಗೆ ಅವರಿಬ್ಬರೂ ಮೈಥುನ ಮಾಡಿದವರಾಗಿ ಅಶುಚಿಯಾಗುತ್ತಾರೆ ॥

ಶಯನಾತ್ ಉತ್ಥಿತಾ ನಾರೀ ಶುಚಿಸ್ಯಾತ್ ಅಶುಚಿಃ ಪುಮಾನ್ ।
ಋತೌತು ಗರ್ಭಕಂ ಕೃತ್ವಾ ಸ್ನಾನಂ ಮೈಥುನೇನ ಸ್ಮೃತಂ ॥೧೨

ಹಾಸಿಗೆಯಿಂದ ಎದ್ದಮಾತ್ರಕ್ಕೇ ವಧುವು ಶುಚಿಯೆಂದು ಹೇಳಲ್ಪಡುತ್ತದೆ, ಪುರುಷನು ಮಾತ್ರ ಅಶುಚಿಯಾಗಿರುತ್ತಾನೆ। ಋತುಕಾಲದಲ್ಲಿ ವಧುವು ಗರ್ಭಧರಿಸುವಂತೆ, ಮೈಥುನವನ್ನು ಆಚರಿಸುವ ಪುರುಷನಿಗೆ ಸ್ನಾನದಿಂದಲೇ ಶುದ್ಧಿಯು ಎಂಬುದು ಸ್ಮೃತಿ ವಾಕ್ಯ ॥

– ಕಪರ್ದಿನೋಕ್ತಂ ಇತ್ಥಂ ಸ್ಯಾತ್ ಸರ್ವಶಾಸ್ತ್ರಾವಲೋಕಿನಾ –

– ಸರ್ವಶಾಸ್ತ್ರ ದೃಷ್ಟಿಯುಳ್ಳ ಕಪರ್ದಿಗಳಿಂದ ಈ ರೀತಿ ಗರ್ಭಾಧಾನವನ್ನು ವಿವರಿಸಿದೆ–

....*********....

ಗರ್ಭಾಧಾನಂ – ಆಪಸ್ತಂಬ ಗೃಹ್ಯಸೂತ್ರಂ

ಅನ್ಯೋ ವೈನಾಮಭಿಮಂತ್ರಯತೇ ॥ ೧ ॥

ಅಹಂ ಗರ್ಭಮದಧಾಂ....., ಮುಂತಾದ ಮಂತ್ರಗಳಿಂದ ಬೇರೆಯವರು ಇವಳನ್ನು ಅಭಿಮಂತ್ರಣೆ ಮಾಡಬೇಕು ॥

ಯದಾಮಲವದ್ವಾಸಸಾ ಸ್ಯಾದಥೈನಾಂ ಬ್ರಾಹ್ಮಣ ಪ್ರತಿಪದ್ಯಾನಿ ಕರ್ಮಾಣಿ ಸಂಶಾಸ್ತಿ ಯಾಂ ಮಲವದ್ವಾಸಸ ಸಮಿತ್ಯೇತಾನಿ ॥ ೨ ॥

ಯಾವಾಗ ಇವಳು ರಜಸ್ವಲೆಯಾಗುತ್ತಾಳೋ ಆಗ ಇವಳಿಗೆ ಬ್ರಾಹ್ಮಣದಲ್ಲಿ ಹೇಳಿದಂತಹ ಪ್ರತಿಷಿದ್ಧ ಕರ್ಮವಾದ ಯಾಂ ಮಲವದ್ವಾಸಸಾ ಸಂಭವಂತಿ ಎಂಬ ಮುಂತಾದ ಮಂತ್ರಗಳ ಅರ್ಥಗಳನ್ನು ತಿಳಿಸಬೇಕು ॥

ರಜಸಃ ಪ್ರಾದುರ್ಭಾವಾತ್ ಸ್ನಾತಾಮೃತುಸಮಾವೇಶನ ಉತ್ತರಾಭಿಃ ಅಭಿಮಂತ್ರಯತೇ ॥ ೩ ॥

೩ ದಿನ ಕಳೆದು ಶುದ್ಧವಾದ ನಂತರ ಶೋಣಿತ ನಿರ್ಗತನ ದಿನದಿಂದ ೧೬ ರಾತ್ರಿಗಳವರೆಗೆ ಋತುಕಾಲವೆಂದು ಶಾಸ್ತ್ರಕಾರರು ವಿಧಿಸಿದ್ದಾರೆ ಈ ಋತುಕಾಲದಲ್ಲಿ ೩ ರಾತ್ರಿಕಳೆದು ಸ್ನಾನದಿಂದ ಶುದ್ಧವಾದ ಈ ವಧುವನ್ನು ವಿಷ್ಣುರ್ಯೋನಿಂ ಮುಂತಾದ ೧೩ ಮಂತ್ರಗಳಿಂದ ಮುಟ್ಟಬೇಕು ॥

ಚತುರ್ಥೀ ಪ್ರಭೃತ್ಯಾ ಷೋಡಶೀಂ ಉತ್ತರಾಮುತ್ತರಾಂ ಯುಗ್ಮಾಂ ಪ್ರಜಾನಿಶ್ಚೈಯುಸಮೃತುಗಮನ ಇತ್ಯುಪದಿಶಂತಿ ॥ ೪ ॥

ರಜಸ್ವಲೆಯಾದ ೪ ನೇದಿನದಿಂದ ಆರಂಭಿಸಿ ೧೬ ದಿನಗಳೊಳಗೆ ಮುಂದು ಮುಂದಿನ ೨ ರಾತ್ರಿಗಳಲ್ಲಿ ಸಂಭೋಗಿಸಿದರೆ ದೀರ್ಘಾಯುಷ್ಮಂತರಾದ ಆರೋಗ್ಯವಂತರಾದ ಗುಣವಂತರಾದ ಮಕ್ಕಳು ಹುಟ್ಟುತ್ತಾರೆಂದು ಶಿಷ್ಟರು ಉಪದೇಶಮಾಡುತ್ತಾರೆ ॥

....*********....

ಗರ್ಭಾಧಾನಂ – ಪ್ರಯೋಗಃ

** ಆಸನವಿಧಿ, ಆಚಮನ, ಘಂಟಾನಾದ, ಪ್ರಾಣಾಯಾಮಗಳನ್ನು ಮಾಡಿ । .....ಪರಮೇಶ್ವರ ಪ್ರೀತ್ಯರ್ಥವಾಗಿ ನಮ್ಮಿಬ್ಬರ ನಡುವೆ ಸುಖದಾಂಪತ್ಯಕ್ಕಾಗಿ, ಜೀವಂತವಾದ ಮಕ್ಕಳನ್ನು ಪಡೆಯುವುದಕ್ಕಾಗಿ ಗರ್ಭಾಧಾನ ಸಂಸ್ಕಾರಕ್ಕಾಗಿ ಮಂತ್ರೋಕ್ತವಾಗಿ ಸಮಾಗಮವಾಗುತ್ತೇವೆಂದು ಸಂಕಲ್ಪಿಸಿ ॥

ಆಸನವಿಧಿಂ, ಆಚಮನಂ, ಘಂಟಾನಾದಂ, ಪ್ರಾಣಾನಾಯಾಮಂ ಚ ಕೃತ್ವಾ । .....ಪ್ರೀತ್ಯರ್ಥಂ ಆವಯೋಃ ಅನ್ಯೋನ್ಯ ಮೈತ್ರೀಕರಣ ದಾಂಪತ್ಯ ಸಿದ್ಧ್ಯರ್ಥಂ ಜೀವತ್ ಸತ್ಪುತ್ರಾವಾಪ್ತ್ಯರ್ಥಂ ಗರ್ಭಾಧಾನಾರ್ಥಂ ಸಮಾವೇಶನಂ ಕರಿಷ್ಯೇ ಇತಿ ಸಂಕಲ್ಪ್ಯ ॥

** ಅದರ ಅಂಗವಾಗಿ ಗಣಪತಿಪೂಜೆಯನ್ನು ಮತ್ತು ಪುಣ್ಯಾಹವನ್ನು ಸಹ ಮಾಡುತ್ತೇನೆಂದು ಸಂಕಲ್ಪಿಸಿ, ಮಾಡಬೇಕು ॥

ತದಂಗಂ, ಗಣಪತಿಪೂಜಾಂ, ಪುಣ್ಯಾಹವಾಚನಂ ಚ ಕರಿಷ್ಯೇ ಇತಿ ಸಂಕಲ್ಪ್ಯ – ಕೃತ್ವಾ ॥

** ಬ್ರಾಹ್ಮಣ ಸುವಾಸಿನೀಯರಿಗೆ ದಕ್ಷಿಣೆ ತಾಂಬೂಲಗಳನ್ನು ಕೊಟ್ಟು । ಆರತಿಯನ್ನು ಮಾಡಿಸಿಕೊಂಡು । ಸಭೆಗೆ ನಮಸ್ಕರಿಸಿ, ಆಶೀರ್ವಾದವನ್ನು ಪಡೆದು । ಮಲಗುವ ಕೋಣೆಯನ್ನು ಪ್ರವೇಶಿಸಿ । ಸಿದ್ಧವಾಗಿರುವ ತಾಂಬೂಲವನ್ನು ಪರಸ್ಪರ ವಿನಿಮಯ ಮಾಡಿಕೊಂಡು ॥

ಬ್ರಾಹ್ಮಣ ಸುವಾಸಿನೀಭ್ಯಃ ದಕ್ಷಿಣತಾಂಬೂಲಾನಿ ದತ್ವಾ । ಆರತಿಕಂ ಕುರ್ಯಾತ್ । ತತಃ ಸಭಾಂ ನಮಸ್ಕೃತ್ಯ । ರತಿಮಂದಿರಂ ಗತ್ವಾ । ಸಿದ್ಧ ತಾಂಬೂಲಂ ಹಸ್ತೇ ಗೃಹೀತ್ವಾ ಪರಸ್ಪರಂ ವಿನಿಮಯಂ ಕೃತ್ವಾ ॥

** ಕೆಳಗಿನ ಮಂತ್ರದಿಂದ ತಾಂಬೂಲವನ್ನು ಹರಿದು ಮೇಲಕ್ಕೆ ಎಸೆಯಬೇಕು ॥

ತಾಂಬೂಲಂ ಅಂತರಿಕ್ಷಂ ಉತ್ಕ್ಷಿಪ್ಯ ।

ಓಂ ಶ್ರೀರ್ಮೇ ಭಜತು । ಅಲಕ್ಷ್ಮೀರ್ಮೇ ನಶ್ಯತು ॥

** ಲಕ್ಷ್ಮೀಕಟಾಕ್ಷಕ್ಕಾಗಿ ತಾಂಬೂಲ ಚರ್ವಣವನ್ನೂ ಮಾಡುತ್ತೇವೆ ಎಂದು ಸಂಕಲ್ಪಿಸಿ। ಪುನಃ ಹೊಸದಾಗಿ ಅಲ್ಲಿರುವ ಎಲೆಯನ್ನು ಮಾತ್ರ, ಪರಸ್ಪರರ ಬಾಯಿಗೆ (ಮೊದಲು ವಧು, ವರನ ಬಾಯಿಗೆ ತಿನ್ನಿಸಬೇಕು) ಇದೇ ಕೆಳಗಿನ ಮಂತ್ರದಿಂದ ಹಾಕಬೇಕು ॥

ತಥಾ ಅಲಕ್ಷ್ಮೀ ಪರಿಹಾರದ್ವಾರಾ ಲಕ್ಷ್ಮೀ ಪ್ರಾಪ್ತ್ಯರ್ಥಂ ತಾಂಬೂಲಚರ್ವಣಂ ಚ ಕರಿಷ್ಯೇ ಇತಿ ಸಂಕಲ್ಪ್ಯ । ಪರ್ಣಂ ಮುಖೇ ಪ್ರಕ್ಷಿಪ್ಯ ।

ಓಂ ॥ ಶ್ರೀರ್ಮೇ ಭಜತು ॥

** ನಂತರ ಅಡಿಕೆಗಳನ್ನು ಮೇಲಿನ ಮಂತ್ರದಿಂದ ಪರಸ್ಪರರ (ವಧು ವರನಿಗೆ ಮೊದಲು ತಿನ್ನಿಸಬೇಕು) ಬಾಯಿಗೆ ಹಾಕಬೇಕು ॥

ಪೂಗಚೂರ್ಣಂ ಮುಖೇ ಪ್ರಕ್ಷಿಪ್ಯ ॥

ಓಂ ॥ ಅಲಕ್ಷ್ಮೀರ್ಮೇ ನಶ್ಯತು ।

** ಚೆನ್ನಾಗಿ ಅಗಿದು ನುಂಗಿ, ಆಚಮನ ಮಾಡುವುದು ॥

ಗೀತ್ವಾ, ಭಕ್ಷಯಿತ್ವಾ । ಆಚಾಮೇತ್ ॥

** ನಂತರ ವರನು ಪತ್ನಿಯನ್ನು ಮುಟ್ಟಿಕೊಂಡು ಈ ಕೆಳಗಿನ ಮಂತ್ರಗಳನ್ನು ಜಪಿಸಿ ಸಮಾಗಮವಾಗುವುದು ।

ಆರೋಹೋರು....., ವಿಷ್ಣುರ್ಯೋನಿಂ....., ಇತ್ಯನುವಾಕ ಶೇಷಂ ಸಮಾವೇಶನೇ ಜಪೇತ್,

ಓಂ ಆರೋಹೋರುಂ । ಉಪಬರ್ಹಸ್ವ । ಬಾಹುಂ । ಪರಿಷ್ವಜಸ್ವ । ಜಾಂಯಾಂ । ಸುಮನಸ್ಯಮಾನಃ ॥ ತಸ್ಯಾಂ ಪುಷ್ಯತಂ । ಮಿಥುನೌ । ಸಯೋನೀ । ಬಹ್ವೀಂ ಪ್ರಜಾಂ । ಜನಯಂತೌ । ಸರೇತಸಾ ॥

ಆರ್ದ್ರಯಾऽರಣ್ಯಾ । ಯತ್ರಾಮಂಥತ್ । ಪುರುಷಂ । ಪುರುಷೇಣ ಶಕ್ರಃ ॥ ತದೇತೌ । ಮಿಥುನೌ । ಸಯೋನೀ । ಪ್ರಜಯೈ । ಅಮೃತೇನ । ಇಹ ಗಚ್ಛತಮ್ ॥

ಅಹಂ ಗರ್ಭಂ । ಅದಧಾಂ । ಓಷಧೀಷು । ಅಹಂ ವಿಶ್ವೇಷು । ಭುವನೇಷ್ವಂತಃ ॥ ಅಹಂ ಪ್ರಜಾಃ । ಅಜನಯಂ । ಪಿತೃಣಾಂ । ಅಹಂ ಜನಿಭ್ಯಃ । ಅಪರೀಷು(ಅವರೀಷು) । ಪುತ್ರಾನ್ ॥

ಪುತ್ರಿಣೀಮಾ । ಕುಮಾರಿಣಾ । ವಿಶ್ವಮಾಯುಃ । ವ್ಯಶ್ನುತಮ್ ॥ ಉಭಾ । ಹಿರಣ್ಯಪೇಶಸಾ । ವೀತಿಹೋತ್ರಾ । ಕೃತದ್ವಸೂ ॥

ದಶಸ್ಯಂತ್ವಾ । ಅಮೃತಾಯಕಂ । ಶಮೂಧಃ । ರೋಮಶಗ್ಂ ಹಥಃ । ದೇವೇಷು । ಕೃಣುತೋ ದುವಃ ॥

ವಿಷ್ಣುಂಯೋನಿಂ । ಕಲ್ಪಯತು । ತ್ವಷ್ಟಾ ರೂಪಾಣಿ । ಪಿಗ್ಂಶತು ॥ ಆಸಿಂಚತು । ಪ್ರಜಾಪತಿಃ । ಧಾತಾ । ಗರ್ಭಂ ದಧಾತು । ತೇ ॥

ಗರ್ಭಂ ಧೇಹಿ । ಸಿನೀವಾಲಿ । ಗರ್ಭಂ ಧೇಹಿ । ಸರಸ್ವತಿ ॥ ಗರ್ಭಂ ತೇ । ಅಶ್ವಿನೌ ದೇವೌ । ಆ ಧತ್ತಾಂ । ಪುಷ್ಕರಸ್ರಜಾ ॥

ಹಿರಣ್ಯಯೀ । ಅರಣೀಯಂ । ನಿರ್ಮಂಥತಃ । ಅಶ್ವಿನಾ ॥ ತಂತೇ ಗರ್ಭಂ । ಹವಾಮಹೇ । ದಶಮೇ ಮಾಸಿ । ಸೂತವೇ ॥

ಯಥೇಯಂ । ಪೃಥಿವೀ । ಮಹೀ ತಿಷ್ಠಂತೀ । ಗರ್ಭಮಾದಧೇ ॥
ಏವಂ ತ್ವಂ । ಗರ್ಭಮಾಧತ್ಸ್ವ । ದಶಮೇ ಮಾಸಿ । ಸೂತವೇ ॥

ಯಥಾ ಪೃಥಿವೀ । ಅಗ್ನಿ ಗರ್ಭಾ । ದ್ಯೌರ್ಯಥೇಂದ್ರೇಣ । ಗರ್ಭಿಣೀ ॥
ವಾಯುರ್ಯಥಾ । ದಿಶಾಂ ಗರ್ಭಃ । ಏವಂ ಗರ್ಭಂ । ದಧಾಮಿ ತೇ ॥

ವಿಷ್ಣೋಶ್ಚೇಷ್ಟೇನ । ರೂಪೇಣಾಸ್ಯಾಂ । ನಾರ್ಯಾಂ । ಗವೀನ್ಯಾಮ್ ॥
ಪುಮಾಗ್ಂ ಸಂ । ಗರ್ಭಮಾಧೇಹಿ । ದಶಮೇ ಮಾಸಿ । ಸೂತವೇ ॥

ನೇಜಮೇಷ । ಪರಾಪತ । ಸಪುತ್ರಃ । ಪುನರಾಪತ ॥ ಅಸ್ಯೈ ಮೇ ।
ಪುತ್ರಕಾಮಾಯ್ಯೈ । ಗರ್ಭಮಾಧೇಹಿ । ಯಃ ಪುಮಾನ್ ॥

ವ್ಯಸ್ಯ ಯೋನಿಂ । ಪ್ರತಿ ರೇತಃ । ಗೃಹಾಣ । ಪುಮಾನ್ ಪುತ್ರಃ ।
ಧೀಯತಾಂ । ಗರ್ಭೋ ಅಂತಃ ॥ ತಂ ಮಾತಾ । ದಶಮಾಸಃ ।
ಬಿಭರ್ತು । ಸಜಾಯತಾಂ । ವೀರತಮಃ । ಸ್ವಾನಾಮ್ ॥

ಆತೇ ಗರ್ಭಃ । ಯೋನಿಮೇತು । ಪುಮಾನ್ ಬಾಣಃ । ಇವೇಷುಧಿಮ್ ॥
ಆ ವೀರಃ । ಜಾಯತಾಂ । ಪುತ್ರಸ್ತೇ । ದಶಮಾಸ್ಯಃ ॥

ಓಂ ಕರೋಮಿ ತೇ । ಪ್ರಾಜಾಪತ್ಯಂ । ಆ ಗರ್ಭಃ । ಯೋನಿಮೇತು ತೇ ॥
ಅನೂನಃ ಪೂರ್ಣಃ । ಜಾಯತಾಂ । ಅಶ್ಲೋಣಃ । ಪಿಶಾಚಧೀತಃ ॥

ಪುಮಾಗ್ಸ್ತೇ । ಪುತ್ರೋ ನಾರಿ । ತಂ ಪುಮಾನ್ । ಅನುಜಾಯತಾಮ್ ॥
ತಾನಿ ಭದ್ರಾಣಿ । ಬೀಜಾನಿ । ಋಷಭಾ । ಜನಯಂತು ನೌ ॥

ಯಾನಿ ಭದ್ರಾಣಿ । ಬೀಜಾನಿ । ಋಷಭಾ । ಜನಯಂತಿ ನಃ ॥ ತೈಸ್ತ್ವಂ ।
ಪುತ್ರಾನ್ । ವಿಂದಸ್ವ । ಸಾ ಪ್ರಸೂಃ । ಧೇನುಕಾ ಭವ ॥

ಕಾಮ ಪ್ರಮೃಧ್ಯತಾಂ । ಮಹ್ಯಮಪರಾಜಿತಂ । ಏವ ಮೇ ॥ ಯಂ
ಕಾಮಂ । ಕಾಮಯೇ ದೇವ । ತಂ ಮೇ ವಾಯೋ । ಸಮರ್ಧಯ ॥

** ಮರುದಿನ ಮಂಗಳ ಸ್ನಾನವನ್ನು ಮಾಡಿ । ಬೆಳಗಿನ ನಿತ್ಯಾನುಷ್ಠಾನ, ಔಪಾಸನವನ್ನು ಮಾಡಿ । ಕಂಕಣವನ್ನು ಬಿಚ್ಚಿ ಹಾಲು ತುಪ್ಪದಲ್ಲಿ ಹಾಕಿ । ಆ ಹಾಲೂ ತುಪ್ಪವನ್ನು ಮಂಟಪ, ಯಜ್ಞೇಶ್ವರ, ಚಪ್ಪರ, ಹಸೇಮಣೆಗಳಿಗೆ ಸಿಂಪಡಿಸಿ ಆ ಕಂಕಣವನ್ನು ತುಳಸಿಗೆ ಹಾಕಬೇಕು ॥

ಮಂಗಳ ಸ್ನಾನಂ ಕೃತ್ವಾ । ಪ್ರಾತರೌಪಾಸನಂ ಕೃತ್ವಾ । ಕಂಕಣ ವಿಮೋಚನಂ । ಮಂಟಪ, ಕಂಕಣ, ಯಜ್ಞೇಶ್ವರ, ಹಸಾಮನ ಇತ್ಯಾದಿನಾಂ ಕ್ಷೀರೇಣ ಪ್ರೋಕ್ಷೇತ್ ॥

....*********....

ಈ ಕೆಳಗಿನ ಲಕ್ಷಣಗಳು – ಸಂದರ್ಭಗಳು ಯಾವಾಗಲೇ ಬರಲಿ, ಆಗ ಇಲ್ಲಿ ಸೂಚಿಸಿರುವ ಆಯಾಯಾ ಮಂತ್ರಗಳನ್ನು ಜಪಿಸಬೇಕು

ದುಸ್ವಪ್ನ–ಜಗಳವೇ ಮುಂತಾದ ದೋಷಗಳ ಪರಿಹಾರಕ್ಕೆ ಹೇಳುವ ಮಂತ್ರ –

ಅನುಹವಂ । ಪರಿಹವಂ । ಪರೀವಾದಂ । ಪರಿಕ್ಷಪಮ್ ॥ ದುಸ್ವಪ್ನಂ । ದುರುದಿತಂ । ತದ್ವಿಷದ್ಭ್ಯಃ । ದಿಶಾಮ್ಯಹಮ್ ॥

ಪಕ್ಷಿಗಳ ರಕ್ಕೆಯ ಗಾಳಿ ಮತ್ತು ಬೇರೇ ಬಟ್ಟೆಯ ಗಾಳಿಯ ಸ್ಪರ್ಶದೋಷದ ಪರಿಹಾರಕ್ಕೆ ಹೇಳುವ ಮಂತ್ರ –

ಅನುಹೂತಂ । ಪರಿಹೂತಂ । ಶಕುನೇಃ । ಯದಶಾಕುನಮ್ ॥ ಮೃಗಸ್ಯ । ಸೃತಮಕ್ಷಣ್ಯಾ । ತದ್ವಿಷದ್ಭ್ಯಃ । ದಿಶಾಮ್ಯಹಮ್ ॥

ಮರದ ಹಣ್ಣು, ಕಾಯಿಗಳು ತಲೆಯ ಮೇಲೆ ತಾನಾಗಿಯೇ ಬಿದ್ದಾಗ ಹೇಳುವ ಮಂತ್ರ –

ಆರಾತ್ತೇ । ಅಗ್ನಿರಸ್ತು । ಆರಾತ್ । ಪರಶುರಸ್ತು ತೇ ॥ ನಿವಾತೇ ತ್ವಾ । ಅಭಿವರ್ಷತು । ಸ್ವಸ್ತಿ ತೇಽಸ್ತು । ವನಸ್ಪತೇ । ಸ್ವಸ್ತಿ ಮೇಽಸ್ತು । ವನಸ್ಪತೇ ॥

ಸಗಣಿಯನ್ನು ತುಳಿದರೆ–ತಾನಾಗಿಯೇ ಸ್ಪರ್ಶವಾದರೆ ಆಗ ಹೇಳುವ ಮಂತ್ರ–

ನಮಶ್ಮಕೃತ್ಸದೇ । ರುದ್ರಾಯ । ನಮೋ ರುದ್ರಾಯ । ಶಕೃತ್ಸದೇ ॥ ಗೋಷ್ಮಮಸಿ । ನಮಸ್ತೇ ಅಸ್ತು । ಮಾ ಮಾ ಹಿಗ್ಂಸೀಃ । ಸಿಗಸಿ ನಸಿ । ವಜ್ರಃ । ನಮಸ್ತೇ ಅಸ್ತು । ಮಾ ಮಾ ಹಿಗ್ಂಸೀಃ ॥

ಗೂಬೆ ಮುಂತಾದ ಪಕ್ಷಿಗಳ ವಿಕಾರವಾದ ಅಶುಭಸೂಚಕ ಧ್ವನಿಗಳನ್ನು ಕೇಳಿದರೆ –

ಉದ್ಗಾತೇವ । ಶಕುನೇ । ಸಾಮಗಾಯಸಿ । ಬ್ರಹ್ಮಪುತ್ರ ಇವ । ಸವನೇಷು ।
ಶಗ್ಂಸಸಿ ॥ ಸ್ವಸ್ತಿ ನಃ । ಶಕುನೇ ಅಸ್ತು । ಪ್ರತಿ ನಃ । ಸುಮನಾ ಭವ ॥

....*********....

೭. ವಿವಾಹ ಮಂತ್ರಗಳಿಗೆ ಶ್ರೀಹರದತ್ತರ ಭಾಷ್ಯಾರ್ಥವು

ಕನ್ಯಾ ನಿರೀಕ್ಷಣೆಗಾಗಿ(ನೋಡಿಕೊಂಡು ಬರಲು) ವರನು, ತನ್ನ ಪರವಾಗಿ ಬ್ರಾಹ್ಮಣರನ್ನು ಕಳುಹಿಸುವುದು–

೧. ಓಂ ಪ್ರ॒ಸ॒ಗ್ಮಂ॑ತಾ ಧಿ॒ಯ॒ಸಾ॒ನಸ್ಯ॒ ಸ॒ಕ್ಷ॒ಣೇ ವ॒ರೇ॑ಭಿರ್ ವ॒ರಾಗ್ಂ ಅ॒ಭಿ॒ಷ್ಟು ಪ್ರ॑ಸೀದತ । ಅ॒ಸ್ಮಾ॒ಕಮಿಂ॑ದ್ರ ಉ॒ಭ॑ಯಂ ಜುಜೋ॑ಷತಿ ಯತ್ ಸೌ॒ಮ್ಯಸ್ಯಾಂ॑ಧ॑ಸೋ ಬು॑ಬೋ॒ಧತಿ ॥

ಎಲ್ಲೈ ಸ್ನೇಹಿತರೇ, ಒಳ್ಳೆಯ ಶ್ರೇಷ್ಠವಾದ ಮಾರ್ಗದಲ್ಲಿ ನಡೆಯುವವರಾಗಿದ್ದೀರಿ, ಆ ಯೋಚನೆ ಮಾಡುತ್ತಿರುವ ಆ ಕ್ಷಣದಲ್ಲಿ, ಶ್ರೇಷ್ಠವಾದ ಮಾರ್ಗದಲ್ಲಿರುವ ವರನಾದ ನನ್ನಿಂದ ವರಿಸುವುದಕ್ಕೆ ಯೋಗ್ಯರಾದ ತಂದೆತಾಯಿಯರ ಬಳಿಗೆ ಪ್ರೀತಿಯಿಂದ ಹೋಗಿ, ಅವರು ನನಗೆ ಕನ್ಯೆಯನ್ನು ಕೊಡುವಂತೆ ಪ್ರಸನ್ನಗೊಳಿಸಿರಿ । ನನ್ನ ಮತ್ತು ಕನ್ಯೆಯ ಸಂಬಂಧವು ದೇವಾಧಿಪತಿಯಾದ ಇಂದ್ರನಿಗೆ ಒಪ್ಪಿಗೆಯಾಗಿದೆ, ಏಕೆಂದರೆ ಸೋಮರಸಾತ್ಮಕವಾದ ಅನ್ನವನ್ನು ನಾವಿಬ್ಬರೂ ಕೊಡುತ್ತೇವೆ ಎಂದು ತಿಳಿದಿರುವುದರಿಂದ ॥

೨. ಓಂ ಅ॒ನೃ॑ಕ್ಷ॒ರಾ ಋ॒ಜ॒ವ॑ಸ್ಸಂ॒ತು ಪಂ॒ಥಾ ಯೇ॑ಭಿ॒ಸ್ಸ॒ಖಾ॑ಯೋ ಯಂ॑ತಿ॒ನೋ॑ ವ॒ರೇ॑ಯಮ್ । ಸ॒ಮ್ಯ॑ಮಾ ಸಂಭ॑ಗೋನೋ ನಿನೀ॒ಯಾತ್ ಸಂ ॥ ಜಾ॒ಸ್ಪ॒ತ್ಯಗ್ಂ ಸು॑ಯ॒ಮ॑ಮಸ್ತು ದೇವಾಃ ॥

ಕನ್ಯೆಯ ಮನೆಗೆ ಹೋಗುತ್ತಿರುವ ನಿಮಗೆ ಮಾರ್ಗದಲ್ಲಿ ಮುಳ್ಳು, ಕಲ್ಲು ಮುಂತಾದವುಗಳು ಸಿಗದೇ ಇರಲಿ ಮತ್ತು ದಾರಿಯು ಋಜುವಾಗಿರಲಿ । ಎಲ್ಲೈ ಸ್ನೇಹಿತರೇ, ವರಿಸುವ ಕನ್ಯೆಯ ತಂದೆತಾಯಿಯರ ಬಳಿಗೆ ಹೋಗುತ್ತಿರುವ ನಿಮ್ಮ ಮಾರ್ಗವು ಸುಖಪ್ರದವಾಗಿರಲಿ । ನಮ್ಮಿಬ್ಬರನ್ನು ಅರ್ಯಮಾ ಮತ್ತು ಭಗದೇವತೆಗಳು ಒಂದಾಗಿಸಲಿ । ನಮ್ಮಿಬ್ಬರಿಗೆ ಹೆಂಡತಿ ಮತ್ತು ಗಂಡ ಎಂಬ ಸಂಬಂಧವು ಗಟ್ಟಿಯಾಗಿ, ಶಾಶ್ವತವಾಗಿ ಇರುವಂತೆ ಮಾಡಿರಿ ಎಲ್ಲೈ ದೇವತೆಗಳೇ ॥

ವರನು ವಧುವನ್ನು ಗಮನಿಸಿ ನೋಡುವುದು –

೩. ಓಂ ಅಭ್ರಾತೃಘ್ನೀಂ ವರುಣಾಪತಿಘ್ನೀಂ ಬೃಹಸ್ಪತೇ । ಇಂದ್ರಾಪುತ್ರಘ್ನೀಂ
ಲಕ್ಷ್ಮ್ಯಂತಾಮಸ್ಯೈ ಸವಿತಸ್ಸುವ ॥

ಎಲೈ ವರುಣನೇ, ನೀನು ಈ ವಧುವಿಗೆ ಭ್ರಾತೃಘ್ನವಲ್ಲದ ಐಶ್ವರ್ಯವನ್ನು ಕೊಡು । ಎಲೈ ಬೃಹಸ್ಪತಿ ದೇವತೆಯೇ ನೀನು ಈ ವಧುವಿಗೆ, ಪತಿಗೆ ತೊಂದರೆ ಮಾಡದಿರುವಂತಹ ಐಶ್ವರ್ಯವನ್ನು ಕೊಡು । ಇಂದ್ರನೇ, ನೀನು ಇವಳಿಗೆ ಮುಂದೆ ಆಗುವ ಇವಳ ಮಕ್ಕಳಿಗೆ ತೊಂದರೆ ಆಗದಿರುವಂತಹ ಐಶ್ವರ್ಯವನ್ನು ಕೊಡು । ಸವಿತೃದೇವನೇ, ಇವಳಿಗೆ ನೀನು ಸರ್ವಾತ್ಮಕವಾದಂತಹ ಐಶ್ವರ್ಯವನ್ನು ಕೊಡು । ಹೇಗೆ, ಇವಳ ಸಹೋದರ ಮುಂತಾದವರು ಮರಣವನ್ನು ಹೊಂದುವುದಿಲ್ಲವೋ ಅಂತಹ ಮಂಗಳ ಸೌಭಾಗ್ಯವನ್ನು ಇವಳಿಗೆ ಕೊಡಿರಿ ಎಂದರ್ಥ ॥

೪. ಓಂ ಅಘೋರಚಕ್ಷುರಪತಿಘ್ನ್ಯೇಧಿ ಶಿವಾಪತಿಭ್ಯಸ್ಸುಮನಾಸ್ಸುವರ್ಚಾಃ ।
ಜೀವಸೂರ್ದೇವಕಾಮಾ ಸ್ಯೋನಾ ಶನ್ನೋ ಭವ ದ್ವಿಪದೇ ಶಂ
ಚತುಷ್ಪದೇ ॥

ಎಲೈ ವಧುವೇ, ಅಘೋರವಾದ(ಅಕ್ರೂರವಾದ) ಕಣ್ಣುಳ್ಳವಳಾಗಿ, ಪತಿಗೆ ತೊಂದರೆಯನ್ನುಂಟುಮಾಡದೇ ಇರುವಂತಹ ಮಂಗಳ ರೂಪವುಳ್ಳವಳಾಗಿ ಇರು । ನೀನು ಪತಿಯ ವಿಷಯದಲ್ಲಿ ಒಳ್ಳೆಯ ಮನಸ್ಸುಳ್ಳವಳಾಗಿ, ಒಳ್ಳೆಯ ವರ್ಚಸ್ಸನ್ನು ಕೊಡುವವಳಾಗಿ ಆಗು । ದೇವರಾದಿಗಳ(ಅಣ್ಣ, ತಮ್ಮ, ತಂದೆ, ತಾಯಿ, ತಂಗಿ) ವಿಷಯದಲ್ಲಿ, ಎಲೈ ವಧುವೇ ಒಳ್ಳೆಯ ಮನಸ್ಸು, ಕೀರ್ತಿಯನ್ನು ತರುವವಳಾಗು । ನೀನು ಜೀವಸೂ(ಎಂದರೆ ತಾನೂ ಜೀವಿಸಿ, ಹಡೆದ ಮಕ್ಕಳೂ ಜೀವಿಸಿದರೆ ಅವರಿಗೆ ಜೀವಸೂ ಎಂದು ಹೆಸರು) ಆಗಿ, ಹಾಗೆಯೇ ದೇವತೆಗಳ ವಿಷಯಗಳಲ್ಲಿ (ಕರ್ಮಗಳ) ಇಚ್ಛೆಯುಳ್ಳವಳಾಗಿ, ಅತ್ಯಂತ ಶ್ರೇಷ್ಠ ಪವಿತ್ರಳಾಗಿ ಇರು । ವಧುವೇ ನೀನು, ನಮಗೆ ಮತ್ತು ನಮ್ಮ ಸಂಬಂಧಿಗಳಾದ ೨ ಕಾಲುಗಳುಳ್ಳ ಮನುಷ್ಯರ ವಿಷಯದಲ್ಲಿ ಹಾಗೂ ೪ ಕಾಲುಗಳುಳ್ಳ ಪಶುಗಳ ವಿಷಯಗಳಲ್ಲಿಯೂ ಸಹ ಸುಖವನ್ನುಂಟುಮಾಡುವವಳಾಗಿರು ॥

ವಧುವಿನ ಹುಬ್ಬುಗಳ ಮಧ್ಯವನ್ನು, ವರನು ದರ್ಭೆಯಿಂದ ತಿಕ್ಕುವಮಂತ್ರ –

೫. ಓಂ ಇದಮಹಂ ಯಾ ತ ಯೇ ಪತಿಘ್ನ್ಯ ಲಕ್ಷ್ಮಸ್ತಾಂ ನಿರ್ದಿಶಾಮಿ ॥

ಎಲ್ಲೆ ವಧುವೇ, ಯಾವ ನಿನ್ನಲ್ಲಿ ಪತಿಯನ್ನು ಕೊಲ್ಲುವ ಅಮಂಗಳಕರವು(ಅಲಕ್ಷ್ಮ) ಇದೆಯೋ ಅದನ್ನು ನಾನು ನಿನ್ನಿಂದ ಬೇರೆಮಾಡುತ್ತೇನೆ, ಹೇಗೆಂದರೆ ಈ ದರ್ಭೆಯಿಂದ ಸಂಮಾರ್ಜನೆ ಮಾಡಿ, ಎಸೆಯುವ ಮೂಲಕ ॥

ಕನ್ಯೆಯ ಬಂಧುಗಳ ಅಳುವಿಗೆ ಸಮಾಧಾನ ಹೇಳುವ ಮಂತ್ರ –

೬. ಓಂ ಜೀವಾಗ್ಂ ರುದಂತಿ ವಿಯಂತಯಂತೇ ಅಧ್ವರೇ ದೀರ್ಘಾಮನು ಪ್ರಸಿತಿಂ ದೀಧಿಯುರ್ನರಃ । ವಾಮಂ ಪಿತೃಭ್ಯೋ ಯ ಇದಗ್ಂ ಸಮೇರಿರೇ ಮಯಃ ಪತಿಭ್ಯೋ ಜನಯಃ ಪರಿಷ್ವಜೇ ॥

ಜೀವಿಸಿರುವಂತಹ ಈ ಕನ್ಯೆಯ ವಿಷಯದಲ್ಲಿ ಯಾವ ರೋದನವಿದೆಯೋ(ಅಳು), ಅಹಿಂಸಾರೂಪವಾದ, ಯಜ್ಞರೂಪವಾದ, ಈ ವಿವಾಹಕರ್ಮದಲ್ಲಿ(ಹರ್ಷವಿಷಯದಲ್ಲಿ ಅಳು) ಈ ಬಾಂಧವ್ಯರೂಪವಾದ ಭಾವಬಂಧನವು ನಮ್ಮಿಬ್ಬರಿಗೆ(ವಧೂವರರಿಗೆ) ದೀರ್ಘಕಾಲದವರೆಗೆ ಉಳಿಯುವಂತೆ ಕನ್ಯಾಬಂಧುಗಳು ಅನುಗ್ರಹಿಸಲಿ । ಪಿತೃಗಳಿಗೆ ಇಷ್ಟವಾದ, ನನ್ನ ಪತಿಗೆ ಸುಖವನ್ನುಂಟುಮಾಡುವ ಈ ವಿವಾಹಕರ್ಮವನ್ನು ಯಾವ ಪೂರ್ವಜರು ನಡೆಸುತ್ತಿದ್ದರೋ ಅಂತಹ ಈ ವಧುವನ್ನು ಕೊಡಲುಯೋಗ್ಯವಾದ ಈ ವಿವಾಹಕರ್ಮವು ನಮ್ಮಿಬ್ಬರ ಭಾವಬಂಧನವನ್ನು ಸೂಚಿಸುತ್ತದೆ । ಇದನ್ನು ಮನಸ್ಸಿನಲ್ಲಿಟ್ಟುಕೊಂಡು, ಕನ್ಯೆಯ ಬಂಧುಗಳು ಅಳದೇ ಇರಲಿ ॥

ವಧುವಿನ ಸ್ನಾನಕ್ಕಾಗಿ ಬ್ರಾಹ್ಮಣರು ನೀರುತರುವ ಮಂತ್ರ –

೭. ಓಂ ವ್ಯಕ್ಷತ್ ಕ್ರೂರಮುದಚಂತ್ವಾಪ ಆಸ್ಯೈ ಬ್ರಾಹ್ಮಣಾಸ್ಸಪನಗ್ಂ ಹರಂತು । ಅವೀರಘ್ನೀಮುದಚಂತ್ವಾಪಃ ॥

ಈ ವಧುವಿಗೆ, ಬ್ರಾಹ್ಮಣರು ಕ್ರೂರತನವಿಲ್ಲದ ನೀರನ್ನು ತರಲಿ । ಮತ್ತು ಅವೀರಘ್ನಿಗಳಾದ(ವೀರಪುರಷರನ್ನು ಸಾಯಿಸುವಂತಹ ಸ್ವಭಾವವಿಲ್ಲದ), ಅಪ್ ದೇವತೆಗಳನ್ನು ಈ ಬ್ರಾಹ್ಮಣರು ತರಲಿ । ಹಾಗೂ ಅವೀರಘ್ನಿಗಳಾದ(ವೀರಪುರುಷರನ್ನು ಸಾಯಿಸುವ ಸ್ವಭಾವವಿಲ್ಲದ), ಅಪ್(ನೀರು)ದೇವತೆಗಳನ್ನು ಈ ಬ್ರಾಹ್ಮಣರು ತರಲ(ಯಾವ ನೀರಿನಲ್ಲಿ ವೀರಪುರುಷರ ಸಾವಾಗಿಲ್ಲವೋ ಅಂತಹ ನೀರನ್ನು ಬ್ರಾಹ್ಮಣರು ತರಲಿ) । ಅಪ್ ದೇವತೆಗಳು ಈ ವಧುವಿನಲ್ಲಿರಬಹುದಾದ ಕ್ರೂರತನವನ್ನು ಹೋಗಲಾಡಿಸಲಿ ॥

ದರ್ಭೆಯ ಶಿಂಬಿಯ ವಿಷಯವನ್ನು ಹೇಳುವ ಮಂತ್ರ –

ಆ. ಓಂ ಆರ್ಯಮ್ಣೋ ಅಗ್ನಿಂ ಪರಿಯಂತು ಕ್ಷಿಪ್ರಂ ಪ್ರತೀಕ್ಷಂತಾಗ್ಂ
ಶ್ವಶ್ರ್ಯೋ ದೇವರಾಶ್ಚ ॥

ಆದಿತ್ಯನ ಪ್ರಸಾದದಿಂದ, ಈ ವಿವಾಹಾಗ್ನಿಯನ್ನು ವಧುವಿನ ತಂದೆತಾಯಿಯರು, ನನ್ನ ತಂದೆತಾಯಿಯರು, ನನ್ನ ಮತ್ತು ವಧುವಿನ ಅಣ್ಣತಮ್ಮಂದಿರು ಸುತ್ತುಗಟ್ಟಿ ನಿಂತುಕೊಳ್ಳಲಿ । ಹೇಗೆ ಮಂಡಲೀಭೂತರಾಗಿ ಈ ದರ್ಭೆಯ ಶಿಂಬಿಯನ್ನು ನೋಡಲು ಸಮರ್ಥರಾಗುತ್ತಾರೋ, ಹಾಗೆ ನಿಂತುಕೊಳ್ಳಲಿ ॥

ರಂಧ್ರವನ್ನು ತಲೆಯಲ್ಲಿಟ್ಟು ನೀರು ಮತ್ತು ಚಿನ್ನವನ್ನು ಹಾಕುವ ವಿಷಯದ ಮಂತ್ರ –

ಇ. ಓಂ ಖೇನಸಃ ಖೇರಥಃ ಖೇಯುಗಸ್ಯ ಶಚೀಪತೇ । ಅಪಾಲಾಮಿಂದ್ರಸ್ತ್ರಿಃ
ಪೂರ್ವ್ಯ ಕರತ್ಸ್ನರ್ಯ ವರ್ಚಸಮ್ ॥

ಹಿಂದೆ, ಅಪಾಲಾ ಎಂಬ ಕನ್ಯೆಯು ಇದ್ದಳು । ಅವಳು ಕುರೂಪಿಯಾಗಿದ್ದರಿಂದ ಅವಳನ್ನು ಯಾರೂ ವಿವಾಹವಾಗಲಿಲ್ಲ । ಅವಳ ಮನಸ್ಸಿನಲ್ಲಿ, ನಾನು ಹೇಗಾದರೂ ಇಂದ್ರನನ್ನು ಪೂಜಿಸಬೇಕು ಎಂಬ ಇಚ್ಛೆಯು ಇತ್ತು । ಅವಳು ಒಮ್ಮೆ ನದಿಯಲ್ಲಿ ಇಳಿದಾಗ, ನೀರಿನ ರಭಸಕ್ಕೆ ತೇಲಿಕೊಂಡು ಹೋಗುತ್ತಿದ್ದಾಗ ಸೋಮಲತೆ(ಒಂದುರೀತಿಯ ಗಿಡ)ಯನ್ನು ನೋಡಿ, ರಕ್ಷಣೆಗಾಗಿ ಆ ಗಿಡವನ್ನು ಹಲ್ಲಿನಿಂದ ಕಚ್ಚಿ ಹಿಡಿದು, ಅದರಿಂದ ಬಂದಂತಹ ರಸವನ್ನು ಇಂದ್ರನಿಗೆ ಅರ್ಪಿಸಿದಳು । ಅದನ್ನು ಸ್ವೀಕರಿಸಿದ(ಕುಡಿದ) ಇಂದ್ರನು ರಥದ

ಎರಡು ಚಕ್ರ ಯುಗ ಎಂಬ ೩ ಛಿದ್ರಗಳಲ್ಲಿ(ತೂತು) ನೀರನ್ನು ಬಿಟ್ಟು, ಆ ನೀರಿನಿಂದ ಅವಳನ್ನು ೩ ಸಲ ಪ್ರೋಕ್ಷಿಸಿ, ಪವಿತ್ರಗೊಳಿಸಿ, ಸೂರ್ಯನಂತೆ ಕಾಂತಿಯುಳ್ಳವಳನ್ನಾಗಿ ಮಾಡಿದನು। ಆದ್ದರಿಂದ ರಥ ಮುಂತಾದವುಗಳ ತೂತುಗಳಲ್ಲಿ ನೀರನ್ನು ಬಿಟ್ಟು, [illegible] ಎಲೈ ಇಂದ್ರನೇ, ನೀನು ಅಪಾಲಾ ಎಂಬ ಕನ್ಯೆಯನ್ನು ಸೂರ್ಯವರ್ಚಸ್ವಿಯಾಗಿ ಮಾಡಿದ್ದೀಯೇ, ಇಲ್ಲಿಯೂ ಸಹ ಹಾಗೆಯೇ ಈ ವಧುವನ್ನು ಮಾಡು ॥

೧೦. ಓಂ ಶಂತೇ ಹಿರ॑ಣ್ಯ॒ಗ್ಂ ಶಮು॒ಶಂತ್ವಾ॒ ಪಶ್ಯಂತೇ॒ ಮೇಧೀ॑ ಭವತು॒ ಶಂ ಯು॑ಗಸ್ಯ॒ ತೃದ್ಮ॑ । ಶಂತ॒ ಆಪ॑ಶ್ಯತ॒ ಪವಿತ್ರಾ॑ ಭ॒ವಂತ್ವಥಾ॑ ಪ॒ತ್ಯಾ ತ॒ನ್ವ॑ಗ್ಂ॑ ಸಗ್ಂ॑ ಸೃಜಸ್ವ ॥

ಈ ರಂಧ್ರಗಳಲ್ಲಿ (ತೂತು), ಇಡುತ್ತಿರುವಂತಹ ಹಿರಣ್ಯವು ಎಲೈ ವಧುವೇ ನಿನಗೆ ಸುಖವನ್ನುಂಟುಮಾಡಲಿ । ಅದರಲ್ಲಿ ಹಾಕುತ್ತಿರುವಂತಹ ನೀರು ನಿನಗೆ ಮಂಗಳವನ್ನುಂಟುಮಾಡಲಿ। ಎಲೈ ಯುಗವೇ(ನೊಗ) ನೀನು ಪವಿತ್ರವಾಗಿದ್ದರೂ ನಿನಗೆ ಈ ನೀರು ಸುಖವನ್ನುಂಟುಮಾಡಲಿ । ಎಲೈ ವಧುವೇ ಈ ನೊಗವು ಮತ್ತೂ ಯುಗದ ರಂಧ್ರವು ನಿನಗೆ ಸುಖವನ್ನುಂಟುಮಾಡಲಿ । ಹಾಗೆಯೇ ಎಲ್ಲವನ್ನೂ ಪವಿತ್ರಗೊಳಿಸುವ ಅಪ್ ದೇವತೆಗಳು ನಿನಗೆ ಸುಖವನ್ನುಂಟುಮಾಡಲಿ । ನಂತರ ಎಲೈ ನೀರಿನ(ಅಪ್) ದೇವತೆಗಳೇ, ಪತಿಯಜೊತೆ ನನ್ನ ಶರೀರವನ್ನು ಸಂಭೋಗಕಾಲದಲ್ಲಿ ಸೇರಿಸಿರಿ ॥

ವಧುವಿಗೆ ಸ್ನಾನ ಮಾಡಿಸುವ ಮಂತ್ರ –

೧೧. ಓಂ ಹಿರ॑ಣ್ಯವರ್ಣಾಶ್ಶು॒ಚಯಃ॑ ಪಾ॒ವಕಾಃ॑ ಪ್ರ॒ಚ॑ಕ್ರಮುರ್ಹಿತ್ವಾ॒ ವದ್ಯಮಾ॑ಪಃ । ಶ॒ತಂ ಪ॒ವಿತ್ರಾ॑ ವಿ॒ತ॒ತಾ ಹ್ಯಾ॑ಸು॒ ತಾಭಿ॑ಷ್ಟ್ವಾ॒ ದೇವ॑ಸ್ಸ॒ವಿತಾ॑ ಪುನಾತು ॥

ಸುವರ್ಣದಂತೆ ಬಣ್ಣವುಳ್ಳಂತಹ, ಶುದ್ಧರಾದ ಮತ್ತು ಪವಿತ್ರಗೊಳಿಸುವವರಾದ ಅಪ್ ದೇವತೆಗಳು ಪಾಪರೂಪವಾದ ಮಲಿನವನ್ನು ಬಿಟ್ಟವರಾಗಿ ಇವೆ ।

ಇವರ ಪವಿತ್ರರೂಪವಾದಂತಹ ತೀರ್ಥಗಳು ಎಲ್ಲಾ ಕಡೆಯೂ ವ್ಯಾಪಿಸಿವೆ । ಅಂತಹ ಪವಿತ್ರವಾದ ನೀರಿನಿಂದ ಎಲೈ ವಧುವೇ, ನಿನ್ನನ್ನು ಸವಿತೃದೇವತೆಯು ಪವಿತ್ರಗೊಳಿಸಲಿ ॥

೧೨. ಹಿರಣ್ಯವರ್ಣಾಶ್ಶುಚಯಃ ಪಾವಕಾ ಯಾಸು ಜಾತಃ ಕಶ್ಯಪೋಯಾಸ್ವಗ್ನಿಃ । ಯಾ ಅಗ್ನಿಂ ಗರ್ಭಂ ದಧಿರೇ ಸುವರ್ಣಾಸ್ತಾಸ್ತ ಆಪಶ್ಶಗ್ಂ ಸ್ಯೋನಾ ಭವಂತು ॥

ಎಲ್ಲವನ್ನೂ ನೋಡುವವರಾದ, ಹಿರಣ್ಯದಂತೆ ಶುಭ್ರವರ್ಣವುಳ್ಳಂತಹ ಮತ್ತು ಬೇರೆಯವರನ್ನು ಪವಿತ್ರಗೊಳಿಸುವಂತಹ ಯಾವ ನೀರಿನಲ್ಲಿ ಸರ್ವಜ್ಞನಾದ(ಎಲ್ಲವನ್ನೂ ತಿಳಿದವ) ಅಗ್ನಿಯು ತೋರಿದನೋ ಮತ್ತು ಯಾವ ಅಪ್ (ನೀರನ್ನು)ನ್ನು ಅಗ್ನಿಯು ಗರ್ಭರೂಪವಾಗಿ ಧರಿಸಿರುವನೋ(ಯಾವ ನೀರು ಅಗ್ನಿಯನ್ನು ಧರಿಸಿದೆಯೋ, ಅಂತಹ ಸುವರ್ಣದಂತೆ ಪವಿತ್ರವಾದ ನೀರು ನಿನಗೆ ಸುಖಕರವಾಗಿರಲಿ('ಸ್ಯೋನಾ', ಎಂದರೆ ಮತ್ತು 'ಶಂ' ಎಂದರೆ ಪಾರಲೌಕಿಕಸುಖ ಮತ್ತು ಐಹಿಕ ಸುಖ ಎಂದರ್ಥ) ॥

೧೩. ಯಾಸಾಗ್ಂ ರಾಜಾ ವರುಣೋ ಯಾತಿ ಮಧ್ಯೇ ಸತ್ಯಾನೃತೇ ಅವಪಶ್ಯನ್ ಜನಾನಾಮ್ । ಯಾ ಅಗ್ನಿಂ ಗರ್ಭಂ ದಧಿರೇ ಸುವರ್ಣಾಸ್ತಾಸ್ತ ಆಪಶ್ಶಗ್ಂ ಸ್ಯೋನಾ ಭವಂತು ॥

ಯಾವ ಅಬ್ದೇವತೆಗಳಲ್ಲಿ ವರುಣದೇವತೆಯು, ಜನರ ಅನೃತ–ಸತ್ಯಗಳನ್ನು ತಿಳಿಯುತ್ತಾ ಓಡಾಡುತ್ತಿರುವನೋ ಮತ್ತು ಯಾವ ಅಬ್ದೇವತೆಯು ಅಗ್ನಿಯನ್ನು ಗರ್ಭವಾಗಿ ಧರಿಸಿರುವಳೋ ಅಂತಹ ಪವಿತ್ರವಾದ ಅಬ್ದೇವತೆಯು ಐಹಿಕ, ಪಾರಲೌಕಿಕ ಸುಖವನ್ನು ನಿನಗೆ (ವಧುವಿಗೆ) ಕೊಡಲಿ ॥

೧೪. ಯಾಸಾಂ ದೇವಾ ದಿವಿ ಕೃಣ್ವಂತಿ ಭಕ್ಷಂ ಯಾ ಅಂತರಿಕ್ಷೇ ಬಹುಧಾ ನಿವಿಷ್ಟಾಃ । ಯಾ ಅಗ್ನಿಂ ಗರ್ಭಂ ದಧಿರೇ ಸುವರ್ಣಾಸ್ತಾಸ್ತ ಆಪಶ್ಶಗ್ಂ ಸ್ಯೋನಾ ಭವಂತು ॥

ಯಾವ ಅಬ್ದೇವತೆಗಳ ಅನ್ನವನ್ನು ದೇವತೆಗಳು ದ್ಯುಲೋಕದಲ್ಲಿ (ಸ್ವರ್ಗ) ಮಾಡುತ್ತಾರೋ, ಯಾವ ಅಬ್ದೇವತೆಯು ಅಂತರಿಕ್ಷದಲ್ಲಿ, ಮೋಡದಲ್ಲಿ ಬಹಳ ವಿಧವಾಗಿ ಇದ್ದಾಳೋ (ಇಡಲ್ಪಟ್ಟಿದ್ದಾಳೋ) ಮತ್ತು ಯಾವಳು ಅಗ್ನಿಯನ್ನು ಗರ್ಭದಲ್ಲಿ ಧರಿಸಿರುವಳೋ, ಅಂತಹ ಶುದ್ಧವಾದ ಅಬ್ದೇವತೆಯು ಐಹಿಕ, ಆಮುಷ್ಮಿಕ ಸುಖವುಂಟಾಗುವಂತೆ ಮಾಡಲಿ(ನಿನಗೆ ಸುಖಕರಳಾಗಲಿ) ॥

೧೫. ಶಿವೇನ᳕ ತ್ವಾ ಚ᳕ಕ್ಷುಷಾ ಪಶ್ಯಂತ್ವಾಪಶ್ಯಿವಂ᳕ಯಾ ತನ್ವೋ᳕ಪಸ್ಪೃಶಂತು ತ್ವ᳕ಚಂ ತೇ । ಘೃತಶ್ಚುತ ಶ್ಯು᳕ಚಯೋ ಯಾಃ ಪಾವಕಾಸ್ತಾನ ಆಪಶ್ಯಗ್ಂ ಸ್ಯೋನಾ ᳕ಭವಂತು ॥

ಎಲೈ ವಧುವೇ, ಅಬ್ದೇವತೆಗಳು ಮಂಗಳಕರವಾದಂತಹ ನೋಟದಿಂದ ನಿನ್ನನ್ನು ನೋಡಲಿ ಮತ್ತು ಮಂಗಳಕರವಾದಂತಹ ತಮ್ಮ ಶರೀರದಿಂದ ನಿನ್ನ ಶರೀರವನ್ನು ಸ್ಪರ್ಶಿಸಲಿ । ಘೃತರಸವನ್ನು ಕರೆಯುವವರಾದ, ಶುದ್ಧರಾದ ಮತ್ತು ಇನ್ನೊಬ್ಬರನ್ನು ಪವಿತ್ರಗೊಳಿಸುವ ಅಂತಹ ಅಬ್ದೇವತೆಗಳು ನಿನ್ನ ಲೌಕಿಕ ಮತ್ತು ಪಾರಲೌಕಿಕ ಸುಖಕ್ಕೆ ಕಾರಣವಾಗಲಿ ॥

ವಧುವು ಸೀರೆಯನ್ನು ಉಡುವಾಗ ಹೇಳುವ ಮಂತ್ರ –

೧೬. ಓಂ ಪರಿ᳕ತ್ವಾ ಗಿರ್ವ᳕ಣೋ ಗಿರ᳕ ಇಮಾ ᳕ಭವಂತು ವಿ᳕ಶ್ವತ᳕ಃ । ವೃದ್ಧಾ᳕ಯುಮನು ವೃ᳕ದ್ಧ᳕ಯೋ ಜು᳕ಷ್ಟಾ᳕ಭವಂತು ಜು᳕ಷ್ಟ᳕ಯಃ ॥

ಎಲೈ ಇಂದ್ರನೇ, ಸ್ತುತಿರೂಪವಾದ ಮಾತುಗಳಿಂದ ಪೂಜಿಸಲ್ಪಡುವವನೇ ಈ ನನ್ನ ಮಾತು, ನಿನ್ನನ್ನು ಎಲ್ಲ ಕಡೆಯಿಂದಲೂ ಈ ವಧುವು ಬಟ್ಟೆಯಿಂದ ಹೇಗೆ ಮುಚ್ಚಲ್ಪಡುತ್ತಾಳೋ ಹಾಗೆ ಸ್ವೀಕರಿಸಲ್ಪಡಲಿ । ವೃದ್ಧಿಯನ್ನು ಹೊಂದುವ ಸ್ವಭಾವದಿಂದ ಕೂಡಿದ ನಿನ್ನಿಂದ ಸೇವಿಸಲ್ಪಡಬೇಕಾದದ್ದಾದ ಈ ನನ್ನ ಮಾತು ವೃದ್ಧರನ್ನು ಬಳಿಸಾರುವಂತಹ ನಿನ್ನಿಂದ ಇಷ್ಟಪೂರ್ವಕವಾಗಿ ಸೇವಿಸಲ್ಪಡಲಿ ॥

ದರ್ಭೆಯ ದಾರವನ್ನು ವಧುವಿನ ಸೊಂಟಕ್ಕೆ ಕಟ್ಟುವಾಗ ಹೇಳುವ ಮಂತ್ರ –

೧೭. ಓಂ ಆಶಾಸಾನಾಸೌಮನಸಂ ಪ್ರಜಾಗ್ಂ ಸೌಭಾಗ್ಯಂ ತನೂಂ ।
ಅಗ್ನೇರನು ವ್ರತಾ ಭೂತ್ವಾ ಸನ್ನಹ್ಯೇ ಸುಕೃತಾಯಕಮ್ ॥

ಸೌಮ್ಯವನ್ನು, ಪ್ರಜೆಗಳನ್ನೂ, ಮಂಗಳಕರವಾದ ಶರೀರವನ್ನೂ ಪಡೆಯಲು ಇಚ್ಛೆಯುಳ್ಳವಳಾಗಿ ಈ ವಧುವು ಅಗ್ನಿಗೆ ಅನುವ್ರತಳಾಗಿ ನಿಂತಿದ್ದಾಳೆ । ಅಂತಹ ಈ ವಧುವನ್ನು ಒಳ್ಳೆಯ ಮಂಗಳಕರವಾದ ವಿವಾಹ ಎಂಬ ಪುಣ್ಯಕರ್ಮಕ್ಕೋಸ್ಕರವಾಗಿ ಯೋಕ್ತ್ರ(ದರ್ಭೆಯ ದಾರ)ವಿನಿಂದ ಕಟ್ಟುತ್ತೇನೆ(ಈ ವಧುವಿಗೆ ಸುಖವುಂಟಾಗುವಂತೆ ಕಟ್ಟುತ್ತೇನೆ ಎಂದರ್ಥ) ॥

ಪರಸ್ಪರರ ಸಹಕಾರವನ್ನು ಹೇಳುವ ಮಂತ್ರ –

೧೮. ಓಂ ಪೂಷಾತ್ವೇತೋ ನಯತು ಹಸ್ತ ಗೃಹ್ಯಾಶ್ವಿನೌ ತ್ವಾ ಪ್ರವಹತಾಗ್ಂ
ರಥೇನ । ಗೃಹಾನ್ ಗಚ್ಛ ಗೃಹಪತ್ನೀ ಯಥಾಸೋ ವಶಿನೀ ತ್ವಂ
ವಿದಥ ಮಾ ವದಾಸಿ ॥

ಆದಿತ್ಯದೇವತೆಯು, ಎಲೈ ವಧುವೇ ನಿನ್ನನ್ನು ಈ ಪ್ರದೇಶದಿಂದ ಅಗ್ನಿಯ ಸಮೀಪಕ್ಕೆ ಕೈಯನ್ನು ಹಿಡಿದುಕೊಂಡು ಕರೆದೊಯ್ಯಲಿ । ಇಲ್ಲಿಂದ ವಿವಾಹ ಪ್ರಧಾನ ಹೋಮಾದಿಗಳನ್ನು ಮಾಡಿದಂತಹ ಮತ್ತು ನಿನ್ನನ್ನು ರಥಾದಿಗಳಿಂದ ವರನ ಮನೆಗೆ ಕರೆದೊಯ್ಯಲು ನಿನಗೆ ಅಶ್ವಿನೀದೇವತೆಗಳು ಅನುಮತಿಯನ್ನು ನೀಡಲಿ । ನಂತರ ನೀನು ನನ್ನ ಮನೆಗೆ ಈಶ್ವರಳಾಗಿ(ಮಂಗಳವಾಗಿ) ಯಾವಾಗಲೂ ಇರುವಂತೆ ಹೋಗು । ಹಾಗೆಯೇ ಹೋಗಿ, ಯಜಮಾನಿಯಾಗಿ ಯಜ್ಞ ವಿಷಯದಲ್ಲಿ ಯಾವರೀತಿ ಹೇಳಬೇಕೋ ಆ ರೀತಿಯಾಗಿ ಹೇಳುವವಳಾಗು (ಶಾಸ್ತ್ರೀಯವಾದಂತಹ ಕರ್ಮದ ವಿಷಯದಲ್ಲಿ ಹೇಳುವಂತಹ ತಿಳುವಳಿಕೆಯನ್ನು ಹೊಂದು, ಸಹಕಾರಿಯಾಗಿರು) ॥

ವಧುವಿನ ಔನ್ನತ್ಯವನ್ನು – ಶ್ರೇಷ್ಠತೆಯನ್ನು ಹೇಳುವ ಮಂತ್ರ –

೧೯. ಓಂ ಸೋಮಃ ಪ್ರಥಮೋ ವಿವಿದೇ ಗಂಧರ್ವೋ ವಿವಿದ ಉತ್ತರಃ ।
ತೃತೀಯೋ ಅಗ್ನಿಷ್ಟೇ ಪತಿಸ್ತುರೀಯಸ್ತೇ ಮನುಷ್ಯಜಾಃ ॥

ಎಲೈ ವಧುವೇ, ನಿನ್ನನ್ನು ಸೋಮದೇವನು(ಚಂದ್ರ) ಮೊದಲು ಪಡೆದುಕೊಂಡನು । ನಂತರ ವಿಶ್ವಾವಸುಗಂಧರ್ವನು ಮತ್ತು ೩ ನೆಯದಾಗಿ ಅಗ್ನಿಯು ನಿನ್ನ ಪತಿಯು । ೪ ನೆಯವನಾಗಿ ಮನುಷ್ಯಜಾತಿಯಲ್ಲಿ ಹುಟ್ಟಿದ ನಾನು ನಿನ್ನ ಪತಿಯಾದೆನು ॥

೨೦. ಓಂ ಸೋ॑ವೋ॒ಽದದ॒ದ್ಗಂ॒ಧರ್ವಾ॑ಯ॒ ಗಂ॒ಧರ್ವೋ॑ ದದ॒ದಗ್ನ॑ಯೇ ।
ರ॒ಯಿಂ ಚ॑ ಪು॒ತ್ರಾಗ್ಂ ಶ್ಚಾ॒ ದಾ॒ದಗ್ನಿರ್ಮ॑ಹ್ಯಮಥೋ॒ ಇಮಾಮ್ ॥

ಸೋಮ(ಚಂದ್ರ)ದೇವನು, ವಿಶ್ವಾವಸು ಗಂಧರ್ವನಿಗೆ ಐಶ್ವರ್ಯವನ್ನೂ, ಮಂಗಳಕರಳಾದ ನಿನ್ನನ್ನೂ ಕೊಟ್ಟನು । ಆ ಗಂಧರ್ವನು ಅಗ್ನಿಗೆ ನಿನ್ನನ್ನು ಮತ್ತು ಐಶ್ವರ್ಯವನ್ನು ಕೊಟ್ಟನು । ಅಗ್ನಿಯು ನನಗೆ ಐಶ್ವರ್ಯವನ್ನೂ, ನಿನ್ನನ್ನೂ, ಪುತ್ರ–ಪಶುಗಳಾದಿಗಳನ್ನೂ ಕೊಟ್ಟಿದ್ದಾನೆ(ಕೊಡಲಿ) ॥

ಪಾಣಿಗ್ರಹಣದ ಮಂತ್ರ –

೨೧. ಓಂ ಗೃ॒ಭ್ಣಾ॒ಮಿ ತೇ॑ ಸು॒ಪ್ರ॒ಜಾಸ್ತ್ವ॒ಯಾ॒ ಹ॒ಸ್ತಂ ಮ॒ಯಾ॒ಪ॒ತ್ಯಾ॒
ಜ॒ರ॒ದ॒ಷ್ಟಿ॒ರ್ಯ॒ಥಾ॒ ಸಃ । ಭ॒ಗೋ॒ ಅ॒ರ್ಯ॒ಮಾ॒ ಸ॒ವಿ॒ತಾ॒
ಪು॒ರಂ॒ಧಿ॒ರ್ಮ॒ಹ್ಯಂ॒ತ್ವಾ॒ ದು॒ರ್ಗಾ॒ರ್ಹ॒ಪ॒ತ್ಯಾ॒ಯ॒ ದೇ॒ವಾಃ ॥

ನಿನ್ನ ಕೈಯನ್ನು ನಾನು ಹಿಡಿದುಕೊಳ್ಳುತ್ತೇನೆ । ಯಾವುದಕ್ಕಾಗಿ ಎಂದರೆ, ಒಳ್ಳೆಯ ಪ್ರಜೆಗಳನ್ನು ಕೊಡುವ ನೀನು ಸುಪ್ರಜೆಯು । ಅಂತಹ ನಿನ್ನಿಂದ ಒಳ್ಳೆಯ ಪ್ರಜೆಗಳನ್ನು ಪಡೆಯುವುದಕ್ಕಾಗಿ ನಿನ್ನ ಕೈಯನ್ನು ಹಿಡಿದುಕೊಳ್ಳುತ್ತೇನೆ । ಹಾಗೆಯೇ, ಪತಿಯಾದ ನನ್ನೊಡನೆ ಜರಾವಸ್ಥೆ(ಮುದುಕುತನ) ಬಂದಾಗಲೂ ನೀನು ನನ್ನ ಜೊತೆಯಲ್ಲಿಯೇ ಇರುವಂತೆ ಆಗುವುದಕ್ಕಾಗಿ ನಿನ್ನ ಕೈಯನ್ನು ಹಿಡಿದಿದ್ದೇನೆ । ಭಗದೇವತೆಯು, ಅರ್ಯಮಾ ದೇವತೆಯು, ಸವಿತೃದೇವತೆಯು, ನಿನ್ನನ್ನು ಗಾರ್ಹಪತ್ಯ ಕರ್ತು ಮಾಡುವುದಕ್ಕಾಗಿ ನನಗೆ ಕೊಟ್ಟಿದ್ದಾರೆ ॥

೨೨. ಓಂ ತೇ॒ಹ ಪೂ॒ರ್ವೇ ಜ॒ನಾ॒ಸೋ॒ ಯ॒ತ್ರ ಪೂ॒ರ್ವವ॑ಹೋ॒ಹಿ॒ತಾಃ ।
ಮೂ॒ರ್ಧ॒ನ್ವಾನ್, ಯ॒ತ್ರ॒ಸೌ॒ಭ್ರ॒ವಃ ಪೂ॒ರ್ವೋ॒ ದೇ॒ವೇ॒ಭ್ಯ॒ ಆ॒ತ॒ಪತ್ ॥

ಆ ಭಗಾದಿ ದೇವತೆಗಳು, ಆದಿಕಾಲದ ವಿವಾಹವನ್ನು ಮಾಡುವ ಸಮಯದಲ್ಲಿ ಅದರ ಕರ್ತೃಗಳಾಗಿ ಇದ್ದರು। ಯಾವ ಗಾರ್ಹಸ್ಥ್ಯದಲ್ಲಿ ಇದ್ದುಕೊಂಡು ಮತ್ತು ದೇವತೆಗಳಲ್ಲಿ ಮೊದಲಿಗನಾಗಿ ಶೀರ್ಷಸ್ಥಾನದಲ್ಲಿ ಇದ್ದುಕೊಂಡು ಈ ಎಲ್ಲಾ ಲೋಕಗಳನ್ನೂ ಸೌಭ್ರವನು(ರವಿಯು) ಬೆಳಗಿದನು (ಸುಭ್ರೂಃ ಅದಿತಿಃ ಶೋಭನೇ ಭ್ರುವೌ ಯಸ್ಯಾ ಸಾ ತಸ್ಯಾಃ ಅಪತ್ಯಂ ಸೌಭ್ರವಃ(ಆದಿತಃ) ॥

೨೩. ಸರಸ್ವತಿ ಪ್ರೇದಮವ ಸುಭಗೇ ವಾಜಿನೀವತಿ । ತಾಂ ತ್ವಾ ವಿಶ್ವಸ್ಯ ಭೂತಸ್ಯ ಪ್ರಗಾಂಯಾಮಸ್ಯಗ್ರತಃ ॥

ಎಲೈ ಸರಸ್ವತಿಯೇ, ಈ ಒಂದು ಪಾಣಿಗ್ರಹಣವನ್ನು ಅತ್ಯಂತ ಉತ್ಕೃಷ್ಟವಾಗಿರುವಂತೆ ನೀನು ರಕ್ಷಿಸು। ಸೌಭಾಗ್ಯವತಿಯೇ, ಅನ್ನವುಳ್ಳವಳೇ ಅಥವಾ ಅನ್ನದಂತೆ ಕ್ರಿಯೆಯುಳ್ಳವಳೇ, ನಿನ್ನನ್ನು ನಾವು ಎಲ್ಲಾ ಭೂತಗಳಲ್ಲಿ(ಪ್ರಾಣಿಗಳಲ್ಲಿ) ಮೊದಲಿಗರಾಗಿ ಸ್ತುತಿಸುತ್ತೇವೆ ॥

೨೪. ಓಂ ಯ ಏತಿ ಪ್ರದಿಶಸ್ಸರ್ವಾ ದಿಶೋಽನು ಪವಮಾನಃ । ಹಿರಣ್ಯ ಹಸ್ತ ಐರಂ ಮಸ್ಸತ್ವಾಮನ್ಮನಸಂ ಕೃಣೋತು ॥

ಈ ವಾಯುದೇವನು ಎಲ್ಲಾ ದಿಕ್ಕು, ಉಪದಿಕ್ಕುಗಳಲ್ಲಿಯೂ ಸಂಚರಿಸುತ್ತಾನೆ। ಭಕ್ತರಿಗೆ ಕೊಡಬೇಕಾದಂತಹ ಹಿರಣ್ಯಾದಿ ಐಶ್ವರ್ಯಗಳನ್ನು ಕೈಯಲ್ಲಿ ಹಿಡಿದುಕೊಂಡವನಾಗಿ, ಅನ್ನವನ್ನು ಅಳೆಯುವ ಅಗ್ನಿಗೆ ಸ್ನೇಹಿತನಾದ ಈ ವಾಯುವು ಎಲೈ ವಧುವೇ, ನಿನ್ನನ್ನು ನನ್ನಲ್ಲಿಯೇ ಮನಸ್ಸುಳ್ಳವಳನ್ನಾಗಿ ಮಾಡಲಿ (ಇರಾ ಅನ್ನಂ ತಾಂ ಮಿಮೀತೇ ಇರಂಮಃ ಅಗ್ನಿಃ ತಸ್ಯ ಸಖಾ ಪಿರಂಮಃ = ವಾಯುಃ) ॥

ಜೊತೆಯಲ್ಲಿ ಏಳುಹೆಜ್ಜೆಗಳನ್ನು ಇಡುವಾಗ ಹೇಳುವಮಂತ್ರ (ಸಪ್ತಪದೀ) –

೨೫. ಓಂ ಏಕಮಿಷೇ ವಿಷ್ಣುಸ್ತ್ವಾನ್ವೇತು ॥

ಎಲೈ ವಧುವೇ, ೧ ನೇ ಹೆಜ್ಜೆಯಲ್ಲಿ ಸರ್ವವ್ಯಾಪಕನಾದ ವಿಷ್ಣುವು ನಿನ್ನ ಅನ್ನ ಸಮೃದ್ಧಿಗಾಗಿ ನಿನ್ನನ್ನು ಅನುಸರಿಸಿ ಹೆಜ್ಜೆ ಇಡಲಿ ॥

೨೬. ಓಂ ದ್ವೇ ಊರ್ಜೇ ವಿಷ್ಣುಸ್ತ್ವಾನ್ವೇತು ॥

ಎಲೈ ವಧುವೇ, ನಿನ್ನ ೨ ನೇ ಹೆಜ್ಜೆಯನ್ನು ವಿಷ್ಣುವು ನಿನ್ನ ಬಲ ಸಮೃದ್ಧಿಗಾಗಿ ನಿನ್ನನ್ನು ಅನುಸರಿಸಿ ಹೆಜ್ಜೆ ಇಡಲಿ ॥

೨೭. ಓಂ ತ್ರೀಣಿ ವ್ರತಾಯ ವಿಷ್ಣುಸ್ತ್ವಾನ್ವೇತು ॥

ಎಲೈ ವಧುವೇ, ನಿನ್ನ ೩ ನೇ ಹೆಜ್ಜೆಯನ್ನು ಅನುಸರಿಸಿ, ಸರ್ವವ್ಯಾಪಕನಾದ ವಿಷ್ಣುವು ವ್ರತಕ್ಕೋಸ್ಕರವಾಗಿ (ವ್ರತರೂಪಯಜ್ಞದಲ್ಲಿ ಯಾವಾಗಲೂ ಇರುವುದಕ್ಕಾಗಿ) ಹೆಜ್ಜೆಯಿಡಲಿ ॥

೨೮. ಓಂ ಚತ್ವಾರಿ ಮಾಯೋಭವಾಯ ವಿಷ್ಣುಸ್ತ್ವಾನ್ವೇತು ॥

ನಿನ್ನ ೪ ನೇ ಹೆಜ್ಜೆಯನ್ನು ವಿಷ್ಣುವು, ನೈಜಶಾಶ್ವತವಾದ ಸುಖವು ನಿನಗೆ ಸಿಗುವುದಕ್ಕಾಗಿ ಅನುಸರಿಸಿ ಹೆಜ್ಜೆ ಇಡಲಿ ॥

೨೯. ಓಂ ಪಂಚಪಶುಭ್ಯೋ ವಿಷ್ಣುಸ್ತ್ವಾನ್ವೇತು ॥

ನಿನ್ನ ೫ ನೇ ಹೆಜ್ಜೆಯನ್ನು ವಿಷ್ಣುವು, ಪಶುಸಮೃದ್ಧಿಗಾಗಿ ಅನುಸರಿಸಿ ಹೆಜ್ಜೆ ಇಡಲಿ ॥

೩೦. ಓಂ ಷಡೃತುಭ್ಯೋ ವಿಷ್ಣುಸ್ತ್ವಾನ್ವೇತು ॥

ಎಲೈ ವಧುವೇ ನಿನ್ನ ೬ ನೇ ಹೆಜ್ಜೆಯನ್ನು ಸರ್ವವ್ಯಾಪಕನಾದ ವಿಷ್ಣುವು ಎಲ್ಲಾ ಋತುಗಳ ಸಮೃದ್ಧಿಗಾಗಿ ಅನುಸರಿಸಿ ಹೆಜ್ಜೆಯಿಡಲಿ ॥

೩೧. ಓಂ ಸಪ್ತಸಪ್ತಭ್ಯೋ ಹೋತ್ರಾಭ್ಯೋ ವಿಷ್ಣುಸ್ತ್ವಾನ್ವೇತು ॥

ನಿನ್ನ ೭ ನೇ ಹೆಜ್ಜೆಯನ್ನು ಮಹಾವಿಷ್ಣುವು ಸಪ್ತಹೋತೃಗಳ ಸಿದ್ಧಿರೂಪವಾದ ಸೋಮಯಾಗದ ಪ್ರಾಪ್ತಿಗಾಗಿ ಹೆಜ್ಜೆಯಿಡಲಿ । (ಸಪ್ತಹೋತೃಗಳು ಯಾವುವೆಂದರೆ, ಹೋತಾ – ಪ್ರಶಾಸ್ತಾ – ಬ್ರಾಹ್ಮಣಾಚ್ಛಂಸೀ – ಪೋತಾ – ನೇಷ್ಟಾ – ಅಚ್ಛಾವಾಕ ಆಗ್ನೀಧ್ರ) ॥

೩೨. ಓಂ ಸಖಾ ಸಪ್ತಪದಾ ಭವ ಸಖಾಯೌ ಸಪ್ತಪದಾ ಬಭೂವ ಸಖ್ಯಂತೇ ಗಮೇಯಂ ಸಖ್ಯಾತ್ತೇ ಮಾ ಯೋಷಂ ಸಖ್ಯಾನ್ಮೇ ಮಾ ಯೋಷ್ಠಾಸ್ಸಮಂತಾವ ಸಂಕಲ್ಪಾವಹೈ ಸಂಪ್ರಿಯೌ ರೋಚಿಷ್ಣೂ ಸುಮನಸ್ಯ ಮಾನೌ । ಇಷಮೂರ್ಜಮಭಿಸಂವಸಾನೌ ಸಂ ನೌ ಮನಾಗ್ಂಸಿ ಸಂವ್ರತಾ ಸಮುಚಿತ್ತಾನ್ಯಾಕರವಮ್ । ಸಾತ್ವಮಸ್ಯ ಮೂಹಮಮೂಹಮಸ್ಮಿ ಸಾತ್ವಂ ದ್ಯೌರಹಂ ಪೃಥಿವೀತ್ವಗ್ಂ ರೇತೋsಹಗ್ಂ ರೇತೋಭೃತ್ತ್ವಂ ಮನೋಹಮಸ್ಮಿ ವಾಕ್ತ್ವಗ್ಂ ಸಾಮಾಹಮಸ್ಮ್ಯಲಕ್ತ್ವಗ್ಂ ಸಾಮಾಮನು ವ್ರತಾ ಭವ ಪುಗ್ಂಸೇ ಪುತ್ರಾಯ ವೇತ್ತವೈ ಶ್ರಿಯೈ ಪುತ್ರಾಯ ವೇತ್ತವ ಏಹಿ ಸೂನೃತೇ ॥

ಏಳು ಪದಗಳು ಯಾವಳಿಂದ ಜೊತೆಯಲ್ಲಿ ಹೆಜ್ಜೆ ಇಡಲ್ಪಟ್ಟಿದೆಯೋ ಅಂತಹ ಎಲೈ ವಧುವೇ ನೀನು ನನಗೆ ಸಖಿಯಾಗು । ಯಾವಿಬ್ಬರೂ ೭ ಹೆಜ್ಜೆಗಳನ್ನು ಇಟ್ಟಿದ್ದೇವೆ । ಆದ್ದರಿಂದ ನಾವಿಬ್ಬರೂ ಸಖಿಗಳಾಗೋಣ । ನಮ್ಮಿಬ್ಬರ ಸಖಿತ್ವವು ಯಾವಾಗಲೂ ಬೇರೆಯಾಗುವುದು ಬೇಡ । ನೀನು ನನ್ನಿಂದ ಯಾವಾಗಲೂ ಬೇರೆ ಯಾಗುವುದುಬೇಡ, ಹಾಗೆಯೇ ನಾನೂ ಕೂಡ । ನಾವಿಬ್ಬರೂ ಒಂದಾಗಿ ಇರೋಣ । ಹೀಗೆ ಇಬ್ಬರೂ ಸಂಕಲ್ಪ ಮಾಡೋಣ । ಪರಸ್ಪರ ಪ್ರೀತಿಯುಳ್ಳವರಾಗಿ ಮತ್ತು ಪರಸ್ಪರ ಆಶ್ರಯವುಳ್ಳವರಾಗಿ ಕಾಂತಿಯುಕ್ತರಾಗಿ ಒಳ್ಳೆಯ ಮನಸ್ಸುಳ್ಳವರಾಗಿ ಇರೋಣ । ಅನ್ನ, ಬಲ, ಎರಡನ್ನೂ ನಾವಿಬ್ಬರೂ ಅನುಭವಿಸುತ್ತಾ, ಒಂದಾಗಿರೋಣ । ನಮ್ಮಿಬ್ಬರ ಮನಸ್ಸು ಬಹಳ ವ್ಯಾಪಾರಗಳಲ್ಲಿ ತೊಡಗುವುದಾದ್ದರಿಂದ ನಮ್ಮಿಬ್ಬರ ಮನಸ್ಸನ್ನು ಒಂದಾಗಿ ಮಾಡುತ್ತೇನೆ । ಹಾಗೆಯೇ ಕರ್ಮಗಳನ್ನೂ ಕೂಡ ಒಂದಾಗಿ ಮಾಡುತ್ತೇನೆ(ನಾವಿಬ್ಬರೂ ಒಟ್ಟಿಗೆ ಕರ್ಮಗಳನ್ನು ಮಾಡೋಣ) । ನಮ್ಮ ಬಾಹ್ಯ ಇಂದ್ರಿಯಗಳೂ ಕೂಡ ಒಂದಾಗಿ ಇರುವಂತಾಗಲಿ । ಅಂತಹ ನೀನು ಋಕ್ ಸ್ವರೂಪಳಾಗಿದ್ದೀಯೆ । ನಾನು ಸಾಮ ಸ್ವರೂಪನಾಗಿದ್ದೀನಿ । ಮತ್ತೇ ಆದರಾರ್ಥಕ್ಕೋಸ್ಕರವಾಗಿ ನಾನು ಸಾಮ ಸ್ವರೂಪನಾಗಿದ್ದೇನೆ, ನೀನು ಋಕ್ ಸ್ವರೂಪಳಾಗಿದ್ದೀಯೇ । ನಾನು ದ್ಯುಲೋಕಸ್ವರೂಪನಾಗಿದ್ದೀನಿ, ನೀನು ಪೃಥಿವೀ

ಸ್ವರೂಪಳಾಗಿದ್ದೀಯೇ । ನಾನು ರೇತಸ್ಸ್ವರೂಪ(ಕಾರಣಸ್ವರೂಪ)ನಾಗಿದ್ದೇನೆ, ನೀನು ಇಟ್ಟಂತಹ ರೇತಸ್ಸನ್ನು ಧರಿಸುವ ಸ್ವರೂಪಳಾಗಿದ್ದೀಯೇ । ನಾನು ಮನಸ್ಸ್ವರೂಪನಾಗಿದ್ದೇನೆ, ನೀನು ವಾಕ್ ಸ್ವರೂಪಳಾಗಿದ್ದೀಯೇ । ನಾನು ಸಾಮ ಸ್ವರೂಪನಾಗಿದ್ದೀನೆ, ನೀನು ಋಕ್ ಸ್ವರೂಪಳಾಗಿದ್ದೀಯೇ । ಹೀಗೆ ನಾವಿಬ್ಬರೂ ಜೊತೆಯಾಗಿ ಇರುತ್ತೇವೆ ಎಂಬುದಕ್ಕೋಸ್ಕರ ಯಾವಾಗಲೂ ಜೊತೆಯಾಗಿರುವ ವಸ್ತು, ವಿಷಯಗಳನ್ನೇ ಉದಾಹರಿಸಿದೆ । ಇಂತಹಾ ನೀನು ನನಗೆ ಅನುಕೂಲಳಾಗಿರು । ಏತಕ್ಕೋಸ್ಕರ ಎಂದರೆ, ಪುಂ (ಗಂಡು) ಪ್ರಜೆಯನ್ನು ಪಡೆಯುವುದಕ್ಕೋಸ್ಕರ ಮತ್ತು ಐಶ್ವರ್ಯ, ಮಂಗಳವನ್ನು ಪುತ್ರನಜೊತೆ ಪಡೆಯುವುದಕ್ಕಾಗಿ । ಎಲ್ಲೈ ವಾಕ್ ಸ್ವರೂಪಳೇ (ಒಳ್ಳೆಯ ಮಾತಾಡುವವಳೇ ನನ್ನ ಬಳಿ ಬಾ) ॥

ವಿವಾಹದ ಪ್ರಧಾನಹೋಮದ ೧೬ ಮಂತ್ರಗಳು –

೩೩. ಓಂ ಸೋ॑ಮಾಯ ಜನಿವಿ॒ದೇ ಸ್ವಾ॒ಹಾ ॥

ವಧುವನ್ನು ಪಡೆದುಕೊಂಡಿರುವಂತಹ ಸೋಮದೇವನಿಗೆ ಈ ಹವಿಸ್ಸು ಅರ್ಪಿತವಾಗಲಿ।

೩೪. ಓಂ ಗಂ॒ಧ॒ರ್ವಾ॑ಯ ಜನಿವಿ॒ದೇ ಸ್ವಾ॒ಹಾ ॥

ಹಾಗೆಯೇ ವಧುವನ್ನು ಪಡೆದುಕೊಂಡಂತಹ ಗಂಧರ್ವದೇವನಿಗೆ ಈ ಆಜ್ಯಹವಿಸ್ಸು ಅರ್ಪಿತವಾಗಲಿ ॥

೩೫. ಓಂ ಅ॒ಗ್ನ॑ಯೇ ಜನಿವಿ॒ದೇ ಸ್ವಾ॒ಹಾ ॥

ಹಾಗೂ ಅಗ್ನಿದೇವನಿಗೆ ಈ ಆಜ್ಯ ಹವಿಸ್ಸು ಅರ್ಪಿತವಾಗಲಿ ॥

೩೬. ಓಂ ಕ॒ನ್ಯ॑ಲಾ ಪಿ॒ತೃ॑ಭ್ಯೋ ಯ॒ತೀಪ॑ತಿ ಲೋ॒ಕಮ॑ವ॒ದೀಕ್ಷಾ॑ಮ॒ದಾ॑ಸ್ಥ ಸ್ವಾ॒ಹಾ ॥

ತನ್ನ ತಂದೆಯಕುಲದಿಂದ ಪತಿಯ ಕುಲಕ್ಕೆ ಹೋಗುತ್ತಿರುವ ಕನ್ಯಕಾವ್ರತವನ್ನು ಬಿಡುತ್ತಿರುವಂತಹ ಆ ಕನ್ಯಾದೇವತೆಗೆ ಈ ಹವಿಸ್ಸು ಅರ್ಪಿತವಾಗಲಿ ॥

೩೭. ಓಂ ಪ್ರೇತೋ ಮುಂಚಾತಿ ನಾಮುತಸ್ಸುಬದ್ಧಾಮುಮುತಸ್ಕರತ್ ।
ಯಥೇಯಮಿಂದ್ರ ಮೀಢ್ವಸ್ಸುಪುತ್ರಾ ಸುಭಗಾ ಸತಿ ಸ್ವಾಹಾ ॥

ಎಲೈ ವರ್ಷಕನಾದಂತಹ(ಮಳೆಯನ್ನು ಸುರಿಸುವವನು) ಅಥವಾ ಸೇಕ್ತೃ(ರೇತಸ್ಸನ್ನು ಸಿಂಚನ ಮಾಡಲು ಸಮರ್ಥನಾದ) ವಾದಂತಹ ಇಂದ್ರನೇ ಈ ವಧುವನ್ನು ತಂದೆಯ ಕುಲದಿಂದ ಬಿಡಿಸು, ಪತಿಯ ಕುಲದಿಂದ ಬಿಡಿಸಬೇಡ । ಆದರೆ ಈ ಪತಿ ಕುಲದಲ್ಲಿ ಬದ್ಧಳಾದ ಇವಳನ್ನು ಇನ್ನೂ ದೃಢವಾಗಿ ಬದ್ಧಳಾಗುವಂತೆ ಮಾಡು । ಇವಳು ಪತಿಕುಲದಲ್ಲೇ ಬದ್ಧಳಾಗಿ, ಒಳ್ಳೆಯ ಪುತ್ರವುಳ್ಳವಳೂ ಮತ್ತು ಉತ್ಕೃಷ್ಟ ಸುಖವುಳ್ಳವಳೂ ಆಗುವಂತೆ ಮಾಡು ॥

೩೮. ಓಂ ಇಮಾಂ ತ್ವಮಿಂದ್ರ ಮೀಢ್ವ ಸುಪುತ್ರಾಗ್ಂ ಸುಭಗಾಂ ಕೃಣು ।
ದಶಾಸ್ಯಾಂ ಪುತ್ರಾನಾಧೇಹಿ ಪತಿಮೇಕಾದಶಂ ಕೃಧಿ ಸ್ವಾಹಾ ॥

ಎಲೈ ವರ್ಷಕ ಇಂದ್ರನೇ, ಈ ವಧುವನ್ನು ಪುತ್ರರನ್ನೂ ಮತ್ತು ಒಳ್ಳೆಯ ಸುಖಗಳನ್ನೂ ಕೊಡುವವಳಾಗಿ ಮಾಡು । ಇವಳಲ್ಲಿ ಹತ್ತು ಮಕ್ಕಳು ಆಗುವಂತೆ ಮಾಡು, ನನ್ನನ್ನು ಹನ್ನೊಂದನೆಯವನನ್ನಾಗಿ ಮಾಡು ॥

೩೯. ಓಂ ಅಗ್ನಿರೈತು ಪ್ರಥಮೋ ದೇವತಾನಾಗ್ಂ ಸೋಽಸ್ಯೈ ಪ್ರಜಾಂ
ಮುಂಚತು ಮೃತ್ಯು ಪಾಶಾತ್ । ತದಯಗ್ಂ ರಾಜಾ ವರುಣೋಽನು
ಮನ್ಯತಾಂ ಯಥೇಯಗ್ಂ ಸ್ತ್ರೀ ಪೌತ್ರಮಘಂ ನ ರೋದಾತ್ ಸ್ವಾಹಾ ॥

ದೇವತೆಗಳಲ್ಲಿ ಆದ್ಯನಾದ ಅಗ್ನಿಯು, ಇಲ್ಲಿಗೆ ಬರಲಿ । ಅವನು ಇಲ್ಲಿಗೆ ಬಂದು ಇವಳ ಪ್ರಜೆಯನ್ನು ಮೃತ್ಯುಪಾಶದಿಂದ ಬಿಡಿಸಲಿ । ಈ ವರುಣರಾಜನು ಅಗ್ನಿಯಿಂದ ಮಾಡಲ್ಪಡುತ್ತಿರುವುದನ್ನು ಅನುಮೋದಿಸಲಿ । ಈ ಸ್ತ್ರೀಯು ಪುತ್ರನಿಮಿತ್ತವಾದ ದುಃಖವನ್ನು ಹೊಂದಬಾರದ ಹಾಗೆ ಅನುಮೋದಿಸಲಿ ॥

೪೦. ಓಂ ಇಮಾಮಗ್ನಿಸ್ತ್ರಾಯತಾಂ ಗಾರ್ಹಪತ್ಯಃ ಪ್ರಜಾಮಸ್ಯೈ ನಯತು ದೀರ್ಘಮಾಯುಃ । ಅಶೂನ್ಯೋಪಸ್ಥಾ ಜೀವತಾಮಸ್ತು ಮಾತಾ ಪೌತ್ರಮಾನಂದಮಭಿ ಪ್ರಬುಧ್ಯತಾಮಿಯಗ್ಂ ಸ್ವಾಹಾ ॥

ಈ ವಧುವನ್ನು, ಅಗ್ನಿಯು(ವೈವಾಹಿಕವಾದಂತಹ ಅಗ್ನಿಯು) ರಕ್ಷಿಸಲಿ । ಹಾಗೆಯೇ ಇವಳ ಮಕ್ಕಳಿಗೆ ದೀರ್ಘಾಯುಷ್ಯವನ್ನು ಕೊಡಲಿ । ಇವಳ ತೊಡೆಯು ಯಾವಾಗಲೂ ಮಕ್ಕಳಿಂದ ಕೂಡಿದ್ದಾಗಿರಲಿ, ಶೂನ್ಯವಾಗುವುದು ಬೇಡ । ಇವಳು ಜೀವಂತ ಮಕ್ಕಳಿಗೆ ತಾಯಿಯಾಗಿರಲಿ । ಮಕ್ಕಳ ನಿಮಿತ್ತಿನಿಂದ ಬರುವ ಆನಂದವು ಸದಾ ವೃದ್ಧಿಸುತ್ತಿರಲಿ । ಮಲಗಿದ ಇವಳು ಮಕ್ಕಳ ಆನಂದದಿಂದಲೇ ಏಳುವಂತಾಗಲಿ ॥

೪೧. ಓಂ ಮಾತೇ ಗೃಹೇ ನಿಶಿಘೋಷ ಉತ್ತಾದನ್ಯತ್ರ ತ್ವದ್ರುದತ್ಯಸ್ಸಂವಿಶಂತು । ಮಾತ್ವಂ ವಿಕೇಶ್ಯರ ಆವಧಿಷ್ಠಾ ಜೀವ ಪತ್ನೀ ಪತಿಲೋಕೇ ವಿರಾಜ ಪಶ್ಯಂತೀ ಪ್ರಜಾಗ್ಂ ಸುಮನಸ್ಯ ಮಾನಾಗ್ಂ ಸ್ವಾಹಾ ॥

ಎಲೈ ವಧುವೇ, ನಿನ್ನ ಮನೆಯಲ್ಲಿ ರಾತ್ರಿ ಆರ್ತನಾದವು ಉದ್ಭವಿಸದಂತಿರಲಿ । ಅಳುವಿಕೆಯನ್ನುವುದು ನಿನ್ನಿಂದ ಬಹುದೂರಹೋಗಿ ಬೇರೆಕಡೆಯಲ್ಲಿ ಸೇರಿಕೊಳ್ಳಲಿ । ನೀನು ವಿಧವೆಯಾಗುವುದು ಯಾವತ್ತಿಗೂ ಬೇಡ(ವಿಕೇಶಿಯಾಗಿ ಎದೆಯುನ್ನು ಬಡಿದುಕೊಳ್ಳುತ್ತಾ ಅಳುವಂತಾಗುವುದು ಬೇಡ) । ನೀನು ಜೀವಿಸಿರುವ ಪತಿಯುಳ್ಳವಳಾಗಿ ಗಂಡನ ಮನೆಯಲ್ಲಿ ಒಳ್ಳೆಯ ಮನಸ್ಸುಳ್ಳವರಾದ ಪ್ರಜೆಗಳನ್ನು ನೋಡುತ್ತಾ, ಕಾಂತಿಯುಕ್ತಳಾಗಿ ಇರು । ನಿನಗೆ ಯಾವತ್ತೂಕೂಡ ಪತಿವಿಯೋಗ ಅಥವಾ ಪುತ್ರವಿಯೋಗ ಆಗುವುದು ಬೇಡ ॥

೪೨. ಓಂ ದ್ಯೌಸ್ತೇ ಪೃಷ್ಠಗ್ಂ ರಕ್ಷತು ವಾಯುರೂರೂ ಅಶ್ವಿನೌ ಚ ಸ್ತನಂಧಯಂತಗ್ಂ ಸವಿತಾಽಭಿರಕ್ಷತು । ಆವಾಸಸಃ ಪರಿಧಾನಾದ್ಬೃಹಸ್ಪತಿರ್ವಿಶ್ವೇದೇವಾ ಅಭಿರಕ್ಷಂತುಪಶ್ಚಾತ್ ಸ್ವಾಹಾ ॥

ಎಲೈ ವಧುವೇ, ನಿನ್ನ ಪೃಷ್ಠಭಾಗವನ್ನು ದ್ಯುಲೋಕವು ರಕ್ಷಿಸಲಿ । ನಿನ್ನ ಎರಡು ತೊಡೆಗಳನ್ನು ವಾಯುವು ರಕ್ಷಿಸಲಿ । ಅಶ್ವಿನೀದೇವತೆಗಳು ನಿನ್ನ ಸ್ತನಗಳನ್ನು ರಕ್ಷಿಸಲಿ । ನಿನ್ನ ಹಾಲನ್ನು ಕುಡಿಯುವ ಮಗನನ್ನು ಸವಿತೃ(ಸೂರ್ಯ)ದೇವನು ರಕ್ಷಿಸಲಿ । ನಿನ್ನನ್ನು ಬಟ್ಟೆಧರಿಸುವುದರ ಮೂಲಕ ಬೃಹಸ್ಪತಿ ಮತ್ತು ವಿಶ್ವೇದೇವತೆಗಳು ರಕ್ಷಿಸಲಿ ॥

ಳಃ. ಓಂ ಅಪ್ರಜಸ್ತಾಂ ಪೌತ್ರ ಮೃತ್ಯುಂ ಪಾಪ್ಮಾನ ಮುತವಾಘಂ ।
ಶೀರ್ಷ್ಣಸ್ತ್ರಜಮಿವೋನ್ಮುಚ್ಯ ದ್ವಿಷದ್ಭ್ಯಃ ಪ್ರತಿಮುಂಚಾಮಿ ಪಾಶಗ್ಂ
ಸ್ವಾಹಾ॥

ಪ್ರಜೆಗಳಿಲ್ಲದಿರುವಿಕೆ, ಅಥವಾ ಪುತ್ರಮರಣ ಇದಕ್ಕೆ ಕಾರಣವಾದ ಪಾಪವನ್ನು ಮತ್ತು ನಿನಗೆ ದುಃಖವನ್ನುಂಟುಮಾಡುವ ಪಾಪಗಳನ್ನು ಎಲ್ಲವನ್ನೂ ಕೂಡ ನಿನ್ನಿಂದ ಬಿಡಿಸಿ, ನಿನ್ನ ದ್ವೇಷ್ಟೃ(ದ್ವೇಷಮಾಡುವವರು) ಗಳಿಗೆ ಹಾಕುತ್ತೇನೆ ॥

ಳಳ. ಓಂ ಇಮಂ ಮೇ ವರುಣ ಶ್ರುಧೀ ಹವಮದ್ಯಾ ಚ ಮೃಡಯ ।
ತ್ವಾಮವಸ್ಯು ರಾಚಕೇ ಸ್ವಾಹಾ ॥

ಎಲೈ ವರುಣನೇ, ಈ ನನ್ನ ಸ್ತೋತ್ರರೂಪವಾದ ಆಹ್ವಾನವನ್ನು ಕೇಳು । ಈಗಲೇ ನಮ್ಮನ್ನು ಸುಖಿಗಳನ್ನಾಗಿ ಮಾಡು । ನಿಮ್ಮನ್ನು ನಾನು ಪಾಲನೆ – ಪೋಷಣೆಗಳನ್ನು ಮಾಡಲು ಇಚ್ಛೆಯುಳ್ಳವನಾಗಿ ಈ ಮಂತ್ರರೂಪವಾದ ಸ್ತೋತ್ರವನ್ನು ಮಾಡುವೆನು ॥

ಳಱ. ಓಂ ತತ್ತ್ವಾಯಾಮಿ ಬ್ರಹ್ಮಣಾ ವಂದಮಾನಸ್ತದಾಶಾಸ್ತೇ
ಯಜಮಾನೋ ಹವಿರ್ಭಿಃ । ಅಹೇಡಮಾನೋ ವರುಣೇಹ
ಬೋಧ್ಯುರುಶಗ್ಂ ಸ ಮಾನ ಆಯುಃ ಪ್ರಮೋಷೀಃ ಸ್ವಾಹಾ ॥

ಎಲೈ ವರುಣನೇ, ನೀನು ಎಲ್ಲರಿಂದಲೂ ಹೊಗಳಿಕೆಗೆ ಪಾತ್ರನಾಗಿರುವೆ । ನಮ್ಮ ಆಯಷ್ಯವನ್ನು ಕಡಿಮೆಗೊಳಿಸಬೇಡ, ಪೂರ್ಣಾಯುವನ್ನು ಕೊಡು । ನಮ್ಮ ಮೇಲೆ ಸಿಟ್ಟಿಲ್ಲದವನಾಗಿ ನಾವು ಮಾಡುವ ಈ ಕರ್ಮದಲ್ಲಿ ಮಂತ್ರರೂಪದಿಂದ ಮಾಡುವ

ಸ್ತೋತ್ರವನ್ನು ತಿಳಿದು ಅನುಗ್ರಹಿಸು । ಹಾಗೂ ನನಗೆ ಬೇಕಾದ ಎಲ್ಲವನ್ನೂ ನಿನ್ನಲ್ಲಿ ಬೇಡುವೆನು । ಮಂತ್ರದಿಂದ ನಿನ್ನನ್ನು ವಂದಿಸುತ್ತಾ ಹಾಗೂ ಸ್ತೋತ್ರ ಮಾಡುತ್ತಾ, ಶಾಸ್ತ್ರವಿಹಿತವಾದ ಹವಿಸ್ಸುಗಳಿಂದ ಯಜಮಾನನಾದ ನಾನು, ನಿನ್ನನ್ನು ಆರಾಧಿಸುವೆನು । ಹೀಗೆಯೇ ಎಲ್ಲ ಯಜಮಾನರೂ ಹವಿಸ್ಸುಗಳಿಂದ ನಿನ್ನನ್ನು ಆರಾಧಿಸಿ, ತಮಗೆ ಬೇಕಾದ ಎಲ್ಲವನ್ನೂ ಬೇಡುತ್ತಾರೆ ॥

೪೬. ಓಂ ತ್ವನ್ನೋ ಅಗ್ನೇ ವರುಣಸ್ಯ ವಿದ್ವಾನ್ದೇವಸ್ಯ ಹೇಡೋऽವಯಾಸಿಸೀಷ್ಠಾಃ ।
ಯುಜಿಷ್ಠೋ ವಹ್ನಿತಮಶ್ಶೋಶುಚಾನೋ ವಿಶ್ವಾದ್ವೇಷಾಗ್ಂಸಿ
ಪ್ರಮುಮುಗ್ಧ್ಯಸ್ಮತ್ ಸ್ವಾಹಾ ॥

ಎಲೈ ಅಗ್ನಿಯೇ, ಎಲ್ಲವನ್ನೂ ತಿಳಿಯುವವನಾದ ನೀನು ನಮ್ಮ ಮೇಲಿರುವಂತಹ ವರುಣದೇವನ ಯಾವ ಕ್ರೋಧವಿದೆಯೋ, ಅದು ಪರಿಹಾರವಾಗುವಂತೆ(ಶಾಂತವಾಗುವಂತೆ) ನೀನು ಮಾಡು(ಕರ್ಮ ಮಾಡು) । ಅತ್ಯಂತ ಪೂಜಿಸಲ್ಪಡುವಂತಹ ಹವಿಸ್ಸನ್ನು ಹೊರುವಂತಹ ತುಂಬಾ ಕಾಂತಿಯುಳ್ಳವನಾದ ನೀನು ನಮ್ಮ ವಿಷಯದಲ್ಲಿ ಇರುವ ಶತ್ರುಗಳ ದ್ವೇಷರೂಪವಾದ ವಧೆ, ಬಂಧನಾದಿಗಳನ್ನು ನಮ್ಮಿಂದ ಬಿಡಿಸು ॥

೪೭. ಓಂ ಸತ್ವನ್ನೋ ಅಗ್ನೇऽವಮೋ ಭವೋತೀ ನೇದಿಷ್ಠೋ ಅಸ್ಯಾ
ಉಷಸೋ ವ್ಯುಷ್ಟೌ । ಅವಯಕ್ಷ್ವನೋ ವರುಣಗ್ಂ ರರಾಣೋ ವೀಹಿ
ಮೃಡೀಕಗ್ಂ ಸುಹವೋನ ಏಧಿ ಸ್ವಾಹಾ ॥

ಎಲೈ ಅಗ್ನಿಯೇ, ಇಂತಹಾ ಗುಣವುಳ್ಳ ನೀನು, ದೇವತೆಗಳಿಗೆ ಮೂಲಸಾಗಿದ್ದೀಯೇ । ನಮ್ಮನ್ನು ಪಾಲನೆಮಾಡುವುದರ ಮೂಲಕ ಅತ್ಯಂತ ಹತ್ತಿರದವನಾಗು । ಈ ಉಷಃಕಾಲವು ಚೆನ್ನಾಗಿ ಪ್ರಕಟವಾದಾಗ ನಮ್ಮನ್ನು ರಕ್ಷಿಸು(ಉಷಃಕಾಲವು ಉದಾಹರಣೆಯಷ್ಟೇ, ಯಾವಾಗಲೂ ರಕ್ಷಿಸೂ ಎಂದರ್ಥ) । ಫಲವು ನಮ್ಮಕಡೆಗೆ ಬರುವಂತೆ ಮಾಡು । ನಮ್ಮ ಮೇಲೆ ಪಾಶವನ್ನು ಹಾಕಲು ಇಚ್ಛಿಸುವಂತಹ ವರುಣದೇವನನ್ನು ನಮಗೆ ಇಷ್ಟವಾದ

ಸ್ವಾದಿಷ್ಟವಾದ ಸುಖವನ್ನು ಕೊಡುವ ಫಲವುಳ್ಳಂತಹ ಪುರೋಡಾಶಾದಿ ಹವಿಸ್ಸುಗಳನ್ನು ಕೊಡುವುದರ ಮೂಲಕ ನಮಗೆ ಹಿತವಾಗುವಂತೆ ಮಾಡು । ನಮ್ಮ ಒಳ್ಳೆಯ ಆಹ್ವಾನವನ್ನು ಕೇಳಿದಂತಹ ನೀನು ನಮ್ಮನ್ನು ವರ್ಧಿಸು ॥

೪೮. ಓಂ ತ್ವಮ॑ಗ್ನೇ ಅಯಾ॒ಸ್ಯ॑ಯಾ॒ ಸನ್ಮ॑ಸಾ ಹಿ॒ತಃ । ಅಯಾ॑ಸನ್ ಹ॒ವ್ಯಮೂ॑ಹಿಷೇ॒ಯಾನೋ॑ ಧೇಹಿ ಭೇಷ॒ಜಗ್ಗ್ ಸ್ವಾ॒ಹಾ ॥

ಎಲೈ ಅಗ್ನಿಯೇ, ಭಕ್ತರನ್ನು ಕುರಿತು ಹೋಗುವವನಾಗಿದ್ದೀಯೇ ಅಥವಾ ಭಕ್ತರು ಹೋಗಲ್ಪಡುವ ಸ್ಥಾನವಾಗಿದ್ದೀಯೇ । ಈ ಸ್ವಭಾವದವನಾದ ನೀನು ನಮ್ಮಿಂದ ಮನಸ್ಸಿನಲ್ಲಿ ಯಾವಾಗಲೂ ಸ್ಮರಿಸಲ್ಪಡುವವನಾಗಿದ್ದೀಯೇ । ಗತಿಶೀಲನಾದ ನೀನು ನಾವುಕೊಟ್ಟ ಹವಿಸ್ಸುಗಳನ್ನು ದೇವತೆಗಳಿಗೆ ಕೊಂಡೊಯ್ಯುವವನಾಗು । ಅಂತಹಾ ನೀನು ನಮಗೆ ಕರ್ಮವೇ ಮೊದಲಾದ ಸಮಸ್ತ ದುಃಖಗಳಿಗೆ ಪರಿಹಾರವನ್ನು ಕೊಡುವವನಾಗು(ವೈದ್ಯನಾಗು) ॥

ಲಾಜಾಹೋಮದ ೧೫ ಮಂತ್ರಗಳು –

೪೯. ಓಂ ಆತಿ॑ಷ್ಠೇಮಮ॑ಶ್ಮಾ॒ನಮ॑ಶ್ಮೇ॒ವತ್ತ್ವಗ್ಗ್ ಸ್ಥಿರಾ ಭ॑ವ । ಅಭಿ॑ತಿಷ್ಠ ಪೃತ॒ನ್ಯತ ಸ್ಸ॑ಹಸ್ವ ಪೃತನಾ॒ಯತಃ ॥

ಎಲೈ ವಧುವೇ, ಈ ಕಲ್ಲನ್ನು ಹತ್ತು । ಮೇಲೆ ನಿಂತುಕೊಳ್ಳುತ್ತಾ, ಹೇಗೆ ಈ ಕಲ್ಲು ಸ್ಥಿರವಾಗಿದೆಯೋ ಹಾಗೆ ನೀನು ಸ್ಥಿರವಾಗಿ, ಶಾಶ್ವತವಾಗಿ ಇರುವವಳಾಗಿರು । ಯಾರು ಯುದ್ಧಾಪೇಕ್ಷಿಗಳೋ ಅವರ ಬಳಿಸಾರಿ ಅವರನ್ನು ಸೋಲಿಸು ॥

೫೦. ಓಂ ಇಯಂ ನಾಯ್ಯು॑ಪಬ್ರೂ॒ತೇ ಕು॒ಲ್ಪಾನ್ಯಾ ವಪ॑ಂತಿಕಾ । ದೀ॒ರ್ಘಾಯು॑ರಸ್ತು॒ ಮೇ ಪ॒ತಿರ್ಜೀ॑ವಾತು॒ ಶರ॑ದ॒ಶ್ಶತಗ್ಗ್ ಸ್ವಾ॒ಹಾ ॥

ಈ ವಧುವು, (ಕುಲ್ಪಗಳನ್ನು)ಲಾಜಗಳನ್ನು ಅಗ್ನಿಯಲ್ಲಿ ಹೋಮಿಸುತ್ತಾ, ನನ್ನ ಪತಿಯು ದೀರ್ಘಾಯುವಾಗಲಿ, ಶತಸಂವತ್ಸರ ಆಯಸ್ಸುಳ್ಳವನಾಗಲಿ(ಜೀವಿಸಲಿ) ಎಂದು ಅಗ್ನಿಯ ಬಳಿ ಗುಟ್ಟಾಗಿ ಹೇಳುತ್ತಾಳೆ ॥

೫೧. ಓಂ ತುಭ್ಯಮಗ್ರೇ ಪರ್ಯವಹನ್ಸೂರ್ಯಾಂ ವಹತುನಾ ಸಹ ।
ಪುನಃ ಪತಿಭ್ಯೋ ಜಾಯಾಂದಾ ಅಗ್ನೇ ಪ್ರಜಯಾ ಸಹ ॥

ಎಲೈ ಅಗ್ನಿಯೇ, ನಿನ್ನನ್ನು ಮೊದಲು ಸೂರ್ಯನ ಮಗಳ ಜೊತೆ, ಆ ಸೂರ್ಯನ ಮಗಳ (ತಂದೆಯ ಕುಲದಿಂದ ಬಂದಂತಹ)ಸ್ತ್ರೀಧನದ ಜೊತೆ, ಕೊಟ್ಟರು । ಮತ್ತೆ ಇಂದು ಪತಿಗಳಾದ ನಮಗೆ ಹೆಂಡತಿ(ಜಾಯಾ) ಮತ್ತು ಪ್ರಜೆಗಳನ್ನು ಕೊಡು ॥

೫೨. ಓಂ ಪುನಃ ಪತ್ನೀಮಗ್ನಿರದಾದಾಯುಷಾ ಸಹವರ್ಚಸಾ ।
ದೀರ್ಘಾಯುರಸ್ಯಾಯುಃ ಪತಿಸ್ಸ ಏತು ಶರದಶ್ಶತಮ್ ॥

ಇಂದು ಅಗ್ನಿಯು ಆಯುಷ್ಯ ಮತ್ತು ಕಾಂತಿಯೊಡನೆ ಪತ್ನಿಯನ್ನು ಕೊಟ್ಟಿದ್ದಾನೆ । ಈ ವಧುವಿನ ಪತಿಯು ದೀರ್ಘಾಯುವಾಗಲಿ । ನೂರುವರ್ಷಗಳು ಜೀವಿಸಲಿ ॥

೫೩. ಓಂ ವಿಶ್ವಾ ಉತತ್ವಯಾ ವಯಂ ಧಾರಾ ಉದನ್ಯಾ ಇವ । ಅತಿಗಾಹೇ
ಮಹಿದ್ವಿಷಃ ॥

ಎಲೈ ಅಗ್ನಿಯೇ, ನಿನ್ನನ್ನು ಒಡೆಯನನ್ನಾಗಿ ಮಾಡಿಕೊಂಡು ನಾವು ಎಲ್ಲಾ ದ್ವೇಷಮಾಡುವವರನ್ನು ಮೀರಿ ಹೋಗುತ್ತೇವೆ । ಹೇಗೆ ವರ್ಷಧಾರೆಗಳನ್ನು ವೃಷಭ ಮೊದಲಾದವುಗಳು ದಾಟಿಹೋಗುತ್ತವೋ ಹಾಗೆ ॥

೫೪. ಓಂ ಅರ್ಯಮಣಂ ನು ದೇವಂ ಕನ್ಯಾ ಅಗ್ನಿಮಯಕ್ಷತ । ಸ ಇಮಾಂ
ದೇವೋ ಅಧ್ವರಃ ಪ್ರೇತೋ ಮುಂಚಾತಿ ನಾಮುತಸ್ಸುಬದ್ಧಾಮಮುತಸ್ಕರತ್
ಸ್ವಾಹಾ ॥

ಕ್ಷಿಪ್ರವಾಗಿ ನಮ್ಮನ್ನು ಬಂದು ಸೇರುತ್ತಾನಾದ್ದರಿಂದ, ಅಗ್ನಿಗೆ ಅರ್ಯಮಾ ಎಂದು ಹೆಸರು। ಆ ಅಗ್ನಿಯನ್ನು (ಅರ್ಯಮ) ಕನ್ಯೆಯರು ಮೊದಲು ಹೋಮದ ಮೂಲಕ ಪೂಜಿಸಿದರು । ಆ ಅಗ್ನಿಯ ಪೂಜೆಯಿಂದ ಕನ್ಯೆಯರು ಗಂಡನನ್ನು ಪಡೆದುಕೊಂಡರು । ಆ ಅಗ್ನಿಯು ಈಗ

ಲಾಜಾಹೋಮದಿಂದ ಪೂಜಿಸಲ್ಪಟ್ಟವನಾಗಿ ಯಾರಿಂದಲೂ ಹಿಂಸೆಗೆ ಒಳಗಾಗದವನಾಗಿ, ಈ ಕನ್ಯೆಯನ್ನು ತಂದೆಯ ಕುಲದಿಂದ ಬಿಡಿಸುತ್ತಾನೆ ಮತ್ತು ಈ ಪತಿಯಕುಲದಲ್ಲಿ ದೃಢವಾಗಿ ಬದ್ಧಳಾಗುವಂತೆ ಮಾಡುತ್ತಾನೆ ॥

೫೫. ಓಂ ತ್ವಮ॑ರ್ಯಮಾ ಭವಸಿ ಯತ್ಕನೀನಾಂ ನಾಮ॑ಸ್ಸ್ವಧಾವ॒ತ್ಸ್ವರ್ಯಂ ಬಿಭ॑ರ್ಷಿ । ಅಂಜಂ॑ತಿ ವ್ಯಕ್ತ॒ಗ್ಂ ಸು॒ಧಿ॒ತಂ ನ ಗೋಭಿ॑ರ್ಯದ್ದಂ॑ಪ॒ತೀ ಸಮ॑ನಸಾ ಕೃ॒ಣೋಷಿ॑ ಸ್ವಾ॒ಹಾ ॥

ಎಲೈ ಅಗ್ನಿಯೇ, ನೀನು ದಾನಶೀಲ(ಕೊಡುವವ)ನಾಗಿದ್ದೀಯೇ । ಯಾವ ಕಾರಣದಿಂದ ಕನ್ಯೆಯರ ಪಡೆಯುವಿಕೆ, ಅನ್ನದ ಪಡೆಯುವಿಕೆ ಮತ್ತು ಸ್ವರ್ಗಪ್ರಾಪ್ತಿ ಎಲ್ಲವೂ ನಿನ್ನ ಅಧೀನದಲ್ಲಿದೆ । ಆದ್ದರಿಂದ ಯಾವ ಪುರುಷನು ನಿನ್ನನ್ನು ಆರಾಧಿಸುತ್ತಾನೋ ಅವನಿಗೆ ಈ ಮೂರೂ ಪ್ರಾಪ್ತವಾಗುವವು । ಆದ್ದರಿಂದ ನೀನೇ ಅರ್ಯಮನಾಗಿದ್ದೀಯೇ (ದಾನಮಾಡುವವನಾಗಿದ್ದೀಯೇ) । ಮನುಷ್ಯರೆಲ್ಲರೂ ನಿನ್ನನ್ನೇ ಗೋವಿಕಾರವಾದ ಆಜ್ಯಾದಿಗಳಿಂದ, ಹೇಗೆ ಚೆನ್ನಾಗಿ ನೆಟ್ಟಂತಹ ಗಿಡವನ್ನು ನೀರಿನಿಂದ ಸಿಂಚನಮಾಡಿ ಬೆಳೆಸುತ್ತಾರೋ, ಹಾಗೆ ಸಿಂಚನಮಾಡುತ್ತಾರೆ(ಆಜ್ಯ ಮುಂತಾದ ಹವಿಸ್ಸುಗಳಿಂದ ನಿನ್ನನ್ನು ಆರಾಧಿಸುತ್ತಾರೆ) । ಯಾವ ಕಾರಣಗಳಿಂದ ದಂಪತಿಗಳಿಬ್ಬರನ್ನೂ ಸಮಾನಮನಸ್ಕರನ್ನಾಗಿ ಮಾಡುತ್ತೀಯೋ ಆ ಕಾರಣದಿಂದ ನಿನ್ನನ್ನು ಆರಾಧಿಸುತ್ತಾರೆ ॥

ಯೋಕ್ತ್ರವಿಮೋಚನ ಮಂತ್ರಗಳು(ವಧುವಿನ ಸೊಂಟಕ್ಕೆ ಕಟ್ಟಿರುವ ದರ್ಭೆಯ ದಾರವನ್ನು ಪತಿಯು ತೆಗೆಯುವ ಕ್ರಿಯೆ) –

೫೬. ಓಂ ಪ್ರ ತ್ವಾ ಮುಂಚಾ॑ಮಿ ವರು॑ಣಸ್ಯ ಪಾ॒ಶಾದ್ಯೇನ॒ ತ್ವಾ ಬ॑ಧ್ನಾ॒ತ್ಸ॒ವಿತಾ ಸು॒ಕೇ॑ತಃ । ಧಾ॒ತುಶ್ಚ॒ಯೋನೌ॑ ಸುಕೃತ॒ಸ್ಯ ಲೋ॒ಕೇ ಸ್ಯೋ॒ನಂ ತೇ॑ ಸ॒ಹಪ॑ತ್ಯಾ ಕರೋಮಿ ॥

ಎಲೈ ವಧುವೇ, ನಿನ್ನನ್ನು ವರುಣಪಾಶದಿಂದ ಬಿಡಿಸುತ್ತೇನೆ । ಯಾವ ಪಾಶದಿಂದ ಎಲ್ಲರಿಗೂ ಪ್ರೇರಕನಾದ ಒಳ್ಳೆಯ ಜ್ಞಾನವುಳ್ಳ ಸವಿತೃದೇವನು ನಿನ್ನನ್ನು ಬಂಧಿಸಿದ್ದನೋ ಆ ಪಾಶದಿಂದ

ವಿಮುಕ್ತಿಗೊಳಿಸಿದ್ದೇನೆ। ಬ್ರಹ್ಮಲೋಕದಲ್ಲಿ (ತುಂಬಾ ಪುಣ್ಯಕರ್ಮದಿಂದ ಸಿಗುವಂತಹದ್ದು) ಪತಿಯಾದ ನನ್ನಜೊತೆ ಸುಖಸ್ಥಾನವು ದೊರಕುವಂತೆ ಮಾಡುತ್ತೇನೆ ॥

೫೭. ಓಂ ಇಮಂ ವಿಶ್ಯಾಮಿ ವರುಣಸ್ಯ ಪಾಶಂ ಯಮ ಬಧ್ನೀತ ಸವಿತಾ ಸುಶೇವಃ । ಧಾತುಶ್ಚ ಯೋನೌ ಸುಕೃತಸ್ಯ ಲೋಕೇಽರಿಷ್ಟಾಂ ತ್ವಾ ಸಹ ಪತ್ಯಾ ಕೃಣೋಮಿ ॥

ಈ ವರುಣಪಾಶವನ್ನು ಸಡಿಲಗೊಳಿಸುತ್ತೇನೆ। ಯಾವ ಪಾಶದಿಂದ ಭಕ್ತರಿಗೆ ಸುಖವನ್ನು ಕೊಡುವವನಾದ ಸವಿತೃದೇವನು ಬಂಧಿಸಿದ್ದನೋ, ಆ ಪಾಶವನ್ನು ಸಡಿಲಗೊಳಿಸುತ್ತೇನೆ। ತುಂಬಾ ಪುಣ್ಯಕರ್ಮಗಳಿಂದ ಸಿಗುವಂತಹ ಬ್ರಹ್ಮಲೋಕದಲ್ಲಿ ಅವಿನಾಶಿನಿಯಾದ ನಿನ್ನಜೊತೆ ಪತಿಯಾದ ನಾನು ಅತ್ಯಂತ ಸುಖವನ್ನು ಹೊಂದುತ್ತೇನೆ ॥

ಉಪವಾಸ ಮಾಡದೇಇದ್ದಾಗ ಪ್ರಾಯಶ್ಚಿತ್ತಹೋಮದ ಮಂತ್ರ –

೫೮. ಓಂ ಅಯಾಶ್ಚಾಗ್ನೇಸ್ಯ ನಭಿಶಸ್ತೀಶ್ಚ ಸತ್ಯಮಿತ್ವ ಮಯಾ ಅಸಿ । ಅಯಾಸಾ ಮನಸಾ ಧೃತೋಯಾಸಾ ಹವ್ಯಮೂಹಿಷೇಽಯಾನೋ ಧೇಹಿ ಭೇಷಜಗ್ಂ ಸ್ವಾಹಾ ॥

ಎಲ್ಲೆ ಅಗ್ನಿಯೇ, ನೀನು ಪಾಪನಾಶಕನಾಗಿದ್ದೀಯೇ । ಮತ್ತು ಎಲ್ಲರ ಬಳಿ ಇರುವವನಾಗಿದ್ದೀಯೆ(ಹೋಗುವವನಾಗಿದ್ದೀಯೆ) । ಅಷ್ಟೇ ಅಲ್ಲದೇ ಸತ್ಯವಾದಂತಹ ಗತಿಯುಳ್ಳವನಾಗಿದ್ದೀಯೇ(ಖಡಾಖಂಡಿತವಾಗಿ ನಮ್ಮ ಬಳಿ ಬರುವವನಾಗಿದ್ದೀಯೆ) । ಇಂತಹಾ ನೀನು, ನಿನ್ನ ಬಳಿ ಹೋಗುವಂತಹ ಮನಸ್ಸಿನಿಂದ ನಾವು ಧ್ಯಾನಮಾಡಿದವರಾಗಿ ಹಾಗೆಯೇ ಭಕ್ತರ ಬಳಿ ಬರುವಂತಹ(ಭಕ್ತರಿಗೆ ಒಲಿಯುವಂತಹ), ನಿನ್ನ ಮನಸ್ಸಿನಿಂದ ನಾವು ಕೊಟ್ಟ ಹವಿಸ್ಸನ್ನು ದೇವತೆಗಳ ಬಳಿ ತೆಗೆದುಕೊಂಡುಹೋಗು ॥

ವಧುವನ್ನು ಪತಿಯು ತನ್ನ ಮನೆಗೆ ವಾಹನಾದಿಗಳಲ್ಲಿ ಕರೆದುಕೊಂಡು ಹೋಗುವಾಗ ಹಾಗೆಯೇ ನದೀ–ಸ್ಮಶಾನಾದಿಗಳನ್ನು ದಾಟುವಾಗ ಹೇಳುವ ಮಂತ್ರಗಳು –ನದೀ ಮುಂತಾದ ತೀರ್ಥಾದಿಗಳನ್ನು ದಾಟಬೇಕಾದರೆ ಹೇಳಬೇಕಾದ ಮಂತ್ರಗಳು ಸ್ಮಶಾನಾದಿಗಳನ್ನು ದಾಟಿದಾಗ ದಂಪತಿಗಳು ಮಾಡುವಂತಹ ಹೋಮ ಮಂತ್ರ –

೫೯. ಸತ್ಯೇನೋತ್ತಭಿತಾ ಭೂಮಿಸ್ಸಂಸ್ಪೀರ್ಣೋತ್ತಭಿತಾ ದ್ಯೌಃ । ಋತೇನಾದಿತ್ಯಾಸ್ತಿಷ್ಠಂತಿ ದಿವಿ ಸೋವೋ ಅಧಿಶ್ರಿತಃ ॥

ಹೇಗೆ, ಈ ಭೂಮಿಯು ಸತ್ಯವಾದಂತಹ ಮನಸ್ಸು, ವಾಕ್ ಮತ್ತು ದೇಹದಿಂದ ಸ್ಥಾಪಿಸಲ್ಪಟ್ಟು ನಿಂತಿದೆಯೋ, ಹೇಗೆ ಸೂರ್ಯನಿಂದ(ಸವಿತೃದೇವ) ದ್ಯುಲೋಕವು ನಿಂತಿದೆಯೋ, ಹೇಗೆ ಯಜ್ಞದಿಂದ ದ್ವಾದಶಆದಿತ್ಯದೇವತೆಗಳು ನಿಂತಿದ್ದಾರೋ, ಹೇಗೆ ಸ್ವರ್ಗಲೋಕವನ್ನು ಸೋಮದೇವನು ಆಶ್ರಯಿಸಿಕೊಂಡು ನಿಂತಿದ್ದಾನೋ, ಹಾಗೆ ಎಲೈ ರಥವೇ(ವಾಹನ) ನೀನು ನನ್ನಿಂದ ಸ್ಥಾಪಿಸಲ್ಪಟ್ಟಿದ್ದಾಗಿ ಸ್ಥಿರವಾಗಿ ನಿಲ್ಲು ॥

೬೦. ಯುಂಜಂತಿ ಬ್ರಧ್ನಮರುಷಂ ಚರಂತಂ ಪರಿತಸ್ಥುಷಃ । ರೋಚಂತೇ ರೋಚನಾ ದಿವಿ ॥

ಮನುಷ್ಯರು ತುಂಬಾ ಉತ್ಕೃಷ್ಟವಾದ, ತುಂಬಾ ವೇಗವಾಗಿ, ದೃಢವಾಗಿ ಹೋಗಲು ಸಮರ್ಥವಾದ ಕುದುರೆ ಅಥವಾ ಎತ್ತು(ವೃಷಭ)ಗಳನ್ನು (ಸ್ಥಾವರ ಪದಾರ್ಥಗಳನ್ನು ಮೀರಿ ಹೋಗುವ) ಎಲ್ಲಿಯವರೆಗೆ ನಕ್ಷತ್ರಾದಿಗಳು ಆಕಾಶದಲ್ಲಿ ಹೊಳೆಯುತ್ತಾವೆಯೋ, ಅಲ್ಲಿಯವರೆಗೆ ಈ ವಿಧವಾದ (ಎಲ್ಲಾ ರೀತಿಯ ಪ್ರಯಾಣಗಳಲ್ಲಿ) ಕರ್ಮಗಳಲ್ಲಿ ಯಾವಾಗಲೂ ಪುರುಷರು(ವಾಹನ/ಕುದುರೆ/ಎತ್ತು/---) ನಿಯೋಜಿಸುತ್ತಾರೆ ॥

೬೧. ಯೋಗೇಯೋಗೇ ತವಸ್ತರಂ ವಾಜೇವಾಜೇ ಹವಾಮಹೇ । ಸಖಾಯ ಇಂದ್ರಮೂತಯೇ ॥

ಯಾವಾಗ ಯಾವಾಗ ಕುದುರೆ ಮುಂತಾದವುಗಳನ್ನು ರಥಾದಿಗಳಲ್ಲಿ ಕಟ್ಟುವ ಪ್ರಸಂಗವು ಬರುತ್ತದೋ ಆಗಾಗ ಅತ್ಯಂತ ವೃದ್ಧಿ ಅಥವಾ ಗಮನವುಳ್ಳ, ಹಾಗೆಯೇ ಪ್ರತೀಯುದ್ಧಗಳಲ್ಲೂ (ಯುದ್ಧಗಳು ಪ್ರಾಪ್ತವಾದಾಗ) ಹಾಗೆಯೇ ಎಲ್ಲಾ ಕಾರ್ಯಗಳಲ್ಲೂ ಸ್ತೋತ್ರದಿಂದ ನಮ್ಮ ಸಖನಾದ ಇಂದ್ರದೇವನನ್ನು ನಮ್ಮ ರಕ್ಷಣೆಗೆ ಆಹ್ವಾನಿಸುತ್ತೇವೆ ॥

೬೨. ಸುಕಿಗ್ಂ ಶುಕಗ್ಂ ಶಲ್ಮಲಿಂ ವಿಶ್ವರೂಪಗ್ಂ ಹಿರಣ್ಯವರ್ಣಗ್ಂ ಸುವೃತಗ್ಂ ಸುಚಕ್ರಮ್ । ಆರೋಹವಧ್ವಮೃತಸ್ಯ ಲೋಕಗ್ಂ ಸ್ಯೋನಂ ಪತ್ಯೇ ವಹತುಂ ಕೃಣುಷ್ವ ॥

ಶಲ್ಮಲೀ ವೃಕ್ಷದಿಂದ ನಿರ್ಮಿಸಲ್ಪಟ್ಟಂತಹ ಅಥವಾ ಮುಳ್ಳುಗಳಿಂದ ಕೂಡಿದ ಮರಗಳಿಂದ ಅಥವ ಪಾಲಾಶ(ಮುತ್ತುಗ) ಮರಗಳಿಂದ ನಿರ್ಮಿಸಲ್ಪಟ್ಟ (ಒಳ್ಳೆಯ ಕೆಚ್ಚಿನಿಂದ(ಬಲಿತ) ಕೂಡಿದ ಶಲ್ಮಲೀ ಮರದಿಂದ) ನಾನಾರೂಪದಿಂದ ಕೂಡಿದ ಉಜ್ವಲ ವರ್ಣದಿಂದ ಕೂಡಿದ, ಚೆನ್ನಾಗಿ ವೇಗವಾಗಿ ಹೋಗಲು ಸಮರ್ಥವಾದ ಚಕ್ರಗಳಿಂದ ಕೂಡಿದ ಈ ರಥವನ್ನು ಎಲೈ ವಧುವೇ, ಹತ್ತು । ದೀರ್ಘಾಯುವಾದ ನನ್ನ ಸ್ಥಾನಕ್ಕೆ(ಮನೆಗೆ) ಹೋಗುವವಳಾಗು । ಪತಿಯಾದ ನನಗೆ ಸುಖವನ್ನು ಕೊಡುವ, ತಂದೆಯ ಕುಲದಿಂದ ಪಡೆದಂತಹ ಸ್ತ್ರೀಧನವನ್ನು ಈ ರಥದಲ್ಲಿ ಇರಿಸು ॥

೬೩. ಉದುತ್ತರಮಾರೋಹಂತೀ ವ್ಯಸ್ಯಂತೀ ಪೃತನ್ಯತಃ । ಮೂರ್ಧಾನಂ ಪತ್ಯುರಾರೋಹ ಪ್ರಜಯಾ ಚ ವಿರಾಡ್ಭವ ॥

ಶ್ರೇಷ್ಠವಾದ ರಥವನ್ನು ಹತ್ತುತ್ತಾ, ಯುದ್ಧಮಾಡಲು ಇಚ್ಛಿಸುತ್ತಿರುವವರನ್ನು ನಾನಾಕಡೆಗೆ ಎಸೆಯುತ್ತಾ, ಪತಿಯಾದ ನನಗೆ ಪ್ರಧಾನಭೂತಳಾಗಿ ಇರು । ಪ್ರಜೆಗಳಿಂದ ವಿರಾಟ್ ರೂಪಳಾಗು(ಹತ್ತಾರು ಮಕ್ಕಳನ್ನು ಹೆತ್ತು ವಿರಾಟ್ ಛಂದಸ್ಸಿಗೆ ಸಮಾನಳಾಗು) ॥

೬೪. ಸಮ್ರಾಜ್ಞೀ ಶ್ವಶುರೇ ಭವ ಸಮ್ರಾಜ್ಞೀ ಶ್ವಶ್ರ್ವಾಂ ಭವ । ನನಾಂದರಿ ಸಮ್ರಾಜ್ಞೀ ಭವ ಸಮ್ರಾಜ್ಞೀ ಅಧಿದೇವೃಷು ॥

ಮಾವಂದಿರಿಗೆ ಅತ್ಯಂತ ಪ್ರೀತಿಪಾತ್ರಳಾಗು । ಹಾಗೆಯೇ ಅತ್ತೆಗೂ ಅತ್ಯಂತ ಪ್ರೀತಿಪಾತ್ರಳಾಗು ।

ಹಾಗೆಯೇ ಗಂಡನ ಅಕ್ಕತಂಗಿಯರಿಗೂ ಮತ್ತು ನಿನ್ನ ಅಕ್ಕತಂಗಿಯರಿಗೂ ಅತ್ಯಂತ ಪ್ರೀತಿಪಾತ್ರಳಾಗು । ಹಾಗೆಯೇ ಗಂಡನ ಅಣ್ಣತಮ್ಮಂದಿರಿಗೂ ಮತ್ತು ನಿನ್ನ ಅಣ್ಣತಮ್ಮಂದಿರಿಗೂ ಅತ್ಯಂತ ಪ್ರೀತಿಪಾತ್ರಳಾಗು ॥

೬೫. ಸ್ನುಷಾಣಾಗ್ಂ ಶ್ವಶುರಾಣಾಂ ಪ್ರಜಾಯಾಶ್ಚ ಧನಸ್ಯ ಚ । ಪತಿನಾಂ ಚ ದೇವೃಣಾಂ ಚ ಸಜಾತಾನಾಂ ವಿರಾಡ್ಭವ ॥

ನಮ್ಮ ಮನೆಯ ಸೊಸೆಯಂದಿರಿಗೂ ಅತ್ಯಂತ ಪ್ರೀತಿಪಾತ್ರಳಾಗು । ಹಾಗೆಯೇ ಅವರ ತಂದೆತಾಯಿಯಂದಿರಿಗೂ ಮತ್ತು ಅವರ ಅಣ್ಣತಮ್ಮಂದಿರಿಗೂ ಮತ್ತು ಅವರ ಮಕ್ಕಳಿಗೂ ನಿನಗೆ ಬರುವ ಐಶ್ವರ್ಯಕ್ಕೂ ಪತಿಯಾದ ನನ್ನ ಸಹೋದರ ಬಳಗದವರಿಗೂ ಮತ್ತು ನನ್ನ ಮನೆಯಲ್ಲಿ ನನ್ನ ಜೊತೆ ಹುಟ್ಟಿದಂತಹ ಬೇರೆ ಸಂಬಂಧಿಕರಿಗೂ ಈಶ್ವರ(ಮಂಗಳ/ಒಡತಿ) ನಂತೆ ಆಗು ॥

೬೬. ನೀಲಲೋಹಿತೇ ಭವತಃ ಕೃತ್ಯಾ ಸಕ್ತಿರ್ವ್ಯಜ್ಯತೇ । ಏಧಂತೇsಸ್ಯಾ ಜ್ಞಾತಯಃ ಪತಿರ್ಬಂಧೇಷು ಬಧ್ಯತೇ ॥

ನೀಲಿ ಮತ್ತು ಕೆಂಪು ಬಣ್ಣದ ಎರಡು ದಾರಗಳನ್ನು ಇವರ ರಥಕ್ಕೆ ಕಟ್ಟುತ್ತಾರೆ । ಇದರಿಂದ ಬೇರೆಯವರಿಂದ ಮಾಡಲ್ಪಡುವ ಕೆಟ್ಟಸಂಗಗಳು, ಸಂಬಂಧಗಳು ನಾಶವಾಗಲ್ಪಡುತ್ತವೆ । ಮತ್ತು ನಮ್ಮಿಬ್ಬರನ್ನು ಬೇರ್ಪಡಿಸಲು ಅಥವಾ ಸೋಲಿಸಲು ಯಾರಿಂದಲೂ ಸಾಧ್ಯವಿಲ್ಲ ಎಂಬುದು ತೋರಿಸಲ್ಪಡುತ್ತದೆ । ಹಾಗು ಇವಳ ಜ್ಞಾತಿಗಳು ಮತ್ತು ಗಂಡನು ನನ್ನ ಸ್ನೇಹರೂಪವಾದ ಬಂಧನದಲ್ಲಿ ಯಾವಾಗಲೂ ಬಂಧಿಸಲ್ಪಡುವಂತಾಗಲಿ ॥

೬೭. ಯೇ ವಧ್ವಶ್ಚಂದ್ರಂ ವಹತುಂ ಯಕ್ಷ್ಮಾಯಂತಿ ಜನಾಗ್ಂ ಅನು । ಪುನಸ್ತಾನ್, ಯಜ್ಞಿಯಾ ದೇವಾ ನಯಂತು ಯತ ಆಗತಾಃ ॥

ಈ ವಧುವಿನ ತಂದೆಯಕುಲದಿಂದ ಬಂದ ಚಂದ್ರನಂತೆ ಆಹ್ಲಾದಕರವಾದ ಹಣವು, ಯಾವ ರೋಗಗಳು(ಕಣ್ಣೀರು, ದುಃಖವನ್ನುಂಟುಮಾಡುವ) ಪ್ರಾಪ್ತವಾಗುವವೋ ಅವುಗಳನ್ನು ಪರಿಹರಿಸಲು ಯಜ್ಞಿಯ ದೇವತೆಗಳು ಅವು ಎಲ್ಲಿಂದ ಬಂದಿವೆಯೋ ಅಲ್ಲಿಗೇ ಒಯ್ಯಲಿ ।

(ಈ ಸ್ತ್ರೀಧನವನ್ನು ಅಪಹರಿಸಲು ಯಾರಾದರೂ ಈ ವಧುವಿನ ಬಳಿ ಬಂದರೆ ಅವರನ್ನು ಆ ಯಜ್ಞಿಯದೇವತೆಗಳು ಅವರು(ಅಪಹರಣಕಾರರು) ಎಲ್ಲಿಂದ ಬಂದಿದ್ದಾರೋ ಅಲ್ಲಿಗೇ ಓಡಿಸಲಿ ॥

೬೮. ಮಾ ಏದನ್ಪರಿ ಪಂಥಿನೋ ಯು ಆ ಸೀದಂತಿ ದಂಪತೀ ।
ಸುಗೇಭಿರ್ದುರ್ಗ ಮತೀತಾ ಮಪದ್ರಾಂತ್ವರಾತಯಃ ॥

ಈ ದಂಪತಿಗಳಿಗೆ ದಾರಿಯಲ್ಲಿ ಕಳ್ಳಕಾಕರು ಸಿಗದಿರಲಿ(ದರೋಡೆಕೋರರು) । ಈ ದಂಪತಿಗಳನ್ನು ದರೋಡೆಕೋರರು ಅಟ್ಟಿಸಿಕೊಂಡು ಬಂದರೆ, ಒಳ್ಳೆಯ ವೇಗವಾದ ಮಾರ್ಗಗಳಿಂದ ದುರ್ಗಮವಾದ ಪ್ರದೇಶವನ್ನು ಅತ್ಯಂತ ಸುಲಭವಾಗಿ ಇವರು ದಾಟಲಿ । ಇವರ ಶತ್ರುಗಳು ಇವರನ್ನು ಬಿಟ್ಟು ಬೇರೆಕಡೆ ಹೋಗುವಂತಾಗಲಿ ॥

೬೯. ಸುಗಂ ಪಂಥಾನಮಾರುಕ್ಷ ಮರಿಷ್ಟಗ್ಂ ಸ್ವಸ್ತಿ ವಾಹನಮ್ ।
ಯಸ್ಮಿನ್ವೀರೋ ನರಿಷ್ಯತ್ಯನ್ಯೇಷಾಂ ವಿಂದತೇ ವಸು ॥

ಸುಖವಾಗಿ ಹೋಗಲು ಯೋಗ್ಯವಾದ ಮಾರ್ಗದಲ್ಲಿ ಹೊರಟಿರುವೆನು । ಅನಿಷ್ಟವಾಗಲೀ, ವಾಹನಗಳು ನಾಶವಾಗುವುದಾಗಲೀ, ಯಾವ ಮಾರ್ಗದಲ್ಲಿ ಆಗುವುದಿಲ್ಲವೋ ಮತ್ತು ಯಾವ ಮಾರ್ಗದಲ್ಲಿ ನಮ್ಮ ರಕ್ಷಕರು ನಾಶವಾಗುವುದಿಲ್ಲವೋ (ಸೋಲುವುದಿಲ್ಲವೋ) ಮತ್ತು ಯಾವ ಮಾರ್ಗದಲ್ಲಿ ಕಳ್ಳಕಾಕರ ಐಶ್ವರ್ಯವು ನಮಗೆ ಸೇರುತ್ತದೆಯೋ ಅಂತಹಾ ಮಾರ್ಗದಲ್ಲಿ ಹೊರಟಿರುವೆನು ॥

ನದೀ ಮುಂತಾದ ತೀರ್ಥಾದಿಗಳನ್ನು ದಾಟಬೇಕಾದರೆ ಹೇಳಬೇಕಾದ ಮಂತ್ರಗಳು –

೭೦. ತಾ ಮಂದಸಾನಾ ಮನುಷೋ ದುರೋಣ ಆದ್ಧತ್ತಗ್ಂ ರಯಿಂ
ದಶವೀರಂ ವಚಸ್ಯವೇ । ಕೃತಂ ತೀರ್ಥಗ್ಂ ಸುಪ್ರಪಾಣಗ್ಂ ಶುಭಸ್ಪತೀ
ಸ್ಥಾಣುಂ ಪಥೇಷ್ಠಾಮಪ ದುರ್ಮತಿಗ್ಂ ಹತಮ್ ॥

ಅಶ್ವಿನೀದೇವತೆಗಳು ನಿಮ್ಮಿಂದ ಸ್ತೋತ್ರಮಾಡಲ್ಪಟ್ಟವರಾಗಿ ಈ ತನ್ನ ಆರಾಧನೆ ಮಾಡುವ ನಿಮ್ಮಿಬ್ಬರ(ದಂಪತಿಗಳ) ಮನೆಯಲ್ಲಿ ಹತ್ತು ಪುತ್ರರ ಸಹಿತವಾದ ಧನವು ಐಶ್ವರ್ಯವು ನಿಮಗೆ ಪ್ರಾಪ್ತವಾಗುವಂತೆ ಮಾಡಲಿ। ಏಕೆಂದರೆ ನೀವು ನನ್ನ ಸ್ತುತಿರೂಪವಾದ ಮಾತನ್ನು ಹೇಳಲು ಇಚ್ಛೆಯುಳ್ಳವರಾಗಿದ್ದೀರಿ। ಮಾರ್ಗದಲ್ಲಿ ತೀರ್ಥಪ್ರದೇಶವು ನಮಗೆ ಸುಲಭವಾಗಿ ಕುಡಿಯಲು, ಆಚಮನ ಮಾಡಲು ಸಾಧ್ಯವಾಗುವಂತೆ-ಎಲೈ ಶುಭಕ್ಕೆ ನಾಯಕರಾದ ಅಶ್ವಿನೀದೇವತೆಗಳೇ ನೀವು ಮಾಡಿರಿ (ಅಪ್(ನೀರು)ನ್ನು ಕಾಪಾಡುವವರಾದ ಅಶ್ವಿನೀದೇವತೆಗಳೇ)। ದಾರಿಯಲ್ಲಿ ಯಾವ ಕಲ್ಲು ಅಥವಾ ಬಂಡೆಗಳು ನಮಗೆ ಸಿಕ್ಕಿವೆಯೋ ಇದರಿಂದ ನಮ್ಮ ಅಮಂಗಳವು ಮತ್ತು ಕಳ್ಳಕಾಕರ ವಿಘ್ನವು ನಾಶವಾಗಿದೆ(ತೊಲಗಿದೆ) ॥

೭೧. ಅ॒ಯ ನ್ನೋ॑ ಮ॒ಹ್ಯಾಃ ಪ॒ಾರಗ್ಗ್ ಸ್ವ॒ಸ್ತಿ ನೇ॑ ಷ॒ದ್ವ॒ನಸ್ಪ॑ತಿಃ ।
ಸೀ॑ರಾನಸ್ಸ್ತ॒ರಾ ಭವ ದೀರ್ಘಾ॒ಯುತ್ವಾ॒ಯ ವರ್ಚ॑ಸೇ ॥

ಮರದಿಂದ ಮಾಡಿದ ಈ ನೌಕೆಯು(ದೋಣಿ) ನಮ್ಮನ್ನು ಈ ದೊಡ್ಡ ನದಿಯಿಂದ ಆಚೆದಡಕ್ಕೆ ನಿರ್ವಿಘ್ನವಾಗಿ ಕೊಂಡೊಯ್ಯಲಿ। ಎಲೈ ನೀರೆ(ನದಿ)ಯೇ ನೀನು ನಮ್ಮಿಂದ ಸುಲಭವಾಗಿ ದಾಟಲ್ಪಡುವಂತೆ ಆಗು। ಎಲೈ ನೌಕೆಯೇ ನಮ್ಮನ್ನು ಚೆನ್ನಾಗಿ ದಾಟಿಸುವ ನೀನು ಬಹಳಕಾಲ ಹಾಳಾಗದೇ ಇರು ಮತ್ತು ದೃಢವಾಗಿ ಕಾಂತಿಯುಕ್ತವಾಗಿ ಇರು(ಎಲೈ ನೌಕೆಯೇ, ನಮ್ಮ ದೀರ್ಘಾಯಸ್ಸಿಗೆ ಮತ್ತು ಕಾಂತಿಗೆ ಕಾರಣವಾಗು) ॥

೭೨. ಅ॒ಸ್ಯ॒ಪಾ॒ರೇ ನಿ॑ರ್ಋ॒ತಸ್ಯ॑ ಜೀ॒ವಾ ಜ್ಯೋ॑ತಿರಶೀಮಹಿ । ಮ॒ಹ್ಯಾ
ಇ॑ಂದ್ರ ಸ್ವ॒ಸ್ತ॑ಯೇ ॥

ಈ ನದೀ ಮುಂತಾದವುಗಳ ಆಚೆದಡವನ್ನು ನಿರ್ವಿಘ್ನವಾಗಿ ದಾಟಿದಂತಹ ನಾವು ಅಭಯವಾದಂತಹ ಸ್ಥಾನವನ್ನು ಪಡೆಯೋಣ(ಜೀವಂತವಾಗಿಯೇ ನಾವು ಆಚೆದಡವನ್ನು ಸೇರಿದಂತಹವರಾಗಿ, ಅಭಯವಾದಂತಹ ಸ್ಥಾನವನ್ನು ಹೊಂದಿದ್ದೇವೆ) । ಈ ರೀತಿಯಾದಂತಹ ನಮಗೆ ಇಂದ್ರನು ಹೆಚ್ಚಿನದಾದ ಮಂಗಳವನ್ನುಂಟುಮಾಡಲಿ ॥

(ಈ ಸ್ತ್ರೀಧನವನ್ನು ಅಪಹರಿಸಲು ಯಾರಾದರೂ ಈ ವಧುವಿನ ಬಳಿ ಬಂದರೆ ಅವರನ್ನು ಆ ಯಜ್ಞಿಯದೇವತೆಗಳು ಅವರು(ಅಪಹರಣಕಾರರು) ಎಲ್ಲಿಂದ ಬಂದಿದ್ದಾರೋ ಅಲ್ಲಿಗೇ ಓಡಿಸಲಿ ॥

೬೮. ಮಾ ವಿದನ್ಪರಿ ಪಂಥಿನೋ ಯು ಆ ಸೀದಂತಿ ದಂಪತೀ ।
ಸುಗೇಭಿರ್ದುರ್ಗ ಮತೀತಾ ಮಪದ್ರಾಂತ್ವರಾತಯಃ ॥

ಈ ದಂಪತಿಗಳಿಗೆ ದಾರಿಯಲ್ಲಿ ಕಳ್ಳಕಾಕರು ಸಿಗದಿರಲಿ(ದರೋಡೆಕೋರರು) । ಈ ದಂಪತಿಗಳನ್ನು ದರೋಡೆಕೋರರು ಅಟ್ಟಿಸಿಕೊಂಡು ಬಂದರೆ, ಒಳ್ಳೆಯ ವೇಗವಾದ ಮಾರ್ಗಗಳಿಂದ ದುರ್ಗಮವಾದ ಪ್ರದೇಶವನ್ನು ಅತ್ಯಂತ ಸುಲಭವಾಗಿ ಇವರು ದಾಟಲಿ । ಇವರ ಶತ್ರುಗಳು ಇವರನ್ನು ಬಿಟ್ಟು ಬೇರೆಕಡೆ ಹೋಗುವಂತಾಗಲಿ ॥

೬೯. ಸುಗಂ ಪಂಥಾನಮಾರುಕ್ಷ ಮರಿಷ್ಟಗ್ಂ ಸ್ವಸ್ತಿ ವಾಹನಮ್ ।
ಯಸ್ಮಿನ್ವೀರೋ ನರಿಷ್ಯತ್ಯನ್ಯೇಷಾಂ ವಿಂದತೇ ವಸು ॥

ಸುಖವಾಗಿ ಹೋಗಲು ಯೋಗ್ಯವಾದ ಮಾರ್ಗದಲ್ಲಿ ಹೊರಟಿರುವೆನು । ಅನಿಷ್ಟವಾಗಲೀ, ವಾಹನಗಳು ನಾಶವಾಗುವುದಾಗಲೀ, ಯಾವ ಮಾರ್ಗದಲ್ಲಿ ಆಗುವುದಿಲ್ಲವೋ ಮತ್ತು ಯಾವ ಮಾರ್ಗದಲ್ಲಿ ನಮ್ಮ ರಕ್ಷಕರು ನಾಶವಾಗುವುದಿಲ್ಲವೋ (ಸೋಲುವುದಿಲ್ಲವೋ) ಮತ್ತು ಯಾವ ಮಾರ್ಗದಲ್ಲಿ ಕಳ್ಳಕಾಕರ ಐಶ್ವರ್ಯವು ನಮಗೆ ಸೇರುತ್ತದೆಯೋ ಅಂತಹಾ ಮಾರ್ಗದಲ್ಲಿ ಹೊರಟಿರುವೆನು ॥

ನದೀ ಮುಂತಾದ ತೀರ್ಥಾದಿಗಳನ್ನು ದಾಟಬೇಕಾದರೆ ಹೇಳಬೇಕಾದ ಮಂತ್ರಗಳು –

೭೦. ತಾ ಮಂದಸಾನಾ ಮನುಷೋ ದುರೋಣ ಆದ್ಧತ್ತಗ್ಂ ರಯಿಂ
ದಶವೀರಂ ವಚಸ್ಯವೇ । ಕೃತಂ ತೀರ್ಥಗ್ಂ ಸುಪ್ರಪಾಣಗ್ಂ ಶುಭಸ್ಪತೀ
ಸ್ಥಾಣುಂ ಪಥೇಷ್ಠಾಮಪ ದುರ್ಮತಿಗ್ಂ ಹತಮ್ ॥

ಅಶ್ವಿನೀದೇವತೆಗಳು ನಿಮ್ಮಿಂದ ಸ್ತೋತ್ರಮಾಡಲ್ಪಟ್ಟವರಾಗಿ ಈ ತನ್ನ ಆರಾಧನೆ ಮಾಡುವ ನಿಮ್ಮಿಬ್ಬರ(ದಂಪತಿಗಳ) ಮನೆಯಲ್ಲಿ ಹತ್ತು ಪುತ್ರರ ಸಹಿತವಾದ ಧನವು ಐಶ್ವರ್ಯವು ನಿಮಗೆ ಪ್ರಾಪ್ತವಾಗುವಂತೆ ಮಾಡಲಿ। ಏಕೆಂದರೆ ನೀವು ನನ್ನ ಸ್ತುತಿರೂಪವಾದ ಮಾತನ್ನು ಹೇಳಲು ಇಚ್ಛೆಯುಳ್ಳವರಾಗಿದ್ದೀರಿ। ಮಾರ್ಗದಲ್ಲಿ ತೀರ್ಥಪ್ರದೇಶವು ನಮಗೆ ಸುಲಭವಾಗಿ ಕುಡಿಯಲು, ಆಚಮನ ಮಾಡಲು ಸಾಧ್ಯವಾಗುವಂತೆ- ಎಲೈ ಶುಭಕ್ಕೆ ನಾಯಕರಾದ ಅಶ್ವಿನೀದೇವತೆಗಳೇ ನೀವು ಮಾಡಿರಿ (ಅಪ್(ನೀರು)ನ್ನು ಕಾಪಾಡುವವರಾದ ಅಶ್ವಿನೀದೇವತೆಗಳೇ)। ದಾರಿಯಲ್ಲಿ ಯಾವ ಕಲ್ಲು ಅಥವಾ ಬಂಡೆಗಳು ನಮಗೆ ಸಿಕ್ಕಿವೆಯೋ ಇದರಿಂದ ನಮ್ಮ ಅಮಂಗಳವು ಮತ್ತು ಕಳ್ಳಕಾಕರ ವಿಘ್ನವು ನಾಶವಾಗಿದೆ(ತೊಲಗಿದೆ) ॥

೭೧. ಅಂಯು॑ನ್ನೋ ವ॒ಮ್ಯಾಃ ಪಾರ॑ಗ್ಂ ಸ್ವಸ್ತಿ ನೇ॒ಷದ್ವ॒ನಸ್ಪ॑ತಿಃ ।
ಸೀ॑ರಾನ॒ಸ್ಮತ॑ರಾ ಭವ ದೀರ್ಘಾ॒ಯುತ್ವಾ॒ಯು ವರ್ಚ॑ಸೇ ॥

ಮರದಿಂದ ಮಾಡಿದ ಈ ನೌಕೆಯು(ದೋಣಿ) ನಮ್ಮನ್ನು ಈ ದೊಡ್ಡ ನದಿಯಿಂದ ಆಚೆದಡಕ್ಕೆ ನಿರ್ವಿಘ್ನವಾಗಿ ಕೊಂಡೊಯ್ಯಲಿ। ಎಲೈ ನೀರೆ(ನದಿ)ಯೇ ನೀನು ನಮ್ಮಿಂದ ಸುಲಭವಾಗಿ ದಾಟಲ್ಪಡುವಂತೆ ಆಗು। ಎಲೈ ನೌಕೆಯೇ ನಮ್ಮನ್ನು ಚೆನ್ನಾಗಿ ದಾಟಿಸುವ ನೀನು ಬಹಳಕಾಲ ಹಾಳಾಗದೇ ಇರು ಮತ್ತು ದೃಢವಾಗಿ ಕಾಂತಿಯುಕ್ತವಾಗಿ ಇರು(ಎಲೈ ನೌಕೆಯೇ, ನಮ್ಮ ದೀರ್ಘಾಯಸ್ಸಿಗೆ ಮತ್ತು ಕಾಂತಿಗೆ ಕಾರಣವಾಗು) ॥

೭೨. ಅ॒ಸ್ಯಪಾ॒ರೇ ನಿ॑ರ್ಋತ॒ಸ್ಯ ಜೀವಾ ಜ್ಯೋ॑ತಿರಶೀಮಹಿ । ವ॒ಮ್ಯಾ
ಇ॑ಂದ್ರ॒ಸ್ವಸ್ತ॑ಯೇ ॥

ಈ ನದೀ ಮುಂತಾದವುಗಳ ಆಚೆದಡವನ್ನು ನಿರ್ವಿಘ್ನವಾಗಿ ದಾಟಿದಂತಹ ನಾವು ಅಭಯವಾದಂತಹ ಸ್ಥಾನವನ್ನು ಪಡೆಯೋಣ(ಜೀವಂತವಾಗಿಯೇ ನಾವು ಆಚೆದಡವನ್ನು ಸೇರಿದಂತಹವರಾಗಿ, ಅಭಯವಾದಂತಹ ಸ್ಥಾನವನ್ನು ಹೊಂದಿದ್ದೇವೆ) । ಈ ರೀತಿಯಾದಂತಹ ನಮಗೆ ಇಂದ್ರನು ಹೆಚ್ಚಿನದಾದ ಮಂಗಳವನ್ನುಂಟುಮಾಡಲಿ ॥

ಸ್ಮಶಾನಾದಿಗಳನ್ನು ದಾಟಿದಾಗ ದಂಪತಿಗಳು ಮಾಡುವಂತಹ ಹೋಮ ಮಂತ್ರ –

೭೩. ಯದ್ರೃತೇಚಿದಭಿಶ್ರಿಷಃ ಪುರಾ ಜತೃಭ್ಯ ಆತೃದಃ । ಸಂಧಾತಾ ಸಂಧಿಂ ಮಘವಾ ಪುರೋವಸುರ್ನಿಷ್ಕರ್ತಾ ವಿಹೃತಂ ಪುನಃ ॥

ಯಾವ ಪುರುವಸುವು (ಬಹಳ ಐಶ್ವರ್ಯವುಳ್ಳ) ಆದ ಇಂದ್ರನು ಅಂಟುವಂತಹ ಜತು(ಮೇಣ.....,) ಮುಂತಾದ ದ್ರವ್ಯಗಳಿಗಿಂತ ಮೊದಲೇ ಕೂಡಿಸುವಂತಹ (ಅಂಟಿಸುವಂತಹ) ವಸ್ತುಗಳನ್ನು ಕೂಡಿಸುತ್ತಾನೆ। ಹಾಗೆಯೇ ಬೇರೆಯಾದಂತಹ ವಸ್ತುಗಳನ್ನು ಸಂಸ್ಕರಿಸುತ್ತಾನೆ(ಕೂಡಿಸಲೂ ಮತ್ತು ಬೇರೆಮಾಡಲು ಮತ್ತು ಸಂಸ್ಕರಿಸಲು ಯಾವ ಸಾಧನವನ್ನೂ ಉಪಯೋಗಿಸದೇ ಕೂಡಿಸುತ್ತಾನೆ ಅಥವಾ ಬೇರೆಮಾಡುತ್ತಾನೇ ಅಥವಾ ಸಂಸ್ಕರಿಸುತ್ತಾನೆ) । ಅಂತಹಾ ಇಂದ್ರನಿಗೆ ಈ ಹವಿಸ್ಸು ಅರ್ಪಿತವಾಗಲಿ ॥

೭೪. ಇಡಾಮಗ್ನೇ ಪುರುದಗ್ಂಸಗ್ಂ ಸನಿಂ ಗೋಶ್ಶಶ್ವತ್ತಮಗ್ಂ ಹವಮಾನಾಯ ಸಾಧ । ಸ್ಯಾನ್ನಸ್ಸೂನುಸ್ತನಯೋ ವಿಜಾವಾಗ್ನೇ ಸಾ ತೇ ಸುಮತಿರ್ಭೂತ್ವಸ್ಮೇ ॥

ಎಲೈ ಅಗ್ನಿಯೇ, ನೋಡಲು ಅತ್ಯಂತ ಮನೋಹರವಾದ, ಹೊಗಳಿಕೆಗೆ ಯೋಗ್ಯವಾದ, ಈ ಅನ್ನವನ್ನು ಮತ್ತು ಗೋದಾನ ರೂಪವಾದಂತಹ ಐಶ್ವರ್ಯವನ್ನು ನಿನ್ನನ್ನು ಕುರಿತು ಹೋಮಮಾಡುತ್ತಿರುವ ಅಥವಾ ನಿನ್ನನ್ನು ಆಹ್ವಾನಮಾಡುತ್ತಿರುವ ನನಗೆ ದೀರ್ಘಕಾಲದವರೆಗೆ ಇರುವಂತೆ ಮಾಡಿಕೊಡು । ದೃಢಕಾಯನಾದಂತಹ ಮೊಮ್ಮಕ್ಕಳನ್ನು ಮತ್ತು ಮಕ್ಕಳನ್ನು ಪ್ರಜನನ(ಹುಟ್ಟಿಸುವಂತಹ) ಸಾಮರ್ಥ್ಯವುಳ್ಳವರಾಗಿ ನನಗೆ ಕೊಡು । ಎಲೈ ಅಗ್ನಿಯೇ, ನಿನ್ನ ಭಕ್ತರ ವಿಷಯದಲ್ಲಿರುವ ಅನುಗ್ರಹ ಬುದ್ಧಿಯು ನಮ್ಮ ಮೇಲೆ ಸದಾ ಇರಲಿ ॥

೭೫. ಓಂ ಇಮಂ ಮೇ ವರುಣ ಶ್ರುಧೀ ಹವಮದ್ಯಾ ಚ ಮೃಡಯ । ತ್ವಾಮವಸ್ಯು ರಾಚಕೇ ಸ್ವಾಹಾ ॥

ಮುಂದೆ ಹೇಳಲಾಗಿದೆ ।

೭೬. ಓಂ ತತ್ತ್ವಾಯಾಮಿ ಬ್ರಹ್ಮಣಾ ವಂದಮಾನಸ್ತದಾಶಾಸ್ತೇ ಯಜಮಾನೋ ಹವಿರ್ಭಿಃ । ಅಹೇಡಮಾನೋ ವರುಣೇಹ ಬೋಧ್ಯುರುಶಗ್ಂ ಸ ಮಾನ ಆಯುಃ ಪ್ರಮೋಷೀಃ ಸ್ವಾಹಾ ॥

ಮುಂದೆ ಹೇಳಲಾಗಿದೆ ।

೭೭. ಓಂ ತ್ವನ್ನೋ ಅಗ್ನೇ ವರುಣಸ್ಯ ವಿದ್ವಾನ್ದೇವಸ್ಯ ಹೇಡೋಽವಯಾಸಿಸೀಷ್ಠಾಃ । ಯಜಿಷ್ಠೋ ವಹ್ನಿತಮಶ್ಶೋಶುಚಾನೋ ವಿಶ್ವಾದ್ವೇಷಾಗ್ಂಸಿ ಪ್ರಮುಮುಗ್ಧ್ಯಸ್ಮತ್ ಸ್ವಾಹಾ ॥

ಎಲೈ ಅಗ್ನಿಯೇ, ಎಲ್ಲವನ್ನೂ ತಿಳಿಯುವವನಾದ ನೀನು ನಮ್ಮ ಮೇಲಿರುವಂತಹ ವರುಣದೇವನ ಯಾವ ಕ್ರೋಧವಿದೆಯೋ, ಅದು ಪರಿಹಾರವಾಗುವಂತೆ(ಶಾಂತವಾಗುವಂತೆ) ನೀನು ಮಾಡು(ಕರ್ಮ ಮಾಡು) । ಅತ್ಯಂತ ಪೂಜಿಸಲ್ಪಡುವಂತಹ ಹವಿಸ್ಸನ್ನು ಹೊರುವಂತಹ ತುಂಬಾ ಕಾಂತಿಯುಳ್ಳವನಾದ ನೀನು ನಮ್ಮ ವಿಷಯದಲ್ಲಿ ಇರುವ ಶತ್ರುಗಳ ದ್ವೇಷರೂಪವಾದ ವಧೆ, ಬಂಧನಾದಿಗಳನ್ನು ನಮ್ಮಿಂದ ಬಿಡಿಸು ॥

೭೮. ಓಂ ಸತ್ವನ್ನೋ ಅಗ್ನೇಽವಮೋ ಭವೋತೀ ನೇದಿಷ್ಠೋ ಅಸ್ಯಾ ಉಷಸೋ ವ್ಯುಷ್ಟೌ । ಅವಯಕ್ಷ್ವನೋ ವರುಣಗ್ಂ ರರಾಣೋ ವೀಹಿ ಮೃಡೀಕಗ್ಂ ಸುಹವೋನ ಏಧಿ ಸ್ವಾಹಾ ॥

ಎಲೈ ಅಗ್ನಿಯೇ, ಇಂತಹಾ ಗುಣವುಳ್ಳ ನೀನು, ದೇವತೆಗಳಿಗೆ ಮೂಲನಾಗಿದ್ದೀಯೇ ।

ನಮ್ಮನ್ನು ಪಾಲನೆಮಾಡುವುದರ ಮೂಲಕ ಅತ್ಯಂತ ಹತ್ತಿರದವನಾಗು। ಈ ಉಷಃಕಾಲವು ಚೆನ್ನಾಗಿ ಪ್ರಕಟವಾದಾಗ ನಮ್ಮನ್ನು ರಕ್ಷಿಸು(ಉಷಃಕಾಲವು ಉದಾಹರಣೆಯಷ್ಟೇ, ಯಾವಾಗಲೂ ರಕ್ಷಿಸೂ ಎಂದರ್ಥ)। ಫಲವು ನಮ್ಮಕಡೆಗೆ ಬರುವಂತೆ ಮಾಡು। ನಮ್ಮ ಮೇಲೆ ಪಾಶವನ್ನು ಹಾಕಲು ಇಚ್ಛಿಸುವಂತಹ ವರುಣದೇವನನ್ನು ನಮಗೆ ಇಷ್ಟವಾದ ಸ್ವಾದಿಷ್ಟವಾದ ಸುಖವನ್ನು ಕೊಡುವ ಫಲವುಳ್ಳಂತಹ ಪುರೋಡಾಶಾದಿ ಹವಿಸ್ಸುಗಳನ್ನು ಕೊಡುವುದರ ಮೂಲಕ ನಮಗೆ ಹಿತವಾಗುವಂತೆ ಮಾಡು। ನಮ್ಮ ಒಳ್ಳೆಯ ಆಹ್ವಾನವನ್ನು ಕೇಳಿದಂತಹ ನೀನು ನಮ್ಮನ್ನು ವರ್ಧಿಸು ॥

೭೯. ಓಂ ತ್ವ॑ಮ॑ಗ್ನೇ ಅ॒ಯಾ॒ಸ್ಯ॒ಯಾ ಸ॑ನ್ಮ॒ಸಾ ಹ॒ತಃ । ಅ॒ಯಾ॒ಸನ್ ಹ॒ವ್ಯ॑ಮೂಹಿ॒ಷ್ಷೇ॑ಯಾ॑ನೋ ಧೇಹಿ ಭೇ॒ಷ॒ಜಗ್ಗ್ ಸ್ವಾ॒ಹಾ ॥

ಎಲ್ಲೆ ಅಗ್ನಿಯೇ, ಭಕ್ತರನ್ನು ಕುರಿತು ಹೋಗುವವನಾಗಿದ್ದೀಯೇ ಅಥವಾ ಭಕ್ತರು ಹೋಗಲ್ಪಡುವ ಸ್ಥಾನವಾಗಿದ್ದೀಯೇ। ಈ ಸ್ವಭಾವದವನಾದ ನೀನು ನಮ್ಮಿಂದ ಮನಸ್ಸಿನಲ್ಲಿ ಯಾವಾಗಲೂ ಸ್ಮರಿಸಲ್ಪಡುವವನಾಗಿದ್ದೀಯೇ । ಗತಿಶೀಲನಾದ ನೀನು ನಾವುಕೊಟ್ಟ ಹವಿಸ್ಸುಗಳನ್ನು ದೇವತೆಗಳಿಗೆ ಕೊಂಡೊಯ್ಯುವವನಾಗು । ಅಂತಹಾ ನೀನು ನಮಗೆ ಕರ್ಮವೇ ಮೊದಲಾದ ಸಮಸ್ತ ದುಃಖಗಳಿಗೆ ಪರಿಹಾರವನ್ನು ಕೊಡುವವನಾಗು(ವೈದ್ಯನಾಗು) ॥

೮೦. ಓಂ ಯೋ ಗ॑ಂಧ॒ರ್ವಾ ಅ॑ಪ್ಸ॒ರಸ॑ಶ್ಚ ದೇ॒ವೀ॒ರೇ॒ಷು ವ್ಯ॒ಕ್ಷೇ॑ಷು ವಾನ॒ಸ್ಪ॒ತ್ಯೇ॒ಷ್ವಾ॑ಸ॒ತೇ । ಶಿ॒ವಾಸ್ತೇ॑ ಅ॒ಸ್ಯೈ ವ॒ಧ್ವೈ॑ ಭ॒ವಂ॒ತು॒ ಮಾ ಹಿ॑ಗ್ಂಸಿಷುರ್ವ॒ಹತು॒ ಮೂಹ್ಯ॑ಮಾನಾಮ್ ॥

ಯಾವ ವಿಶ್ವಾವಸು ಮುಂತಾದ ಗಂಧರ್ವರು ಮತ್ತು ಅಪ್ಸರಸ್ತ್ರೀ ದೇವತೆಗಳು ಯಾವ ನ್ಯಗ್ರೋಧ(ಆಲ), ಔದುಂಬರ(ಅತ್ತಿ), ಅಶ್ವತ್ಥ(ಅರಳಿ) ಈ ವನಸ್ಪತಿ(ಯಜ್ಞೀಯ) ಮರಗಳಲ್ಲಿ ವಾಸಿಸುತ್ತಾರೋ, ಅಂತಹಾ ಗಂಧರ್ವ ಅಪ್ಸರ ದೇವತೆಗಳು ಮತ್ತು ಆ ನ್ಯಗ್ರೋಧಾದಿ ಮರಗಳು ಈ ವಧುವಿಗೆ ಹಿಂಸೆಯನ್ನು ಕೊಡದೇ ಇವಳು ಕೊಂಡೊಯ್ಯುತ್ತಿರುವ ಸ್ತ್ರೀಧನವನ್ನು ಕಾಪಾಡುವುದರ ಮೂಲಕ, ಇವಳಿಗೆ ಮಂಗಳವನ್ನು ಉಂಟುಮಾಡಲಿ ॥

೮೧. ಓಂ ಯಾ ಓಷಧ᳖ಯೋ ಯಾ ನ᳖ದ್ಯೋ ಯಾನಿ ಧ᳖ನ್ವಾನಿ ಯೋ ವ᳖ನಾ । ತೇ ᳖ತ್ವಾ ವಧು ಪ್ರಜಾವ᳖ತೀಂ ಪ್ರತ್ವೇ ᳖ಮುಂಚಂತ್ವಗ್ಂಹಸಃ ॥

ಯಾವ ಓಷಧಿಗಳು ನಮ್ಮಿಂದ ದಾಟಲ್ಪಟ್ಟಿವೆಯೋ, ಮತ್ತು ಯಾವ ನದಿಗಳು ಮತ್ತು ಯಾವ ನೀರಿಲ್ಲದ ಊಷರ(ಬರಡು/ಬಂಜರ) ಪ್ರದೇಶಗಳು ಮತ್ತು ಯಾವ ಕಾಡುಗಳು ನಮ್ಮಿಂದ ದಾಟಲ್ಪಟ್ಟಿವೆಯೋ, ಅವೆಲ್ಲವೂ ಅವುಗಳ ಅಧಿದೇವತೆಗಳೊಡನೆ ಎಲೈ ವಧುವೇ, ನಿನ್ನನ್ನು ಪಾಪಗಳಿಂದ ಬಿಡುಗಡೆಗೊಳಿಸಿ, ಪ್ರಜೆಯುಳ್ಳವಳನ್ನಾಗಿ ಮಾಡಲಿ ॥

ವಧುವಿಗೆ ವರನು ತನ್ನ ಮನೆಯನ್ನು ತೋರಿಸುವ ಮಂತ್ರ –

೮೨. ಓಂ ಸಂ ᳖ಕಾಶಯಾಮಿ ವ᳖ಹತುಂ ಬ್ರ᳖ಹ್ಮಣಾ ಗೃಹ್ಯೈರಘೋರೇ᳖ಣ ಚ᳖ಕ್ಷುಷಾ ᳖ಮೈತ್ರೇಣ । ᳖ಪರ್ಯಾ᳖ಣದ್ಧಂ ವಿಶ್ವ᳖ರೂ᳖ಪಂ ಯ᳖ದಸ್ಯಾಗ್ಂ ᳖ಸ್ಯೋನಂ ಪ᳖ತಿಭ್ಯಃ ಸ᳖ವಿತಾ ᳖ಕೃಣೋ᳖ತು ತತ್ ॥

ಈ ಮಂತ್ರದ ಲಿಂಗದಿಂದ ಮೊದಲು, ಹೊರುವವರನ್ನು ಮನೆಯ ಒಳಕ್ಕೆ ಕಳುಹಿಸಬೇಕು । ಮತ್ತು ಸ್ತ್ರೀಧನವನ್ನು ವರನ ಮನೆಯೊಳಗೆ ಇಡಬೇಕು । ಇವಳ ತಂದೆಯ ಕುಲದಿಂದ ತಂದಂತಹ ಹಣವನ್ನು ನನ್ನ ಮನೆಯೊಳಗೆ ಇಟ್ಟು ಮನೆಯನ್ನೂ ಮತ್ತು ಇವಳ ಸ್ತ್ರೀಧನವನ್ನೂ ಮಂತ್ರಪೂರ್ವಕವಾಗಿ ತೋರಿಸುತ್ತಿದ್ದೇನೆ । ಅಘೋರವಾದಂತಹ(ಕ್ರೂರವಲ್ಲದ), ಸ್ನೇಹಪೂರ್ವಕವಾದ, ಸೌಮ್ಯವಾದ ನೋಟದಿಂದ ಇವಳು ಅದನ್ನು ನೋಡಲಿ । ಹಾಗಾಗಿ ಅದನ್ನು (ಮನೆ, ಸ್ತ್ರೀಧನ) ಇವಳಿಗೆ ತೋರಿಸುತ್ತಿದ್ದೇನೆ । ಎಲ್ಲಾ ಬಂಧುಗಳಿಂದ, ಎಲ್ಲ ರೀತಿಯಿಂದಲೂ ಕೂಡಿರುವ ಮತ್ತು ನಾನಾರೂಪವಾದ ಆಭರಣಗಳಿಂದ ಕೂಡಿದ, ಇವಳು ಪತಿಯಾದ ನನಗೆ ಮತ್ತು ನನ್ನ ಸಹೋದರರು ಮೊದಲಾದವರಿಗೆ ಸುಖವನ್ನು(ಅನ್ಯೋನ್ಯತೆ/ಆತ್ಮೀಯತೆ) ಉಂಟುಮಾಡುವಂತೆ ಸವಿತೃದೇವನು ಮಾಡಲಿ (ಅವಳ ಆಭರಣಾದಿ ಎಲ್ಲಾ ಐಶ್ವರ್ಯಗಳೂ ನನ್ನದೇ ಎಂಬ ಭಾವನೆಯಿಲ್ಲದಂತೆ, ಪತಿ ಮತ್ತು ಅವನ ಮನೆಯವರಿಗೆ ಸುಖವನ್ನುಂಟುಮಾಡಲಿ) ॥

ಆಖ. ಓಂ ಆ ವಾಮಗನ್ ಸುಮತಿರ್ವಾಜಿನೀ ವಸೂನ್ಯಶ್ವಿನಾ ಹೃತ್ಸು
ಕಾಮಾಗ್ಂ ಅಯಗ್ಂ ಸತ । ಅಭೂತಂ ಗೋಪಾ ಮಿಥುನಾ ಶುಭಸ್ಪತೀ
ಪ್ರಿಯಾ ಅರ್ಯಮ್ಣೋ ದುರ್ಯಾಗ್ಂ ಅಶೀಮಹಿ ॥

ಎಲೈ ಅಶ್ವಿನೀದೇವತೆಗಳೇ, ನಿಮ್ಮದಾದ ಅನುಗ್ರಹ ಬುದ್ಧಿಯು ಅಥವಾ ಒಳ್ಳೆಯ ಮನಸ್ಸು ನಮಗೆ ಬಂದು ಸೇರಿದೆ । ಹವಿಸ್ಸಿನಿಂದ ಮತ್ತು ಸ್ತೋತ್ರಗಳಿಂದ ಐಶ್ವರ್ಯವಂತರಾದ ಅಶ್ವಿನೀದೇವತೆಗಳೇ, ನಮ್ಮ ಹೃದಯದಲ್ಲಿದ್ದ ಯಾವ, ಸುಖವಾಗಿ ಮನೆಯನ್ನು ಸೇರುವ ಎಂಬ ಆಸೆಯು ನಿಶ್ಚಿತವಾಗಿ ಈಡೇರಿದೆ, ಏಕೆಂದರೆ– ನೀವಿಬ್ಬರೂ ಮಾರ್ಗದಲ್ಲಿ ನಮಗೆ ರಕ್ಷಕರಾಗಿದ್ದಿರಿ । ಜೊತೆಯಲ್ಲಿರುವವರಾದ, ಅನ್ನ ಅಥವಾ ನೀರಿಗೆ ಒಡೆಯರಾದ ನಿಮ್ಮಿಬ್ಬರ(ಅಶ್ವಿನೀದೇವತೆಗಳ) ಪ್ರಸಾದದಿಂದ(ಅನುಗ್ರಹ) ಸೂರ್ಯನಿಗೆ ಅಥವಾ ಅಗ್ನಿಗೆ ಪ್ರಿಯರಾಗಿ ನಾವು ಈ ಮನೆಯನ್ನು ಪ್ರವೇಶಮಾಡುತ್ತಿದ್ದೇವೆ ॥

ಆಳ. ಓಂ ಅಯಂ ನೋ ದೇವಸ್ಸವಿತಾ ಬೃಹಸ್ಪತಿರಿಂದ್ರಾಗ್ನೀ ಮಿತ್ರಾವರುಣಾ
ಸ್ವಸ್ತಯೇ । ತ್ವಷ್ಟಾ ವಿಷ್ಣುಃ ಪ್ರಜಯಾ ಸಗ್ಂರರಾಣಃ ಕಾಮ ಆಯಾತಂ
ಕಾಮಾಯು ತ್ವಾ ವಿಮುಂಚತು ॥

ಎಲೈ ಎತ್ತು (ವಾಹನಗಳೇ)ಗಳೇ, ನಮ್ಮ ಕಾಮನೆಯು ಈಡೇರಲಾಗಿ ನಿಮ್ಮ ಇಚ್ಛೆಗೆ ತಕ್ಕಂತೆ ಓಡಾಡಲು ನಿಮ್ಮ ಬಂಧನವನ್ನು ಕಳಚುತ್ತಿದ್ದೇನೆ । ಈ ದೇವನಾದ ಸವಿತೃವು ಮತ್ತು ಬೃಹಸ್ಪತೀ.ಮುಂತಾದ ದೇವತೆಗಳು ನಿಮ್ಮನ್ನು ಪ್ರಜೆಗಳೊಡನೆ ಆನಂದವಾಗಿರುವಂತೆ ತಾವೂ(ಆ ದೇವತೆಗಳೂ) ಪ್ರಜೆಗಳಜೊತೆ ಕ್ರೀಡಿಸುತ್ತಾ, ಈ ಬಂಧನದಿಂದ ನಿಮ್ಮನ್ನು ಬಿಡುಗಡೆಗೊಳಿಸಲಿ ॥

ವಧೂವರರಿಗಾಗಿ ಮನೆಯಲ್ಲಿ ಚರ್ಮದ ಆಸನವನ್ನು ಇಡುವಾಗ ಹೇಳುವ ಮಂತ್ರ –

ಆಱ. ಓಂ ಶರ್ಮವರ್ಮೋದವಾಹರಾಸ್ಯೈ ನಾರ್ಯಾ ಉಪಸ್ತಿರೇ ।
ಸಿನೀವಾಲಿ ಪ್ರಜಾಯತಾಮಿಯಂ ಭಗಸ್ಯ ಸುಮತಾ ಅಸತ್ ॥

ಸುಖವನ್ನು ಮತ್ತು ಶರೀರಕ್ಕೆ ಶಕ್ತಿಯನ್ನು ಕೊಡುವಂತಹ ಈ ಚರ್ಮಾಸನವನ್ನು ಈ ವಧುವು ಕುಳಿತುಕೊಳ್ಳುವುದಕ್ಕಾಗಿ ತೆಗೆದುಕೊಂಡು ಬಾ। ಎಲೈ ಸಿನೀವಾಲೀ ದೇವತೆಯೇ, ಈ ವಧುವು ಪ್ರಜಾವಂತಳಾಗಲಿ ಮತ್ತು ಸವಿತೃದೇವನ(ಭಗದೇವನ) ಅನುಗ್ರಹ ಬುದ್ಧಿಗೆ ಪಾತ್ರಳಾಗಲಿ ॥

ವಧುವು ಮನೆಯನ್ನು ಪ್ರವೇಶಿಸುವಾಗಿನ ಮಂತ್ರ –

ಆಓ. ಓಂ ಗೃಹಾನ್ ಭದ್ರಾನ್ಥ್ಸುಮನಸ್ಸಃ ಪ್ರಪದ್ಯೇऽವೀರಘ್ನೀ ವೀರವತಸ್ಸುವೀರಾನ್ । ಇರಾಂ ವಹತೋ ಘೃತಮುಕ್ಷಮಾಣಾಸ್ತೇಷ್ವಹಗ್ಂ ಸುಮನಾಸ್ಸಂವಿಶಾಮಿ ॥

ಮನೋಜ್ಞರಾದ ಒಳ್ಳೆಯ ಮನಸ್ಸಿನಿಂದ ಕೂಡಿದ, ಈ ಮನೆಯನ್ನು ನಾನು ಪ್ರವೇಶಿಸುತ್ತಿದ್ದೇನೆ। ನನ್ನನ್ನು ಕಂಡು ಈ ಮನೆಯವರೆಲ್ಲರೂ ಒಳ್ಳೆಯ ಮನಸ್ಸಿನಿಂದ ಕೂಡಿದವರಾಗಲಿ । ಮತ್ತು ಅತ್ಯಂತ ಪರಾಕ್ರಮಶಾಲಿಗಳಾದ ಬೇರೆಯವರಿಂದ ಸೋಲಲ್ಪಡದ ಮಕ್ಕಳಿಂದಲೂ ಮೈದುನ ಮುಂತಾದವರಿಂದಲೂ ಮತ್ತು ಒಳ್ಳೆಯ ರಕ್ಷಕ ಪುರುಷರಿಂದಲೂ ಕೂಡಿರುವಂತಹ ಮತ್ತು ಅನ್ನಸಮೃದ್ಧಿಯಿಂದ ಕೂಡಿದ ನಿತ್ಯವೂ ಬ್ರಾಹ್ಮಣರಿಗೆ ಘೃತಯುಕ್ತವಾದ ಅನ್ನದಾನವನ್ನು ಮಾಡಲ್ಪಡುತ್ತಿರುವಂತಹ ಮನೆಗೆ ಒಳ್ಳೆಯ ಮನಸ್ಸಿನಿಂದ ಪ್ರವೇಶಿಸುತ್ತಿದ್ದೇನೆ ॥

ವಧುವಿನೊಂದಿಗೆ ವರನು ತನ್ನ ಮನೆಯನ್ನು ಪ್ರವೇಶಿಸಿದಾಗ ಮಾಡುವ ೧೩ ಮಂತ್ರಗಳ ಹೋಮ (ಪ್ರವಿಶ್ಯಹೋಮ) –

ಆಏ. ಓಂ ಆಗನ್ ಗೋಷ್ಠಂ ಮಹಿಷೀ ಗೋಭಿರಶ್ವೈರಾಯುಷ್ಮತ್ಪತ್ನೀ ಪ್ರಜಯಾ ಸ್ವರ್ವಿತ್ । ಬಹ್ವೀಂ ಪ್ರಜಾಂ ಜನಯಂತೀ ಸುರತ್ನೇಮಮಗ್ನಿಗ್ಂ ಶತಹಿಮಾಸ್ಸಪರ್ಯಾತ್ ॥

ನನ್ನ ಮನೆಗೆ ರಾಣಿಯಂತೆ ಅತ್ಯಂತ ಪ್ರೀತಿಪಾತ್ರಳೂ ಆದ ನನ್ನ ಹೆಂಡತಿಯು, ತಂದೆಯ

ಮನೆಯಿಂದ ಕೊಡಲ್ಪಟ್ಟಂತಹ ಹಸು, ಕುದುರೆ ಮುಂತಾದ ಐಶ್ವರ್ಯದಿಂದ ಕೂಡಿದವರಾಗಿ, ನೂರುವರ್ಷ ಆಯುಷ್ಮಂತನಾದ ಪತಿಯುಳ್ಳವಳಾಗಿ ಪ್ರಜೆಗಳನ್ನು ಪಡೆದುಕೊಂಡು, ಅದರ ಮೂಲಕ ಸ್ವರ್ಗವನ್ನು ಜಯಿಸಿದವಳಾಗಿ, ಬಹುಪುತ್ರರನ್ನೂ, ಶ್ರೇಷ್ಠವಾದ ಐಶ್ವರ್ಯವನ್ನೂ ಹೊಂದಿದವಳಾಗಿ, ಈ ಔಪಾಸನಾಗ್ನಿಯನ್ನು ನೂರುವರ್ಷಗಳಕಾಲ ಆರಾಧಿಸುವಂತಾಗಲಿ ॥

೮೮. ಓಂ ಅಯಮಗ್ನಿರ್ಗೃಹಪತಿಸ್ಸಸ್ಗಂ ಸತ್ಪುಷ್ಟಿವರ್ಧನಃ ।
ಯಥಾಭಗಸ್ಯಾಭ್ಯಾಂ ದದದ್ರಯಿಂ ಪುಷ್ಟಿಮಥೋ ಪ್ರಜಾಮ್ ॥

ಈ ಔಪಾಸನಾಗ್ನಿಯು ನನ್ನ ಮನೆಯನ್ನು ಕಾಪಾಡುತ್ತಿದೆ । ಮತ್ತು ನನ್ನ ಅನ್ನಾದಿ ಸಮೃದ್ಧಿಯನ್ನೂ ಕೂಡ ಹೆಚ್ಚಿಸುವುದಾಗಿದೆ ಮತ್ತು ಐಶ್ವರ್ಯವನ್ನೂ ಸಮೃದ್ಧಿಗೊಳಿಸುವುದೂ ಆಗಿದೆ । ಇಂತಹ ಈ ಅಗ್ನಿದೇವನು ನಮ್ಮಿಬ್ಬರಿಗೆ ಸುವರ್ಣಾದಿ ಐಶ್ವರ್ಯವನ್ನೂ ಧನ, ಪುಷ್ಟಿ, ಮತ್ತು ಪ್ರಜೆಗಳನ್ನು ಹೇಗೆ ಭಗದೇವನಿಗೆ ಕೊಟ್ಟನೋ(ಭಗದೇವ ಉಪಲಕ್ಷಣವಾಗಿ ಹೇಗೆ ದೇವತೆಗಳಿಗೆ ಐಶ್ವರ್ಯಾದಿಗಳನ್ನು ಕೊಡುವವನಾಗಿದ್ದಾನೋ, ಏಕೆಂದರೆ ದೇವತೆಗಳಿಗೂ ಕೂಡ ಮನುಷ್ಯರು ಮಾಡುವ ಶಾಸ್ತ್ರೀಯಕರ್ಮಗಳಿಂದಲೇ ಸಮೃದ್ಧಿಯು) ಹಾಗೆ, ಕೊಡಲಿ ॥

೮೯. ಓಂ ಪ್ರಜಾಯಾ ಅಭ್ಯಾಂ ಪ್ರಜಾಪತ ಇಂದ್ರಾಗ್ನೀ ಶರ್ಮಯಚ್ಛತಮ್ ।
ಯುಷ್ಮನ್ಯೋರ್ನ ಪ್ರಮೀಯಾತಾ ಉಭಯೋರ್ಜೀವತೋಃ ಪ್ರಜಾಃ ॥

ಎಲೈ ಪ್ರಜಾಪತಿರೂಪನಾದ ಅಗ್ನಿಯೇ, ನಮಿಬ್ಬರ ಯಾವಪ್ರಜೆಗಳು ಮುಂದೆ ಜನಿಸುತ್ತಾರೋ ಅವರಿಗೆ ಸುಖವನ್ನುಂಟುಮಾಡು । ಎಲೈ ಇಂದ್ರಾಗ್ನಿದೇವತೆಗಳೇ, ನಾವಿಬ್ಬರು ಜೀವಿಸಿದ್ದಾಗ ನಮ್ಮ ಮಕ್ಕಳು ಮರಣವನ್ನು ಹೊಂದದಂತೆ ಮಾಡಿ ನಮಗೆ ಸುಖವನ್ನು ಕೊಡುವವರಾಗಿ ॥

೯೦. ತೇನಭೂತೇನ ಹವಿಷಾಽಯಮಾಪ್ಯಾಯತಾಂ ಪುನಃ । ಜಾಯಾಂ
ಯಾವಸ್ಮಾ ಆವಾಕ್ಷಸ್ತಾಗ್ಂ ರಸೇನಾಭಿವರ್ಧತಾಮ್ ॥

ನಾನು ಏನು ಹೋಮ ಮಾಡುತ್ತಿದ್ದೇನೋ ಆ ಹವಿಸ್ಸನ್ನು ಪಡೆದುಕೊಂಡಂತಹ ಈ ಅಗ್ನಿದೇವನು ಚೆನ್ನಾಗಿ ತೃಪ್ತಿಹೊಂದಲಿ । ಮತ್ತು ಈ ಅಗ್ನಿದೇವನು ನನಗೆ ಯಾವ ಈ

ವಧುವನ್ನು ಕೊಟ್ಟಿದ್ದಾರೋ ಆ ವಧುವನ್ನು ತುಪ್ಪ ಮುಂತಾದ ರಸಯುಕ್ತವಾದ ಅನ್ನದಿಂದ ಚೆನ್ನಾಗಿ ಅಭಿವೃದ್ಧಿಗೊಳಿಸಲಿ ॥

೯೧. ಅಭಿ ವರ್ಧತಾಂ ಪಯಸಾಽಭಿ ರಾಷ್ಟ್ರೇಣ ವರ್ಧತಾಮ್ । ರಯ್ಯಾ ಸಹಸ್ರ ಪೋಷಸೇ ಮೌ ಸ್ತಾ ಮನ ಪೇಕ್ಷಿತೌ ॥

ಹಾಗೆಯೇ ಈ ವಧುವನ್ನು ಹಾಲು ಮುಂತಾದವುಗಳಿಂದಲೂ ಮತ್ತು ಮನೆ, ಹೊಲ ಮುಂತಾದವುಗಳಿಂದ ಸಮೃದ್ಧಿಗೊಳಿಸಲಿ । ಹಾಗೆಯೇ ತುಂಬಾಜನರನ್ನು ಪೋಷಿಸಲು ಸಾಮರ್ಥ್ಯವನ್ನು ಕೊಡುವ ಹಣದಿಂದಲೂ ಮತ್ತು ಈ ದಂಪತಿಗಳು ಬೇರೆಯವರ ಅಪೇಕ್ಷೆಯಿಲ್ಲದೇ(ಸಹಾಯವಿಲ್ಲದೆ) ಜೀವನ ನಡೆಸುವ ಸಾಮರ್ಥ್ಯವನ್ನು ಕೊಡುವ ಹಣದಿಂದಲೂ ಸಮೃದ್ಧಿಗೊಳಿಸಲಿ ॥

೯೨. ಇಹೈವಸ್ತಂ ಮಾ ವಿಯೌಷ್ಟಂ ವಿಶ್ವಮಾಯುರ್ವ್ಯಶ್ನುತಂ । ಮಹ್ಯಾ ಇಂದ್ರಸ್ವಸ್ತಯೇ ॥

ನಮ್ಮಿಬ್ಬರ ಅಂತರಾತ್ಮವು ಈ ಮನೆಯಲ್ಲಿಯೇ ಪರಸ್ಪರ ಇರಲಿ । ಈ ಮನೆಯನ್ನು ಬಿಟ್ಟು ಯಾವಾಗಲೂ ಕೂಡ ಬೇರೆಬೇರೆಯಾಗಿ ಹೋಗುವುದು ಬೇಡ । ವಿಶಾಲವಾದಂತಹ, ಶ್ರುತ್ಯುಕ್ತವಾದ ಆಯಸ್ಸನ್ನು ನಾವು ಪಡೆಯುವಂತಾಗಲಿ । ನಮ್ಮಿಬ್ಬರಿಗೆ ಇಂದ್ರನು ಹೆಚ್ಚಿನದಾದ ಮಂಗಳವನ್ನುಂಟುಮಾಡಲಿ ॥

೯೩. ಧ್ರುವೈಧಿ ಪೋಷ್ಯಾ ಮಯಿ ಮಹ್ಯಂ ತ್ವಾದಾದ್ಬೃಹಸ್ಪತಿಃ । ಮಯಾ ಪತ್ಯಾ ಪ್ರಜಾವತೀ ಸಂಜೀವ ಶರದಶ್ಶತಮ್ ॥

ಎಲೈ ವಧುವೇ, ನನ್ನನ್ನು ಪೋಷಿಸುವವಳಾಗಿ ನನ್ನಲ್ಲಿಯೇ ಸ್ಥಿರವಾದ ಮನಸ್ಸುಳ್ಳವಳಾಗಿರುವಂತೆ ಆಗು । ಬೃಹಸ್ಪತಿದೇವನು ನಿನ್ನನ್ನು ನನಗೆ ಕೊಟ್ಟಿದ್ದಾನೆ । ಅಂತಹ ನೀನು ಪತಿಯಾದ ನನ್ನಜೊತೆ ಮಕ್ಕಳುಳ್ಳವಳಾಗಿ ನೂರುವರ್ಷ ಬಾಳು ॥

೯೪. ತ್ವಷ್ಟಾಜಾಯಮಜನಯತ್ತ್ವಷ್ಟಾಸ್ಯೈ ತ್ವಾಂ ಪತಿಮ್ । ತ್ವಷ್ಟಾ ಸಹಸ್ರ ಮಾಯೂಗ್ಂಷಿ ದೀರ್ಘಮಾಯುಃ ಕೃಣೋತುವಾವಮ್ !!

ಆ ತ್ವಷ್ಟೃದೇವನು ಈ ನನ್ನ ಹೆಂಡತಿಯನ್ನು ಸೃಷ್ಟಿಮಾಡಿದ್ದಾನೆ । ಹಾಗೆಯೇ ಇವಳ ಪತಿಯಾದ ನನ್ನನ್ನೂ ಕೂಡ ಸೃಷ್ಟಿಮಾಡಿದ್ದಾನೆ । ಎಲೈ ನನ್ನ ಅಂತರಾತ್ಮವೇ ಆ ತ್ವಷ್ಟೃದೇವನೇ, ನಮ್ಮಿಬ್ಬರ ನೂರುವರ್ಷಗಳ ಆಯಸ್ಸನ್ನು ಮತ್ತು ಬಹುವಿಧವಾದ ಅನ್ನವನ್ನೂ ಕೊಡಲಿ ॥

೯೫. ಇಮಂ ಮೇ ವರುಣ ಶ್ರುಧೀ ಹವಮದ್ಯಾ ಚ ಮೃಡಯ । ತ್ವಾಮವಸ್ಯು ರಾಚಕೇ ॥

ಹಿಂದೆ ಹೇಳಲಾಗಿದೆ ।

೯೬. ತತ್ವಾಯಾಮಿ ಬ್ರಹ್ಮಣಾ ವಂದಮಾನಸ್ತದಾಶಾಸ್ತೇ ಯಜಮಾನೋ ಹವಿರ್ಭಿಃ । ಅಹೇಡಮಾನೋ ವರುಣೇಹ ಬೋಧ್ಯುರುಶಗ್ಂ ಸ ಮಾನ ಆಯುಃ ಪ್ರಮೋಷೀಃ ॥

ಹಿಂದೆ ಹೇಳಲಾಗಿದೆ ।

೯೭. ತ್ವನ್ನೋ ಅಗ್ನೇ ವರುಣಸ್ಯ ವಿದ್ವಾನ್ದೇವಸ್ಯ ಹೇಡೋಽವಯಾಸಿಸೀಷ್ಠಾಃ। ಯಜಿಷ್ಠೋ ವಹ್ನಿತಮಶೋಶುಚಾನೋ ವಿಶ್ವಾದ್ವೇಷಾಗ್ಂಸಿ ಪ್ರಮುಮುಗ್ಧ್ಯಸ್ಮತ್ ॥

ಎಲೈ ಅಗ್ನಿಯೇ, ಎಲ್ಲವನ್ನೂ ತಿಳಿಯುವವನಾದ ನೀನು ನಮ್ಮ ಮೇಲಿರುವಂತಹ ವರುಣದೇವನ ಯಾವ ಕ್ರೋಧವಿದೆಯೋ, ಅದು ಪರಿಹಾರವಾಗುವಂತೆ(ಶಾಂತವಾಗುವಂತೆ)

ನೀನು ಮಾಡು(ಕರ್ಮ ಮಾಡು)। ಅತ್ಯಂತ ಪೂಜಿಸಲ್ಪಡುವಂತಹ ಹವಿಸ್ಸನ್ನು ಹೊರುವಂತಹ ತುಂಬಾ ಕಾಂತಿಯುಳ್ಳವನಾದ ನೀನು ನಮ್ಮ. ವಿಷಯದಲ್ಲಿ ಇರುವ ಶತ್ರುಗಳ ದ್ವೇಷರೂಪವಾದ ವಧೆ, ಬಂಧನಾದಿಗಳನ್ನು ನಮ್ಮಿಂದ ಬಿಡಿಸು ॥

೯೮. ಸತ್ವನ್ನೋ ಅಗ್ನೇsವಮೋ ಭವೋತೀ ನೇದಿಷ್ಠೋ ಅಸ್ಯಾ ಉಷಸೋ ವ್ಯುಷ್ಟೌ । ಅವಯಕ್ಷ್ವನೋ ವರುಣಗ್ಂ ರರಾಣೋ ವೀಹಿ ಮೃಡೀಕಗ್ಂ ಸುಹವೋನ ಏಧಿ ॥

ಎಲೈ ಅಗ್ನಿಯೇ, ಇಂತಹಾ ಗುಣವುಳ್ಳ ನೀನು, ದೇವತೆಗಳಿಗೆ ಮೂಲನಾಗಿದ್ದೀಯೇ । ನಮ್ಮನ್ನು ಪಾಲನೆಮಾಡುವುದರ ಮೂಲಕ ಅತ್ಯಂತ ಹತ್ತಿರದವನಾಗು । ಈ ಉಷಃಕಾಲವು ಚೆನ್ನಾಗಿ ಪ್ರಕಟವಾದಾಗ ನಮ್ಮನ್ನು ರಕ್ಷಿಸು(ಉಷಃಕಾಲವು ಉದಾಹರಣೆಯಷ್ಟೇ, ಯಾವಾಗಲೂ ರಕ್ಷಿಸೂ ಎಂದರ್ಥ)। ಫಲವು ನಮ್ಮಕಡೆಗೆ ಬರುವಂತೆ ಮಾಡು । ನಮ್ಮ ಮೇಲೆ ಪಾಶವನ್ನು ಹಾಕಲು ಇಚ್ಛಿಸುವಂತಹ ವರುಣದೇವನನ್ನು ನಮಗೆ ಇಷ್ಟವಾದ ಸ್ವಾದಿಷ್ಟವಾದ ಸುಖವನ್ನು ಕೊಡುವ ಫಲವುಳ್ಳಂತಹ ಪುರೋಡಾಶಾದಿ ಹವಿಸ್ಸುಗಳನ್ನು ಕೊಡುವುದರ ಮೂಲಕ ನಮಗೆ ಹಿತವಾಗುವಂತೆ ಮಾಡು । ನಮ್ಮ ಒಳ್ಳೆಯ ಆಹ್ವಾನವನ್ನು ಕೇಳಿದಂತಹ ನೀನು ನಮ್ಮನ್ನು ವರ್ಧಿಸು ॥

೯೯. ತ್ವಮಗ್ನೇ ಅಯಾಸ್ಯಯಾ ಸನ್ಮನಸಾ ಹಿತಃ । ಅಯಾಸನ್ ಹವ್ಯಮೂಹಿಷೇಯಾನೋ ಧೇಹಿ ಭೇಷಜಮ್ ॥

ಎಲೈ ಅಗ್ನಿಯೇ, ಭಕ್ತರನ್ನು ಕುರಿತು ಹೋಗುವವನಾಗಿದ್ದೀಯೇ ಅಥವಾ ಭಕ್ತರು ಹೋಗಲ್ಪಡುವ ಸ್ಥಾನವಾಗಿದ್ದೀಯೇ । ಈ ಸ್ವಭಾವದವನಾದ ನೀನು ನಮ್ಮಿಂದ ಮನಸ್ಸಿನಲ್ಲಿ ಯಾವಾಗಲೂ ಸ್ಮರಿಸಲ್ಪಡುವವನಾಗಿದ್ದೀಯೇ । ಗತಿಶೀಲನಾದ ನೀನು ನಾವುಕೊಟ್ಟ ಹವಿಸ್ಸುಗಳನ್ನು ದೇವತೆಗಳಿಗೆ ಕೊಂಡೊಯ್ಯುವವನಾಗು । ಅಂತಹಾ ನೀನು ನಮಗೆ ಕರ್ಮವೇ ಮೊದಲಾದ ಸಮಸ್ತ ದುಃಖಗಳಿಗೆ ಪರಿಹಾರವನ್ನು ಕೊಡುವವನಾಗು (ವೈದ್ಯನಾಗು) ॥

೧೦೦. ಓಂ ಇಹಗಾವಃ ಪ್ರಜಾಯಧ್ವ ಮಿಹಾಶ್ವಾ ಇಹ ಪೂರುಷಾಃ ।
ಇಹೋ ಸಹಸ್ರ ದಕ್ಷಿಣೋ ರಾಯಸ್ಪೋಷೋ ನಿಷೀದತು ॥

ಈ ಮನೆಯಲ್ಲಿ ಎಲ್ಲೆ ಗೋವುಗಳಿರಿ, ಪ್ರಜೆಗಳುಳ್ಳವರಾಗಿ ಸಮೃದ್ಧಿಹೊಂದಿರಿ ಹಾಗೆಯೇ ಕುದುರೆ, ಮನುಷ್ಯರೂ ಕೂಡ ಸಮೃದ್ಧರಾಗಲಿ । ಈ ಮನೆಯಲ್ಲಿಯೇ ಬಹುದಾನಕ್ಕೆ ಯೋಗ್ಯವಾದ ಧನ(ಐಶ್ವರ್ಯ)ಸಂಪತ್ತಿಯು ಇರಲಿ ॥

ಗಂಡುಮಗುವನ್ನು ವಧುವು ತನ್ನ ತೊಡೆಯು ಮೇಲೆ ಕೂರಿಸಿಕೊಂಡು ಹೇಳುವ ಮಂತ್ರ –

೧೦೧. ಓಂ ಸೋಮೇನಾದಿತ್ಯಾ ಬಲಿನಸ್ಸೋಮೇನ ಪೃಥಿವೀ ದೃಢಾ ।
ಅಥೋ ನಕ್ಷತ್ರಾಣಾಮೇಷಾಮುಪಸ್ಥೇ ಸೋಮ ಆಹಿತಃ ॥

ಆದಿತ್ಯದೇವತೆಗಳು, ಸೋಮದೇವತೆಯಿಂದ ಬಲವುಳ್ಳವರಾಗಿದ್ದಾರೆ । ಹಾಗೆಯೇ ಔಷಧಿವನಸ್ಪತಿಗಳ ವೃದ್ಧಿಗೆ ಯಜ್ಞವು ಕಾರಣ । ಈ ಪೃಥಿವಿಯು ಓಷಧಿವನಸ್ಪತಿಗಳ ರೂಪದಲ್ಲಿರುವ ಸೋಮದೇವತೆಯಿಂದ ದೃಢವಾಗಿದೆ । ಹೇಗೆ, ನಕ್ಷತ್ರಗಳ ಮಧ್ಯೆ ಈ ಸೋಮನು ಇಡಲ್ಪಟ್ಟಿದ್ದಾನೋ, ಹಾಗೆ ಈ ಬಾಲಕನು ನಿನ್ನ ತೊಡೆಯಮೇಲೆ ಕುಳಿತುಕೊಳ್ಳಲಿ(ಯಾವಾಗಲೂ ನಮಗೆ ಮಕ್ಕಳ ಸಮೃದ್ಧಿಯಾಗಲಿ ಎಂಬುದು ಇದರ ಉದ್ದೇಶ(ಅರ್ಥ) ॥

ಆ ಮಗುವಿಗೆ ಹಣ್ಣು ಕೊಡುವಾಗ ಹೇಳುವ ಮಂತ್ರ –

೧೦೨. ಓಂ ಪ್ರಸ್ವಸ್ಥಃ ಪ್ರೇಯಂ ಪ್ರಜಯಾ ಭುವನೇಶೋಚೇಷ್ಟ ॥

ಎಲ್ಲೆ ಫಲಗಳೇ, ನೀವು ಹುಟ್ಟಿಸುವ ಸ್ವಭಾವದವರಾಗಿದ್ದೀರಿ, ಈ ವಧುವೂ ಕೂಡ ನಿಮ್ಮ ಅನುಗ್ರಹದಿಂದ ಈ ಮನೆಯಲ್ಲಿ ಅಥವ ಈ ಲೋಕದಲ್ಲಿ ಪ್ರಜೆಗಳನ್ನು ಹುಟ್ಟಿಸುವ ಸ್ವಭಾವದವಳಾಗಲಿ(ಹಾಗಾಗಿ ಈ ಸಮಯದಲ್ಲಿ ಹಣ್ಣನ್ನು ಕೊಡುವುದು) ॥

೧೦೩. ಓಂ ಇಹ ಪ್ರಿಯಂ ಪ್ರಜಯಾ ತೇ ಸಮೃಧ್ಯತಾಮಸ್ಮಿನ್ ಗೃಹೇ ಗಾರ್ಹಪತ್ಯಾಯ ಜಾಗೃವಿ । ಏನಾಪತ್ಯಾ ತನ್ವಾಂ ಸಗ್ಂ ಸೃಜ ಸ್ವಾಥಾ ಜೀವ್ರೀ ವಿದಥ ಮಾವದಾಸಿ ॥

ಈ ಮನೆಯಲ್ಲಿ ಪ್ರಜೆಗಳಿಂದ ನಿನ್ನ ಪ್ರೀತಿ ವರ್ಧಿಸಲಿ । ಹಾಗೆಯೇ ಈ ಮನೆಯಲ್ಲಿ ಗೃಹಪತಿ ಸ್ಥಾನವನ್ನು ಪಡೆದುಕೊಳ್ಳಲು ಅತಿಥಿಗಳ ಮತ್ತು ಅಗ್ನಿಗಳ ಆರಾಧನೆಯಲ್ಲಿ ಮಗ್ನಳಾಗಿರು । ಪತಿಯಾದ ನನ್ನಿಂದ ಸಂಭೋಗಕಾಲದಲ್ಲಿ ನಿನ್ನ ಶರೀರವನ್ನು ಶೋಭಾಯಮಾನವಾಗಿರುವಂತೆ ಸಿದ್ಧಮಾಡಿಕೊ । ಹೀಗೆ ಚಿರಕಾಲ ಸುಖವನ್ನು ಅನುಭವಿಸಿ, ಜೀರ್ಣವಾದವಳಾಗಿ(ವಯಸ್ಸಾದವಳಾಗಿ) ಯಜ್ಞದ ವಿಷಯದಲ್ಲಿ ಮತ್ತು ಮಕ್ಕಳು, ಮೊಮ್ಮಕ್ಕಳ ವಿಷಯದಲ್ಲಿ(ಮೊಮ್ಮಕ್ಕಳಿಗೆ) ಜೀವನದ ಕರ್ತವ್ಯಗಳನ್ನು ಈ ರೀತಿ ಮಾಡಬೇಕು ಎಂದು ಹೇಳುವವಳಾಗು(ಮಾರ್ಗದರ್ಶಕಳಾಗು) ॥

೧೦೪. ಓಂ ಸುಮಂಗಲೀರಿಯಂ ವಧೂರಿಮಾಗ್ಂ ಸಮೇತ ಪಶ್ಯತ । ಸೌಭಾಗ್ಯಮಸ್ಯೈ ದತ್ತ್ವಾ ಯಾಥಾಸ್ತಂ ವಿಪರೇತನ ॥

ಎಲ್ಲೆ ದರ್ಶಕರೇ(ಆಹ್ವಾನಿತರೇ), ಈ ನನ್ನ ಹೆಂಡತಿಯನ್ನು ಯಾವಾಗಲೂ ಸುಮಂಗಲಿಯಾಗಿರುವಂತೆ ನೋಡಿರಿ । ಇವಳಿಗೆ ಸೌಭಾಗ್ಯಾದಿಗಳನ್ನು ಕೊಟ್ಟು, ನಿಮ್ಮ ನಿಮ್ಮ ಸ್ವಸ್ಥಾನವಾದ ಮನೆಗಳಿಗೆ ಹೋಗಿಬನ್ನಿರಿ ॥

ಧ್ರುವ ನಕ್ಷತ್ರವನ್ನು ನೋಡುವಾಗ ಹೇಳುವ ಮಂತ್ರ –

೧೦೫. ಓಂ ಧ್ರುವ ಕ್ಷಿತಿರ್ಧ್ರುವಂಯೋನಿರ್ಧ್ರುವಮಸಿ ಧ್ರುವತಸ್ಥಿತಂ । ತ್ವಂ ನಕ್ಷತ್ರಾಣಾಂ ಮೇಥ್ಯಸಿ ಸಮಾಪಾಹಿ ಪೃತನ್ಯತಃ ॥

ಎಲ್ಲೆ ಧ್ರುವನಕ್ಷತ್ರವೇ, ನೀನು ಅಚಲವಾದ ನಿವಾಸ ಸ್ಥಾನವುಳ್ಳವನಾಗಿದ್ದೀಯೆ ಮತ್ತು ಬೇರೆ ನಕ್ಷತ್ರಗಳಿಗೆ ಅಚಲವಾದ ಉತ್ಪತ್ತಿ ಸ್ಥಾನವಾಗಿದ್ದೀಯೇ ಮತ್ತು ಎಲ್ಲಾ ನಕ್ಷತ್ರಗಳ ಅಚಲತ್ವ(ಧ್ರುವತ್ವ)ಕ್ಕೆ ಕಾರಣವಾಗಿದ್ದೀಯೆ ಮತ್ತು ಸ್ವಯಂ ನೀನು ಅಚಲವಾಗಿದ್ದೀಯೆ ।

ಏಕೆಂದರೆ ಭ್ರಮಣಮಾಡುತ್ತಿರುವ ಬೇರೇ ನಕ್ಷತ್ರಗಳಿಗೆ ನೀನು ಹೇಗೆ, ಗೂಳಿಯನ್ನು ಅದು ಓಡಿಹೋಗಬಾರದೆಂದು ಒಂದು ಗೂಟವನ್ನು ನೆಟ್ಟು, ಅದಕ್ಕೆ ಅದರ ಹಗ್ಗವನ್ನು ಕಟ್ಟುತ್ತಾರೋ, ಹಾಗೆ ಗೂಟಸ್ಥಾನವಾಗಿದ್ದೀಯೆ। ಅಂತಹ ನೀನು ನಮ್ಮನ್ನು ಹಿಂಸೆಮಾಡಲು ಬಯಸುವ ಶತ್ರುಗಳಿಂದ ಕಾಪಾಡು ॥

ಅರುಂಧತೀ ನಕ್ಷತ್ರವನ್ನು ನೋಡುವಾಗ ಹೇಳುವ ಮಂತ್ರ –

೧೦೬. ಓಂ ಸ॒ಪ್ತ॒ಋಷ॑ಯಃ ಪ್ರ॒ಥ॒ಮಾಂ ಕೃ॑ತ್ತಿ॒ಕಾನಾ॑ಮರುಂ॒ಧ॒ತೀಂ ಯದ್ಧ್ರು॒ವತಾ॒ಗ್ಂ ಹನಿ॑ನ್ಯುಃ । ಷಟ್ ಕೃ॑ತ್ತಿ॒ಕಾ ಮು॒ಖ್ಯ॒ಯೋ॒ಗಂ ವ॑ಹಂ॒ತೀಯು॒ ವ॒ಸ್ಮಾ॒ಕ॑ಮೇಧ॒ತ್ವ॒ಷ್ಟ್ವಮೀ ॥

ಕಾಶ್ಯಪಾದಿ ಏಳು ಋಷಿಗಳು ಅವರ ಧರ್ಮಪತ್ನಿಯರು ಕೃತ್ತಿಕಾ ಮುಂತಾದ ೭ ಜನ। ಇವರಲ್ಲಿ ಅರುಂಧತಿಯೇ ೭ ನೇಯವಳು। ಮತ್ತು ಇವಳೊಬ್ಬಳೇ ಪತಿವ್ರತಾಸ್ತ್ರೀಯಾಗಿ ನಿಶ್ಚಲಳಾಗಿರುವವಳು(ಜಾರಿಬೀಳದವಳು), ಇನ್ನುಳಿದವರು ವ್ಯಭಿಚಾರ ಶಂಕೆಯಿಂದ ಬಿಡಲ್ಪಟ್ಟವರು। ಆದ್ದರಿಂದ ಈ ಕೃತ್ತಿಕಾದಿ ೭ ಜನರಲ್ಲಿ ಅರುಂಧತಿಯೇ ಅಗ್ರಗಣ್ಯಳೂ ಮತ್ತು ಪತಿವ್ರತಾಧರ್ಮದಲ್ಲಿ ಧ್ರುವ(ದೃಢ)ಳಾಗಿರುವವಳು। ಆದ್ದರಿಂದ ಈ ಅರುಂಧತಿಯು ನಮ್ಮಿಬ್ಬರ ಪ್ರೇಮವನ್ನು ಧ್ರುವವಾಗಿರುವಂತೆ ಮಾಡಲಿ। ಈ ೬ ಕೃತ್ತಿಕಾದಿ ಮಾತೆಯರು ಅರುಂಧತಿಯನ್ನು ಪ್ರಧಾನಳೆಂದು ಒಪ್ಪಿದ್ದಾರೆ। ಈ ಅರುಂಧತಿಯ ದರ್ಶನದಿಂದ ಈ ವಧುವು ೮ ನೆಯವಳಾಗಿ ಅರುಂಧತಿಯಂತೆ ಪಾತಿವ್ರತ್ಯದಿಂದ ವೃದ್ಧಿಸಲಿ ॥

ಆಗ್ನೇಯ ಸ್ಥಾಲೀಪಾಕಹೋಮದ ಮಂತ್ರ –

೧೦೭. ಓಂ ಅ॒ಗ್ನ॒ಯೇ ಸ್ವಾ॑ಹಾ ॥

ಸ್ವಿಷ್ಟಕೃತ್ ಹೋಮದ ಮಂತ್ರ –

೧೦೮. ಓಂ ಅ॒ಗ್ನ॑ಯೇ ಸ್ವಿ॒ಷ್ಟ॒ಕೃ॒ತೇ ಸ್ವಾ॑ಹಾ ॥

ಸಂಜೆಯ ಔಪಾಸನಹೋಮದ ಮಂತ್ರ –

೧೦೯. ಓಂ ಅಗ್ನಯೇ ಸ್ವಾಹಾ ॥

ಬೆಳಗಿನ ಔಪಾಸನಹೋಮದ ಮಂತ್ರ –

೧೧೦. ಓಂ ಸೂರ್ಯಾಯ ಸ್ವಾಹಾ ॥

ಔಪಾಸನಾಗ್ನಿಯು ತಾನಾಗಿಯೇ ಹತ್ತಿ, ಚೆನ್ನಾಗಿ ಉರಿದಾಗ ಮಾಡಬೇಕಾದ ಪ್ರಾಯಶ್ಚಿತ್ತಹೋಮದ ೨ ಮಂತ್ರ –

೧೧೧. ಓಂ ಉದ್ದೀಪ್ಯಸ್ವ ಜಾತವೇದೋಽಪಘ್ನಂ ನಿರ್ಋತಿಂ ಮಮ ।
ಪಶೂಗ್ಂ ಶ್ಚ ಮಹ್ಯಮಾವಹ ಜೀವನಂ ಚ ದಿಶೋದಿಶ ॥

ಎಲೈ ಅಗ್ನಿಯೇ, (ಜಾತವೇದನೇ) ನನಗೆ ಹಿಂಸೆಯನ್ನು ಮಾಡುವ ಸಮೂಹವನ್ನು ನಾಶಗೊಳಿಸುತ್ತಾ ಪ್ರಜ್ವಲಿಸು । ಹಾಗೆಯೇ ನನಗೆ ಪಶುರೂಪವಾದ ಐಶ್ವರ್ಯವನ್ನು ದಯಪಾಲಿಸು, ಹಾಗೆಯೇ ಶತವರ್ಷ ದೀರ್ಘಾಯುಸ್ಸನ್ನೂ ಕರುಣಿಸು ಹಾಗೆಯೇ ಹತ್ತುದಿಕ್ಕುಗಳೂ(ಹತ್ತುದಿಕ್ಕಿನಿಂದಲೂ ಐಶ್ವರ್ಯ ಬರುವಂತೆ ಮಾಡು) ನನಗೆ ಸಹ್ಯವಾಗುವಂತೆ ಮಾಡು ॥

೧೧೨. ಓಂ ಮಾನೋಹಿಗ್ಂಸೀಜ್ಜಾತವೇದೋ ಗಾಮಶ್ವಂ ಪುರುಷಂ ಜಗತ್ । ಅಬಿಭ್ರದಗ್ನ ಆಗಹಿ ಶ್ರಿಯಾಮಾ ಪರಿಪಾತಯ ॥

ಎಲೈ ಜಾತವೇದನೇ, ನಮ್ಮ ಸಂಬಂಧಿಗಳನ್ನು ಹಿಂಸಿಸಬೇಡ ಮತ್ತು ನನಗೆ ಸಂಬಂಧಪಟ್ಟ ಹಸು, ಅಶ್ವ, ಪುರುಷ ಇನ್ನು ಬೇರೇ ಜಂಗಮಪ್ರಾಣಿಗಳು ಇವೆಯೋ ಅವುಗಳನ್ನು ಹಿಂಸಿಸಬೇಡ । ಬೇರೆಯವರ(ಶತ್ರುಗಳ) ಹವಿಸ್ಸುಗಳನ್ನು ತೆಗೆದುಕೊಳ್ಳದೇ ನಮ್ಮಬಳಿ

ಬಂದು, ನಮ್ಮ ಹವಿಸ್ಸನ್ನು ಸ್ವೀಕರಿಸುವುದರ ಮೂಲಕ ನಮಗೆ ಅತ್ಯಂತ ಐಶ್ವರ್ಯ ಮತ್ತು ಸೌಭಾಗ್ಯದ ಸಮೃದ್ಧಿಯನ್ನು ಕೊಡು ॥

ಆಗ್ನೇಯಸ್ಥಾಲೀಪಾಕ + ಔಪಾಸನವಾದ ದಿನದಿಂದ ೩ ರಾತ್ರಿಗಳು ಬ್ರಹ್ಮಚರ್ಯವನ್ನು ಮಾಡಬೇಕು(ಗಂಧರ್ವಸಮಿತ್ತಿನ ಸ್ಥಾಪನಾ ಮಂತ್ರ) –

೧೧೩. ವಿಶ್ವಾವಸೋತ್ರ ಗಂಧರ್ವ ದಂಡೇರಾತ್ರಿತ್ರಯಂ ವಸಾ ।

ಆವಯೋಃ ಪ್ರೀತಿಮುತ್ಪಾದ್ಯ ರಕ್ಷ ನೌ ಸುಫಲಪ್ರದ ॥

ಎಲ್ಯೆ ವಿಶ್ವಾವಸು ಗಂಧರ್ವನೇ, ಮೂರುರಾತ್ರಿ ಈ ದಂಡದಲ್ಲಿ ವಾಸವಾಗಿದ್ದುಕೊಂಡು, ನಮ್ಮಿಬ್ಬರಲ್ಲಿ ಪರಸ್ಪರ ಪ್ರೀತಿಯನ್ನು ಉಂಟುಮಾಡುತ್ತಾ, ಒಳ್ಳೆಯ ಫಲವನ್ನು ಕೊಡುವುದರ(ಸಂತಾನ) ಮೂಲಕ ನಮ್ಮಿಬ್ಬರನ್ನು ರಕ್ಷಿಸು ॥

೪ ನೇ ರಾತ್ರಿ, ಶೇಷಹೋಮದ ಮಂತ್ರಗಳು –

೧೧೪. ಓಂ ಉದೀರ್ಷ್ವತೋ ವಿಶ್ವಾವಸೋ ನಮಸೇಡಾಮಹೇತ್ವಾ ।
ಅನ್ಯಮಿಚ್ಛ ಪ್ರಫರ್ವ್ಯಗ್ಂ ಸಂಜಾಯಾಂ ಪತ್ಯಾ ಸೃಜ ॥

ಎಲ್ಯೆ ವಿಶ್ವಾವಸುವೇ, (ವಿಶ್ವಾವಸುವಿನಿಂದ ಕೂಡಿದ ದಂಡವೇ) ನಮ್ಮ ಈ ಶಯನಾಸನದಿಂದ ಮೇಲೇಳು । ನಿನ್ನನ್ನು ನಮಸ್ಕಾರ ಪೂರ್ವಕವಾಗಿ ಈ ಪ್ರಥಮವಯಸ್ಕಳಾದ(ಋತುಮತಿಯಾದ) ನನ್ನ ಹೆಂಡತಿಯನ್ನು ನನ್ನಜೊತೆ ಸೇರಿಸುವುದರ ಮೂಲಕ ಅವಿನಾಭಾವ ಪ್ರೀತಿಯುಂಟಾಗುವಂತೆ ಮಾಡು ಎಂದು ಪ್ರಾರ್ಥಸುತ್ತೇವೆ ॥

೧೧೫. ಓಂ ಉದೀರ್ಷ್ವತಃ ಪತಿವತಿ ಹ್ಯೇಷಾ ವಿಶ್ವಾವಸುಂ ನಮಸಾ ಗೀರ್ಭಿರೀಟ್ಟೇ ।
ಅನ್ಯಮಿಚ್ಛ ಪಿತೃಷದಂ ವ್ಯಕ್ತಾಗ್ಂ ಸತೇಭಾಗೋ ಜನುಷಾ ತಸ್ಯ ವಿದ್ಧಿ ॥

ಎಲೈ ವಿಶ್ವಾವಸು ದಂಡವೇ, ಪತಿಯುಳ್ಳವಳಾದ ಈ ವಧುವು ಹುಟ್ಟಿನಿಂದ ತನ್ನ ತಂದೆಯ ಮನೆಯಲ್ಲಿ ವಿವಾಹವಾಗುವವರೆಗೆ ಇದ್ದವಳಾಗಿ, ಈಗ ನಿನ್ನ ಅಧೀನದಲ್ಲಿ ಇರುವವಳಾದ ಇವಳನ್ನು, ನನಗೆ ವಹಿಸು(ಕೊಡು) ಎಂದು ನಿನ್ನನ್ನು ಸ್ತೋತ್ರರೂಪದಿಂದ ನಮಸ್ಕಾರ ಪೂರ್ವಕವಾಗಿ ಬೇಡುತ್ತೇನೆ ॥

೭ ಆಜ್ಯಹೋಮ ಮಂತ್ರಗಳು –

೧೧೬. ಅಗ್ನೇ ಪ್ರಾಯಶ್ಚಿತ್ತೇ ತ್ವಂ ದೇವಾನಾಂ ಪ್ರಾಯಶ್ಚಿತ್ತಿರಸಿ ಬ್ರಾಹ್ಮಣಸ್ತ್ವ ನಾಥಕಾಮಃ ಪ್ರಪದ್ಯೇಯಾಸ್ಯಾಂ ಪತಿಘ್ನೇ ತನೂಃ ಪ್ರಜಾಘ್ನೇ ಪಶುಘ್ನೇ ಲಕ್ಷ್ಮಘ್ನೇ ಜಾರಘ್ನೇ ಮಸ್ಯೈತಾಂ ಕೃಣೋಮಿ ॥

ಎಲೈ, ನಾಶವಾದ ಕರ್ಮವನ್ನು (ಪ್ರಮಾದದಿಂದ ಹಾಳಾದ ಕರ್ಮವನ್ನು) ಮತ್ತೇ ಒಂದುಗೂಡಿಸುವ ಅಗ್ನಿಯೇ ದೇವತೆಗಳ ಮಧ್ಯೇ ನೀನು, ನಾಶಕರ್ಮ ಸಂಧಾತ(ಒಂದುಗೂಡಿಸುವವನು) ನಾಗಿರುವೆ । ಆದ್ದರಿಂದ ಬ್ರಾಹ್ಮಣನಾದ ನಾನು ಇಷ್ಟಾರ್ಥಸಿದ್ಧಿಗಾಗಿ ನಿನ್ನನ್ನು ಶರಣುಹೊಂದುತ್ತೇನೆ । ಯಾವ ಈ ವಧುವಿನ ಪತಿಯನ್ನು ಕೊಲ್ಲುವ ಹಸ್ತರೇಖಾದಿಗಳು ಇವೆಯೋ ಹಾಗೂ ಪ್ರಜೆಗಳನ್ನು(ಮಕ್ಕಳನ್ನು) ನಾಶಮಾಡುವ ಐಶ್ವರ್ಯ ಮತ್ತು ಮಂಗಳವನ್ನು ನಾಶಮಾಡುವಂತಹ ಹಸ್ತರೇಖೆ, ಜಾತಕಾದಿ ದೋಷಗಳಿವೆಯೋ ಮತ್ತೂ ಈ ವಧುವು ವೇಶ್ಯೆಯಾಗದಿರುವಂತೆ (ಅಂದರೆ– ಶಾಸ್ತ್ರವಿರುದ್ಧವಾದ ಲೈಂಗಿಕತೆಯು ಇವಳ ಸ್ವಭಾವದಲ್ಲಿ ಬರದಂತೆ) ಇಂತಹ ಎಲ್ಲಾ ದೋಷಗಳು ನಾಶವಾಗುವುದಕ್ಕೋಸ್ಕರವಾಗಿ ನಾನು ನಿನಗೆ(ಅಗ್ನಿಗೆ) ಈ ಹವಿಸ್ಸನ್ನು ಅರ್ಪಿಸುತ್ತೇನೆ ॥

೧೧೭. ವಾಯೋ ಪ್ರಾಯಶ್ಚಿತ್ತೇ ತ್ವಂ ದೇವಾನಾಂ ಪ್ರಾಯಶ್ಚಿತ್ತಿರಸಿ ಬ್ರಾಹ್ಮಣಸ್ತ್ವ ನಾಥಕಾಮಃ ಪ್ರಪದ್ಯೇಯಾಸ್ಯಾಂ ಪತಿಘ್ನೇ ತನೂಃ ಪ್ರಜಾಘ್ನೇ ಪಶುಘ್ನೇ ಲಕ್ಷ್ಮಘ್ನೇ ಜಾರಘ್ನೇ ಮಸ್ಯೈತಾಂ ಕೃಣೋಮಿ ॥

ಎಲೈ, ನಾಶವಾದ ಕರ್ಮವನ್ನು (ಪ್ರಮಾದದಿಂದ ಹಾಳಾದ ಕರ್ಮವನ್ನು) ಮತ್ತೇ ಒಂದುಗೂಡಿಸುವ ವಾಯುದೇವತೆಯೇ, ದೇವತೆಗಳ ಮಧ್ಯೇ ನೀನು, ನಾಶಕರ್ಮ

ಸಂಧಾತ(ಒಂದುಗೂಡಿಸುವವನು) ನಾಗಿರುವೆ । ಆದ್ದರಿಂದ ಬ್ರಾಹ್ಮಣನಾದ ನಾನು ಇಷ್ಟಾರ್ಥಸಿದ್ಧಿಗಾಗಿ ನಿನ್ನನ್ನು ಶರಣುಹೊಂದುತ್ತೇನೆ । ಯಾವ ಈ ವಧುವಿನ ಪತಿಯನ್ನು ಕೊಲ್ಲುವ ಹಸ್ತರೇಖಾದಿಗಳು ಇವೆಯೋ ಹಾಗೂ ಪ್ರಜೆಗಳನ್ನು(ಮಕ್ಕಳನ್ನು) ನಾಶಮಾಡುವ ಐಶ್ವರ್ಯ ಮತ್ತು ಮಂಗಳವನ್ನು ನಾಶಮಾಡುವಂತಹ ಹಸ್ತರೇಖೆ, ಜಾತಕಾದಿ ದೋಷಗಳಿವೆಯೋ ಮತ್ತೂ ಈ ವಧುವು ವೇಶ್ಯೆಯಾಗದಿರುವಂತೆ (ಅಂದರೆ– ಶಾಸ್ತ್ರವಿರುದ್ಧವಾದ ಲೈಂಗಿಕತೆಯು ಇವಳ ಸ್ವಭಾವದಲ್ಲಿ ಬರದಂತೆ) ಇಂತಹ ಎಲ್ಲಾ ದೋಷಗಳು ನಾಶವಾಗುವುದಕ್ಕೋಸ್ಕರವಾಗಿ ನಾನು ನಿನಗೆ(ಅಗ್ನಿಗೆ) ಈ ಹವಿಸ್ಸನ್ನು ಅರ್ಪಿಸುತ್ತೇನೆ ॥

೧೧೮. ಆ॑ದಿತ್ಯ ಪ್ರಾಂಯಶ್ಚಿ॑ತ್ತೇ ತ್ವಂ ದೇ॒ವಾನಾಂ ಪ್ರಾ॑ಂಯಶ್ಚಿತ್ತಿರಸಿ ಬ್ರಾ॒ಹ್ಮ॒ಣಸ್ತ್ವ॒ ನಾಥ॑ಕಾ॒ಮಃ ಪ್ರ॑ಪ॒ದ್ಯೇಂಯಾಸ್ಯಾಂ ಪ॑ತಿಘ್ನೀ ತ॒ನೂಃ ಪ್ರ॒ಜಾಘ್ನೀ ಪ॑ಶು॒ಘ್ನೀ ಲ॑ಕ್ಷ್ಮ॒ಘ್ನೀ ಜಾ॑ರ॒ಘ್ನೀ ಮ॑ಸ್ಯೈ॒ತಾಂ ಕೃ॑ಣೋಮಿ ॥

ಎಲೈ, ನಾಶವಾದ ಕರ್ಮವನ್ನು (ಪ್ರಮಾದದಿಂದ ಹಾಳಾದ ಕರ್ಮವನ್ನು) ಮತ್ತೇ ಒಂದುಗೂಡಿಸುವ ಆದಿತ್ಯದೇವತೆಯೇ, ದೇವತೆಗಳ ಮಧ್ಯೇ ನೀನು, ನಾಶಕರ್ಮ ಸಂಧಾತ(ಒಂದುಗೂಡಿಸುವವನು) ನಾಗಿರುವೆ । ಆದ್ದರಿಂದ ಬ್ರಾಹ್ಮಣನಾದ ನಾನು ಇಷ್ಟಾರ್ಥಸಿದ್ಧಿಗಾಗಿ ನಿನ್ನನ್ನು ಶರಣುಹೊಂದುತ್ತೇನೆ । ಯಾವ ಈ ವಧುವಿನ ಪತಿಯನ್ನು ಕೊಲ್ಲುವ ಹಸ್ತರೇಖಾದಿಗಳು ಇವೆಯೋ ಹಾಗೂ ಪ್ರಜೆಗಳನ್ನು(ಮಕ್ಕಳನ್ನು) ನಾಶಮಾಡುವ ಐಶ್ವರ್ಯ ಮತ್ತು ಮಂಗಳವನ್ನು ನಾಶಮಾಡುವಂತಹ ಹಸ್ತರೇಖೆ, ಜಾತಕಾದಿ ದೋಷಗಳಿವೆಯೋ ಮತ್ತೂ ಈ ವಧುವು ವೇಶ್ಯೆಯಾಗದಿರುವಂತೆ (ಅಂದರೆ– ಶಾಸ್ತ್ರವಿರುದ್ಧವಾದ ಲೈಂಗಿಕತೆಯು ಇವಳ ಸ್ವಭಾವದಲ್ಲಿ ಬರದಂತೆ) ಇಂತಹ ಎಲ್ಲಾ ದೋಷಗಳು ನಾಶವಾಗುವುದಕ್ಕೋಸ್ಕರವಾಗಿ ನಾನು ನಿನಗೆ(ಅಗ್ನಿಗೆ) ಈ ಹವಿಸ್ಸನ್ನು ಅರ್ಪಿಸುತ್ತೇನೆ ॥

೧೧೯. ಪ್ರ॒ಜಾಪತೇ ಪ್ರಾಂಯಶ್ಚಿ॑ತ್ತೇ ತ್ವಂ ದೇ॒ವಾನಾಂ ಪ್ರಾ॑ಂಯಶ್ಚಿತ್ತಿರಸಿ ಬ್ರಾ॒ಹ್ಮ॒ಣಸ್ತ್ವ॒ ನಾಥ॑ಕಾ॒ಮಃ ಪ್ರ॑ಪ॒ದ್ಯೇಂಯಾಸ್ಯಾಂ ಪ॑ತಿಘ್ನೀ ತ॒ನೂಃ ಪ್ರ॒ಜಾಘ್ನೀ ಪ॑ಶು॒ಘ್ನೀ ಲ॑ಕ್ಷ್ಮ॒ಘ್ನೀ ಜಾ॑ರ॒ಘ್ನೀ ಮ॑ಸ್ಯೈ॒ತಾಂ ಕೃ॑ಣೋಮಿ ॥

ಎಲೈ, ನಾಶವಾದ ಕರ್ಮವನ್ನು (ಪ್ರಮಾದದಿಂದ ಹಾಳಾದ ಕರ್ಮವನ್ನು) ಮತ್ತೇ ಒಂದುಗೂಡಿಸುವ ಪ್ರಜಾಪತಿದೇವತೆಯೇ, ದೇವತೆಗಳ ಮಧ್ಯೇ ನೀನು, ನಾಶಕರ್ಮ ಸಂಧಾತ(ಒಂದುಗೂಡಿಸುವವನು) ನಾಗಿರುವೆ । ಆದ್ದರಿಂದ ಬ್ರಾಹ್ಮಣನಾದ ನಾನು ಇಷ್ಟಾರ್ಥಸಿದ್ಧಿಗಾಗಿ ನಿನ್ನನ್ನು ಶರಣುಹೊಂದುತ್ತೇನೆ । ಯಾವ ಈ ವಧುವಿನ ಪತಿಯನ್ನು ಕೊಲ್ಲುವ ಹಸ್ತರೇಖಾದಿಗಳು ಇವೆಯೋ ಹಾಗೂ ಪ್ರಜೆಗಳನ್ನು(ಮಕ್ಕಳನ್ನು) ನಾಶಮಾಡುವ ಐಶ್ವರ್ಯ ಮತ್ತು ಮಂಗಳವನ್ನು ನಾಶಮಾಡುವಂತಹ ಹಸ್ತರೇಖೆ, ಜಾತಕಾದಿ ದೋಷಗಳಿವೆಯೋ ಮತ್ತೂ ಈ ವಧುವು ವೇಶ್ಯೆಯಾಗದಿರುವಂತೆ (ಅಂದರೆ– ಶಾಸ್ತ್ರವಿರುದ್ಧವಾದ ಲೈಂಗಿಕತೆಯು ಇವಳ ಸ್ವಭಾವದಲ್ಲಿ ಬರದಂತೆ) ಇಂತಹ ಎಲ್ಲಾ ದೋಷಗಳು ನಾಶವಾಗುವುದಕ್ಕೋಸ್ಕರವಾಗಿ ನಾನು ನಿನಗೆ(ಅಗ್ನಿಗೆ) ಈ ಹವಿಸ್ಸನ್ನು ಅರ್ಪಿಸುತ್ತೇವೆ ॥

೧೨೦. ಪ್ರಸವಶ್ಚೋಪಯಾಮಶ್ಚ ಕಾಟಶ್ಚಾರ್ಣವಶ್ಚ ಧರ್ಣಸಿಶ್ಚ ದ್ರವಿಣಂ ಚ ಭಗಶ್ಚಾಂತರಿಕ್ಷಂ ಚ ಸಿಂಧುಶ್ಚ ಸಮುದ್ರಶ್ಚ ಸರಸ್ವಾಗ್ಂ ಶ್ಚ ವಿಶ್ವವ್ಯಚಾಶ್ಚ ತೇಂಯುಂ ದ್ವಿಷ್ಮೋ ಂಯುಶ್ಚನೋ ದ್ವೇಷ್ಟಿ ತಮೇಷಾಂ ಜಂಭೇದಧ್ಮ ಸ್ವಾಹಾ ॥

ಪ್ರಸವ ಎಂದರೆ, ಅನುಜ್ಞೆ । ಉಪಯಾಮ ಎಂದರೆ, ಪೃಥಿವಿದೇವತೆಯು । ಕಾಟ ಎಂದರೆ, ಸೂಕ್ಷ್ಮರೂಪನಾದ ರುದ್ರದೇವತೆಯು । ಅರ್ಣವ ಎಂದರೆ, ನೀರಿರುವ ಕೆರೆ ಮುಂತಾದವುಗಳು । ಧರ್ಣಸಿ ಎಂದರೆ, ಮನೆ । ದ್ರವಿಣ ಎಂದರೆ, ಐಶ್ವರ್ಯ(ಹಣ) ಅಥವಾ ಬಲ ಎಂದರ್ಥ । ಭಗ ಎಂದರೆ, ದ್ವಾದಶಾದಿತ್ಯರಲ್ಲಿ ಒಬ್ಬನು ಅಥವಾ ಸೌಭಾಗ್ಯ ಎಂದರ್ಥ । ಅಂತರಿಕ್ಷ ಎಂದರೆ ಪ್ರಸಿದ್ಧವಾದ ಅಂತರಿಕ್ಷ । ಸಿಂಧು ಎಂದರೆ, ನದಿ । ಸಮುದ್ರವೆಂದರೆ, ಪ್ರಸಿದ್ಧವಾದ ಸಮುದ್ರವೇ । ಸರಸ್ವಾನ್ ಎಂದರೆ, ಅನ್ವಾರಂಭಣೀಯ ಸ್ಥಾಲೀಪಾಕ ಅಥವಾ ಇಷ್ಟಿಯಲ್ಲಿ ಬರುವ ದೇವತಾ ವಿಶೇಷ । ವಿಶ್ವವ್ಯಚಾ ಎಂದರೆ, ಇಂದ್ರ । ಇಷ್ಟೂ ದೇವತೆಗಳ ಸ್ವರೂಪದಿಂದ ಇರುವ ಇವರ ಮುಖಕ್ಕೆ(ಹಲ್ಲುಗಳ ನಡುವೆ) ನಾವು ಯಾರನ್ನು ದ್ವೇಷಿಸುತ್ತೇವೋ ಮತ್ತು ಯಾರು ನಮ್ಮನ್ನು ದ್ವೇಷಮಾಡುತ್ತಾರೋ ಅವರನ್ನು ಹಾಕುತ್ತೇವೆ ॥

೧೨೧. ಮಧುಶ್ಚ ಮಾಧವಶ್ಚ ಶುಕ್ರಶ್ಚ ಶುಚಿಶ್ಚ ನಭಶ್ಚ ನಭಸ್ಯಶ್ಚೇಷ ಶ್ಚೋರ್ಜಶ್ಚ ಸಹಶ್ಚ ಸಹಸ್ಯಶ್ಚ ತಪಶ್ಚ ತಪಸ್ಯಶ್ಚ ತೇಯಂ ದ್ವಿಷ್ಮೋ ಯಶ್ಚನೋ ದ್ವೇಷ್ಟಿ ತಮೇಷಾಂ ಜಂಭೇದಧ್ಮ ಸ್ವಾಹಾ ॥

ಮಧು ಮತ್ತು ಮಾಧವ ದೇವತೆಗಳನ್ನು ಉಳ್ಳ, ವಸಂತಋತು ಹಾಗೂ ಶುಕ್ರ, ಶುಚಿ ಎಂಬ ದೇವತೆಗಳನ್ನುಳ್ಳ ಅಥವಾ ಹೆಸರನ್ನುಳ್ಳ ಗ್ರೀಷ್ಮಋತು ಹಾಗೂ ನಭ, ನಭಸ್ಯ ಎಂಬ ದೇವತೆಗಳನ್ನುಳ್ಳ ಅಥವಾ ಹೆಸರನ್ನುಳ್ಳ ವರ್ಷಋತು ಹಾಗೂ ಇಷಾ, ಊರ್ಜಾ ಎಂಬ ದೇವತೆಗಳನ್ನುಳ್ಳ ಅಥವಾ ಹೆಸರನ್ನುಳ್ಳ ಶರದೃತು ಹಾಗೂ ಸಹಾ, ಸಹಸ್ಯ ದೇವತೆಗಳನ್ನುಳ್ಳ ಅಥವಾ ಹೆಸರನ್ನುಳ್ಳ ಹೇಮಂತಋತು ಹಾಗೂ ತಪ, ತಪಸ್ಯ ದೇವತೆಗಳನ್ನುಳ್ಳ ಅಥವಾ ಹೆಸರನ್ನುಳ್ಳ ಶಿಶಿರಋತುಗಳು । ಈ ಎಲ್ಲಾ ದೇವತೆಗಳೂ ನಾವು ಯಾರನ್ನು ದ್ವೇಷಿಸುತ್ತೇವೆಯೋ ಹಾಗೂ ಯಾರು ನಮ್ಮನ್ನು ದ್ವೇಷಿಸುತ್ತಾರೆಯೋ ಅವರನ್ನು ನಾಶಪಡಿಸಲಿ(ನುಂಗಿಹಾಕಲಿ) । ಈ ದೇವತೆಗಳ ಬಾಯಿಗೆ ಅವರನ್ನು ಹಾಕುತ್ತೇನೆ, ಈ ಹವಿಸ್ಸು ಆ ದೇವತೆಗಳಿಗೆ ಅರ್ಪಿತವಾಗಲಿ ॥

೧೨೨. ಚಿತ್ತಂ ಚ ಚಿತ್ತಿಶ್ಚಾಕೂತಂ ಚಾಕೂತಿಶ್ಚಾಧೀತಂ ಚಾಧೀತಿಶ್ಚ ವಿಜ್ಞಾತಂ ಚ ವಿಜ್ಞಾನಂ ಚ ನಾಮಚ ಕ್ರತುಶ್ಚ ದರ್ಶಶ್ಚ ಪೂರ್ಣಮಾಸಶ್ಚ ತೇಯಂ ದ್ವಿಷ್ಮೋ ಯಶ್ಚನೋ ದ್ವೇಷ್ಟಿ ತಮೇಷಾಂ ಜಂಭೇದಧ್ಮ ಸ್ವಾಹಾ॥

ಚಿತ್ತವೆಂದರೆ ಅಂತಃಕರಣ, ಚಿತ್ತಿಯೆಂದರೆ ಅದರ ಕ್ರಿಯೆ(ವ್ಯಾಪಾರ) । ಆಕೂತವೆಂದರೆ ಇಷ್ಟವಾದದ್ದು, ಆಕೂತಿಯೆಂದರೆ ಅಭಿಪ್ರಾಯ । ಅಧೀತವೆಂದರೆ ಅಧ್ಯಾಪನವು, ಅಧೀತಿಯೆಂದರೆ ಅಧ್ಯಯನವು । ವಿಜ್ಞಾತವೆಂದರೆ ತಿಳಿಯಲ್ಪಟ್ಟದ್ದು, ವಿಜ್ಞಾನವೆಂದರೆ ಎಲ್ಲವನ್ನು ತಿಳಿಯುವ ಜ್ಞಾನ । ನಾಮ ಎಂದರೆ ನಾಮರೂಪಗಳು । ಕ್ರತುವೆಂದರೆ ದರ್ಶಪೂರ್ಣಮಾಸೇಷ್ಟಿಯು । ಈ ಎಲ್ಲ ದೇವತೆಗಳೂ ನಾವು ಯಾರನ್ನು ದ್ವೇಷಿಸುತ್ತೇವೆಯೋ ಹಾಗೂ ನಮ್ಮನ್ನು ಯಾರು ದ್ವೇಷಿಸುತ್ತಾರೋ ಅವರನ್ನು ನಾಶಪಡಿಸಲಿ। ಅವರನ್ನು ಈ ದೇವತೆಗಳ ಬಾಯಿಗೆ ಹಾಕುತ್ತೇನೆ, ಈ ಹವಿಸ್ಸು ಈ ದೇವತೆಗಳಿಗೆ ಸಲ್ಲಲಿ ॥

ವಧುವಿನ ತಲೆಗೆ, ಕೆಳಗಿನ ೪ ಮಂತ್ರಹೋಮವಾದಮೇಲೆ ಉಳಿದ ಸ್ವಲ್ಪತುಪ್ಪವನ್ನು ಹಾಕುವುದು –

೧೨೩. ಭೂ ಸ್ವಾ॥ಹಾ ।

ಭೂಲೋಕಕ್ಕೆ ಈ ಹವಿಸ್ಸು ಅರ್ಪಿತವಾಗಲಿ ॥

೧೨೪. ಭುವ ಸ್ವಾ॥ಹಾ ।

ಅಂತರಿಕ್ಷಲೋಕಕ್ಕೆ ಈ ಹವಿಸ್ಸು ಅರ್ಪಿತವಾಗಲಿ ॥

೧೨೫. ಸುವ ಸ್ವಾ॥ಹಾ ।

ಸ್ವರ್ಗಲೋಕಕ್ಕೆ ಈ ಹವಿಸ್ಸು ಅರ್ಪಿತವಾಗಲಿ ॥

೧೨೬. ಓಗ್ಂ ಸ್ವಾ॥ಹಾ ।

ಬ್ರಹ್ಮನಿಗೆ ಈ ಹವಿಸ್ಸು ಅರ್ಪಿತವಾಗಲಿ ॥

ಪರಸ್ಪರರನ್ನು ವಧೂವರರು ನೋಡುವ ಮಂತ್ರ –

೧೨೭. ಅ॑ಪ॒ಶ್ಯಂ॒ತ್ವಾ ಮ॑ನ॒ಸಾ ಚೇ॑ಕಿ॒ತಾ॒ನಂ ತ॑ಪ॒ಸೋ ಜಾ॒ತಂ ತ॑ಪ॒ಸೋ ವಿ॑ಭೂ॒ತಂ । ಇ॒ಹ ಪ್ರ॒ಜಾಮಿ॑ಹ॒ರ॒ಯಿಗ್ಂ ರ॑ರಾ॒ಣಃ ಪ್ರ॒ಜಾಯ॑ಸ್ವ ಪ್ರ॒ಜಯಾ ಪುತ್ರಕಾಮ ॥

ಎಲೈ ವರನೇ, ಹೃದಯಪೂರ್ವಕವಾಗಿ ಸ್ನೇಹದಿಂದ ಹಾಗೂ ಪ್ರೇಮದಿಂದ ನಿನ್ನನ್ನು ಮನಸ್ಸಿಟ್ಟು ನೋಡುತ್ತಿರುವೆ । ನನ್ನ ಅಭಿಪ್ರಾಯವನ್ನು ನೀನು ತಿಳಿದವನಾಗಿ

ಗರ್ಭಾಧಾನದಿಂದ ಹಿಡಿದು, ಉಪನಯನದವರೆಗೆ ದ್ವಿಜನಾಗಿ ಹುಟ್ಟಿ, ಭಿಕ್ಷಾಚರಣೆಯು ವೇದಾಧ್ಯಯನಕ್ಕೆ ಅಂಗವಾಗಿರುವುದರಿಂದ, ಆ ಭಿಕ್ಷಾಚರಣೆಯಿಂದ ಋಕ್, ಯಜುಸ್, ಸಾಮವೆಂಬ ಅತ್ಯಂತ ಶ್ರೇಷ್ಠವಾದ ಸಂಪತ್ತನ್ನು ಹೊಂದಿರುವನಾಗಿದ್ದೀಯೇ । ನನ್ನಲ್ಲಿ ಪ್ರಜೆಗಳನ್ನು ಹಾಗೂ ನನ್ನ ಮನೆಯಲ್ಲಿ ಐಶ್ವರ್ಯ ಮತ್ತು ಧನಧಾನ್ಯದ ಸಮೃದ್ಧಿಯನ್ನು ಉಂಟುಮಾಡು । ಹಾಗೂ ಪ್ರಜಾರೂಪದಿಂದ ಎಲ್ಲೈ ಪುತ್ರಕಾಮನಾದ ವರನೇ, ನೀನು ಮತ್ತೆ ಜನ್ಮವನ್ನು ಪಡೆ ॥

೧೨೮. ಅಪಶ್ಯಂ ತ್ವಾ ಮನಸಾ ದೀಧ್ಯಾನಾಗ್ಂ ಸ್ವಾಯಾಂ ತನೂಗ್ಂ ಋತ್ವಿಯೇ ನಾಧಮಾನಾಂ । ಉಪಮಾಮುಚ್ಚಾ ಯುವತಿರ್ಭವಾಯಾಃ ಪ್ರಜಾಂಯಸ್ವ ಪ್ರಜಯಾ ಪುತ್ರಕಾಮೇ ॥

ಎಲ್ಲೈ ವಧುವೇ, ನಿನ್ನ ಅಂಗಾಂಗಗಳಿಂದ ಕೂಡಿ, ಅತ್ಯಂತ ಸುಂದರವಾಗಿ ಕಾಣುತ್ತಿರುವ ನಿನ್ನನ್ನು ನಾನು ಪ್ರೀತಿಯಿಂದ ಮನಸ್ಸಿಟ್ಟು ನೋಡುತ್ತಿರುವೆನು । ಋತುಕಾಲದಲ್ಲಿ ಗರ್ಭವನ್ನು ಧರಿಸಲು ಯೋಗ್ಯಳಾಗಿರುವೆಯಾದ್ದರಿಂದ ನನ್ನಿಂದ ನೀನು ಗರ್ಭವನ್ನು ನಿನ್ನ ಶರೀರದಲ್ಲಿ ಅಪೇಕ್ಷಿಸುತ್ತಿರುವೆ । ಸಂಭೋಗಕಾಲದಲ್ಲಿ ಮೇಲೆ ಇರುವಂತಹ ನನ್ನನ್ನು ಯೌವನಾವಸ್ಥೆಯನ್ನು ಪಡೆದಿರುವ ನೀನು ಅನುಭವಿಸಿ ಪ್ರಜಾರೂಪದಿಂದ ಪುತ್ರಕಾಮಳಾದ ನೀನು ಪುನಃ ಜನ್ಮಪಡೆ ॥

೧೨೯. ಸಮಂಜಂತು ವಿಶ್ವೇದೇವಾಸ್ಸಮಾಪೋ ಹೃದಯಾನಿ ನೌ । ಸಂಮಾತರಿಶ್ವ ಸಂಧಾತಾ ಸಮುದೇಷ್ಟ್ರೀ ದಿದೇಷ್ಟುನೌ ॥

ನಮ್ಮಿಬ್ಬರ ಹೃದಯಗಳನ್ನು(ಮನಸ್ಸನ್ನು) ವಿಶ್ವೇದೇವತೆಗಳು ಪ್ರೀತಿಪೂರ್ವಕವಾಗಿ ಒಂದುಗೂಡಿಸಲಿ । ಹಾಗೆಯೇ ಆಪ್ ದೇವತೆಗಳೂ ಒಂದುಗೂಡಿಸಲಿ । ಹಾಗೆಯೇ ವಾಯುದೇವನು ಹಾಗೂ ಧಾತೃದೇವನು ಒಂದುಗೂಡಿಸಲಿ । ಸಂದೇಶವನ್ನು ಉಂಟುಮಾಡುವ (ಪರಸ್ಪರ ಸಂಭಾಷಣೆಯನ್ನುಂಟುಮಾಡುವ) ಸರಸ್ವತೀ ದೇವತೆಯು (ಗರ್ಭಾಧಾನ ಸಮಯದಲ್ಲಿ ಆ ಸರಸ್ವತೀದೇವತೆಯ ವ್ಯಾಪಾರವು ಕಂಡುಬರುವುದರಿಂದ) ಗರ್ಭವನ್ನು ಉಂಟುಮಾಡಲಿ ॥

ಗಖ೦. ಪ್ರಜಾಪತೇ ತನ್ವಂ ಮೇ ಜುಷಸ್ವ ತ್ವಷ್ಟರ್ದೇವೇಭಿಸ್ಸಹಸಾವು ಇಂದ್ರ । ವಿಶ್ವೈರ್ದೇವೈ ರಾತಿಭಿಸ್ಸಗ್ಂ ರರಾಣಃ ಪುಗ್ಂಸಾಂ ಬಹೂನಾಂ ಮಾತರಸ್ಯಾವು ॥

ಎಲೈ ಪ್ರಜಾಪತಿದೇವತೆಯೇ, ನೀನು ನನ್ನ ಶರೀರದೊಳಗೆ ಪ್ರವೇಶಿಸು । ಏಕೆಂದರೆ ರೇತಸ್ಸನ್ನು ನಿನ್ನ ದೇಹದೊಳಗೆ ಬಿಡಲು ನನಗೆ ಸಾಮರ್ಥ್ಯಬರುವುದಕ್ಕಾಗಿ । ಹಾಗೂ ಎಲೈ ತ್ವಷ್ಟೃದೇವನೇ ನೀನೂ ನನ್ನ ದೇಹವನ್ನು ಪ್ರವೇಶಿಸು । ರೂಪನಿರ್ಮಾಣದಲ್ಲಿ ಸಾಮರ್ಥ್ಯವನ್ನು ಹೊಂದಿರುವ ನೀನು ವಿಷ್ಣು ಮುಂತಾದ ದೇವತೆಗಳ ಒಡಗೂಡಿ, ನನ್ನ ದೇಹದೊಳಗೆ ಪ್ರವೇಶಿಸು । ಎಲೈ ಇಂದ್ರನೇ, ನೀನೂ ಕೂಡ ನನ್ನ ದೇಹವನ್ನು ಪ್ರವೇಶಿಸು । ಎಲೈ ಇಂದ್ರನೇ, ನೀನು ವಿಶ್ವೇದೇವತೆಗಳ ಜೊತೆ ಹಾಗೂ ಮಿತ್ರರಾದ ಅನ್ಯದೇವತೆಗಳ ಜೊತೆಗೂಡಿ ನನಗೆ ಇಷ್ಟವಾದದ್ದನ್ನು ಕೊಡುತ್ತಾ, ನನ್ನ ದೇಹದೊಳಗೆ ಪ್ರವೇಶಿಸು । ನಾವು ತುಂಬಾ ಮಕ್ಕಳಿಗೆ ತಂದೆತಾಯಿಗಳಾಗುವಂತೆ ಮಾಡು ॥

ಗಖ೧. ಅನಃ ಪ್ರಜಾಂ ಜನಯತು ಪ್ರಜಾಪತಿ ರಾಜರಸಾಯು ಸಮನಕ್ತ್ವರ್ಯಮಾ । ಅದುರ್ಮಂಗಲೀಃ ಪತಿಲೋಕಮಾವಿಶ ಶನ್ನೋಭವ ದ್ವಿಪದೇ ಶಂ ಚತುಷ್ಪದೇ ॥

ಪ್ರಜಾಪತಿಯು ನಮಗೆ ಪ್ರಜೆಗಳನ್ನು ಉಂಟುಮಾಡಲಿ । ಅರ್ಯಮಾ(ಆದಿತ್ಯ) ದೇವತೆಯು ನಾವು ಮರಣಹೊಂದುವವರೆಗೆ ನಮ್ಮಿಬ್ಬರಲ್ಲೂ ಪ್ರೀತಿ ಇರುವಂತೆ ಮಾಡಲಿ । ಎಲೈ ವಧುವೇ ನೀನಾದರೋ, ಕೆಟ್ಟದಾದ ಲಕ್ಷಣಗಳನ್ನು ಹೊಂದದೇ ಇರುವವಳಾಗಿದ್ದೀಯೆ। ಸುಮಂಗಲಿಯಾಗಿ ನನ್ನ ಮನೆಗೆ ಬಂದುಸೇರು । ಹಾಗೆಯೇ ನಮ್ಮ ಕುಟುಂಬದಲ್ಲಿರುವ ಮನುಷ್ಯರಿಗೆ ಹಾಗೂ ಪಶುಗಳಿಗೆ ಸುಖವನ್ನು ತರುವವಳಾಗು ॥

ಗಖ೨. ತಾಂ ಪೂಶನ್ನಿವತಮಾ ಮೇರಯಸ್ವ ಯಸ್ಯಾಂ ಬೀಜಂ ಮನುಷ್ಯಾ ವಪಂತಿ । ಯಾನ ಊರೂ ಉಶತೀ ವಿಸ್ರಯಾತ್ಯೈ ಯಸ್ಯಾ ಮುಶಂತಃ ಪ್ರಹರಾವು ಶೇಫಮ್ ॥

ಎಲೈ ಪೂಷ(ಆದಿತ್ಯ)ದೇವತೆಯೇ, ಯಾವಳಲ್ಲಿ ಮನುಷ್ಯರು ರೇತಸ್ಸನ್ನು ಬಿಡುತ್ತಾರೋ(ಬೀಜವನ್ನು ಬಿತ್ತುತ್ತಾರೋ) ಅವಳನ್ನು ನನಗೆ ಅನುಕೂಲಕರಳಾಗಿ ಇರುವಂತೆ ಪ್ರೇರೇಪಿಸು(ಹೆಂಡತಿಯನ್ನು ಪ್ರೋತ್ಸಾಹಿಸು)। ಯಾವ ನನ್ನ ಹೆಂಡತಿಯು ನನ್ನ ತೊಡೆಗಳನ್ನು ಇಷ್ಟಪಡುತ್ತಾ, ತನ್ನ ಎರಡು ತೊಡೆಗಳನ್ನು ತನ್ನ ಯೋನಿಯು ಅಗಲವಾಗುವಂತೆ ಮಾಡಿಕೊಳ್ಳುತ್ತಾಳೋ(ರೇತಸ್ಸನ್ನು ಹಾಕಲು ಅನುಕೂಲವಾಗುವಂತೆ), ಅಂತಹಾ ಅವಳ ಯೋನಿಗೆ ನನ್ನ ಶಿಶ್ನವನ್ನು ಒಳಹಾಕುತ್ತೇನೆ ॥

ಗರ್ಭಾಧಾನದ(ಪ್ರಸ್ಥದ) ಮಂತ್ರಗಳು –

೧೩೩. ಆರೋಹೋರುಮುಪಬರ್ಹಸ್ವ ಬಾಹುಂ ಪರಿಷ್ವಜಸ್ವ ಜಾಯಾಗ್ಂ ಸುಮನಸ್ಯ ಮಾನಃ । ತಸ್ಯಾಂ ಪುಷ್ಯತಂ ಮಿಥುನೌ ಸಂಯೋನೀ ಬಹ್ವೀಂ ಪ್ರಜಾಂ ಜನಯಂತೌ ಸರೇತಸಾ ॥

ಎಲೈ, ನನ್ನ ಶರೀರದಲ್ಲಿರುವ ಆತ್ಮನೇ, ಇವಳ ತೊಡೆಯನ್ನು ಹತ್ತು । ನಂತರ ನನ್ನ ಎರಡು ಬಾಹುಗಳಿಂದ ಅವಳ ಬಾಹುಗಳನ್ನು ಪರಸ್ಪರ ಆಲಿಂಗಿಸಿಕೊಳ್ಳಲು ಮುಂದೆ ಚಾಚು । ನಂತರ ಅತ್ಯಂತ ಪ್ರೀತಿ ಹಾಗೂ ಒಳ್ಳೆಯ ಮನಸ್ಸಿನಿಂದ ಹೆಂಡತಿಯನ್ನು ಆಲಂಗಿಸಿಕೋ । ಎಲೈ ಹೆಂಡತಿಯೇ ಹಾಗೂ ನನ್ನ ಶರೀರದಲ್ಲಿರುವ ಆತ್ಮನೇ ಈ ಆಲಿಂಗನದಿಂದ ನೀವಿಬ್ಬರೂ ಪುಷ್ಟಿ, ಸಮೃದ್ಧತೆಯನ್ನು ಹೊಂದಿರಿ । ಹಾಗೂ ಪರಸ್ಪರ ಮೈಥುನವನ್ನು ಮಾಡಿದ ಶಿಶ್ನ ಮತ್ತು ಯೋನಿಗಳು ಬಹಳಕಾಲದವರೆಗೆ ತುಂಬಾ ಮಕ್ಕಳನ್ನು ಉಂಟುಮಾಡಿ, ಹಾಗೂ ರೇತಸ್ಸಿನಿಂದ ಕೂಡಿದ್ದಾಗಿ ಸಮೃದ್ಧಿಯನ್ನು ಹೊಂದಲಿ । ಇದೇ ನಮ್ಮಿಬ್ಬರ ಸಮೃದ್ಧಿಯು ಹಾಗೂ ಪ್ರಜಾ ಸಮೃದ್ಧಿಯು ॥

೧೩೪. ಆರ್ದ್ರಯಾऽರಣ್ಯಾ ಯತ್ರಾಮಂಥತ್ಪೂರುಷಂ ಪುರುಷೇಣ ಶಕ್ರಃ । ತದೇತೌ ಮಿಥುನೌ ಸಂಯೋನೀ ಪ್ರಜಯಾऽಮೃತೇನೇಹ ಗಚ್ಛತಮ್ ॥

ಲೋಕದಲ್ಲಿ ಹೇಗೆ ಮನುಷ್ಯನು ತುಪ್ಪದಿಂದ ಸವರಿದ ಅರಣಿಯಿಂದ ಅಗ್ನಿಯನ್ನು ಕಡೆಯುತ್ತಾನೋ ಹಾಗೆ ಇಂದ್ರನು(ವಿವಾಹದ ಕರ್ತೃವಾದ ಇಂದ್ರಾದಿ ದೇವತೆಗಳು) ಪುರುಷರೂಪವಾದ ಶಫದಿಂದ ಪುರುಷರೂಪವಾದ ಗರ್ಭವನ್ನು ಮಂಥನದಂತೆ ಕಡೆದು

ಉಂಟುಮಾಡಿದನು । ಹಾಗೆಯೇ ನೀವಿಬ್ಬರೂ ಮಿಥುನೀಭೂತರಾಗಿ ಇಬ್ಬರ ಶಿಶ್ನ–ಯೋನಿಗಳೂ ಒಂದಾಗಿ ಪ್ರಜಾರೂಪವಾದ ಅಮೃತದಿಂದ ಪ್ರಜೆಗಳನ್ನು ಹುಟ್ಟಿಸುತ್ತೀರಿ ॥

ಗರ್ಭಮದಧಾವೋಷಧೀಷ್ವಹಂ ವಿಶ್ವೇಷು ಭುವನೇಷ್ವಂತಃ ।
ಅಹಂ ಪ್ರಜಾ ಅಜನಯಂ ಪಿತೃಣಾಮಹಂ ಜನಿಭ್ಯೋ ಅಪರೀಷು ಪುತ್ರಾನ್ ॥
ಅಗ್ನೌ ಪ್ರಾಸ್ತಾಹುತಿಃ ಸಮ್ಯಕ್ ಆದಿತ್ಯಂ ಉಪತಿಷ್ಠತೇ ।
ಆದಿತ್ಯಾತ್ ಜಾಯತೇ ವೃಷ್ಟಿಃ ವೃಷ್ಟೇರನ್ನಂ ತತಃ ಪ್ರಜಾಃ ॥

ನಾನು ಶ್ರೌತಸ್ಮಾರ್ತ ಕರ್ಮಾನುಷ್ಠಾನದ ಮೂಲಕವಾಗಿ ಓಷಧಿಗಳಲ್ಲಿ ಗರ್ಭವನ್ನು ಉಂಟುಮಾಡುತ್ತೇನೆ । ನಾನು ಸಮಸ್ತ ಭುವನಗಳಲ್ಲಿ ಜೀವರೂಪದಿಂದ ಇರುವ ಪರಮಾತ್ಮನ ಸ್ವರೂಪದ ಮೂಲಕ ನಾನು ಗರ್ಭವನ್ನು ಉಂಟುಮಾಡುತ್ತೇನೆ । ಹಾಗೂ ನಾನು ಪಿತೃಗಳ ಉದ್ಧಾರಕ್ಕಾಗಿ ಪ್ರಜೆಗಳನ್ನು ಉಂಟುಮಾಡುತ್ತೇನೆ । ನಾನೇ ಮಕ್ಕಳನ್ನು ಉಂಟುಮಾಡುವ ವಧುಗಳ ನಂತರ ಬರುವಂತಹ ಮಕ್ಕಳು, ಮೊಮ್ಮಕ್ಕಳು ಮತ್ತು ಮರಿಮಕ್ಕಳೂ ಮುಂತಾದವರ ಹೆಂಡತಿಯರಲ್ಲಿ ಮಗ, ಮೊಮ್ಮೊಗ, ಮರಿಮಗ ಮುಂತಾದ ರೂಪದಿಂದ ಮಕ್ಕಳನ್ನು ಉಂಟುಮಾಡುತ್ತೇನೆ ॥

ಪುತ್ರಿಣೇ ಮಾ ಕುಮಾರಿಣಾ ವಿಶ್ವಮಾಯುರ್ವ್ಯಶ್ನುತಮ್ ।
ಉಭಾ ಹಿರಣ್ಯಪೇಶಸಾ ವೀತಿಹೋತ್ರಾ ಕೃತದ್ವಸೂ ॥

ನೀವಿಬ್ಬರೂ ಪುತ್ರರನ್ನು ಉಳ್ಳವರಾಗಿ ಹಾಗೂ ಕುಮಾರಿಗಳುಳ್ಳವರಾಗಿರಿ । ಹಾಗೂ ಸಂಪೂರ್ಣ ಆಯಸ್ಸನ್ನು ಪಡೆಯುವವರಾಗಿ । ನೀವಿಬ್ಬರೂ ಪರಿಶುದ್ಧವಾದ, ಸುಂದರವಾದ ಲಕ್ಷಣವಾದ ರೂಪವನ್ನು ಹೊಂದಿದವರಾಗಿರಿ । ಹಾಗೂ ಯಜ್ಞಯಾಗಾದಿಗಳನ್ನು ಮಾಡುವವರಾಗಿ ಹಾಗೂ ಐಶ್ವರ್ಯವನ್ನು ಉಳ್ಳವರಾಗಿರಿ ॥

ದಶಸ್ಯಂತ್ವಾsವ್ಯುತಾಯುಕಗ್ಂ ಶಮೂಧೋ ರೋಮಶಗ್ಂ
ಹಥೋ ದೇವೇಷು ಕೃಣುತೋ ದುವಃ ॥

ಅವಶ್ಯಕತೆ ಇರುವವರಿಗೆ ದಾನವನ್ನು ಮಾಡುವವರಾಗಿ, ಮರಣರಹಿತವಾದ ದೇವತ್ವವನ್ನು ಹೊಂದಲು ನಿಮ್ಮಿಬ್ಬರ ಶಿಶ್ನ–ಯೋನಿಗಳು ಸಂಭೋಗಕ್ಕೆ ಯೋಗ್ಯವಾದದ್ದಾಗಿ ನೀವಿಬ್ಬರೂ ದೇವತೆಗಳನ್ನು ಉಪಚರಿಸುವಂತೆ ಆಗಲಿ। ಸ್ತ್ರೀಪುರುಷರ ಶಿಶ್ನಯೋನಿಗಳು ರೋಮದಿಂದ ಕೂಡಿದ್ದರೆ ಸಂಭೋಗಕ್ಕೆ ಯೋಗ್ಯವಾದದ್ದಾಗುತ್ತದೆ। ಅದಕ್ಕಿಂತ ಮೊದಲು ಯೋಗ್ಯವಲ್ಲ ಸ್ತ್ರೀಯರ ಯೋನಿಯು। ಭಾವಯವ್ಯ ಎಂಬ ರಾಜನ ಹೆಂಡತಿಯಾದ ಭಾವಯವ್ಯಾನಿಯನ್ನು ಇಂದ್ರನು ಅವಳ ಗಂಡನ ಸ್ನೇಹಿತನಾಗಿ ಪರಿಹಾಸ ಮಾಡುತ್ತಾ, ನೀನು ಸಂಭೋಗಕ್ಕೆ ಯೋಗ್ಯಳಲ್ಲ। ಏಕೆಂದರೆ, ನಿನ್ನ ಯೋನಿಯಲ್ಲಿ ಕೂದಲುಗಳು ಬೆಳೆದಿಲ್ಲ ಎಂದು ಹೇಳಿದನು। ಆಗ ಅವಳು ನಾನು ಸಂಭೋಗಕ್ಕೆ ಅಯೋಗ್ಯಳಲ್ಲ, ಏಕೆಂದರೆ ಗಾಂಧಾರಿಗಳಂತೆ (ವಯಸ್ಸಿಗೆ ಬಂದವಳು) ನಾನು ಯೋನಿಯಲ್ಲಿ ಕೂದಲುಗಳ್ಳುವಳಾಗಿದ್ದೀನಿ, ಪರೀಕ್ಷಿಸಿ ನೋಡು ಎಂದು ಹೇಳಿದಳು। ಆದ್ದರಿಂದ ಕೂದಲುಗಳುಳ್ಳ ಸ್ತ್ರೀಯು ಯೋಗ್ಯಳು ॥

೧೩೮. ವಿ॒ಷ್ಣು॒ರ್ಯೋನಿ॑ಂ ಕಲ್ಪಯತು॒ ತ್ವಷ್ಟಾ॑ ರೂ॒ಪಾಣಿ॑ ಪಿಗ್ಂಶತು ।
ಆಸಿ॑ಂಚತು ಪ್ರ॒ಜಾಪ॑ತಿರ್ಧಾ॒ತಾ ಗರ್ಭ॑ಂ ದಧಾತು ತೇ ॥

ಎಲೈ ಹೆಂಡತಿಯೇ, ನಿನ್ನ ಯೋನಿಯನ್ನು ಗರ್ಭಾಧಾನಕ್ಕೆ ಯೋಗ್ಯವಾದದ್ದಾಗಿ ವಿಷ್ಣುವು ಮಾಡಲಿ। ಪ್ರಜಾಪತಿಯು ನನ್ನನ್ನು ಪ್ರವೇಶಿಸಿ ಆ ನಿನ್ನ ಯೋನಿಯಲ್ಲಿ ರೇತಸ್ಸನ್ನು ಹಾಕಲಿ। ಅಲ್ಲಿ ಹಾಕಿದ ರೇತಸ್ಸು(ವೀರ್ಯ) ಧಾತೃದೇವನಿಂದ ಗರ್ಭರೂಪವಾಗಿ ಪರಿಣಾಮ ಹೊಂದಲಿ। ಆ ಗರ್ಭಕ್ಕೆ ಕೈ, ಕಾಲು ಮುಂತಾದ ದಿವ್ಯವಾದ ಅವಯವಗಳು ತ್ವಷ್ಟೃದೇವನಿಂದ ಮಾಡಲ್ಪಡಲಿ ॥

೧೩೯. ಗರ್ಭ॑ಂ ಧೇಹಿ ಸಿನೀವಾಲಿ॒ ಗರ್ಭ॑ಂ ಧೇಹಿ ಸರಸ್ವತಿ । ಗರ್ಭ॑ಂ ತೇ ಅ॒ಶ್ವಿನೌ॑ ದೇ॒ವಾ ವಾ ಧ॑ತ್ತಾ॒ಂ ಪುಷ್ಕ॑ರಸ್ರಜಾ ॥

ಸಿನೀವಾಲಿ ದೇವತಾರೂಪವಾದ ಹಾಗೂ ಸರಸ್ವತೀ ದೇವಸ್ವರೂಪಿಯಾದ ಎಲೈ ವಧುವೇ, ಈ ಗರ್ಭವನ್ನು ಧರಿಸು। ಅಶ್ವಿನೀದೇವತೆಗಳು ಕಮಲದ ಮಾಲೆಯುಳ್ಳವರಾಗಿ ನಿನ್ನ ಗರ್ಭವನ್ನು ಧರಿಸುವಂತಾಗಲಿ ॥

೧೪೦. ಹಿರಣ್ಯಯೀ ಅರಣೀಯಂ ನಿರ್ಮಂಥತೋ ಅಶ್ವಿನಾ । ತಂತೇ ಗರ್ಭಗ್ಂ ಹವಾಮಹೇ ದಶಮೇ ಮಾಸಿ ಸೂತವೇ ॥

ಸುವರ್ಣದ ಅರಣಿಯಂತಿರುವ ನನ್ನ ಶಿಶ್ನದಿಂದ ಪ್ರಯತ್ನಪೂರ್ವಕವಾಗಿ ಅರಣಿಯಿಂದ ಅಗ್ನಿಯನ್ನು ಮಥನ(ಕಡೆಯುವಂತೆ) ಮಾಡುವಂತೆ, ಮೈಥುನದಿಂದ ಮಥನಮಾಡಿದ ಗರ್ಭವು ಒಳ್ಳೆಯಪ್ರಜೆಗೆ ಜನ್ಮಕೊಡುವಂತೆ ಅಶ್ವಿನೀದೇವತೆಗಳು ಮಾಡಲಿ । ಹೀಗೆ ಆಶಿಸುತ್ತಾ ಹತ್ತನೇ ತಿಂಗಳು ಹಡೆಯುವುದಕ್ಕಾಗಿ(ಜನ್ಮಪಡೆಯುವ ಶಿಶುವೂ ಕೂಡ ಅಶ್ವಿನೀದೇವತೆಗಳಂತೆ ರೂಪವಂತನಾಗುವಂತೆ) ಈ ಗರ್ಭವು ಧಾರಣೆಯಾಗಲಿ ಎಂದು ನಾವು ಆಶಿಸುತ್ತೇವೆ ॥

೧೪೧. ಯಥೇಯಂ ಪೃಥಿವೀ ಮಹೀ ದಿಷ್ಟಂತೀ ಗರ್ಭಮಾದಧೇ । ಏವಂ ತ್ವಂ ಗರ್ಭಮಾಧತ್ಸ್ವ ದಶಮೇ ಮಾಸಿ ಸೂತವೇ ॥

ಹೇಗೆ ಈ ಪೃಥಿವಿಯು ದ್ಯುಲೋಕದಿಂದ ಮಳೆಯೆಂಬ ರೇತಸ್ಸಿನಿಂದ ಸಿಕ್ತವಾಗಿ ಸಸ್ಯ ಮುಂತಾದ ಗರ್ಭವನ್ನು ಧರಿಸಿ, ಅತ್ಯಂತ ಶೋಭಾಯಮಾನವಾಗಿ ಕಾಣುತ್ತಿದ್ದಾಳೋ, ಹಾಗೆ ನೀನು(ಹೆಂಡತಿ) ಹತ್ತನೇತಿಂಗಳು ಹಡೆಯುವುದಕ್ಕಾಗಿ ಗರ್ಭವನ್ನು ಧರಿಸು ॥

೧೪೨. ಯಥಾ ಪೃಥಿವ್ಯಗ್ನಿ ಗರ್ಭಾ ದ್ಯೌರ್ಯಥೇಂದ್ರೇಣ ಗರ್ಭಿಣೀ । ವಾಯುರ್ಯಥಾ ದಿಶಾಂ ಗರ್ಭ ಏವಂ ಗರ್ಭಂ ದಧಾಮಿ ತೇ ॥

ಹೇಗೆ ಪೃಥಿವಿಯು, ಅಗ್ನಿಯನ್ನು ಗರ್ಭವಾಗಿ ಉಳ್ಳವಳಾಗಿದ್ದಾಳೋ ಹಾಗೂ ದ್ಯುಲೋಕವು ಇಂದ್ರನಿಂದ ಗರ್ಭವುಳ್ಳದ್ದಾಗಿದೆಯೋ ಹಾಗೂ ವಾಯುದೇವನು ದಿಕ್ಕುಗಳ ಗರ್ಭವಾಗಿದ್ದಾನೋ, ಈ ರೀತಿಯಾಗಿ ನಿನ್ನ ಗರ್ಭವು ನನ್ನಿಂದ ಧರಿಸಲ್ಪಡಲಿ(ಇಂತಹಾ ಗರ್ಭವನ್ನು ನಾನು ನಿನಗೆ ಕೊಡುತ್ತೇನೆ) ॥

೧೪೩. ವಿಷ್ಣೋಶ್ಶ್ರೇಷ್ಠೇನ ರೂಪೇಣಾಸ್ಯಾಂ ನಾರ್ಯಾಂ ಗವೀನ್ಯಾಮ್ । ಪುಮಾಗ್ಂ ಸಂ ಗರ್ಭಮಾಧೇಹಿ ದಶಮೇ ಮಾಸಿ ಸೂತವೇ ॥

ಎಲೈ ವಿಷ್ಣುವೇ, ಶ್ರೇಷ್ಮರೂಪದಿಂದ ಕೂಡಿದ ಪುಂ(ಗಂಡುಶಿಶು) ಗರ್ಭವನ್ನು ಈ ನಾರಿಯಲ್ಲಿ ಇಡು । ಈ ನಾರಿಯು ನನಗೆ ಅತ್ಯಂತ ಪ್ರಿಯತಮೆಯಾಗಿದ್ದಾಳೆ ಹಾಗೂ ಋತುಸ್ನಾತಳಾಗಿ ಕಾಮಿಸಲು ಯೋಗ್ಯಳಾಗಿದ್ದಾಳೆ(ಕೆಲವರು ಗವಿನೀ ಎಂಬ [illegible] ವೀರ್ಯ(ಬೀಜಾಣು)ವನ್ನು ಹೆಚ್ಚಾಗಿ ಉಳ್ಳ ಸ್ತ್ರೀ ಎಂದು ಅರ್ಥ ಮಾಡುತ್ತಾರೆ) । ಅಂತಹಾ ಈ ನಾರಿಯಲ್ಲಿ ಹತ್ತನೇ ತಿಂಗಳು ಪುಂ ಶಿಶುವನ್ನು ಜನ್ಮಕೊಡುವುದಕ್ಕಾಗಿ ಗರ್ಭಾಧಾನವನ್ನು ಮಾಡು ॥

೧೪೪. ನೇಜಮೇಷ ಪರಾಪತ ಸಪುತ್ರಃ ಪುನರಾಪತ । ಅಸ್ಯೈ ಮೇ ಪುತ್ರಕಾಮಾಯ್ಯೈ ಗರ್ಭಮಾಧೇಹಿ ಯಃಪುಮಾನ್ ॥

ಎಲೈ ನೇಜಮೇಷ ದೇವನೇ ನೀನು ಗರ್ಭಕ್ಕೆ ತೊಂದರೆಯನ್ನು ಮಾಡುವವನಾಗಿದ್ದೀಯೇ । ಆದ್ದರಿಂದ ದೂರಹೋಗು । ನೇಜಮೇಷ ನೆಂದರೆ – ಸ್ಕಂದಗ್ರಹಗಳಲ್ಲಿ ಒಬ್ಬನು, ವೈದ್ಯಶಾಸ್ತ್ರದಲ್ಲಿ ಕುಮಾರಗ್ರಹ(ಬಾಲಗ್ರಹ) ಪೀಡೆಗೆ ಪರಿಹಾರವಾಗಿ ನೇಜಮೇಷನೆಂಬ ಪ್ರಜೆಯನ್ನು ಹೇಳಿದೆ । ಒಂದುವೇಳೆ ನೀನು(ನೇಜಮೇಷನು) ಅವಶ್ಯವಾಗಿ ನಮ್ಮಬಳಿಗೆ ಬರಬೇಕಾದರೆ ಪುತ್ರಸಹಿತನಾಗಿ ಬಾ । ಹೀಗೆ ಬಂದು ಈ ನನ್ನ ಹೆಂಡತಿಯಾದ, ಪುತ್ರಕಾಮಿಯಾದ ಇವಳಲ್ಲಿ ಪುಂ ಗರ್ಭವನ್ನು ಆಧಾನಮಾಡು(ಧರಿಸುವಿಕೆ) ॥

೧೪೫. ವ್ಯಸ್ಯ ಯೋನಿಂ ಪ್ರತಿ ರೇತೋ ಗೃಹಾಣ ಪುಮಾನ್ ಪುತ್ರೋ ಧೀಯತಾಂ ಗರ್ಭೋ ಅಂತಃ । ತಂ ಮಾತಾ ದಶಮಾಸೋ ಬಿಭರ್ತು ಸಜಾಯತಾಂ ವೀರತಮಸ್ವಾನಾಮ್ ॥

ನನ್ನಿಂದ ಸೇಚನ ಮಾಡಲ್ಪಡುವ ರೇತಸ್ಸು ನಿನ್ನ ಯೋನಿಯನ್ನು ಪ್ರವೇಶಿಸಿ, ಅಲ್ಲಿ ನೀನು ಆ ರೇತಸ್ಸನ್ನು ಗ್ರಹಣಮಾಡುವಂತೆ(ಧರಿಸುವಂತೆ) ಆಗಲಿ । ಆಗಲೇ ಒಳಗೆ ಗರ್ಭವು ಧರಿಸಿದಂತೆ ಆಗುತ್ತದೆ । ಹೀಗೆ ಧರಿಸಿದ ಗರ್ಭವು ಪುಂ ಗರ್ಭವಾಗಿ ಧರಿಸಲ್ಪಡಲಿ । ಈ ಗರ್ಭವನ್ನು ತಾಯಿಯಾದ ನೀನು ಹತ್ತುತಿಂಗಳು ಧರಿಸು । ಆ ಗರ್ಭವು ಹತ್ತುತಿಂಗಳು ಕಳೆದ ನಂತರ ನಮ್ಮ ಜ್ಞಾತಿಗಳ ಮಧ್ಯೆ ಅತ್ಯಂತ ಸಾಮರ್ಥ್ಯವುಳ್ಳ ಪ್ರಜೆಯಾಗಿ ಜನ್ಮತಾಳಲಿ ॥

೧೪೬. ಆತೇ ಗರ್ಭೋ ಯೋನಿಮೇತು ಪುಮಾನ್ ಬಾಣ ಇವೇಷುಧಿಮ್ ।
ಆ ವೀರೋ ಜಾಯತಾಂ ಪುತ್ರಸ್ತೇ ದಶಮಾಸ್ಯಃ ॥

ನಿನ್ನ ಯೋನಿಯನ್ನು ಪುಂ ಗರ್ಭವು ಪ್ರವೇಶಿಸಲಿ । ಹೇಗೆ ಬತ್ತಳಿಕೆಯಲ್ಲಿ ಬಾಣಗಳು ಪ್ರವೇಶಿಸುತ್ತವೆಯೋ ಹಾಗೆ ನಿನ್ನ ಯೋನಿಯನ್ನು ಪುಂ ಗರ್ಭವು ಪ್ರವೇಶಿಸಲಿ । ಹತ್ತುತಿಂಗಳು ಧರಿಸಲ್ಪಟ್ಟ ಆ ಗರ್ಭವು ನಂತರ ನಿನ್ನ ವೀರಪುತ್ರನಾಗಿ ಜನ್ಮತಾಳಲಿ ॥

೧೪೭. ಓಂ ಕರೋಮಿ ತೇ ಪ್ರಾಜಾಪತ್ಯಮಾ ಗರ್ಭೋ ಯೋನಿಮೇತು ತೇ । ಅನೂನಃ ಪೂರ್ಣೋ ಜಾಯತಾಮಶ್ಲೋಣೋ ಪಿಶಾಚಧೀತಃ ॥

ಪ್ರಜಾಪತಿಕರ್ಮವಾದ ರೇತಸ್ಸಿಂಚನವನ್ನು ನಿನ್ನ ಯೋನಿಯಲ್ಲಿ ಮಾಡುವೆನು । ಆದ್ದರಿಂದ ಗರ್ಭವು ನಿನ್ನ ಯೋನಿಯನ್ನು ಪ್ರವೇಶಿಸಲಿ । ಆ ಗರ್ಭವು ಯಾವ ಅಂಗನ್ಯೂನತೆಗಳೂ ಇಲ್ಲದೆ ಪರಿಪೂರ್ಣವಾಗಿ ಪೂರ್ಣಕಾಲ (ಹತ್ತುತಿಂಗಳು) ಕುಂಟುತನ–ಕುರುಡುತನ–ಕಿವುಡತನ, ಮುಂತಾದ ಯಾವ ದೋಷಗಳೂ ಇಲ್ಲದೇ ಪಿಶಾಚಿ ಮುಂತಾದ ದುಷ್ಟಗ್ರಹಗಳಿಂದ ಧರಿಸಲ್ಪಡದೇ(ಹಿಡಿಯಲ್ಪಡದೇ), ಪುತ್ರರೂಪದಿಂದ ಜನ್ಮತಾಳಲಿ ॥

೧೪೮. ಓಂ ಪುಮಾಗ್ಸ್ತೇ ಪುತ್ರೋ ನಾರಿ ತಂ ಪುಮಾನನು ಜಾಯತಾಮ್ ।
ತಾನಿ ಭದ್ರಾಣಿ ಬೀಜಾನ್ಯೃಷಭಾ ಜನಯಂತು ನೌ ॥

ಎಲ್ಲೈ ನಾರಿಯೇ, ನಿನಗೆ ಪುಂ ಪ್ರಜೆಯುಂಟಾಗಲಿ । ಆ ಪ್ರಜೆಯನ್ನನುಸರಿಸಿ ಎರಡು, ಮೂರನೇ ಗರ್ಭಗಳೂ ಕೂಡ ಪುಂ ಗರ್ಭವಾಗಲಿ(ನಿನ್ನಂದ ಹುಟ್ಟಿದ ಪುಂ ಪ್ರಜೆಗೂ ಮುಂದೆ ಪುಂ ಪ್ರಜೆಯುಂಟಾಗಿ ಹೀಗೆ ವಂಶವು ನಿರಂತರವಾಗಿ ಬೆಳೆಯಲಿ) । ಹೀಗೆ ಮಂಗಳಕರವಾದ, ನಿಷ್ಪ್ರಯೋಜನವಲ್ಲದ ಬೀಜಗಳು(ವೀರ್ಯಗಳು) ಹೋರಿಯಂತೆ ರೇತಸ್ಸೇಚನ ಮಾಡಲು ಸಮರ್ಥವಾಗಲಿ । ಎಂದರೆ – ನಾವು ತಿನ್ನುವಂತಹ ಓಷಧಿಗಳು ಮಾಷ(ಉದ್ದು) ಮುಂತಾದ ಧಾನ್ಯಗಳು ನಮ್ಮಿಬ್ಬರಿಗೆ ಪುಂ ಪ್ರಜೆಯಾಗುವಂತೆ ಹಾಗೂ ನಮ್ಮ ವಂಶದಲ್ಲಿ ಹಾಗೂ ನಮಗೂ ನಿರಂತರವಾಗಿ ಪುಂ ಪ್ರಜೆಯಾಗುವಂತೆ

ಸಾಮರ್ಥ್ಯವನ್ನು ಹೊಂದಿದ ರೇತಸ್ಸನ್ನು ನಮ್ಮಲ್ಲಿ ಉಂಟುಮಾಡಲು ಸಮರ್ಥವಾಗಲಿ (ನಮ್ಮಿಬ್ಬರಿಗೆ ಮತ್ತೆಮತ್ತೆ ಪುಂ ಪ್ರಜೆಯಾಗಲು ಹಾಗು ವಂಶದಲ್ಲಿ ನಿರಂತರ ಪುಂ ಪ್ರಜೆಯಾಗಲು ಮಾಷ ಮುಂತಾದ ಓಷಧಿಗಳು ಹಾಗೂ ಪ್ರಜಾಪತಿ ಮುಂತಾದ ದೇವತೆಗಳು ಹಾಗೂ ನಾವು ತಿನ್ನುವ ಆಹಾರಗಳು ಸಾಮರ್ಥ್ಯವನ್ನು ತಂದುಕೊಡಲಿ) ॥

೧೪೯. ಓಂ ಯಾನಿ ಭದ್ರಾಣಿ ಬೀಜಾನ್ಯೃಷಭಾ ಜನಯಂತಿ ನಃ ।
ತೈಸ್ತ್ವಂ ಪುತ್ರಾನ್ವಿಂದಸ್ವ ಸಾ ಪ್ರಸೂರ್ಧೇನುಕಾ ಭವ ॥

ಯಾವ ಮಂಗಳಕರವಾದ ಬೀಜಗಳನ್ನು(ವೀರ್ಯವನ್ನು) ನಮ್ಮಿಬ್ಬರಿಗೆ ಹಿಂದೆ ಹೇಳಿದ ಋಷಭಗಳು(ಸಮೃದ್ಧವಾಗಿ ಆಹಾರಾದಿ ಧಾನ್ಯಗಳನ್ನು ಬೆಳೆಯಲು ಸಮರ್ಥವಾದ ಎತ್ತುಗಳು ಹೇಗೆ ಅವಶ್ಯವೋ, ಹಾಗೆ ಮಂಗಳಕರನಾದ ಪುಂ ಪ್ರಜೆಯನ್ನು ಪಡೆಯಲೂ ಅತ್ಯಂತ ಸಮರ್ಥನಾದ ಪುರುಷನು ಅಗತ್ಯವು) ಉಂಟುಮಾಡುತ್ತವೆಂಯೋ, ಆ ಬೀಜಗಳಿಂದ(ವೀರ್ಯದಿಂದ) ನೀನು ಪುಂ ಪ್ರಜೆಯನ್ನೇ ಪಡೆ। ಇಂತಹಾ ಪುಂ ಪ್ರಜೆಯನ್ನು ಪಡೆದ ನೀನು ಮತ್ತೆಮತ್ತೆ ಕರುವಿಗೆ ಜನ್ಮಕೊಡುವ ಹಸುವಿನಂತೆ ಮಕ್ಕಳಿಗೆ ಜನ್ಮಕೊಡುವವಳಾಗು। ಹೇಗೆ ಹಸುವು ಕರುವಿನಿಂದ ಹಾಲನ್ನು ಕುಡಿಯಲ್ಪಡುತ್ತದೋ ಹಾಗೆಯೇ ನೀನೂ ಪ್ರತಿನಿತ್ಯ ಮಗನಿಂದ ಎದೆಹಾಲನ್ನು ಕುಡಿಯಲ್ಪಡುವವಳಾಗು ॥

೧೫೦. ಓಂ ಕಾಮ ಪ್ರಮೃಧ್ಯತಾಂ ಮಹ್ಯಮಪರಾಜಿತ ಮೇವ ಮೇ ।
ಯಂ ಕಾಮಂ ಕಾಮಯೇ ದೇವ ತಂ ಮೇ ವಾಯೋ ಸಮರ್ಧಯ ॥

ನನ್ನ ಈ ಕಾಮವು(ಇಷ್ಟಾರ್ಥವು) ಪೂರ್ಣಗೊಳ್ಳಲಿ। ಈ ನನ್ನ ಕರ್ಮವು ಸಮೃದ್ಧಿಹೊಂದಲಿ ಮತ್ತು ವ್ಯರ್ಥವಾಗದೇ ಇರಲಿ। ಎಲೈ ದೇವನಾದ ವಾಯುವೇ, ಯಾವ ಕಾಮನೆಯಾದ ಪುಂ ಪ್ರಜೆಯನ್ನು ಜನ್ಮಗೊಳಿಸುವೆನೋ ಆ ನನ್ನ ಕಾಮನೆಯು ಸಮೃದ್ಧವಾಗುವಂತೆ ಮಾಡು ॥

ದುಸ್ವಪ್ನಾದಿಗಳ ದೋಷ ಪರಿಹಾರಕ್ಕಾಗಿ ಹೇಳುವ ಮಂತ್ರ –

೧೫೧. ಓಂ ಅನುಹವಂ ಪರಿಹವಂ ಪರೀವಾದಂ ಪರಿಕ್ಷಪವ್ ।
ದುಸ್ವಪ್ನಂ ದುರುದಿತಂ ತದ್ವಿಷದ್ಭ್ಯೋ ದಿಶಾಮ್ಯಹವ್ ॥

ಹಿಂದಿನಿಂದ ಅಪಹಾಸ್ಯ ಮಾಡುವುದು ಹಾಗೂ ಎಲ್ಲ ಕಡೆಗಳಿಂದಲೂ ಅಪಹಾಸ್ಯ ಮಾಡುವುದು ಹಾಗೂ ನಿಂದನೆರೂಪವಾದ ಮಾತುಗಳನ್ನಾಡುವುದು ಹಾಗೂ ಎಲ್ಲಕಡೆಗಳಿಂದಲೂ ಹಾನಿಯಾಗುವಂತೆ ಮಾಡುವುದು । ಹಾಗೂ ದುಸ್ಸ್ವಪ್ನ, ದುಷ್ಟವಮಾತುಗಳು ಹಾಗೂ ಇನ್ನಿತರ ದುರ್ನಿಮಿತ್ತಗಳು ಅದೆಲ್ಲವನ್ನೂ ನನ್ನನ್ನು ದ್ವೇಷಿಸುವವರಿಗೆ ಹಾಕುತ್ತೇನೆ ॥ (ವಧುವನ್ನು ತನ್ನ ಮನೆಗೆ ವರನು ಮೊದಲಬಾರಿ ಕರೆದುಕೊಂಡು ಬರುವಾಗ ಅಕ್ಷಿ, ಕೆಮ್ಮುಗಳು ಬಂದಾಗ ಹಾಗೂ ಅಪಶಕುನದಂತಹ ಮಾತುಗಳನ್ನು ಕೇಳಿದಾಗ ಈ ಮಂತ್ರವನ್ನು ಹೇಳಬೇಕು ।)

೧೫೨. ಓಂ ಅನುಹೂತಂ ಪರಿಹೂತಗ್ಂ ಶಕುನೇರ್ಯದಶಾಕುನವ್ ।
ವ್ಯಗಸ್ಯ ಸ್ಯತಮಕ್ಷಣ್ಯಾ ತದ್ವಿಷದ್ಭ್ಯೋ ದಿಶಾಮ್ಯಹವ್ ॥

ಯಾವ ಹಿಂದಿನಿಂದ ಅಪಹಾಸ್ಯ ಮಾಡಿದ್ದಿದೆಯೋ ಹಾಗೂ ಎಲ್ಲ ಕಡೆಗಳಿಂದಲೂ ಅಪಹಾಸ್ಯ ಮಾಡಿದ್ದಿದೆಯೋ ಹಾಗೂ ಅಶುಭನಿಮಿತ್ತವಾದ ಪಕ್ಷಿಗಳ ಕೂಗಿದೆಯೋ । ಹಾಗೂ ನರೀ ಮುಂತಾದವುಗಳ ಅಶುಭಸೂಚಕವಾದ ಅಪ್ರದಕ್ಷಿಣೆಯಾಗಿ ಸುತ್ತುವುದೂ ಮುಂತಾದವುಗಳಿವೆಯೋ, ಅವೆಲ್ಲವನ್ನೂ ನನ್ನನ್ನು ದ್ವೇಷಿಸುವವರಿಗೆ ಹಾಕುತ್ತೇನೆ (ಪಕ್ಷಿಗಳ ವಿಕಾರಶಬ್ದಗಳನ್ನು ಕೇಳಿದಾಗ ಹಾಗೂ ನರೀ, ಬೆಕ್ಕುಗಳು ಅಪ್ರದಕ್ಷಿಣೆಯಾಗಿ ನಿಮ್ಮನ್ನು ಬಳಸಿದಾಗ ಹೇಳುವ ಮಂತ್ರ) ॥

೧೫೩. ಓಂ ಆರಾತ್ತೇ ಅಗ್ನಿರಸ್ತ್ವಾರಾತ್ಪರಶುರಸ್ತು ತೇ । ನಿವಾತೇ
ತ್ವಾऽಭಿವರ್ಷತು ಸ್ವಸ್ತಿ ತೇऽಸ್ತು ವನಸ್ಪತೇ ಸ್ವಸ್ತಿ ಮೇऽಸ್ತು ವನಸ್ಪತೇ ॥

ಎಲೈ ವನಸ್ಪತಿಯೇ, ನಿನಗಿಂತ ಅಗ್ನಿಯು ದೂರವಾಗಿರಲಿ ಹಾಗೂ ನಿನ್ನಿಂದ ಕತ್ತಿ ಮುಂತಾದ ಆಯುಧಗಳು ದೂರವಾಗಿರಲಿ । ಹಾಗೂ ನಿನಗೆ ಹಾನಿಮಾಡುವ ಚಂಡಮಾರುತಗಳು

ಬರದೇ ಇರಲಿ ಹಾಗೂ ಗಾಳಿಬೀಸದೇ ಮಳೆಗೆ ಅಭಿಮಾನಿಯಾದ ದೇವನು ನಿನ್ನ ಮೇಲೆ ಮಳೆ ಸುರಿಸಲಿ । ಎಲೈ ವನಸ್ಪತಿಯೇ, ಹೀಗೆ ನಿನಗೆ ಎಲ್ಲ ಕಡೆಗಳಿಂದಲೂ ಮಂಗಳವುಂಟಾಗಲಿ ಹಾಗೂ ನನಗೂ ಎಲ್ಲ ಕಡೆಗಳಿಂದಲೂ ಒಳ್ಳೆಯದಾಗಲಿ (ವಧುವನ್ನು ತನ್ನ ಮನೆಗೆ ವರನು ಮೊದಲಬಾರಿ ಕರೆದುಕೊಂಡು ಬರುವಾಗ ತನ್ನ ಗ್ರಾಮದ ಗಡಿಯ ಗುರುತಾದ ಮರಗಳನ್ನು ನೋಡಿದಾಗ ಈ ಮಂತ್ರವನ್ನು ಹೇಳಬೇಕು) ॥

೧೫೪. ಓಂ ನಮಶ್ಮಕೃತ್ಸದೇ ರುದ್ರಾಯ ನಮೋ ರುದ್ರಾಯ ಶಕೃತ್ಸದೇ ॥ ಗೋಷ್ಮಮಸಿ ನಮಸ್ತೇ ಅಸ್ತು ಮಾ ಮಾ ಹಿಗ್ಂಸೀಸ್ಸಿಗಸಿ ನಸಿ ವಜ್ರೋ ನಮಸ್ತೇ ಅಸ್ತು ಮಾ ಮಾ ಹಿಗ್ಂಸೀಃ ॥

ಸಗಣಿಯಲ್ಲಿರುವ ರುದ್ರದೇವನೇ, ನಿನಗೆ ಮತ್ತೆಮತ್ತೆ ನಮಸ್ಕಾರವು, ಇಲ್ಲಿ ಎರಡು ಬಾರಿ ನಮಸ್ಕಾರವನ್ನು ಅತ್ಯಾದರವನ್ನು ತೋರಿಸಲು ಹೇಳಿರುತ್ತದೆ । ಎಲೈ ಸಗಣಿಯೇ, ನೀನು ಗೋವಿನಲ್ಲಿ ನೆಲೆಸಿದ್ದೀಯೇ, ನಿನಗೆ ನಮಸ್ಕಾರವು ನನ್ನನ್ನು ಹಿಂಸಿಸಬೇಡ । ಗೋವುಗಳೂ ಕೂಡ ನಮ್ಮನ್ನು ಹಿಂಸಿಸುವುದಿಲ್ಲ, ಹಾಗೆ ನೀನೂ(ಸಗಣಿ) ಹಿಂಸಿಸಬೇಡ। (ವಧುವನ್ನು ತನ್ನ ಮನೆಗೆ ವರನು ಮೊದಲಬಾರಿ ಕರೆದುಕೊಂಡು ಬರುವಾಗ, ಸಗಣಿಯು ಸಂಗ್ರಹಜಾಗವು ಸಿಕ್ಕಿದಾಗ ಈ ಮಂತ್ರವನ್ನು ಹೇಳಬೇಕು) ।

ಎಲೈ ಬಟ್ಟೆಯ ಅಂಚಿನ ಸ್ವರೂಪವಾಗಿರುವವನೇ ನೀನು ವಜ್ರಾಯುಧಕ್ಕೆ ಸಮನಾಗಿದ್ದೀಯೇ, ಆದರೆ ವಜ್ರದಂತೆ ನೀನು ಹಿಂಸಕನಲ್ಲ । ನಿನಗೆ ನಮಸ್ಕಾರವು ನಮ್ಮನ್ನು ಹಿಂಸಿಸಬೇಡ (ವ್ಯಕ್ತಿಗೆ ಬಟ್ಟೆಯ ಗಾಳಿಯು ತಗುಲಿದಾಗ ಈ ಮಂತ್ರವನ್ನು ಹೇಳಬೇಕು) ॥

೧೫೫. ಓಂ ಉದ್ಗಾತೇವ ಶಕುನೇ ಸಾಮಗಾಯಸಿ ಬ್ರಹ್ಮಪುತ್ರ ಇವ ಸವನೇಷು ಶಗ್ಂಸಸಿ । ಸ್ವಸ್ತಿ ನಶ್ಯಕುನೇ ಅಸ್ತು ಪ್ರತಿನಸ್ಸುಮನಾ ಭವ ॥

ಎಲೈ ಹಕ್ಕಿಯೇ, ನೀನು ಉದ್ಗಾತೃವಿನಂತೆ (ಸಾಮಗರಂತೆ) ಗಾನ ಮಾಡುವೆ, ಯಜ್ಞದಲ್ಲಿ ಬ್ರಾಹ್ಮಣಾಚ್ಛಗ್ಂಸಿಯು ಹೊಗಳಿಕೆಯ ಸ್ತೋತ್ರವನ್ನು ಮಾಡುವಂತೆ ಹೊಗಳಿಕೆಯ

ಮಾತುಗಳನ್ನು ಆಡುತ್ತಿರುವೆ । ಎಲ್ಲೆ ಹಕ್ಕಿಯೇ ನನಗೆ ಮಂಗಳವಾಗಲಿ, ನಮ್ಮ ಮೇಲೆ ಒಳ್ಳೆಯ ಮನಸ್ಸುಳ್ಳವನಾಗು । (ಹಕ್ಕಿಯ ರಕ್ಕೆಯ ಗಾಳಿ ಅಥವಾ ನೆರಳು ತಗುಲಿದಾಗ ಹೇಳುವ ಮಂತ್ರ) ॥

ಪತಿ–ಪತ್ನಿಯರ ಹೃದಯಗಳು ಒಂದಾಗುವ ಆರ್ಥವಿರುವ ಮಂತ್ರಗಳು –

೧೫೬. ಓಂ ಪ್ರಾತರಗ್ನಿಂ ಪ್ರಾತರಿಂದ್ರꣳ ಹವಾಮಹೇ ಪ್ರಾತರ್ಮಿತ್ರಾ ವರುಣಾ ಪ್ರಾತರಶ್ವಿನಾ । ಪ್ರಾತರ್ಭಗꣳ ಪೂಷಣಂ ಬ್ರಹ್ಮಣಸ್ಪತಿಂ ಪ್ರಾತಸ್ಸೋಮಮುತ ರುದ್ರꣳ ಹುವೇಮ ॥

ಬೆಳಗಿನ ಉಷಃಕಾಲದಲ್ಲಿ, ನಮ್ಮ ರಕ್ಷಣೆಗಾಗಿ ಅಗ್ನಿಯನ್ನು ಹಾಗೂ ಇಂದ್ರನನ್ನು ಹಾಗೂ ಮಿತ್ರ, ವರುಣರನ್ನೂ ಹಾಗೂ ಅಶ್ವಿನೀದೇವತೆಗಳನ್ನೂ । ಭಗದೇವತೆಯನ್ನು, ಪೂಷದೇವತೆಯನ್ನು, ಬೃಹಸ್ಪತಿಯನ್ನು, ಸೋಮದೇವನನ್ನು, ರುದ್ರದೇವನನ್ನು ಆಹ್ವಾನಿಸಿ ಆರಾಧಿಸಿ, ಪೂಜಿಸಿ ಸತ್ಕರಿಸೋಣ ॥

೧೫೭. ಓಂ ಪ್ರಾತರ್ಜಿತಂ ಭಗಮುಗ್ರꣳ ಹುವೇಮ ವಯಂ ಪುತ್ರಮದಿತೇರ್ಯೋ ವಿಧರ್ತಾ । ಆಧ್ರಶ್ಚಿದ್ಯಂ ಮನ್ಯಮಾನಸ್ತು ರಶ್ಚಿದ್ರಾಜಾ ಚಿದ್ಯಂ ಭಗಂ ಭಕ್ಷೀತ್ಯಾಹ ॥

ಪ್ರಾತಃಕಾಲದಲ್ಲಿ ಯಾವಾಗಲೂ ಜಯವನ್ನು ಹೊಂದುವ ಆದಿತ್ಯರಲ್ಲಿ ಒಬ್ಬನಾದ, ಸೋಲಿಲ್ಲದ, ಉಗ್ರನಾದ ಭಗದೇವತೆಯನ್ನು ನಾವು ಆಹ್ವಾನಿಸಿ ಪೂಜಿಸೋಣ । ಅದಿತಿಯ ಮಗನಾದ, ಎಲ್ಲವನ್ನೂ ವೃಷ್ಟಿ(ಮಳೆ) ಮುಂತಾದವುಗಳಿಂದ ಧರಿಸಿರುವ, ದರಿದ್ರನಾದರೂ ಅತ್ಯಂತ ಶೀಘ್ರಗತಿಯುಳ್ಳ ಹಾಗೂ ರಾಜನಾಗಿದ್ದರೂ ಕೂಡ ಯಾವ ಭಗದೇವತೆಯನ್ನು ಭಜಿಸುವುದಕ್ಕೆ ಯೋಗ್ಯನಾಗಿದ್ದಾನೆಂದು ತಿಳಿದು, ಸಮಸ್ತ ಜನರೂಕೂಡ ಅವನ ಭಕ್ತರಾಗುವುದಕ್ಕೆ ಆಶಿಸುತ್ತಾರೋ, ಅಂತಹಾ ಭಗದೇವತೆಯನ್ನು ನಾವು ಪೂಜಿಸುವೆವು ॥

೧೫೮. ಓಂ ಭಗ ಪ್ರಣೇತರ್ಭಗ ಸತ್ಯರಾಧೋ ಭಗೇಮಾಂ ಧಿಯಮುದವದದನ್ನಃ ।
ಭಗ ಪ್ರಣೋ ಜನಯ ಗೋಭಿರಶ್ವೈರ್ಭಗ ಪ್ರನೃಭಿರ್ನೃವಂತಸ್ಯಾಮ ॥

ಎಲ್ಲೆ ಭಗನೇ, ನೀನು ಎಲ್ಲರ ಕಣ್ಣಾಗಿದ್ದೀಯೇ, ಹಾಗೂ ಅಕ್ಷಯವಾದ ಐಶ್ವರ್ಯ ಸ್ವರೂಪನಾಗಿದ್ದೀಯೇ । ಈ ನನ್ನ ಬುದ್ಧಿಯನ್ನು ನನಗೆ ಮತ್ತು ನನ್ನ ಹೆಂಡತಿ ಬಂದಿರುವ ವಿರಸವನ್ನು ಪರಿಹರಿಸಿ ರಕ್ಷಿಸು ಹಾಗೂ ನಮ್ಮಿಬ್ಬರಿಗೆ ಇಷ್ಟವಾದದ್ದನ್ನು ಕೊಡು । ಹಾಗೂ ನಮ್ಮನ್ನು ಗೋವುಗಳಿಂದ, ಕುದುರೆ ಮುಂತಾದವುಗಳಿಂದ ಸಮೃದ್ಧರನ್ನಾಗಿ ಮಾಡು ಹಾಗೂ ದಾಸ(ಕೆಲಸದವರು) ಮುಂತಾದವರಿಂದ ನಾವು ಯಾವಾಗಲೂ ಕೂಡಿರುವಂತೆ ಅನುಗ್ರಹಿಸು ॥

೧೫೯. ಓಂ ಉತೇದಾನೀಂ ಭಗವಂತಸ್ಯಾವೋತ ಪ್ರಪಿತ್ವ ಉತ ಮಧ್ಯೇ
ಅಹ್ನಾಮ್ । ಉತೋದಿತಾ ಮಘವನ್ಸೂರ್ಯಸ್ಯ ವಯಂ ದೇವಾನಾಗ್ಂ
ಸುಮತೌ ಸ್ಯಾಮ ॥

ಈ ಕರ್ಮಕಾಲದಲ್ಲಿ, ಭಗದೇವತೆಯನ್ನುಳ್ಳವರಾಗೋಣ, ಹಾಗೂ ಸಂಜೆ, ಮಧ್ಯಾಹ್ನ, ಉದಯಕಾಲ, ಹೀಗೆ ಎಲ್ಲ ಕಾಲದಲ್ಲೂ(ಸೂರ್ಯನ – ಪ್ರಾತಃಕಾಲ, ಸಂಗವ, ಮಧ್ಯಾಹ್ನ, ಅಪರಾಹ್ನ ಮತ್ತು ಸಾಯಂಕಾಲಗಳಲ್ಲಿ) ಭಗದೇವತೆಯನ್ನುಳ್ಳವರಾಗೋಣ । ಹಾಗೂ ದೇವತೆಗಳ ಅನುಗ್ರಹಕ್ಕೆ ಪಾತ್ರರಾಗೋಣ । ಭಗದೇವನ ಪ್ರಸಾದದಿಂದಲೇ, ಎಲ್ಲ ದೇವತೆಗಳ ಅನುಗ್ರಹವೂ ನಮಗೆ ಸಿಗಲಿ ॥

೧೬೦. ಓಂ ಭಗೈವ ಭಗವಾಗ್ಂ ಅಸ್ತು ದೇವಾಸ್ತೇನ ವಯಂ
ಭಗವಂತಸ್ಯಾಮ । ತಂ ತ್ವಾ ಭಗ ಸರ್ವ ಇಜ್ಜೋಹವೀಮಿ ಸ ನೋ
ಭಗ ಪುರಏತಾ ಭವೇಹ ॥

ಎಲ್ಲೆ ದೇವತೆಗಳೇ, ದೇವನಾದ ಭಗನು, ಭಗರೂಪದಿಂದ ನಮಗೆ ಎಲ್ಲ ಅನುಗ್ರಹವನ್ನೂ ಮಾಡಿ ಅವನಿಂದ ನಾವು ಭಗವಂತರುಳ್ಳವರಾಗೋಣ (ಅನುಗ್ರಹ) । ಎಲ್ಲೆ ಭಗನೇ,

ನಾವೆಲ್ಲಾ ಇಂತಹಾ ನಿನ್ನನ್ನು ಹೋಮ–ಆರಾಧನೆಗಳಿಂದ ಪೂಜಿಸುತ್ತೇವೆ । ನೀನು ನಮ್ಮನ್ನು ಸರಿಯಾದ ದಾರಿಯಲ್ಲಿ, ಸರಿಯಾದ ಕರ್ಮದಲ್ಲಿ ನಡೆಸುವವನಾಗು ॥

೧೬೧. ಓಂ ಸಮಧ್ವರಾಯೋಷಸೋ ನಮಂತ ದಧಿಕ್ರಾವೇವ ಶುಚಯೇ ಪದಾಯ । ಅರ್ವಾಚೀನಂ ವಸುವಿದಂ ಭಗಂ ನೋ ರಥಮಿವಾಶ್ವಾ ವಾಜಿನ ಆವಹಂತು ॥

ಈ ಭಗದೇವನ ಪ್ರಸಾದದಿಂದ ಎಲ್ಲಾ ಶತ್ರುಗಳನ್ನೂ ನಾಶಮಾಡುವ ಈ ಯಜ್ಞದಲ್ಲಿ ನಮ್ಮನ್ನು ಪ್ರತಿದಿನದ ಸೂರ್ಯೋದಯದ ಕಾಲದಲ್ಲಿ ಸೇರಿಸುವವನಾಗು (ದಿನವೂ ಯಜ್ಞವನ್ನು ಮಾಡುವ ಅವಕಾಶವು ಸಿಗಲಿ) । ಹೇಗೆ ಅಗ್ನಿ ಅಥವ ನೀರು ಶುಚಿಯಾದ ಸ್ಥಾನವನ್ನು ಪಡೆಯಲು ಸಾಮರ್ಥ್ಯವನ್ನು ಹೊಂದಿವೆಯೋ, ಹಾಗೆ ನಮ್ಮನ್ನು ಈ ಯಜ್ಞದಲ್ಲಿ ಸೇರಿಸು । ಹೇಗೆ ಕುದುರೆಗಳು ರಥವನ್ನು ಹೊತ್ತೊಯ್ಯುತ್ತವೆಯೋ ಹಾಗೆ ಎಲ್ಲಾ ಐಶ್ವರ್ಯಗಳಿಂದಲೂ ಕೂಡಿರುವ ಭಗದೇವನನ್ನು ನಮ್ಮ ಬಳಿಗೆ ಅಭಿಮುಖವಾಗಿ ಕರೆದುಕೊಂಡು ಬನ್ನಿ ॥

೧೬೨. ಓಂ ಅಶ್ವಾವತೀರ್ಗೋಮತೀರ್ನ ಉಷಾಸೋ ವೀರವತೀ ಸ್ಸದಮುಚ್ಛಂತು ಭದ್ರಾಃ । ಘೃತಂದುಹಾನಾ ವಿಶ್ವತಃ ಪ್ರಪೀನಾ ಯೂಯಂಪಾತಃ ಸ್ವಸ್ತಿಭಿಸ್ಸದಾ ನಃ ॥

ಕುದುರೆಗಳು ಹಾಗೂ ಪಶುಗಳು ಹಾಗೂ ವೀರಪುತ್ರರು ಹಾಗೂ ಆಯುಷ್ಮಂತ ವೀರಪುರುಷರು, ಇವರುಗಳಿಂದ ಸದಾ ಕೂಡಿರುವಂತೆ ನಮ್ಮ ಪ್ರತಿದಿನದ ಉಷಃಕಾಲವನ್ನು ಮಾಡು, ಎಂದರೆ – ಪ್ರತಿದಿನಾ ಸಮೃದ್ಧಿಯು ಹೆಚ್ಚಲಿ । ತುಪ್ಪ, ಹಾಲು ಅಥವ ಜೇನು ಈ ಮುಂತಾದವುಗಳನ್ನು ನಮಗೆ ಪ್ರಾಪ್ತಿಯಾಗುವಂತೆ ಮಾಡುತ್ತಾ, ಎಲ್ಲ ರೀತಿಯಿಂದಲೂ ಸಮೃದ್ಧರಾದ ಈ ಸೂಕ್ತದಲ್ಲಿ ಹೇಳಿರುವ ಎಲ್ಲ ದೇವತೆಗಳೂ ಒಳ್ಳೆಯ ಮನಸ್ಸಿನಿಂದ ನಮ್ಮನ್ನು ಕಾಪಾಡಲಿ ॥

ಪತಿಪತ್ನಿಯರು ಪರಸ್ಪರರಲ್ಲೀ ಪ್ರೀತಿಯುಳ್ಳವರಾಗುವಂತೆ (ವಶೀಕರಣ) ಮಾಡುವ ಮಂತ್ರಗಳು –

೧೬೩. ಓಂ ಇಮಾಂ ಖನಾಮ್ಯೋಷಧೀಂ ವೀರುಧಂ ಬಲವತ್ತಮಾಮ್ ।
ಯಯಾ ಸಪತ್ನೀಂ ಬಾಧತೇ ಯಯಾ ಸಂ ವಿಂದತೇ ಪತಿಮ್ ॥

ಈ 'ಪಾಠ' ಎಂಬ ಓಷಧಿಯನ್ನು ಖನನ(ನಾಶ) ಮಾಡುತ್ತೇನೆ । ಇದು ವಿವಿಧವಾಗಿ ಬೆಳೆದು ಅತೀವ ಬಲವಾಗಿ ಹೇಗೆ ಸಪತ್ನಿಯರು ಬಾಧೆ ಮಾಡುತ್ತಾರೋ, ಹಾಗೆ ಬಲವಾದ್ದರಿಂದ ಇದನ್ನು ನಾಶಪಡಿಸುತ್ತೇನೆ । ಇದರ ನಾಶದಿಂದ, ಹೇಗೆ ಪತ್ನಿಯು ಪತಿಯನ್ನು ಕೇವಲ ತನಗೇ ಪಡೆಯುತ್ತಾಳೋ ಹಾಗೆ ಮಾಡುತ್ತೇನೆ ॥

೧೬೪. ಓಂ ಉತ್ತಾನಪರ್ಣೇ ಸುಭಗೇ ಸಹಮಾನೇ ಸಹಸ್ವತಿ । ಸಪತ್ನೀಂ
ಮೇ ಪರಾಧಮ ಪತಿಂ ಮೇ ಕೇವಲಂ ಕೃಧಿ ॥

ಮೇಲ್ಮುಖವಾದ ಎಲೆಗಳುಳ್ಳವಳಾದ ಎಲೈ 'ಪಾಠ ಓಷಧಿಯೇ' ನೀನು ಸೌಭಾಗ್ಯಕ್ಕೆ ನಿಮಿತ್ತಳಾಗಿದ್ದೀಯೇ(ನಾಶದಿಂದ) । ನೀನು ಅತ್ಯಂತ ಬಲಶಾಲಿಯಾಗಿ ಎಲ್ಲವನ್ನೂ ಸಹಿಸುವವಳೂ, ಪರಾಜಯು ಮಾಡುವವಳೂ ಆಗಿದ್ದೀಯೇ । ನೀನು ನನ್ನ ಸಪತ್ನಿಯನ್ನು(ಬೇರೆ ಹೆಂಗಸು) ದೂರ ಮಾಡಿ ನನ್ನ ಗಂಡನನ್ನು ಕೇವಲ ನನಗೇ ಪ್ರಾಪ್ತನಾಗುವಂತೆ ಮಾಡು ॥

೧೬೫. ಓಂ ಉತ್ತರಾsಹಮುತ್ತರ ಉತ್ತರೇದುತ್ತರಾಭ್ಯಃ । ಅಥಾ ಸಪತ್ನೀ
ಯಾ ಮಮಾಧರಾ ಸಾsಧರಾಭ್ಯಃ ॥

ಎಲೈ ಉತ್ಕೃಷ್ಟಳಾದ ಪಾಠ ದೇವತೆಯೇ, ನಾನು ಸ್ವಭಾವದಿಂದಲೇ ಉತ್ಕೃಷ್ಟಳಾಗಿದ್ದೇನೆ । ಇನ್ನೂ ಸಹ ಉತ್ಕೃಷ್ಟತೆಯನ್ನು ಹೊಂದುವಂತೆ ಈ ಮುಂದಿನ ಮಂತ್ರಗಳು ಮಾಡಲಿ ಹಾಗೂ ನನ್ನ ಸಪತ್ನಿಯು ಅತ್ಯಂತ ಕೆಳಗೆ ಹೋಗಿ, ಎಲ್ಲರಿಂದಲೂ ಅಧಮಳಾಗಲಿ(ತಿರಸ್ಕಾರ ಹೊಂದಲಿ) ॥

೧೬೬. ಓಂ ನ ಹ್ಯಸ್ಯೈ ನಾಮ ಗೃಭ್ಣಾಮಿ ನೋ ಅಸ್ಮಿನ್ರಮತೇ ಜನೇ ।
ಪರಾಮೇವ ಪರಾವತಗ್ಂ ಸಪತ್ನೀಂ ನಾಶಯಾಮಸಿ ॥

ಈ ಸಪತ್ನಿಯ ಹೆಸರನ್ನೂ ಸಹಾ ನಾನು ಹೇಳುವುದಿಲ್ಲ । ಏಕೆಂದರೆ, ನಾನು ಈ ನನ್ನ ಗಂಡನನ್ನು ಸಂತೋಷಪಡಿಸಲು ಸಂಪೂರ್ಣ ಸಾಮರ್ಥ್ಯಳಾಗಿದ್ದೇನೆ । ಈ ಸಪತ್ನಿಯನ್ನು ಅತ್ಯಂತ ದೂರದಿಂದಲೇ ಅತ್ಯಂತ ದೂರಹೋಗುವಂತೆ ನಾಶಮಾಡೋಣ ॥

೧೬೭. ಓಂ ಅಹಮಸ್ಮಿ ಸಹಮಾನಾऽಥ ತ್ವಮಸಿ ಸಾ ಸಹಿಃ । ಉಭೇ
ಸಹಸ್ವತೀ ಭೂತ್ವಾ ಸಪತ್ನೀಂ ಮೇ ಸಹಾವಹೈ ॥

ನಾನು ಸಪತ್ನಿಯನ್ನು ಸೋಲಿಸುವವಳಾಗಿದ್ದೇನೆ । ಎಲೈ ಪಾಠ ಓಷಧಿಯೇ, ನೀನು ಸಪತ್ನಿಯನ್ನು ಅತ್ಯಂತವಾಗಿ ಸೋಲಿಸುವವಳಾಗಿದ್ದೀಯೆ । ಇಂತಹಾ ನಾವಿಬ್ಬರೂ ಅತ್ಯಂತ ಬಲಶಾಲಿಗಳಾಗಿ ನನ್ನ ಸಪತ್ನಿಯನ್ನು ಒಟ್ಟಾಗಿ ಸೋಲಿಸೋಣ ॥ (ಈ ಮಂತ್ರದಿಂದ ಆ ಪಾಠವೆಂಬ ಓಷಧಿಯನ್ನು ೨ ಭಾಗ ಮಾಡಿ, ಗಂಡನ ೨ ಕೈಗೆ ಕಟ್ಟಬೇಕು ಅಥವ ತನ್ನ ೨ ಕೈಗಳಿಗೆ ಕಟ್ಟಿಕೊಳ್ಳಬೇಕು ।)

೧೬೮. ಓಂ ಉಪತೇऽಧಾಗ್ಂ ಸಹಮಾನಾಮಭಿತ್ವಾऽಧಾಗ್ಂ ಸಹೀಯಸಾ ।
ಮಾಮನು ಪ್ರ ತೇ ಮನೋ ವತ್ಸಂ ಗೌರಿವ ಧಾವತು ಪಥಾ ವಾರಿವ
ಧಾವತು ॥

ನಾನು ಈ ಸಪತ್ನಿಯನ್ನು ಸೋಲಿಸುತ್ತಾ, ಎಲೈ ಗಂಡನೇ ನಾನು ನಿನ್ನ ಜೊತೆ ಕೂಡುತ್ತೇನೆ । ಆ ಸಪತ್ನಿಯನ್ನು ಅತ್ಯಂತ ಅಧಮಳನ್ನಾಗಿ ಮಾಡಿ, ನಿನ್ನ ಜೊತೆ ಅತ್ಯಂತ ಮನಸ್ಸುಳ್ಳವಳಾಗಿ ಕೂಡುತ್ತೇನೆ । ಹೇಗೆಂದರೆ, ನನ್ನ ಮೇಲೆ ನಿನ್ನ ಮನಸ್ಸು(ಪ್ರೀತಿ) ಉಂಟಾಗಬೇಕು । ಹೇಗೆ ಆಗತಾನೇ ಹುಟ್ಟಿದ ಕರುವಿನ ಬಳಿಗೆ ಹಸುವು ಓಡಿ ಬರುತ್ತದೆಯೋ, ಹೇಗೆ ತಗ್ಗಾದ ಕಡೆಗೆ ನೀರು ವೇಗವಾಗಿ ಹರಿಯುತ್ತದೋ ಹಾಗೆ ನೀನು ನನ್ನನ್ನು ಸೇರಬೇಕು ॥ (ಈ ಮಂತ್ರದಿಂದ ಗಂಡನ ೨ ಕೈಗಳನ್ನೂ ತನ್ನ ೨ ಕೈಗಳಿಂದ ಹಿಡಿದುಕೊಂಡು ಗಟ್ಟಿಯಾಗಿ ಅಪ್ಪಿಕೊಳ್ಳಬೇಕು)

ಪತಿಪತ್ನಿಯರಲ್ಲಿ ಪರಸ್ಪರ ಬಾಧೆಯು ಇದ್ದಾಗ ಅದರ ಪರಿಹಾರಕ್ಕೆ ಪ್ರತಿದಿನ ಆದಿತ್ಯನ ಉಪಸ್ಥಾನದ ಮಂತ್ರಗಳು –

೧೬೯. ಓಂ ಉದಸೌ ಸೂಂಯೋ೯ ಅಗಾದುದಯಂ ಮಾಮಕೋ ಭಗಃ ।
ಅಹಂ ತದ್ವಿದ್ವಲಾ ಪತಿಮಭ್ಯಸಾಕ್ಷಿ ವಿಷಾಸಹಿಃ ॥

ಈ ಸೂರ್ಯನು, ಉದಯಿಸುವುದಕ್ಕೆ ಅನುಗುಣವಾಗಿ ನನ್ನ ಸೌಭಾಗ್ಯವು(ಯೋನಿಯು) ಉದಯಿಸಿದೆ। ಈ ಸೂರ್ಯನು ಉದಯಾನಂತರ ಹೇಗೆ ವೃದ್ಧಿಹೊಂದುತ್ತಾನೋ ಹಾಗೆ ನನ್ನ ಸುಖವು(ಮೈಥುನವು) ವೃದ್ಧಿಸಿದೆ। ಈ ಕಾರಣದಿಂದ, ಮೈಥುನ ವೇದನೆಯಿಂದ ಬಳಲಿದವಳಾದ ನಾನು ನನ್ನ ಗಂಡನನ್ನು ವಿಶೇಷವಾಗಿ ಸ್ವಾಧೀನಪಡಿಸಿಕೊಂಡವಳಾಗಿದ್ದೇನೆ॥

೧೭೦. ಓಂ ಅಹಂ ಕೇತುರಹಂ ಮೂರ್ಧಾsಹಮುಗ್ರಾ ವಿವಾಚನೀ ।
ಮಮೇದನು ಕ್ರತುಂ ಪತಿಸ್ಸೇಹಾನಾಯಾ ಉವಾಚರೇತ್ ॥

ನಾನು ೨ ವಂಶಗಳಿಗೂ ಧ್ವಜಸ್ಥಾನೀಯಳಾಗಿದ್ದೇನೆ । ಹಾಗೂ ಮೂರ್ಧ(ಶಿರ) ಸ್ಥಾನೀಯಳಾಗಿದ್ದೇನೆ। ಹಾಗೂ ಬೇರೆಯವರಿಂದ ಗೆಲ್ಲಲು ಆಗದವಳಾಗಿದ್ದೇನೆ। ಹಾಗೂ ಎಲ್ಲ ಸರಿಯಾದ ನಿರ್ಣಯಗಳನ್ನು ಮನೆಯಲ್ಲಿ ಮಾಡುವವಳಾಗಿದ್ದೇನೆ । ನನ್ನ ಇಚ್ಛೆಗೆ ಅನುಗುಣವಾಗಿ ನನ್ನ ಗಂಡನು ನಡೆದುಕೊಳ್ಳುವಂತೆ ಮಾಡು । ಹೇಗೆ ನನ್ನಿಂದ ಸೋಲಲ್ಪಟ್ಟವಳು ನನ್ನ ಮಾತನ್ನು, ಆಜ್ಞೆಯನ್ನು ಹೇಗೆ ಕೇಳುತ್ತಾಳೋ ಹಾಗೆ ನನ್ನ ಪತಿಯನ್ನು ಮಾಡು ॥

೧೭೧. ಓಂ ಮಮ ಪುತ್ರಾಶ್ಶತ್ರುಹಣೋsಥೋ ಮೇ ದುಹಿತಾ ವಿರಾಟ್ ।
ಉತಾಹಮಸ್ಮಿ ಸಂಜಯಾ ಪತ್ಯುರ್ಮೇ ಶ್ಲೋಕ ಉತ್ತಮಃ ॥

ನನ್ನ ಮಕ್ಕಳು ಶತ್ರುಗಳನ್ನು ನಾಶಮಾಡುವವರಾಗಲಿ, ಹಾಗೂ ನನ್ನ ಹೆಣ್ಣುಮಕ್ಕಳು ಅತಿವಿರಾಜಮಾನರಾಗಿ ಬಾಳಲಿ । ನಾನು ಸಪತ್ನಿಯರನ್ನು ಸೋಲಿಸುವ ಸಾಮರ್ಥ್ಯವನ್ನು ಹೊಂದುವಂತೆ ಆಗಲಿ ಹಾಗೂ ನನ್ನ ಗಂಡನು ಕೇವಲ ನನ್ನನ್ನೇ ಹೊಗಳುವಂತೆ ಹಾಗೂ ಪ್ರೀತಿಸುವಂತೆ ಆಗಲಿ ಹಾಗೂ ನಾನು ಲೋಕದಲ್ಲಿ ಹೊಗಳುವಿಕೆಗೆ ಯೋಗ್ಯಳಾಗುವಂತೆ ಆಗಲಿ ॥

೧೭೨. ಓಂ ಯೇನೇಂದ್ರೋ ಹವಿಷಾ ಕೃತ್ಯಭವದ್ದಿವ್ಯುತ್ತಮಃ । ಅಹಂ ತದಕ್ರಿ ದೇವಾ ಅಸಪತ್ನಾ ಕಿಲಾಭವಮ್ ॥

ಇಂದ್ರನು ಯಾವ ಹವಿಸ್ಸಿನಿಂದ ಕೃತಕೃತ್ಯನೂ ಹಾಗೂ ದ್ಯುಲೋಕದಲ್ಲಿ ಉತ್ತಮನೂ ಆದನೋ, ಹಾಗೆ ನಾನೂ ಕೂಡ ಲೋಕದಲ್ಲಿ ಉತ್ತಮನಾಗಲು ಹಾಗೂ ಕೃತಕೃತ್ಯನಾಗಲು ಅಂತಹಾ ಹವಿಸ್ಸನ್ನು ಸಿದ್ಧಪಡಿಸಿರುವೆ । ಎಲೈ ದೇವತೆಗಳೇ, ನಾನು ಸಪತ್ನಿ(ಅಕ್ರಮವಾಗಿ ನನ್ನ ಗಂಡನು ಬೇರೇ ಹೆಂಗಸನ್ನು ಅನುಭವಿಸುವವಳು(ಕಾಮಿಸುವವಳು) ಇಲ್ಲದವಳಾಗಿ ಆಗಿದ್ದೇನೆ ॥

೧೭೩. ಓಂ ಅಸಪತ್ನಾ ಸಪತ್ನಿಘ್ನೀ ಜಯಂತ್ಯಭಿಭೂವರೀಃ । ಆವಿತ್ಸಿ ಸರ್ವಾಸಾಗ್ಂ ರಾಧೋವರ್ಚೋ ಅಸ್ಥೇಯಸಾಮಿವ ॥

ಸಪತ್ನಿ ಇಲ್ಲದವಳಾದ, ಸಪತ್ನಿಗಳನ್ನು ನಾಶಪಡಿಸುವ, ಜಯಿಸುವ ಸ್ವಭಾವದವಳಾದ । ನಾನು ಎಲ್ಲಾ ಸಪತ್ನಿಯರ ಹಣ, ವರ್ಚಸ್ಸು, ಕಾಂತಿ ಇವೆಲ್ಲವನ್ನೂ ಅಪಹರಣ ಮಾಡುವವಳಾಗಿದ್ದೇನೆ (ಇವೆಲ್ಲವನ್ನೂ ಅಪಹರಿಸುವಂತಹಾ ಬಲಶಾಲಿಯಾಗಿದ್ದೇನೆ) ॥

೧೭೪. ಓಂ ಸಮಜ್ಯೈಷಮಿಮಾ ಅಹಗ್ಂ ಸಪತ್ನೀರಭಿಭೂವರೀಃ । ಯಥಾsಹಮಸ್ಯ ವೀರಸ್ಯ ವಿರಾಜಾಮಿ ಧನಸ್ಯ ಚ ॥

ಈ ಸಪತ್ನಿಯರನ್ನು ಸಂಪೂರ್ಣ ನಾನು ಜಯಿಸಬೇಕು, ಎಲ್ಲರನ್ನೂ ಜಯಿಸುವ ಸಾಮರ್ಥ್ಯವಿರುವ ಸಪತ್ನಿಯರನ್ನೂ ನಾನು ಜಯಿಸುವಂತಾಗಲಿ । ಇಂತಹಾ ನಾನು ವೀರನಾದ ನನ್ನ ಗಂಡನ ಎಲ್ಲಾ ಐಶ್ವರ್ಯಗಳಿಗೂ ಒಡತಿಯಾಗಿದ್ದೇನೆ ॥

ಅತ್ಯಂತ ಭಯಂಕರವಾದ ದೀರ್ಘವಾದ ರೋಗದಿಂದ ಬಳಲುತ್ತಿರುವ ಹಾಗೂ ಭೂತ,ಪ್ರೇತಾದಿಗಳಿಂದ ಆವೃತಳಾದ ವಧುವನ್ನು ಈ ಕೆಳಗಿನ ಮಂತ್ರಗಳಿಂದ, ಅವಳ ಅಂಗಗಳಿಗೆ ಕಮಲದ ದಂಟ್ಟಿನಿಂದ(ಪರಾಗ) ಸ್ಪರ್ಶ ಮಾಡಿಸಿದರೆ, ಈ ತೊಂದರೆಗಳಿಂದ ಅವಳು ಗುಣಮುಖಳಾಗುತ್ತಾಳೆ

೧೭೫. ಓಂ ಅಕ್ಷೀಭ್ಯಾಂ ತೇ ನಾಸಿಕಾಭ್ಯಾಂ ಕರ್ಣಾಭ್ಯಾಂ ಚುಬುಕಾದಧಿ ।
ಯಕ್ಷ್ಮಂ ಶೀರ್ಷಣ್ಯಂ ಮಸ್ತಿಷ್ಕಾಜ್ಜಿಹ್ವಾಯಾ ವಿವೃಹಾಮಿ ತೇ ॥

ಎಲೈ ವಧುವೇ, ನಿನ್ನ ತಲೆಯಲ್ಲಿರುವ ರೋಗಾದಿಗಳನ್ನು ಹಾಗೂ ಭೂತಾದಿಗಳನ್ನು ಈ ಹೂವಿನ ಪರಾಗದಿಂದ ತಿಕ್ಕಿ, ಹೋಗಲಾಡಿಸುತ್ತೇನೆ, ಹಾಗೆಯೇ ನಿನ್ನ ಕಣ್ಣುಗಳ ಮೇಲೆ, ಮೂಗಿನ ಮೇಲೆ ಹಾಗೂ ಕಿವಿಯ ಮೇಲೆ, ಗಲ್ಲದ ಮೇಲೆ । ತಲೆಯ ಮೇಲೆ, ಕೆನ್ನೆಗಳ ಮೇಲೆ, ನಾಲಿಗೆಯ ಮೇಲೆ ತಿಕ್ಕಿ ಹೋಗಲಾಡಿಸುತ್ತೇನೆ ॥

೧೭೬. ಓಂ ಗ್ರೀವಾಭ್ಯಸ್ತ ಉಷ್ಣಿಹಾಭ್ಯಃ ಕೀಕಸಾಭ್ಯೋಽನೂಕ್ಯಾತ್ ।
ಯಕ್ಷ್ಮಂ ದೋಷಣ್ಯಮಗ್ಂ ಸಾಭ್ಯಾಂ ಬಾಹುಭ್ಯಾಂ ವಿವೃಹಾಮಿ ತೇ ॥

ಹಾಗೆಯೇ ಕಂಠ, ಕಂಠದ ನಾಡಿಗಳು, ಕಂಠದಲ್ಲಿರುವ ಮೂಳೆಗಳು, ಕತ್ತಿನ ಹಿಂಭಾಗ । ಪಕ್ಕೆಯಭಾಗ, ಭುಜ, ಬಾಹು ಇವುಗಳ ಮೇಲೂ ಆ ಪರಾಗವನ್ನು ತಿಕ್ಕಿ, ಕ್ಷಯ ಮುಂತಾದ ರೋಗಾದಿಗಳನ್ನು ಹೋಗಲಾಡಿಸುತ್ತೇನೆ ॥

೧೭೭. ಓಂ ಆಂತ್ರೇಭ್ಯಸ್ತೇ ಗುದಾಭ್ಯೋ ವನಿಷ್ಠೋರ್ಹೃದಯಾದಧಿ ।
ಯಕ್ಷ್ಮಂ ಮತಸ್ನಾಭ್ಯಾಂ ಯಕ್ನಃ ಪ್ಲಾಶಿಭ್ಯೋ ವಿವೃಹಾಮಿ ತೇ ॥

ಕರುಳು, ಗುದದ್ವಾರ, ಕರುಳಿನ ಸ್ಥೂಲಪ್ರದೇಶ, ಹೃದಯ । ಎದೆಯಭಾಗ, ವೃಷಣ, ಮೂಳೆಗಳ ಸಂಧಿಭಾಗ(ಕೊಂಡಿ) ಇವುಗಳ ಮೇಲೆ ತಿಕ್ಕಿ, ಕ್ಷಯವೇ ಮುಂತಾದ ರೋಗಾದಿಗಳನ್ನು ಹೋಗಲಾಡಿಸುತ್ತೇನೆ ॥

೧೭೮. ಓಂ ಊರುಭ್ಯಾಂ ತೇಽಷ್ಠೀವದ್ಭ್ಯಾಂ ಜಂಘಾಭ್ಯಾಂ ಪ್ರಪದಾಭ್ಯಾಮ್ । ಯಕ್ಷ್ಮಗ್ಂ ಶ್ರೋಣೀಭ್ಯಾಂ ಭಾಸದಾದ್ಭವಗ್ಂಸಸೋ ವಿವೃಹಾಮಿ ತೇ ॥

ತೊಡೆ, ಮಂಡಿ, ಮಂಡಿಯ ಕೆಳಭಾಗ, ಪಾದದ ಮುಂದಿನ ಭಾಗ । ತೊಡೆಯ ಬುಡ, ಸ್ತ್ರೀಯರ ಗುಹ್ಯಪ್ರದೇಶ, ಹೊಕ್ಕಳಿನಿಂದ ಗುಹ್ಯಪ್ರದೇಶದವರೆಗಿನ ಜಾಗ, ಇವುಗಳ ಮೇಲೆ ತಿಕ್ಕಿ ರೋಗಾದಿಗಳನ್ನು ಹೋಗಲಾಡಿಸುತ್ತೇನೆ ॥

೧೭೯. ಓಂ ಮೇಹನಾದ್ವಲಂಕರಣಾಲ್ಲೋಮಭ್ಯಸ್ತೇ ನಖೇಭ್ಯಃ ।
ಯಕ್ಷ್ಮಗ್ಂ ಸರ್ವಸ್ಮಾದಾತ್ಮನಸ್ತಮಿಮಂ ವಿವೃಹಾಮಿ ತೇ ॥

ಸಂಭೋಗಮಾಡುವಂತಹ ಯೋನಿ(ಜನನಾಂಗ), ಕೂದಲುಗಳು, ಉಗುರುಗಳು । ಹಾಗೂ ಹೇಳಿದ ಅಥವಾ ಹೇಳದೇ ಇರುವ ಎಲ್ಲಾ ಅಂಗಗಳ ಮೇಲೆಯೂ ಪರಾಗವನ್ನು ಈ ಮಂತ್ರಗಳಿಂದ ತಿಕ್ಕಿ ರೋಗಾದಿಗಳನ್ನು ಹೋಗಲಾಡಿಸುತ್ತೇನೆ ॥

೧೮೦. ಓಂ ಅಂಗಾದಂಗಾಲ್ಲೋಮ್ನೋ ಲೋಮ್ನೋ ಜಾತಂ ಪರ್ವಣಿ ಪರ್ವಣಿ ।
ಯಕ್ಷ್ಮಗ್ಂ ಸರ್ವಸ್ಮಾದಾತ್ಮನಸ್ತಮಿಮಂ ವಿವೃಹಾಮಿ ತೇ ॥

ಎಲ್ಲಾ ಅಂಗಗಳಿಂದಲೂ ಹಾಗೂ ದೇಹದ ಎಲ್ಲಾ ಕೂದಲುಗಳಿಂದಲೂ, ಎಲ್ಲಾ ಸಂಧಿಭಾಗಗಳಿಂದಲೂ, ಉಂಟಾದ ರೋಗ ಮುಂತಾದವುಗಳನ್ನು ಎಲ್ಲ ಭಾಗಗಳಿಂದಲೂ ಹೋಗಲಾಡಿಸುತ್ತೇನೆ ॥

೧೮೧. ಓಂ ಪರಾದೇಹಿ ಶಾಬಲ್ಯಂ ಬ್ರಹ್ಮಭ್ಯೋ ವಿಭಜಾವಸು । ಕೃತ್ಯೈಷಾ
ಪದ್ವತೀ ಭೂತ್ವಾ ಜಾಯಾssವಿಶತೇ ಪತಿಮ್ ॥

ಹಳದಿಬಣ್ಣದ ಬಟ್ಟೆಯನ್ನು ಬಿಡುವವಳಾಗು(ತ್ಯಜಿಸು), ಬ್ರಾಹ್ಮಣರಿಗೆ ನಿನ್ನ ಹಣವನ್ನು ವಿಭಾಗಮಾಡಿ ಕೊಡು । ಈ ಹೆಂಡತಿಯು ಕಾಲುಳ್ಳವಳಾಗಿ ಗಂಡನನ್ನು ಒಂದಾಗಿ ಸೇರುವವಳಾಗುತ್ತಾಳೆ (ಪರಿತ್ವಾ ಗಿರ್ವಣಃ ...., ಎಂಬ ಮಂತ್ರದಿಂದ ವಿವಾಹದ ಸಮಯದಲ್ಲಿ ಗಂಡನು ಉಡಿಸಿದ ವಧುವಿನ ಸೀರೆಯನ್ನು ವಿವಾಹಕರ್ಮವನ್ನು ಮಾಡಿಸಿದ ಪುರೋಹಿತ ಅಥವಾ ವಿವಾಹವನ್ನು ತಿಳಿದ ಬ್ರಾಹ್ಮಣನಿಗೆ ಕೊಡಬೇಕು) ॥

೧೮೨. ಓಂ ಅಶ್ಲೀಲಾ ತನೂರ್ಭವತಿ ರುಶತೀ ಪಾಪಯಾsಮುಯಾ ।
ಪತಿರ್ಯದ್ವಧ್ವೈ ವಾಸಸಾ ಸ್ವಮಂಗಮಭಿಧಿತ್ಸತಿ ॥

ಈ ಪಾಪರೂಪವಾದ ರೋಗದಿಂದ ಕೂಡಿದ ಇವಳು ಪತಿಯನ್ನು ಸೇರುವ ಯಾವ ಕೃತ್ಯವಿದೆಯೋ, ಅದರಿಂದ ಇವಳ ಪತಿಯ ದೇಹವು ಹಿಂಸೆಗೆ, ಪೀಡೆಗೆ ಒಳಗಾಗುತ್ತದೆ । ಪತಿಯು ವಧುವಿನ ಬಟ್ಟೆಯ ಜೊತೆ ತನ್ನ ಶರೀರದ ಅಂಗವನ್ನು ಮುಚ್ಚಿಕೊಳ್ಳಲು ಬಯಸಿದರೆ ಈ ಹಿಂಸೆಯು ಉಂಟಾಗುತ್ತದೆ । ಆದ್ದರಿಂದ ಶಾಸ್ತ್ರವಿಧಿಯನ್ನು ತಿಳಿದ ಎಲ್ಲರೂ

ಮೈಥುನಕರ್ಮದಲ್ಲಿ ವಧುವಿನ ಬಟ್ಟೆಯನ್ನು ತಾನು ಬಳಸಬಾರದು। ಇದರಿಂದ ಇಬ್ಬರೂ ವಸ್ತ್ರರಹಿತರಾಗಿ ಮೈಥುನಕರ್ಮವನ್ನು ಮಾಡಬೇಕೆಂದು ವಿಧಿಸಿದಂತೆ ಆಗುತ್ತದೆ(ವಧುವಿನ ಬಟ್ಟೆಯನ್ನು ಉಡುವುದೇ ದೋಷ)। ವಿಶೇಷವಾಗಿ ಮೇಲೆ ಹೇಳಿದ ರೋಗಾದಿ ಸಮಸ್ಯೆಗಳಿಗೆ ತುತ್ತಾದ ವಧುವಿನ ವಸ್ತ್ರವನ್ನು ಪತಿ ಅಥವಾ ಬೇರೆಯವರು ತೆಗೆದುಕೊಳ್ಳಬಾರದು ಹಾಗೂ ವಿನಿಯೋಗಿಸಬಾರದು ॥

೧೮೩. ಓಂ ಕ್ರೂರಮೇತತ್ಕಟುಕಮೇತದಪಾಷ್ಮವದ್ವಿಷವನ್ನೈತದತ್ತವೇ ।
ಸೂರ್ಯಾಂ ಯಃ ಪ್ರತ್ಯಕ್ಷಂ ವಿದ್ಯಾತ್ಸ ಏತತ್ಪ್ರತಿಗೃಹ್ಣೀಯಾತ್ ॥

ಈ ವಧುವಿನ ಬಟ್ಟೆಯನ್ನು ಧರಿಸುವುದು, ಆತ್ಮವಿನಾಶಕಾರಿ ಕೆಲಸವು ಹಾಗೆಯೇ ರೋಗಕಾರಿಯು, ಇದು ವಿಷದಂತೆ ಮತ್ತು ವಿಷಬೆರೆಸಿದ ಪದಾರ್ಥದಂತೆ ಬಳಸಲು ಯೋಗ್ಯವಾದದ್ದಲ್ಲವಾಗಿದೆ ಹಾಗೂ ಅತೀನಿಂದನೀಯ ವಿಷಯವು। ಸೂರ್ಯ ಎಂಬ ವಿವಾಹದೇವತೆಯಿಂದ ತಿಳಿಯಲ್ಪಟ್ಟಂತಹ ಮಂತ್ರಸಮೂಹವಾದ ಪ್ರಸುಗ್ಮಂತಾ....., ಮುಂತಾದವುಗಳು ಸೂರ್ಯ ಮಂತ್ರಗಳು, ಇವುಗಳನ್ನು ಯಾರು ಪ್ರತ್ಯಕ್ಷವಾಗಿ, ಸ್ಪಷ್ಟವಾಗಿ, ಪದಶಃ, ಸ್ವರಶಃ, ಅಕ್ಷರಶಃ ಹಾಗೂ ಸಂಪೂರ್ಣವಿನಿಯೋಗವನ್ನು ತಿಳಿದಿದ್ದಾನೋ, ಅವನು ಈ ರೋಗಾದಿಗಳಿಗೆ ತುತ್ತಾದ ವಧುವಿನ ಬಟ್ಟೆಯನ್ನು ಪ್ರತಿಗ್ರಹ ಮಾಡಲು ಯೋಗ್ಯನು, ಬೇರೆಯವರು ಅಯೋಗ್ಯರಲ್ಲ ॥

೧೮೪. ಓಂ ಆಶಸನಂ ವಿಶಸನಮಥೋ ಅಧಿ ವಿಚರ್ತನಮ್ ।
ಸೂರ್ಯಾಯಾಃ ಪಶ್ಯ ರೂಪಾಣಿ ತಾನಿ ಬ್ರಹ್ಮೋತ ಶಗ್ಂಸತಿ ॥

ಈ ರೋಗಾದಿಗಳಿಗೆ ತುತ್ತಾದ ವಧುವಿನ ಬಟ್ಟೆಯನ್ನು ತೆಗೆದುಕೊಳ್ಳುವುದು ಹಾನಿಕಾರಕವು, ಹಾಗೂ ಶೂಲಾದಿಗಳಿಂದ ಉಂಟಾಗುವ ಬಾಧೆಯಂತೆ ಹಾಗೂ ಕತ್ತಿಯಿಂದ ಚರ್ಮವನ್ನು ಬೇರ್ಪಡಿಸಿದಂತೆ । ಆದ್ದರಿಂದ ಈ ಬಟ್ಟೆಯನ್ನು ತೆಗೆದುಕೊಳ್ಳಬಾರದು, ಇದನ್ನು ತೆಗೆದುಕೊಂಡರೆ ಚರ್ಮವನ್ನು ಬೇರೇಕಡೆ ಬಿಟ್ಟಂತೆ ನಿಂದನೀಯವು। ಈ ಬಟ್ಟೆಯನ್ನು ತೆಗೆದುಕೊಳ್ಳಲು ಯೋಗ್ಯನಾದವನು ಹಾಗೂ ಅದರಿಂದ ಹಾನಿಗೊಳಗಾಗದವನು ಸೂರ್ಯ ಮಂತ್ರಗಳಾದ ಪ್ರಸುಗ್ಮಂತಾ....., ಮುಂತಾದವುಗಳನ್ನು ಅರ್ಥಸಹಿತ ಬ್ರಾಹ್ಮಣನು ಮಾತ್ರ, ಅವನೇ ಹೊಗಳಿಕೆಗೆ ಯೋಗ್ಯನಾದವನು, ಈ ಮಂತ್ರಗಳೇ ಸೂರ್ಯ ದೇವತೆಯ ನಾನಾವಿಧ ರೂಪಗಳು ॥

ಅನಿತ್ಯಾನಿ ಶರೀರಾಣಿ ವಿಭವೋ ನೈವ ಶಾಶ್ವತಂ ।
ನಿತ್ಯಂ ಸನ್ನಿಹಿತೋ ಮೃತ್ಯುಃ ಕರ್ತವ್ಯೋ ಧರ್ಮ ಸಂಗ್ರಹಃ ॥

ಶರೀರಗಳು ಅನಿತ್ಯವಾಗಿವೆ, ಸಂಪತ್ತುಗಳು ಶಾಶ್ವತವಲ್ಲ.
ಮರಣವೂ ಸಹ ಹತ್ತಿರದಲ್ಲೇ ಇದೆ, ಆದ್ದರಿಂದ ಬುದ್ಧಿವಂತರಾದವರು
ಧರ್ಮವನ್ನು (ಪುಣ್ಯ) ಸದಾಕಾಲ ಸಂಗ್ರಹ ಮಾಡಿಕೊಳ್ಳಬೇಕು.

ಶ್ರೀ ಚೈತನ್ಯ ಗುರುನಾಥ ಪ್ರಕಾಶನ
ವೇದಬ್ರಹ್ಮ ಶ್ರೀ ಎ.ಸಿ. ಶಕ್ತಿಧರ ಶರ್ಮಾ
ಸಂಪಾದಕರು, ಅನುವಾದಕರು ಮತ್ತು ಪ್ರಕಾಶಕರು

C/o ಶ್ರೀಮಾನ್ ಸುಬ್ರಹ್ಮಣ್ಯ ಪ್ರಸಾದ್‌ರವರು
ನಿಸರ್ಗ ಬಡಾವಣೆ, ಭಾರತ್ ಪೆಟ್ರೋಲ್‌ಬಂಕ್ ಎದುರು
ಎಂ.ಆರ್.ಎಸ್. ಬೈಪಾಸ್ ರಸ್ತೆ,
ಶಿವಮೊಗ್ಗ – 577202, ಕರ್ನಾಟಕ
ಮೊ: 9686497982, ಈ-ಮೇಲ್: acs.shimoga@gmail.com

ಬೆಲೆ : ರೂ. 300/-